ಹುಬ್ಬಳ್ಳಿ
ಮಂಗಳವಾರ, 10 ಮಾರ್ಚ್ 2026
ಸಂಪುಟ 15, ಸಂಚಿಕೆ 351, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ನೀಲ ಸಾಗರದ ನಡುವಲ್ಲಿ ಮಾ ತುಝೇ ಸಲಾಂ...

▸ ಶ್ರೀನಿಧಿ ಡಿ.ಎಸ್.



▸▸ ಮೊಟೇರಾ ಸ್ಟೇಡಿಯಂನಲ್ಲಿನ ಸಂತಸದ ರಾಯಭಾರಿ
▸▸ ಗೆಲುವಿನ ಹರ್ಷೋದ್ಗಾರದಲ್ಲಿ ಮಿಂದೆದ್ದ ಕನ್ನಡಿಗ

ದಿಗಂತ ವಿಶ್ಲೇಷಣೆ

• **ಅಹ್ಮದಾಬಾದ್:** ಭಾರತದಲ್ಲಿ ಕ್ರಿಕೆಟ್ ಕೇವಲ ಆಟವಾಗಿ ಉಳಿದಿಲ್ಲ; ಅದು ಈ ವೈವಿಧ್ಯಮಯ ದೇಶವನ್ನು ಒಂದುಗೂಡಿಸುವ ಅದೃಶ್ಯ ದಾರ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಭಾಷೆ, ಧರ್ಮ ಮತ್ತು ಆರ್ಥಿಕ ಸ್ಥಿತಿಗತಿಗಳ ಗೋಡೆಗಳನ್ನು ಉರುಳಿಸಿ ಜನರನ್ನು ಒಂದೇ ಭಾವನೆಯಡಿ ನಿಲ್ಲಿಸುವ ಶಕ್ತಿ ಇದಕ್ಕಿದೆ. ಗಲ್ಲಿಯ ಪುಟ್ಟ ಹುಡುಗನಿಂದ ಹಿಡಿದು ಕಾರ್ಪೊರೇಟ್ ಕಚೇರಿಯ ಅಧಿಕಾರಿಯವರೆಗೆ, ಪ್ರತಿಯೊಬ್ಬರೂ ಭಾರತ ತಂಡದ ವಿಜಯಕ್ಕಾಗಿ ಒಂದೇ ರೀತಿ ಪ್ರಾರ್ಥಿಸುತ್ತಾರೆ. ದೇಶದಲ್ಲಿ ನೂರಾರು ಭಾಷೆಗಳಿದ್ದರೂ, ಸಿಕ್ಸರ್ ಅಂದಾಗ ಅಥವಾ ಎದುರಾಳಿ ತಂಡದ ವಿಕೆಟ್ ಬಿದ್ದಾಗ ಹೊರಹೊಮ್ಮುವ ಸಂಭ್ರಮದ ಕಿರುಚಾಟಕ್ಕೆ ಯಾವುದೇ ಭಾಷೆಯ ಹಂಗಿಲ್ಲ.

ಸೋತಾಗ ಒಟ್ಟಾಗಿ ಮರುಗುವ ಮತ್ತು ಗೆದ್ದಾಗ ಅಪರಿಚಿತರನ್ನೂ ಅಪ್ಪಿಕೊಂಡು ಸಂಭ್ರಮಿಸುವ ಈ ಕ್ರೀಡೆ, ಒಂದು ಭಾವನಾತ್ಮಕ ಸೇತುವೆ ಇದ್ದ ಹಾಗೆ. ಇದೇ ಕಾರಣಕ್ಕಾಗಿ ಕ್ರಿಕೆಟನ್ನು ಅದು ನಡೆವ ಜಾಗದಲ್ಲೇ ಜನರ ಮಧ್ಯೆ ಕೂತು ನೋಡುವುದರಲ್ಲೊಂದು ಸಂಭ್ರಮವಿದೆ, ಆನಂದವಿದೆ. ಅಲ್ಲಿ ನಿಮಗೆ ಸಿಗುವ ಜನರು, ಅವರ ಭಾವುಕ ಜಗತ್ತು, ಟಿವಿಯಲ್ಲಿ ನೋಡುವುದಕ್ಕಿಂತ ಭಿನ್ನವಾದ ಆಯಾಮವನ್ನು ನೀಡುತ್ತದೆ. ಈ ಮಾತು ಕ್ರಿಕೆಟ್‌ಗೆ ಮಾತ್ರವಲ್ಲ.. ಯಾವುದೇ ತಂಡ ಕ್ರೀಡೆಗೂ ಸಲ್ಲುವಂತದ್ದು.

ಹೀಗಾಗಿಯೇ ನಾನು ಕಳೆದ ಕೆಲ ವರುಷಗಳಿಂದ ಸಾಧ್ಯವಾದಾಗೆಲ್ಲ ಸ್ಟೇಡಿಯಂಗೆ ಹೋಗಿ ಪಂದ್ಯಗಳನ್ನ ನೋಡುವ ಪರಿಪಾಠ ಬೆಳೆಸಿಕೊಂಡಿದ್ದೇನೆ. ಅದೃಷ್ಟವಶಾತ್ ಎಲ್ಲವೂ ಅಂದುಕೊಂಡ ಹಾಗೆ, ನಿನ್ನೆಯೂ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟಿ-ಟ್ವೆಂಟಿ ವಿಶ್ವಕಪ್‌ನ ಫೈನಲ್ ಪಂದ್ಯವನ್ನು ಅಹಮದಾಬಾದ್ ನ ಮೊಟೇರಾ ಸ್ಟೇಡಿಯಂನಲ್ಲೇ ನೋಡುವ ಹಾಗಾಯಿತು. ಹೋಗಿ ನೋಡಿದ್ದು ಸಾರ್ಥಕವೂ ಆಯಿತು.

ಭಾರತ ನ್ಯೂಜಿಲೆಂಡ್‌ನನ್ನು ಅನಾಯಾಸವಾಗಿ ಬಗ್ಗುಬಡಿಯಿತು. ಆ ಘಳಿಗೆ ಅಲ್ಲಿ ಹಾಗೆ ಲಕ್ಷ ಲಕ್ಷ ಮಂದಿಯ ಮಧ್ಯೆ ಕೂತು ಸಂತಸದಲ್ಲಿ ಕಳೆದು ಹೋಗುವ ಆನಂದ ಇದೆಯಲ್ಲ..ಅದನ್ನು ಯಾವ ಮಾಪನದಿಂದಲೂ ಅಳೆಯಲಾಗದು. ತಿಲಕ್ ವರ್ಮಾ ಹಿಡಿದ ಆ ಕೊನೆಯ ಕ್ಯಾಚಿನ ಬೆನ್ನಿಗೇ ಇಡಿಯ ಸ್ಟೇಡಿಯಂ ಮಾಡಿದ ಹರ್ಷೋದ್ಗಾರ.. ನಂತರ ಒಂದಿಷ್ಟು ಮಕ್ಕಳು ತ್ರಿವರ್ಣ ಧ್ವಜವನ್ನು ಹಿಡಿದು ಮೈದಾನಕ್ಕೆ ನುಗ್ಗಿದ್ದು.. ಅಗ ಕೇಳಿಬಂದ ಲಕ್ಷ ಕಂಠಗಳ ಮಾ ತುಝೇ ಸಲಾಂ...

➡ ಪುಟ 9

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಅನುರಾಧೆ

ದಿನದ ಮಾತು

ಅವಕಾಶಕ್ಕಾಗಿ ಕಾಯದೇ ಅವಕಾಶವನ್ನು ನಿರ್ಮಿಸಿಕೊಳ್ಳುವವನೇ ಜಾಣ.
▲ ರಾಮಕೃಷ್ಣ ಪರಮಹಂಸ

ಬೆಳೆಗಳಿಗೆ ಪೂರಕ 'ಗೋಕೃಪಾಮೃತ'

ಧರಣಿ ಮಂಡಲ
• ಕೆ.ಎನ್.ಶೈಲೇಶ್ ಹೊಳ್ಳ

• ಪುಟ 6

ಕಿರುಸುದ್ದಿ

₹880.60 ಕೋಟಿ ಮೊತ್ತದ ಔಷಧ ವಿತರಣೆ ಶೀಘ್ರ

• **ವಿಧಾನಪರಿಷತ್:** ತಮಿಳುನಾಡು ಮಾದರಿಯಲ್ಲಿ ಅತ್ಯಂತ ಪಾರದರ್ಶಕವಾಗಿ ಔಷಧ ಪೂರೈಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. 880.60 ಕೋಟಿ ರೂ.ಗಳ ಮೊತ್ತದಲ್ಲಿ ಬಹುತೇಕ ಅಗತ್ಯ ಔಷಧಗಳನ್ನು ಕೆಎಸ್‌ಎಂಎಸ್‌ಸಿಎಲ್ ವತಿಯಿಂದ ತ್ವರಿತವಾಗಿ ಖರೀದಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಜೀವ ರಕ್ಷಕ ಔಷಧಿಗಳ ಕೊರತೆಯಿಂದಾಗಿ ಸರ್ಕಾರಿ ಆಸ್ಪತ್ರೆಗಳಿಗೆ ನಿಯಮಿತ ಪೂರೈಕೆಯಿಲ್ಲದೆ ರೋಗಿಗಳಿಗೆ ತೊಂದರೆ ಕುರಿತು ಪ್ರಸ್ತಾಪಿಸಿದ ಮೇಲ್ಮನೆ ಸದಸ್ಯ ಡಾ.ಧನಂಜಯ ಸರ್ಜಿ ಅವರ ಪ್ರಶ್ನೆಗೆ ದಿನೇಶ್ ಗುಂಡೂರಾವ್ ಉತ್ತರಿಸಿದರು.

• ಪುಟ 9

ರಾಜ್ಯಾದ್ಯಂತ ನಾಳೆಯಿಂದ ಐದು ದಿನ ಒಪಿಡಿ ಬಂದ್

• **ಬೆಂಗಳೂರು:** ಮುಂಬಡ್ತಿ, ವರ್ಗಾವಣೆಯಲ್ಲಿನ ನ್ಯೂನತೆ ಸರಿಪಡಿಸುವುದು, ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ 15ರವರೆಗೆ ಮುಷ್ಕರ ನಡೆಸಲು ಸಜ್ಜಾಗಿದ್ದಾರೆ.

• ಪುಟ 3

ಭಾರತೀಯರ ಸುರಕ್ಷತೆ, ಇಂಧನ ಭದ್ರತೆಗೆ ಆದ್ಯತೆ

• ಪುಟ 10

ವಿಪಕ್ಷ ಗದ್ದಲ: ಸ್ಪೀಕರ್ ಪದಚ್ಯುತಿ ಚರ್ಚೆ ಮುಂದಕ್ಕೆ

• ಪುಟ 02

ಯುದ್ಧ ನಿಲ್ಲಲು ಮೋದಿಯ ಒಂದು ಕರೆ ಸಾಕು: ಯುಎಇ

• ಪುಟ 02

ಹೋಳಿ ಹಬ್ಬ ಗಲಾಟೆ: ಏಳು ಆರೋಪಿಗಳ ಸೆರೆ

• ಪುಟ 02

ಸಿಇಸಿ ಪದಚ್ಯುತಿ ನಿರ್ಣಯಕ್ಕಾಗಿ ವಿರೋಧ ಪಕ್ಷಗಳು ಸಜ್ಜು

• ಪುಟ 02

ಖಮೇನಿಯ ಪುತ್ರ ಮೊಜ್ತಬಾ ಈಗ ಇರಾನ್ ಸುಪ್ರೀಂ ಲೀಡರ್

ಸಂಘರ್ಷ ಹೆಚ್ಚಳಕ್ಕೆ ಮದ್ದು

• **ದುಬೈ:** ಅಮೆರಿಕ ಮತ್ತು ಇಸ್ರೇಲ್ ಆರಂಭಿಸಿದ ಯುದ್ಧದ ನಡುವೆ, ತನ್ನ ತಂದೆಯ ನಿಧನದ ಬಳಿಕ ಇರಾನ್‌ನ ಹೊಸ ಸುಪ್ರೀಂ ಲೀಡರ್ ಆಗಿ ಮೊಜ್ತಬಾ ಖಮೇನಿಯನ್ನು ಇರಾನ್ ಸೋಮವಾರ ನೇಮಕ ಮಾಡಿದೆ. ಈ ನಿರ್ಧಾರವು ಸಂಘರ್ಷ ಮತ್ತಷ್ಟು ಹೆಚ್ಚಳದ ಸೂಚನೆ ನೀಡಿದೆ. ಇದೇ ವೇಳೆ ಇರಾನ್ ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲೆ ಇಸ್ರೇಲ್ ದಾಳಿ ಹಾಗೂ ಅಮೆರಿಕ ಮತ್ತು ಇಸ್ರೇಲ್‌ನಿಂದ ಇರಾನ್‌ನ ವಿವಿಧ ಗುರಿಗಳ ಮೇಲೆ ಬಾಂಬ್ ದಾಳಿ ಪರಿಣಾಮ ತೈಲದ ಬೆಲೆಗಳು ಏರಿಕೆಯಾಗಿದೆ. ಪರ್ಷಿಯನ್ ಗಲ್ಫ್‌ನಲ್ಲಿ ಇರಾನ್‌ನ ಮತ್ತೊಂದು ಯುದ್ಧ ನೌಕೆಯನ್ನು ಅಮೆರಿಕ ಮುಳುಗಿಸಿದೆ.



ಇರಾನ್‌ನ ಧಾರ್ಮಿಕ ಆಡಳಿತ ಒಂದು ವಾರಕ್ಕಿಂತ ಹೆಚ್ಚು ಕಾಲ ದಾಳಿಗೆ ಒಳಗಾಗಿರುವ ಸಂದರ್ಭದಲ್ಲೇ, ದೇಶದ ತಜ್ಞರ ಒಳಗೊಂಡ ಅಸೆಂಬ್ಲಿ ಎಂಬ ಪ್ರಮುಖ ಧಾರ್ಮಿಕ ಮಂಡಳಿ 56 ವರ್ಷದ ಮೊಜ್ತಬಾ ಖಮೇನಿಯನ್ನು ಹೊಸ ಸುಪ್ರೀಂ ಲೀಡರ್ ಆಗಿ ಆಯ್ಕೆ ಮಾಡಿದೆ.

ಇರಾನ್‌ನ ಮಾಜಿ ಸುಪ್ರೀಂ ಲೀಡರ್ ಅಯಾತೊಲ್ಲಾ ಅಲಿ ಖಮೇನಿ 37 ವರ್ಷಗಳ ಕಾಲ ದೇಶವನ್ನು ಆಡಳಿತ ನಡೆಸಿದ್ದರು. ಯುದ್ಧದ ಆರಂಭಿಕ ಹಂತದಲ್ಲಿ ನಡೆದ ದಾಳಿಯಲ್ಲಿ ಅವರು ಮೃತಪಟ್ಟ ನಂತರದಿಂದಲೇ ರೆವಲ್ಯೂಷನರಿ ಗಾರ್ಡ್ ಇಸ್ರೇಲ್ ಮತ್ತು ಗಲ್ಫ್ ಅರಬ್ ರಾಷ್ಟ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದೆ.

➡ ಪುಟ 9



ಯುಎಇ ತೈಲ ಘಟಕಕ್ಕೆ ಬೆಂಕಿ

ಇರಾನ್ ದಾಳಿಯಿಂದ ಯುನೈಟೆಡ್ ಅರಬ್ ಎಮಿರೇಟ್ಸ್‌ನ ತೈಲ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬಹರೈನ್‌ನ ಏಕೈಕ ತೈಲ ಶುದ್ಧೀಕರಣ ಘಟಕವೂ ಹೊಡೆತಕ್ಕೊಳಗಾಗಿದೆ ಎನ್ನಲಾಗಿದೆ. ಸೌದಿ ಅರೇಬಿಯಾ ತನ್ನ ಶ್ಯಾಬಾಹ್ ತೈಲ ಘಟಕದ ಮೇಲೆ ನಡೆದ ಡ್ರೋನ್ ದಾಳಿಗಳನ್ನು ತಡೆದಿರುವುದಾಗಿ ತಿಳಿಸಿದೆ.

ಮಧ್ಯಪ್ರಾಚ್ಯದಲ್ಲಿ ಹೆಚ್ಚಿದ ಉದ್ವಿಗ್ನತೆ

ಸೌದಿ ಅರೇಬಿಯಾ ತನ್ನ ಶ್ಯಾಬಾಹ್ ತೈಲ ಪ್ರದೇಶದ ಮೇಲೆ ನಡೆದ ಡ್ರೋನ್ ದಾಳಿ ಖಂಡಿಸಿ, ಅರಬ್ ರಾಷ್ಟ್ರಗಳ ಮೇಲೆ ದಾಳಿ ಮುಂದುವರಿಸಿದರೆ ಇರಾನ್ ಅತಿ ದೊಡ್ಡ ವಿಫಲ ರಾಷ್ಟ್ರ ಎಂದು ಎಚ್ಚರಿಸಿದೆ. ಯುಎಇ ರಾಜಧಾನಿ ಅಬುಧಾಬಿ ಮೇಲೆ ಇರಾನ್ ಕ್ಷಿಪಣಿ ದಾಳಿಯನ್ನು ತಡೆದ ವೇಳೆ ಬಿದ್ದ ಅವಶೇಷಗಳಿಂದ ಇಬ್ಬರು ಗಾಯಗೊಂಡಿದ್ದಾರೆ.

ಸ್ವೀಕಾರಾರ್ಹವಲ್ಲ ಎಂದ ಡೊನಾಲ್ಡ್ ಟ್ರಂಪ್

ಇಸ್ರೇಲ್ ಈಗಾಗಲೇ ಮೊಜ್ತಬಾ ಖಮೇನಿಯನ್ನು ಭವಿಷ್ಯದ ಗುರಿಯೆಂದು ಹೇಳಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಸ್ವೀಕಾರಾರ್ಹವಲ್ಲ ಎಂದು ಹೇಳಿ ಲೈಟ್‌ವೇಟ್ ಎಂದು ತಿರಸ್ಕರಿಸಿದ್ದಾರೆ. ಆದರೆ, ಇರಾನ್‌ನ ರೆವಲ್ಯೂಷನರಿ ಗಾರ್ಡ್ ಮತ್ತು ಇರಾನ್ ಬೆಂಬಲಿತ ಲೆಬನಾನ್ ಸಂಘಟನೆ ಹೆಜ್ಬೊಲ್ಲಾ ಇಬ್ಬರೂ ಹೊಸ ನಾಯಕನಿಗೆ ಬೆಂಬಲ ಘೋಷಿಸಿವೆ.

ದಿಲ್ಲಿಯಲ್ಲಿ ವರಿಷ್ಠರನ್ನು ಭೇಟಿಯಾದ ಡಿಸಿಎಂ

ಪಕ್ಷಾಧ್ಯಕ್ಷರಾಗಿ 6 ವರ್ಷ ಶಾಸಕರಿಗಿಂದು ಔತಣ

• **ಬೆಂಗಳೂರು:** ಬಜೆಟ್ ನಂತರ ನಾಯಕತ್ವದ ಬದಲಾವಣೆ ಕುರಿತ ವಿದ್ಯಮಾನಗಳಿಗೆ ಇನ್ನಷ್ಟು ರೆಕ್ಕೆ ಪುಕ್ಕಗಳು ಸೇರಿಕೊಂಡಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಶಾಸಕರಿಗೆ ಔತಣಕೂಟ ಆಯೋಜಿಸಿರುವುದು ರಾಜಕೀಯ ಲೆಕ್ಕಾಚಾರ ಎಂದೇ ವಿಶ್ಲೇಷಿಸಲಾಗುತ್ತಿದೆ.

ಕಲಬುರಗಿಯಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ದಿಲ್ಲಿಗೆ ತೆರಳಿರುವ ಅವರು ತಮ್ಮ ಇರಾದೆ ವ್ಯಕ್ತಪಡಿಸಿದ್ದಾರೆ. ಸೋಮವಾರ ಇಡೀ ದಿನ ಚಟುವಟಿಕೆಯಲ್ಲಿದ್ದ ಅವರು ಪಕ್ಷದವರಿಷ್ಠರನ್ನು ಗುಪ್ತವಾಗಿ ಭೇಟಿ ಮಾಡಿದ್ದಾರೆ.



ಡಿ.ಕೆ. ಶಿವಕುಮಾರ್ ಅವರನ್ನು ಕೆಲವು ಶಾಸಕರು ಬಹಿರಂಗವಾಗಿ ಬೆಂಬಲಿಸಿದ್ದರೆ, ಕೆಲವು ಶಾಸಕರು ಅವರ ಬಣದಲ್ಲಿ ಗುರುತಿಸಿಕೊಂಡರೂ ಎಲ್ಲೂ ಬಹಿರಂಗವಾಗಿ ಹೇಳಿಕೆ ನೀಡಿಲ್ಲ. ಇನ್ನೂ ಕೆಲವು ಶಾಸಕರು ಯಾವ ಬಣದವರು ಎಂದು ತೋರಿಸಿಕೊಂಡಿಲ್ಲ. ಈ ಔತಣಕೂಟದ ಮೂಲಕ ತಮ್ಮ ಬಲ ಪ್ರದರ್ಶನವನ್ನು ಹೈಕಮಾಂಡ್‌ಗೆ ತೋರಿಸಲಿದ್ದಾರೆ. ಔತಣಕೂಟಕ್ಕೆ ಸಿಎಂ ಸಿದ್ದರಾಮಯ್ಯ, ಸಂಪುಟ ಸಚಿವರು, ಶಾಸಕರು, ಪರಿಷತ್ ಸದಸ್ಯರು ಹಾಗೂ ಕೆಲವು ಹಿರಿಯ ನಾಯಕರಿಗೂ ಆಹ್ವಾನ ನೀಡಲಾಗಿದೆ.

➡ ಪುಟ 9



ಮಾಜಿ ಸಚಿವ, ಶಾಸಕರಿಗೂ ಭೋಜನ

ಶಾಸಕರಿಗೆ ಔತಣಕೂಟ ಆಯೋಜಿಸಿರುವ ಬಗ್ಗೆ ದಿಲ್ಲಿಯಲ್ಲಿ ಮಾತನಾಡಿರುವ ಡಿ.ಕೆ. ಶಿವಕುಮಾರ್ ಅವರು, ನಾನು ಕೆಪಿಸಿಸಿ ಅಧ್ಯಕ್ಷನಾಗಿ 6 ವರ್ಷ ಪೂರ್ಣಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ಭೋಜನಕೂಟ ಹಮ್ಮಿಕೊಂಡಿದ್ದೇನೆ. ಮತ್ತೊಂದು ದಿನ ನಮ್ಮ ಪರಾಜಿತ ಅಭ್ಯರ್ಥಿಗಳು ಮತ್ತು ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಭೋಜನಕೂಟ ಹಮ್ಮಿಕೊಳ್ಳಲಾಗುವುದು.

➡ ಪುಟ 9

ಶಾಸಕರಿಗೆ ಬಜೆಟ್ ತಿಳಿವಳಿಕೆ ಕಾರ್ಯಕ್ರಮ

ಶಾಸಕರಿಗಿರಲಿ ಆದಾಯ, ಖರ್ಚಿನ ಅರಿವು: ಸಿಎಂ



• **ಬೆಂಗಳೂರು:** ಎಲ್ಲ ಶಾಸಕರಿಗೂ ಸ್ಪಷ್ಟ ತಿಳಿವಳಿಕೆಯಿದ್ದರೆ ಹಣಕಾಸು ಖಾತೆ ನಿರ್ವಹಿಸುವವರಿಗೆ ಸಂಕಷ್ಟವಾಗುವುದಿಲ್ಲ. ರಾಜ್ಯದ ಆದಾಯ ಮತ್ತು ಖರ್ಚುಗಳ ಕುರಿತು ಎಲ್ಲರಿಗೂ ಸ್ಪಷ್ಟ ತಿಳಿವಳಿಕೆಯಿರಬೇಕು. ಇದೊಂದು ತರಬೇತಿ ಮಾದರಿಯ ಕಾರ್ಯಕ್ರಮ ಎಂದು ನಾನು ಭಾವಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಖಾಸಗಿ ಹೋಟೆಲ್‌ನಲ್ಲಿ ಶಾಸಕರು ಆಯವ್ಯಯ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ಆಯವ್ಯಯ ರಾಜಸ್ವಗಳ ಸಂಗ್ರಹಣೆ ಅನುದಾನ ವರ್ಗೀಕರಣ ಮತ್ತು ಹಂಚಿಕೆ ಹಾಗೂ ಆಯವ್ಯಯ ಅನುದಾನ ಬಳಕೆ, ನಿರ್ವಹಣೆ ವಿಷಯ ಕುರಿತು ತರಬೇತಿ ಶಿಬಿರ ಉದ್ದೇಶಿಸಿ ಮಾತನಾಡಿದರು. ಬಜೆಟ್ ಎನ್ನುವುದು ಒಬ್ಬ ವ್ಯಕ್ತಿಯಾಗಲಿ, ಕುಟುಂಬ, ಪಂಚಾಯ್ತಿ, ರಾಜ್ಯ, ರಾಷ್ಟ್ರಗಳಿಗೆ ಬಹಳ ಮುಖ್ಯವಾದ ಪ್ರಕ್ರಿಯೆ. ಸಂಗ್ರಹವಾಗುವ, ಅಗ್ರಹಿಸುವ ಪ್ರತಿ 1 ರೂಪಾಯಿ ಆದಾಯವು ಯಾವ ಯಾವ ಮೂಲದಿಂದ ಬರುತ್ತದೆ ಅದನ್ನು ಯಾವ ಬಾಬತ್ತುಗಳಿಗೆ ಖರ್ಚು ಮಾಡಬೇಕು, ಖರ್ಚು ವೆಚ್ಚಗಳ ನಿರ್ವಹಣೆ ಹೇಗೆ ಮಾಡಬೇಕು ಎಂಬುದರ ಕುರಿತ ಸಂಕ್ಷಿಪ್ತ ಮಾಹಿತಿಯೇ ಬಜೆಟ್ ಎಂದು ತಿಳಿಸಿದರು.

➡ ಪುಟ 9

ಉದ್ದೇಶದಲ್ಲಿ ಯಾವುದೇ ಬದಲಾವಣೆ ಇಲ್ಲ: ಸಚಿವ ಕೃಷ್ಣ ಬೈರೇಗೌಡ

ಬಗರ್‌ಹುಕುಂ ಜಮೀನು ಮಂಜೂರಿಗೆ ಕ್ರಮ

• **ವಿಧಾನಸಭೆ:** ಅಕ್ರಮ ಸಕ್ರಮ ಮತ್ತು ಬಗರ್‌ಹುಕುಂನಲ್ಲಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡಬೇಕೆಂಬ ಸರ್ಕಾರದ ಉದ್ದೇಶದಲ್ಲಿ ಯಾವುದೇ ಬದಲಾವಣೆ ಇಲ್ಲ. ಹಾಗೆಂದು ಕಾನೂನು- ನಿಯಮಗಳನ್ನೂ ಮೀರಲು ಸಾಧ್ಯವಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದರು.



ಸೋಮವಾರ ಪ್ರಶ್ನೋತ್ತರ ಕಲಾಪದಲ್ಲಿ ಸೇಂದಿವನವನ್ನು ಬಗರ್ ಹುಕುಂನಲ್ಲಿ ರೈತರಿಗೆ ಭೂ ಮಂಜೂರು ಮಾಡುವ ಸಂಬಂಧಿಸಿದ ಕಾಂಗ್ರೆಸ್ ಶಾಸಕ ಟಿ.ಬಿ.ಜಯಚಂದ್ರ ಪ್ರಶ್ನೆಗೆ ಸಚಿವರು ಉತ್ತರಿಸಿದರು. ಹಿಂದೆ ಕರ್ನಾಟಕದಲ್ಲಿ ಹೆಂಡ (ಸೇಂದಿ) ಇಳಿಸುವ ಕುಲಕಸುಬು ಇತ್ತು. ಹೀಗಾಗಿ ಇದೇ ಕಸುಬನ್ನು ನಂಬಿಕೊಂಡಿದ್ದವರಿಗಾಗಿ ಕೆಲವು ಪ್ರದೇಶಗಳನ್ನು ಈಚಲುವನ ಅಥವಾ ಸೇಂದಿವನ ಎಂದು ಕಾಯ್ದಿರಿಸಲಾಗಿತ್ತು.

➡ ಪುಟ 9

> ಸುಮಾರು ಜಮೀನುಗಳ ಕಡತದಲ್ಲಿ ಈಗಾಗಲೇ ಅರಣ್ಯ ಇಲಾಖೆ ಎಂದು ನಮೂದಿಸಲಾಗಿದೆ. ಅರಣ್ಯ ಜಮೀನು ರಕ್ಷಣೆಗೆ ಸುಪ್ರೀಂಕೋರ್ಟ್‌ನಿಂದ ಕಟ್ಟುನಿಟ್ಟಿನ ಆದೇಶವಿದೆ. ಹೀಗಾಗಿ ರೈತರಿಗೆ ಏನಾದರೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ನಿಯಮಗಳನ್ನು ಸರಳೀಕರಿಸಲು ಮುಂದಾಗಿದ್ದೇವೆ.
> ■ ಕೃಷ್ಣ ಬೈರೇಗೌಡ, ಸಚಿವ

ಯುದ್ಧ ಹಿನ್ನೆಲೆ, ಅನಾವಶ್ಯಕ ಸಂಗ್ರಹ ತಡೆಗೆ ಕ್ರಮ

ಎಲ್ಪಿಜಿ ಬುಕ್ಕಿಂಗ್ ಅವಧಿ 25 ದಿನಗಳಿಗೆ ವಿಸ್ತರಣೆ

• **ಹೊಸದಿಲ್ಲಿ:** ಇರಾನ್ ಯುದ್ಧದ ಹಿನ್ನೆಲೆ ದೇಶದಲ್ಲಿ ಎಲ್‌ಪಿಜಿ (ಅಡುಗೆ ಅನಿಲ) ಸಿಲಿಂಡರ್‌ಗಳ ಅನಾವಶ್ಯಕ ಸಂಗ್ರಹ ಹಾಗೂ ಕಪ್ಪು ಮಾರುಕಟ್ಟೆ ನಡೆಯದಂತೆ ತಡೆಯಲು ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೆ ತಂದಿದೆ. ಇನ್ನು ಮುಂದೆ ಎಲ್‌ಪಿಜಿ ಸಿಲಿಂಡರ್ ಮರುಬುಕ್ಕಿಂಗ್ ಅವಧಿಯನ್ನು 21 ದಿನಗಳಿಂದ 25 ದಿನಗಳಿಗೆ ಹೆಚ್ಚಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಕೆಲವರು ಹಿಂದೆ 55 ದಿನಗಳ ಬಳಿಕ ಬುಕ್ಕಿಂಗ್ ಮಾಡುತ್ತಿದ್ದರೆ, ಇತ್ತೀಚೆಗೆ ಕೆಲವರು ಕೇವಲ 15 ದಿನಗಳಲ್ಲೇ ಮತ್ತೆ ಸಿಲಿಂಡರ್ ಬುಕ್ ಮಾಡಲು ಆರಂಭಿಸಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ದೇಶೀಯ ಬಳಕೆದಾರರಿಗೆ ಸಿಲಿಂಡರ್ ಕೊರತೆ ಉಂಟಾಗದಂತೆ ನೋಡಿಕೊಳ್ಳಲು ಸರ್ಕಾರ ರಿಫೈನರಿಗಳಿಗೆ ಎಲ್‌ಪಿಜಿ ಉತ್ಪಾದನೆ ಹೆಚ್ಚಿಸಲು ಸೂಚಿಸಿದೆ.

ಸಂಗ್ರಹ ಹಾಗೂ ಕಪ್ಪು ಮಾರುಕಟ್ಟೆ ತಡೆಯಲು ಕೇಂದ್ರ ಹೊಸ ನಿಯಮ



ಜತೆಗೆ ವಾಣಿಜ್ಯ ಸಂಪರ್ಕಗಳಿಗಿಂತ ಗೃಹ ಬಳಕೆಯ ಎಲ್‌ಪಿಜಿಗೆ ಮೊದಲ ಆದ್ಯತೆ ನೀಡಲು ನಿರ್ದೇಶನ ನೀಡಲಾಗಿದೆ. ಭಾರತಕ್ಕೆ ಎಲ್‌ಪಿಜಿ ಪೂರೈಕೆ ಮಾಡಲು ಅಲ್ಜೀರಿಯಾ, ಆಸ್ಟ್ರೇಲಿಯಾ, ಕೆನಡಾ ಮತ್ತು ನಾರ್ವೆ ಮುಂತಾದ ದೇಶಗಳು ಆಸಕ್ತಿ ತೋರಿವೆ ಎಂದು ಮೂಲಗಳು ತಿಳಿಸಿವೆ.

➡ ಪುಟ 9

ಕೇಜ್ರಿವಾಲ್, ಸಿಸೋಡಿಯಾಗೆ ಹೈ ನೋಟಿಸ್

• **ಹೊಸದಿಲ್ಲಿ:** ಅಬಕಾರಿ ನೀತಿ ಹಗರಣದಲ್ಲಿ ಭ್ರಷ್ಟಾಚಾರಗಳ ಆರೋಪ ಹೊಂದಿರುವ ಆಮ್ ಆದ್ಮಿ ಪಕ್ಷದ ನಾಯಕ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತಿತರರ ದೋಷಮುಕ್ತಿ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿ ಪರಾಮರ್ಶಿಸಿರುವ ದಿಲ್ಲಿ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ಕೇಂದ್ರೀಯ ತನಿಖಾ ಸಂಸ್ಥೆ ವಿರುದ್ಧ ಅಧೀನ ನ್ಯಾಯಾಲಯ ಮಾಡಿರುವ ಟೀಕಾ ರೋಪಗಳನ್ನು ತಾನು ತಡೆಯುವುದಾಗಿ ಹೈಕೋರ್ಟ್ ನ್ಯಾ.ಸ್ವರಾನಾ ಕಾಂತ ಶರ್ಮಾ ಹೇಳಿದ್ದಾರೆ. ದಿಲ್ಲಿ ಆಗಿನ ಸಿಎಂ ವಿರುದ್ಧ ಬಲವಾದ ಪುರಾವೆಗಳಿಲ್ಲದೆಯೇ ಪ್ರಕರಣದಲ್ಲಿ ಸಿಲುಕಿಸಿದ್ದು ತಪ್ಪು, ಸಹ ಆರೋಪಿಗಳನ್ನು ಧರ್ಮದ ಆಧಾರದಲ್ಲಿ ಸೌತ್‌ಗ್ರೂಪ್ ಎಂದು ಲೇಬಲ್ ಮಾಡಿದ್ದು ತಪ್ಪೆಂದು ಅಧೀನ ಕೋರ್ಟ್ ಅಂದು ಸಿಬಿಐಗೆ ಛೀಮಾರಿ ಹಾಕಿತ್ತು.



➡ ಪುಟ 9

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,80,000 (2,85,000) ಅಪರಂಜಿ ಚಿನ್ನ: 1,61,680 (1,63,640) ಆಭರಣ ಚಿನ್ನ: 1,48,200 (1,50,000) ಚಿನ್ನ 10 ಗ್ರಾಂಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 77,566 (1,352↓) ಎನ್‌ಎಸ್‌ಇ 24,028 (422↓)
$1 = ₹91.75	

ಕಿರುಸುದ್ದಿ

ಕರಾಟೆ ಮಹಿಳಾ ತಂಡಕ್ಕೆ ವಿಜಯಲಕ್ಷ್ಮೀ ಆಯ್ಕೆ



ಕಲಘಟಗಿ: ತಾಲೂಕಿನ ದಾಸ್ತಿಕೊಪ್ಪ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಕು. ವಿಜಯಲಕ್ಷ್ಮೀ ಸಹದೇವ ಹರಮಣ್ಣವರ, 2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ಮಹಿಳಾ ಕರಾಟೆ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಈ ಕುರಿತು ಕರ್ನಾಟಕ ವಿಶ್ವವಿದ್ಯಾಲಯ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಇಲಾಖೆ, ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ವಿದ್ಯಾರ್ಥಿನಿ ವಿಜಯಲಕ್ಷ್ಮೀ ಆಯ್ಕೆಯಾಗಿದ್ದು. ಸರ್ಕಾರಿ ಪ್ರಥಮ ದರ್ಜೆ ಕಲಘಟಗಿ ಕಾಲೇಜಿನ ವಿದ್ಯಾರ್ಥಿನಿ , ಕರ್ನಾಟಕ ವಿಶ್ವವಿದ್ಯಾಲಯದ ಕರಾಟೆ (ಮಹಿಳಾ) ತಂಡವನ್ನು ನೈಋತ್ಯ ವಲಯ, ದಕ್ಷಿಣ ವಲಯ, ಅಖಿಲ ಭಾರತ, ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಯಲ್ಲಿ ಭಾಗವಹಿಸಲು ಪ್ರತಿನಿಧಿಸುತ್ತಾರೆ. ಆಯ್ಕೆಯಾದ ವಿದ್ಯಾರ್ಥಿನಿಗೆ ಕಲಘಟಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ವೃಂದ ಶುಭ ಹಾರೈಸಿದ್ದಾರೆ.

ಇಂದು ಕಾರ್ಯಕರ್ತರ ಸಂಭ್ರಮಾಚರಣೆ



ಹುಬ್ಬಳ್ಳಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಯಶಸ್ವಿ 6 ವರ್ಷ ಪೂರೈಸಿದ ಹಿನ್ನೆಲೆ ಹು-ಧಾ ಸೆಂಟ್ರಲ್ ವಿಧಾನ ಸಭಾ ಕ್ಷೇತ್ರದ ವಿದ್ಯಾನಗರ ಹಾಗೂ ಉಣಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಮಾ. 10 ರಂದು ಬೆಳಿಗ್ಗೆ 10 ಗಂಟೆಗೆ ಕೇಶ್ವಾಪುರ ವೃತ್ತದಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ ಆಯೋಜಿಸಲಾಗಿದೆ. ಪಕ್ಷದ ಸಂಘಟನೆ ಮತ್ತು ಪುನಶ್ಚೇತನ, ಕೋವಿಡ್-19 ಸಮಯದಲ್ಲಿ ಜನಸೇವೆ, ಮೇಕೆದಾಟು ಪಾದಯಾತ್ರೆ, ಒಗ್ಗಟ್ಟಿನ ಮಂತ್ರ, ಭಾರತ್ ಜೋಡೋ ಯಾತ್ರೆ, ವಿಧಾನಸಭಾ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯ, ಐದು ಗ್ಯಾರಂಟಿಗಳ ಜಾರಿ, 100 ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣ ಸೇರಿದಂತೆ ಅನೇಕ ಯಶಸ್ವಿ ಸಾಧನೆಗಳ ಸ್ಮರಿಸಲಾಗುತ್ತಿದೆ. ಕಾರಣ ಕಾಂಗ್ರೆಸ್ ಮುಖಂಡರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು, ನಿರ್ದೇಶಕರು, ಪಾಲಿಕೆ ಸದಸ್ಯರು, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಸೇರಿದಂತೆ ಎಲ್ಲಾ ಮುಂಚೂಣಿ ಘಟಕಗಳ, ಎಲ್ಲಾ ಸೆಲ್, ಡಿಪಾರ್ಟ್ಮೆಂಟಗಳ ಪದಾಧಿಕಾರಿಗಳು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲಗೊಳ್ಳಬೇಕಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಹಾಗೂ ಮೊಹಮ್ಮದ್ ಷರೀಫ್ ಗರಗ ಪ್ರಕಟಣೆಗೆ ತಿಳಿಸಿದ್ದಾರೆ.

ಇನ್‌ಕಾಮೆಕ್-2026 ಸಮಾರಂಭಕ್ಕೆ ಆಹ್ವಾನ



ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳ ನಿಯೋಗ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ಕೇಂದ್ರ ಕೈಗಾರಿಕಾ ಸಚಿವ ಪಿಯುಷ್ ಗೋಯಲ್ ಅವರನ್ನು ಭೇಟಿ ಮಾಡಿ ಮುಂದಿನ ತಿಂಗಳು ನಡೆಯುವ ಇನ್‌ಕಾಮೆಕ್ಸ್ -2026 ಸಮಾರಂಭಕ್ಕೆ ಆಹ್ವಾನಿಸಿದರು.

ಏಪ್ರಿಲ್ 25ರಿಂದ 29ರಂದು ಹುಬ್ಬಳ್ಳಿ ಎಪಿಎಂಸಿ ಆವರಣದಲ್ಲಿ ಆಯೋಜಿಸಲಾಗಿದೆ. ಕೇಂದ್ರ ಸಚಿವರಿಗೆ ಸಮಾರಂಭದ ಕುರಿತು ವಿವರಿಸಿದರು. ನಿಯೋಗದ ಮನವಿಗೆ ಸ್ಪಂದಿಸಿದ ಸಚಿವ ಪಿಯುಷ್ ಗೋಯಲ್ ಅವರು ಹುಬ್ಬಳ್ಳಿಯಲ್ಲಿ ನಡೆಯಲಿರುವ ಈ ಮಹತ್ವದ ಕೈಗಾರಿಕಾ ವಸ್ತು ಪ್ರದರ್ಶನವು ಉತ್ತರ ಕರ್ನಾಟಕದ ಕೈಗಾರಿಕಾ ಹಾಗೂ ವ್ಯಾಪಾರ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಕಾರ್ಯಕ್ರಮದ ಯಶಸ್ಸಿಗೆ ತಮ್ಮ ಇಲಾಖೆಯಿಂದ ಸಾಧ್ಯವಿರುವ ಸಹಾಯ ಹಾಗೂ ಸಹಕಾರ ನೀಡುವುದಾಗಿ ಭರವಸೆ ನೀಡುವುದರೊಂದಿಗೆ ಇನ್‌ಕಾಮೆಕ್ಸ 2026ರ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಲು ಒಪ್ಪಿಕೊಂಡಿರುವರು.ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಉಪಾಧ್ಯಕ್ಷ ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಹಾಗೂ ಇನ್‌ಕಾಮೆಕ್ಸ್ 2026 ಚೇರಮನ್ ಎಂ.ವಿ.ಕರಮರಿ ಹಾಗೂ ಗೋವಿಂದ ಜೋಶಿ ಉಪಸ್ಥಿತರಿದ್ದರು.



ಹುಬ್ಬಳ್ಳಿ: ಹಾವೇರಿ ಜಿಲ್ಲೆಯ ಕುಸನೂರ ಮಠದಲ್ಲಿ ಭಾನುವಾರ ನಡೆದ ಜಾನಪದ, ಸಾಹಿತ್ಯ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಚುಕ್ಕಿ ಚಿತ್ರ ಕಲಾವಿದ ಸುನೀಲ್ ಜ. ಚಿತ್ರಗಾರ ಅವರು ಜ್ಯೋತಿರ್ಲಿಂಗಾನಂದ ಶ್ರೀಗಳಿಗೆ ಚುಕ್ಕಿ ಚಿತ್ರ ಕಲಾಕೃತಿಯನ್ನು ಪ್ರದಾನ ಮಾಡಿದರು. ಈ ವೇಳೆ ತಿಳವಳ್ಳಿಯ ಕಲ್ಮಠ ಶ್ರೀಗಳು, ಹಿರಿಯ ಕೆಎಎಸ್ ಅಧಿಕಾರಿ ವಿಶ್ವನಾಥ ಪಿ. ಹಿರೇಮಠ, ಕೋಡಿಹಳ್ಳಿ ಪ್ರತಿಷ್ಠಾನದ ಅಧ್ಯಕ್ಷ ಪುಟ್ಟರಾಜು ಜಿ. ಕೋಡಿಹಳ್ಳಿ ಉಪಸ್ಥಿತರಿದ್ದರು.

ವಿವಿಧ ಕಾಮಗಾರಿಗೆ ವೈಶಾಲಿ ಕುಲಕರ್ಣಿ ಚಾಲನೆ

ಉಪ್ಪಿನಬೆಟಗೇರಿ: ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ಅವರ ಅನುದಾನದಲ್ಲಿ 2024-25ನೇ ಸಾಲಿನ ಧಾರವಾಡ 71ನೇ ಮತಕ್ಷೇತ್ರ ವ್ಯಾಪ್ತಿಯ ಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಉಪ್ಪಿನಬೆಟಗೇರಿ ಗ್ರಾಮದಲ್ಲಿ ಸೋಮವಾರದಂದು ವಿವಿಧ ಕಾಮಗಾರಿಗಳಿಗೆ ಕರ್ನಾಟಕ ಸರಕಾರದ ವನ್ಯ ಜೀವಿ ಮಂಡಳಿ ಸದಸ್ಯೆ ವೈಶಾಲಿ ಕುಲಕರ್ಣಿ ಭೂಮಿಪೂಜೆ ನೆರವೇರಿಸಿದರು.

ಶ್ರೀರೇಣುಕಾ ಯಲ್ಲಮ ದೇವಸ್ಥಾನದಿಂದ ಹಳೇ ಕೆಇಬಿವರಗೆ ಸಿಸಿ ರಸ್ತೆಗೆ 10 ಲಕ್ಷ ರೂ. ಶ್ರೀ ಗುರು ವಿರುಪಾಕ್ಷೇಶ್ವರ ಹೈಸ್ಕೂಲ್‌ನಿಂದ ಹಾರೋಬೆಳವಡಿ ಕ್ರಾಸ್‌ವರೆಗೆ ಗಟಾರ್ ನಿರ್ಮಾಣಕ್ಕೆ 10 ಲಕ್ಷ ರೂ.ಉಪ್ಪಿನಬೆಟಗೇರಿಯಿಂದ ಮರೇವಾಡವರೆಗೆ ಡಾಂಬರೀಕರಣ 1 ಕೋಟಿ ರೂ.ಹಾಗೂ ಬಿಸಿಎಂ ಹಾಸ್ಟೆಲ್, ಶ್ರೀ ವೀರಭದ್ರೇಶ್ವರ ದೇವಸ್ಥಾನ, ಆಂಜನೇಯ ದೇವಸ್ಥಾನ ಹತ್ತಿರದ ಗಟಾರ್ ನಿರ್ಮಾಣಕ್ಕಾಗಿ ಅಂದಾಜು 20 ಲಕ್ಷ ರೂ. ಕಾಮಗಾರಿಗಳಿಗೆ ಪೂಜೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಬಸೀರ್ ಅಹ್ಮದ್ ಮಾಳಗಿಮನಿ, ಗಂಗಪ್ಪ ಜವಳಗಿ, ಮಲ್ಲಪ್ಪ ಅಷ್ಟಗಿ, ಮಂಜುನಾಥ ಸಂಕಣ್ಣವರ, ಬಾಬಾ ಮೊಹಿದ್ದೀನ ಚೌಧರಿ, ಗ್ರಾಪಂ ಮಾಜಿ ಸದಸ್ಯ ಮುಸ್ತಾಕ್ ನದಾಫ್, ಅಬ್ದುಲ ಲಂಗೋಟಿ, ಶಿವಪ್ಪ ವಿಜಾಪುರ, ಮುಸ್ತಾಕ್ ಮಕಾನದಾರ, ಮಂಜು ಯಡಳ್ಳಿ, ಸುರೇಶಬಾಬು ತಳವಾರ, ಸೂಫಾನ್‌ಲೋಲಿ, ಸಲಾಂ ಲಾಲ್ಮೀಯಾ, ಕಲ್ಲಪ್ಪ ಬೊಬ್ಬಿ, ಸೇರಿದಂತ ಇತರರಿದ್ದರು.



ಉಪ್ಪಿನಬೆಟಗೇರಿ: ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ಅವರ ಅನುದಾನದಲ್ಲಿ 2024-25ನೇ ಸಾಲಿನ ಧಾರವಾಡ 71ನೇ ಮತಕ್ಷೇತ್ರ ವ್ಯಾಪ್ತಿಯ ಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಉಪ್ಪಿನಬೆಟಗೇರಿ ಗ್ರಾಮದಲ್ಲಿ ಸೋಮವಾರದಂದು ವಿವಿಧ ಕಾಮಗಾರಿಗಳಿಗೆ ಕರ್ನಾಟಕ ಸರಕಾರದ ವನ್ಯ ಜೀವಿ ಮಂಡಳಿ ಸದಸ್ಯೆ ವೈಶಾಲಿ ಕುಲಕರ್ಣಿ ಭೂಮಿಪೂಜೆ ನೆರವೇರಿಸಿದರು.

ಕವಿವಿಯಲ್ಲಿ ಮಾಧ್ಯಮ ಹಬ್ಬ | ಕುಲಪತಿ ಡಾ. ಎ.ಎಂ.ಖಾನ್ ಅಭಿಮತ

ಮಾಧ್ಯಮಕ್ಕೆ ತಂತ್ರಜ್ಞಾನ ಹೊಸ ದಿಕ್ಸೂಚಿ

ಧಾರವಾಡ: ಕೃತಕ ಬುದ್ಧಿಮತ್ತೆ ಅಂತಹ ತಂತ್ರಜ್ಞಾನವು ಮಾಧ್ಯಮ ಕ್ಷೇತ್ರಕ್ಕೆ ಹೊಸ ದಿಕ್ಸೂಚಿ ನೀಡಿದೆ. ಪತ್ರಿಕೋದ್ಯಮದ ಬದಲಾವಣೆಗೆ ತಕ್ಕಂತೆ ವಿದ್ಯಾರ್ಥಿಗಳು ಸಹ ಸಿದ್ಧಗೊಳಿಸಲು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಕರೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಯೋಗದಲ್ಲಿ ಕವಿವಿ ಕನಕ ಪೀಠದ ಸಭಾಭವನದಲ್ಲಿ ಸೋಮವಾರ ನಡೆದ ಮಾಧ್ಯಮ ಹಬ್ಬ ಉದ್ಘಾಟಿಸಿ ಮಾತನಾಡಿದರು.

ನವೀನ ತಂತ್ರಜ್ಞಾನ ಬಳಸುವ ಕೌಶಲ್ಯವಿದ್ದರೆ, ಪ್ರತಿಯೊಬ್ಬರು ಪತ್ರಕರ್ತರಾಗುವ ಅವಕಾಶಗಳು ಸೃಷ್ಟಿಯಾಗಿವೆ. ಆದಾಗ್ಯೂ ಈ ತಂತ್ರಜ್ಞಾನ ಹಾವಳಿಯಿಂದ ನಕಲಿ ನ್ಯೂಸ್ ಹೆಚ್ಚುತ್ತಿವೆ. ಇದಕ್ಕೆ ಕಡಿವಾಣ ಹಾಕುವ ಕಾರ್ಯವೂ ಆಗಬೇಕಿದೆ ಎಂದು ಹೇಳಿದರು.

ವಿದ್ಯುನ್ಮಾನಮಾಧ್ಯಮದಿಂದ ಮುದ್ರಣ ಮಾಧ್ಯಮ, ಸಾಮಾಜಿಕ ಮಾಧ್ಯಮದಿಂದ ವಿದ್ಯುನ್ಮಾನ ಮಾಧ್ಯಮದ ಪ್ರಭಾವವೂ ಗೌಣವಾಗುತ್ತಿವೆ. ಭವಿಷ್ಯದ ಯುವ ಪತ್ರಕರ್ತರಿಗೆ ತಂತ್ರಜ್ಞಾನದ ಅರಿವು, ಅನುಭವದ ಜೊತೆ ತರಬೇತಿ ಅಗತ್ಯವಿದೆ ಎಂದರು.

ಪತ್ರಿಕೋದ್ಯಮ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಎ.ಎಸ್.ಬಾಲಸುಬ್ರಮಣ್ಯ, ಕವಿವಿಯಲ್ಲಿ ಪತ್ರಿಕೋದ್ಯಮ 1982ರಲ್ಲಿ ಪ್ರಾರಂಭವಾಗಿದ್ದು, 500-600 ಜನ ವಿದ್ಯಾರ್ಥಿಗಳು ವಿವಿಧ ಮಾಧ್ಯಮದಲ್ಲಿ ಕರ್ತವ್ಯ ನಿರ್ವಹಿಸುವುದಕ್ಕೆ ಅಭಿಮಾನ ವ್ಯಕ್ತಪಡಿಸಿದರು.

ಬದಲಾವಣೆ ಜಗದ ನಿಯಮ. ಹೀಗಾಗಿ ಮಾಧ್ಯಮ ಪ್ರಪಂಚದ ಬದಲಾವಣೆಗೆ ಒಗ್ಗಿಕೊಂಡ ಪತ್ರಿಕೆಗಳು ಕೂಡ ಡಿಜಿಟಲ್, ಯುಟ್ಯೂಬ್ ಚಾನೆಲ್ ತೆರೆದು ಸುದ್ದಿಗಳನ್ನು ಬಿತ್ತರಿಸುತ್ತಿವೆ. ವಿದ್ಯಾರ್ಥಿಗಳು ಬದಲಾವಣೆಗೆ ತಕ್ಕಂತೆ ಸಿದ್ಧರಾಗಬೇಕು ಎಂದರು.

ಕೌಶಲ್ಯಗಳು ಇದ್ದರೆ, ಹಣ ತಾನಾಗಿಯೇ ಬರಲಿದೆ. ಯುವಕರ ಮಾನಸಿಕ ಸ್ಥಿತಿ ಬದಲಾಗಬೇಕು. ಲೋಕಲ್ ಇದ್ದುಕೊಂಡು, ಗ್ಲೋಬಲ್ ಆಗಬೇಕು. ಇಂತಹ ಬದಲಾವಣೆಗೆ ಒಗ್ಗದಿದ್ದರೆ, ಭವಿಷ್ಯದ ಬದುಕು ಸಹ ಬಹಳ ಕಷ್ಟವಾಗಲಿದೆ ಎಂದು ಎಚ್ಚರಿಸಿದರು.

ಅಧ್ಯಕ್ಷತೆ ವಹಿಸಿದ ವಾರ್ತಾ ಇಲಾಖೆಯ ಬೆಳಗಾವಿ ಉಪನಿರ್ದೇಶಕ ಗುರುರಾಜ ಕಡಬೂರ ಮಾತನಾಡಿ, ಪತ್ರಿಕೋದ್ಯಮ ವಿದ್ಯಾರ್ಥಿಗಳು ಸತ್ಯ, ಧರ್ಮ, ನ್ಯಾಯ ನೀತಿ ಜತೆ ಸಂವಿಧಾನ ಮತ್ತು ಕಾನೂನು ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದರು.

ವೇದಿಕೆಯಲ್ಲಿ ಕರ್ನಾಟಕ ಎಲೆಕ್ಟ್ರಾನಿಕ್ ಮೀಡಿಯಾ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಕಾಶ ನೂಲ್ವಿ, ಪತ್ರಕರ್ತರಾದ ಶ್ರೀಕಾಂತ ಕುಬಕಡ್ಡಿ, ಪ್ರಾಧ್ಯಾಪಕ ಡಾ. ಸಂಜಯ ಮಾಲಗತ್ತಿ, ಡಾ. ಜೆ.ಎಂ.ಚಂದುನವರ, ಡಾ.ಪ್ರಭಾಕರ ಕಾಂಬಳೆ ಇದ್ದರು.



ಇಂದು ಉಪನ್ಯಾಸ

ಮಾಧ್ಯಮ ಹಬ್ಬದಲ್ಲಿ ಮಾ.10ರ ಬೆಳಿಗ್ಗೆ 10.30ಕ್ಕೆ ಕೃತಕ ಬುದ್ಧಿಮತ್ತೆ ಆಧಾರಿತ ವಿಷಯಗಳ ವಿಶ್ವಾಸರ್ಹತೆ ಬಗ್ಗೆ ವಿಶ್ರಾಂತ ಪ್ರಾಧ್ಯಾಪಕ ಡಾ.ಎ.ಎಸ್.ಬಾಲಸುಬ್ರಮಣ್ಯ ಹಾಗೂ ಪತ್ರಿಕೋದ್ಯಮ ಮತ್ತು ನವತಂತ್ರಜ್ಞಾನ ಬಳಕೆ ಕುರಿತು ಹಿರಿಯ ಪತ್ರಕರ್ತ ಸುಭಾಷ ಹೂಗಾರ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕೌಶಲ್ಯಗಳ ಪ್ರದರ್ಶನ

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಸ್ನಾತಕ-ಸ್ನಾತಕೋತ್ತರ ಪದವಿಯ ಸುಮಾರು 100ಕ್ಕೂ ಅಧಿಕ ವಿದ್ಯಾರ್ಥಿಗಳು ಮಾಧ್ಯಮ ಹಬ್ಬದಲ್ಲಿ ಪಾಲ್ಗೊಂಡು, ಸ್ಕ್ರಿಪ್ಟ್ ಬರವಣಿಗೆ, ಕಿರು ಸಂದರ್ಶನ, ವಾಕ್ ಥ್ರೂ ಮತ್ತು ಪಿಟುಸಿ, ರೇಡಿಯೋ ಜಾಕಿ, ರೀಲ್ಸ್ ನಿರ್ಮಾಣ ಸ್ಪರ್ಧೆಯಲ್ಲಿ ತಮ್ಮ ಕೌಶಲ್ಯ ಪ್ರದರ್ಶನ ಮಾಡಿದರು.

ಶಾಶ್ವತ ನೀರಿನ ಸಮಸ್ಯೆ ಬಗೆಹರಿಸಿ: ದೊಡ್ಡಮನಿ

ಕುಂದಗೋಳ: ತಾಲೂಕಿನಲ್ಲಿ ದಿನೇ ದಿನೇ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗುತ್ತಿದ್ದು, ಜನರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಕೂಡಲೇ ಅಧಿಕಾರಿಗಳು, ಸರ್ಕಾರ ಕ್ರಮ ಕೈಗೊಂಡು ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಕೈಗೊಳ್ಳಬೇಕಾಗುತ್ತೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಶಂಕರಗೌಡ ದೊಡ್ಡಮನಿ ಆಗ್ರಹಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಸೋಮವಾರ ಕೆಲಕಾಲ ಪ್ರತಿಭಟಿಸಿ ಮಾತನಾಡಿ, ತಾಲೂಕಿನ 14 ಗ್ರಾಮಗಳಿಗೆ ಜಾರಿಯಲ್ಲಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಗ್ರಾಮಸ್ಥರಿಗೆ ಕುಡಿಯುವ ನೀರಿನ ತೀವ್ರ ಕೊರತೆ ಉಂಟಾಗಿದೆ. ತಾಲೂಕಿನ ಹಲವೆಡೆ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಬಹುತೇಕ ನಿಷ್ಕ್ರಿಯಗೊಂಡಿರುವುದರಿಂದ ಜನರಿಗೆ ಶುದ್ಧ ನೀರು ದೊರೆಯುತ್ತಿಲ್ಲ, ಗ್ರಾಮಸ್ಥರು 8 ರಿಂದ 10 ಕಿಲೋಮೀಟರ್ ದೂರದಿಂದ ನೀರು ತರಬೇಕಾದ ಪರಿಸ್ಥಿತಿ ಬಂದಿದೆ ಎಂದರು.

ಜಿಲ್ಲಾ ಜೆಡಿಎಸ್ ಗ್ರಾಮೀಣ ಅಧ್ಯಕ್ಷ ಬಿ.ಬಿ. ಗಂಗಾಧರಮಠ ಮಾತನಾಡಿ, ತಾಲೂಕಿನ ಅನೇಕ ಗ್ರಾಮೀಣ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕರು ಸಂಚಾರಕ್ಕೆ ತೊಂದರೆ ಅನುಭವಿಸುತ್ತಿದ್ದಾರೆ. ರಾಜ್ಯ ಸರ್ಕಾರವು ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ಸಮರ್ಪಕ ಅನುದಾನ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ 17ನೇ ರಾಜ್ಯ ಬಜೆಟ್‌ನಲ್ಲಿ ಕುಂದಗೋಳ ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ವಿಶೇಷ ಅನುದಾನ ನೀಡಿಲ್ಲ ಎಂದು ಆರೋಪಿಸಿದರು.

ಈ ವೇಳೆ ತಾಲೂಕು ಜೆಡಿಎಸ್ ಘಟಕದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಹಶೀಲ್ದಾರ್ ರಾಜು ಮಾವರಕರ ಅವರಿಗೆ ಮನವಿ ಸಲ್ಲಿಸಲಾಯಿತು. ಶಿವಶಂಕರ ಕಲ್ಲೂರ, ಜಾಫರ್ ಕ್ಯಾಲಕೊಂಡ, ದಾಧಾಪೀರ ರಾಟಿಮನಿ, ರೇಖಾ ನಾಯ್ಕರ, ಮಲ್ಲಿಕಾರ್ಜುನಗೌಡ ತಂಬಿದಮನಿ, ಬಸವರಾಜ ಹರವಿ, ಅಲಿ ಸಂದಿಮನಿ, ಸಿದ್ದಯ್ಯ ಪೂಜಾರ, ನಿರ್ಮಲಾ ಹನಸಿ, ರಾಘವೇಂದ್ರ ಕಡಪಟ್ಟಿ, ಬಸವರಾಜ ಶಿವಣ್ಣವರ, ಜಗದೀಶ ಕುಂಬಾರ, ಮಲ್ಲನಗೌಡ ಧರ್ಮಗೌಡ್ರ, ಮಂಜುನಾಥ ದೊಡ್ಡಮನಿ, ಬಸವರಾಜ ಬಡ್ನಿ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



ನಾಳೆಯಿಂದ ವೈದ್ಯಕೀಯ ನೌಕರರ ಮುಷ್ಕರ

ಧಾರವಾಡ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾ.11ರಿಂದ 15ರವರೆಗೆ ಕಪ್ಪುಪಟ್ಟಿ ಪ್ರದರ್ಶನ ಹಾಗೂ ಮಾ.16ರ ಬಳಿಕ ಕರ್ತವ್ಯಕ್ಕೆ ಗೈರು ಉಳಿಯುವ ಮೂಲಕ ಅನಿರ್ಧಿಷ್ಟಾವಧಿ ಮುಷ್ಕರ ಹಮ್ಮಿಕೊಂಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾಧ್ಯಕ್ಷ ದೇವಿದಾಸ ಶಾಂತಿಕರ, ಸರ್ಕಾರ ಬೇಡಿಕೆ ಈಡೇರಿಸದ ಕಾರಣಕ್ಕೆ ಮುಷ್ಕರ ಕೈಗೊಂಡಿದ್ದಾಗಿ ಹೇಳಿದರು.

ಈ ಮುಷ್ಕರಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕರ್ನಾಟಕ ರಾಜ್ಯ ಆರೋಗ್ಯ-ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘ, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಇಲಾಖೆ ವೃಂದ ನೌಕರರ ಸಂಘಗಳು ಬೆಂಬಲಿಸಿವೆ ಎಂದರು. ಮಾ.11ರಿಂದ 15ರವರೆಗೆ ಜನ ಜಾಗೃತಿಗೆ ಓಪಿಡಿ ಸೇವೆ ಸ್ಥಗಿತದದ ಜೊತೆಗೆ ತುರ್ತು ಸೇವೆ ಮಾತ್ರವೇ ನೀಡಲಿದೆ. ಮಾ.16ರಿಂದ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಉಳಿಯುವ ಮೂಲಕ ಬೇಡಿಕೆ ಈಡೇರುವರೆಗೂ ಮುಷ್ಕರ ನಡೆಸುವುದಾಗಿ ತಿಳಿಸಿದರು.

ಜಿಲ್ಲಾಸ್ಪತ್ರೆ, ತಾಲೂಕಾಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿ ರಾಜ್ಯದ 70 ಸಾವಿರಕ್ಕೂ ಹೆಚ್ಚು ನೌಕರರ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದು, ತಮ್ಮ ಮುಷ್ಕರಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಕೋರಿದರು.

ನೌಕರರ ಸಂಘದ ಜಿಲ್ಲಾಧ್ಯಕ್ಷ ಎಸ್. ಎಫ್.ಸಿದ್ದನಗೌಡರ, ಆರೋಗ್ಯ ಇಲಾಖೆಯ ನೌಕರರ ಮುಷ್ಕರಕ್ಕೆ ಸರ್ಕಾರಿ ನೌಕರರ ಸಂಘ ರಾಜ್ಯ ಮತ್ತು ಜಿಲ್ಲಾ ಘಟಕವೂ ಬೆಂಬಲಿಸಿದ್ದು, ಸರ್ಕಾರ ಈ ಮುಷ್ಕರಕ್ಕೆ ಆಸ್ಪದ ನೀಡದೆ, ಬೇಡಿಕೆ ಈಡೇರಿಸಲು ಆಗ್ರಹಿಸಿದರು.

ಆರೋಗ್ಯ ಇಲಾಖೆ ನೌಕರರ ಬೇಡಿಕೆ ಈಡೇರಿಸಲು ಹಲಾವರು ಸಭೆ ನಡೆದಿವೆ. ಸಚಿವರಿಗೆ ಹಾಗೂ ಸರ್ಕಾರಕ್ಕೂ ಮನವಿ ಸಲ್ಲಿಸಿದೆ. ಆದಾಗ್ಯೂ ಸಹ ಸರ್ಕಾರ ಆರೋಗ್ಯ ಇಲಾಖೆಯ ನೌಕರರನ್ನು ತಾತ್ಸರದಿಂದ ನೋಡುವುದು ಸರಿಯಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಸಮಾಜವಾದಿ ಹಿನ್ನಲೆಯ ವ್ಯಕ್ತಿಗಳು. ಹೀಗಾಗಿ ಮುಷ್ಕರ ನಡೆಸುವ ವೈದ್ಯಕೀಯ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಹೆಸ್ಮಾ ಜಾರಿ ಮಾಡದೆ ಮತ್ತು ಹೋರಾಟಕ್ಕೂ ಅವಕಾಶ ಕೊಡದೆ, ಬೇಡಿಕೆ ಈಡೇರಿಸಲು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ವೈದ್ಯಕೀಯ ನೌಕರರ ಸಂಘದ ಪದಾಧಿಕಾರಿಗಳಾದ ಚಂದ್ರಿಕಾ ದಂಬಳ್ಳಿ, ಡಾ.ಪರಶುರಾಮ ಎಸ್.ಕೆ., ಬಿ.ಆರ್ .ಪಾತ್ರೋಟ್, ಜಿ.ವಿ.ಓಂಕರಗೌಡ್ರ ಇದ್ದರು.



ವಿವಿಧ ಕಾಮಗಾರಿಗೆ ಭೂಮಿಪೂಜೆ



ನವಲಗುಂದ: ತಾಲೂಕಿನ ಸೊಟಕನಾಳ ಗ್ರಾಮದ ಕುರುಬ ಸಮಾಜದ ಬಹುದಿನದ ಬೇಡಿಕೆಯಾದ ಸಿದ್ಧ ಬೀರಲಿಂಗೇಶ್ವರ ದೇವಸ್ಥಾನದ ಕಟ್ಟಡ ನಿರ್ಮಾಣಕ್ಕಾಗಿ ಮನವಿ ಮಾಡಿದ್ದರು ಅವರ ಮನವಿಗೆ ಸ್ಪಂದಿಸಿ 20 ಲಕ್ಷ ರೂ.ಅನುದಾನ ಬಿಡುಗಡೆ ಮಾಡಿ ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಲು ಭೂಮಿಪೂಜೆ ಮಾಡಿರುವುದು ನನಗೆ ಸಂತಸದ ವಿಷಯ ಎಂದು ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು.

ಸೋಟಕನಾಳ ಗ್ರಾಮದಲ್ಲಿ ಕುರುಬ ಸಮಾಜದ ಸಿದ್ದಬೀರಲಿಂಗೇಶ್ವರ ದೇವಸ್ಥಾನ ಹಾಗೂ ಸೋಟಕನಾಳ ಹತ್ತಿರ ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈಸಂದರ್ಭದಲ್ಲಿಶಾಸಕ ಎನ್. ಎಚ್. ಕೋನರಡ್ಡಿ ಅವರಿಗೆ ಕಂಬಳಿ ಹೊದಿಸಿ ಸನ್ಮಾನಿಸಲಾಯಿತು.

ಸಮರ್ಥ ಶಿವಾನಂದ ಸ್ವಾಮಿಗಳು, ಪಂಡಿತ್ ಬಸವರಾಜ ಶ್ರೀಗಳು ಸಾನ್ನಿಧ್ಯವಹಿಸಿದ್ದರು. ತಹಶೀಲ್ದಾರ್ ಸುಧೀರ್ ಸಾಹುಕಾರ್, ಕಾರ್ಯನಿರ್ವಾಹಕ ಅಧಿಕಾರಿ ಪಿ. ಆರ್. ಬಡೇಖಾನ್, ಮುಖಂಡರಾದ ಎನ್.ಬಿ. ಕಿರೆಸೂರ, ರೇಣುಕಾ ಹೊಂಗಲ, ಶಿವಾನಂದ ಚಿಕ್ಕನರಗುಂದ. ಬಿ.ಎನ್. ರೋಗಿ, ಪಾಂಡು ಕಿರೆಸೂರ ಶಿವಪುತ್ರಪ್ಪ ಆನಂದಿ, ಸಿದ್ದಪ್ಪ ಹಾಲವರ, ಬಸಪ್ಪ ಆನಂದಿ, ಬಸವರಾಜ ಬೆಳವಣಕಿ ಮಹೇಶ ಆನಂದಿ ಶಂಕ್ರಪ್ಪ ಚಲವಾದಿ, ಈರಣ್ಣ ಆನಂದಿ, ಕಿಷ್ಟಪ್ಪ ಮಾದರ, ಬೀರಪ್ಪ ಪೂಜಾರ ಮುಂತಾದವರಿದ್ದರು.

ಪ್ರತಿಯೊಬ್ಬರೂ ಸ್ತ್ರೀಯರನ್ನು ಗೌರವಿಸಿ

ಧಾರವಾಡ: ಸ್ತ್ರೀಯು ಒಂದು ನಕ್ಷತ್ರ ಇದ್ದಂತೆ. ಅವಳಿಗೆ ಬೇರೆ ಬೆಳಕು ಬೇಕಿಲ್ಲ, ಅವಳೇ ಬೇರೆಯವರಿಗೆ ಬೆಳಕು ನೀಡುತ್ತಾಳೆ ಎಂದು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ. ಕರಿಮುನ್ನಿಸಾ ಸಯ್ಯದ್ ಹೇಳಿದರು.

ನಗರದ ಜೆಎಸ್ಸೆಸ್ ಬನಶಂಕರಿ ಕಲಾ-ವಾಣಿಜ್ಯ ಹಾಗೂ ಶಾಂತಿಕುಮಾರ್ ಗುಬ್ಬಿ ವಿಜ್ಞಾನ ಕಾಲೇಜಿನಲ್ಲಿನಡೆದಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸ್ತ್ರೀಯರನ್ನು ಗೌರವಿಸುವಂತೆ ಕರೆ ನೀಡಿದರು.

ಹಿಂದೆ ಓರ್ವ ಯಶಸ್ವಿ ಪುರಷನ ಹಿಂದೆ ಮಹಿಳೆ ಇರುವಂತೆ, ಇಂದು ಓರ್ವ ಯಶಸ್ವಿ ಮಹಿಳೆ ಹಿಂದೆ ಓರ್ವ ಪುರುಷ ಇರುವುದು ಅಕ್ಷರಶಃ ಸತ್ಯವಾಗಿದೆ. ಆಧುನಿಕ ಮಹಿಳೆ ಸರ್ವ ರಂಗದಲ್ಲೂ ಛಾಪು ಮೂಡಿಸಿದ್ದಾಗಿ ಹೇಳಿದರು.

ಮಹಿಳೆಯರು ತಮ್ಮಲ್ಲಿನ ದೌರ್ಬಲ್ಯ ಮೆಟ್ಟಿ ನಿಂತು ತಮ್ಮ ಅಸ್ಮಿತೆ ಪಡೆಯಬೇಕು. ಸಾಲುಮರದ ತಿಮ್ಮಕ ನಮಗೆ ಆದರ್ಶವಾಗಬೇಕು. ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳು ಬೆಳೆಸಬೇಕು ಎಂದು ತಿಳಿಸಿದರು.

ಜೆಎಸ್ಸೆಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು ಕೆಲವೇ ವರ್ಷಗಳ ನಂತರ ಶಿಕ್ಷಣ, ಉದ್ಯೋಗ, ವಿಜ್ಞಾನ ಹೀಗೆ ಸರ್ವ ಕ್ಷೇತ್ರದಲ್ಲೂ ಮಹಿಳೆ ಸ್ಥಾನ ಪಡೆದಿರುವುದು ಹೆಮ್ಮೆ ಸಂಗತಿ ಎಂದರು.

ಅತಿಥಿ ವಾಣಿಶ್ರೀ ಅಜಿತ ಪ್ರಸಾದ ಮಾತನಾಡಿ, ಮಹಿಳೆಯರು ಕರ್ನಾಟಕದಲ್ಲಿ ಸ್ವ ಸಹಾಯ ಸಂಘಗಳ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸುವಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪಾತ್ರ ಪ್ರಮುಖವಾಗಿದೆ ಎಂದರು.

ಪ್ರಾಚಾರ್ಯನ ಡಾ. ವೆಂಕಟೇಶ ಮುತಾಲಿಕ ಅಧ್ಯಕ್ಷತೆ ವಹಿಸಿದ್ದರು. ಡಾ.ಶೌಕತ ಅಲಿ, ಡಾ.ನಳಿನಿ ಕುಲಕರ್ಣಿ, ಡಾ.ಶಿಲ್ಪಾ ಆಡೂರ ಇದ್ದರು. ರುಬಿನಾ ನದಾಫ್ ಪ್ರಾರ್ಥಿಸಿದರು. ದೀಪಾ ಮೇಟಿ ನಿರೂಪಿಸಿದರು. ಡಾ.ಸುಮಂಗಲಾ ವಂದಿಸಿದರು.



ಸಮಾಜಕ್ಕೆ ಮಹಿಳೆಯರ ಕೊಡುಗೆ ಅಪಾರ



ಕಲಘಟಗಿ: ಮಹಿಳೆಯರು ಸಮಾಜ ಹಾಗೂ ಕುಟುಂಬ, ಆರ್ಥಿಕತೆ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ ಎಂದು ಕಲಘಟಗಿ ಹನ್ನೆರಡು ಮಠದ ರೇವಣಸಿದ್ದೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮುಕ್ಕಣ್ಣವರ ನಿವಾಸದ ಎದುರು ನಡೆದ ಮಹಿಳಾ ಸೇವಕರ ಸನ್ಮಾನ ಕಾರ್ಯಕ್ರಮಲ್ಲಿ ಆಶೀರ್ವಚನ ನೀಡಿದ ಅವರು, ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ಸಕ್ರಿಯರಾಗಿದ್ದು, ನಾಯಕತ್ವ ವಹಿಸುತ್ತಿದ್ದಾರೆ. ಕೃಷಿ ಕಾರ್ಮಿಕರಾಗಿ, ಉದ್ಯಮಿಗಳಾಗಿ ಮತ್ತು ಆರೋಗ್ಯ ರಕ್ಷಣೆಯಲ್ಲಿ ಮಹಿಳೆಯರ ಕೊಡುಗೆ ಅಪಾರ ಎಂದರು.

ಮುಂಡಗೋಡ ರುದ್ರಮುನಿ ಸ್ವಾಮೀಜಿ ಮಾತನಾಡಿ, ಆಚರಣೆಗಳು ಆಡಂಬರಕ್ಕೆ ಸೀಮಿತವಾಗದೆ ಸಮಾಜಮುಖಿಯಾಗಬೇಕು. ಸಮಾಜದ ಸೇವೆ ಸಲ್ಲಿಸುವವರನ್ನು ಪ್ರೋತ್ಸಾಹಿಸುವ ಕಾರ್ಯಗಳು ನಿರಂತರ ನಡೆಯಬೇಕು ಎಂದರು.

ಮಂಟೂರು ಹಾಗೂ ಬಮ್ಮಿಗಟ್ಟಿ ಶ್ರೀ ಅಡವಿ ಸಿದ್ದೇಶ್ವರ ಮಠದ ಉತ್ತರಾಧಿಕಾರಿ ಇಂದುಧರ ದೇವರು ಮಾತನಾಡಿ, ಅತ್ಯಂತ ಕಡಿಮೆ ಗೌರವಧನ ಪಡೆದು ಸಮಾಜಮುಖಿ ಕಾರ್ಯ ಮಾಡುತ್ತಿರುವಅಂಗನವಾಡಿ ಕಾರ್ಯಕರ್ತೆಯರು ಹಾಗೂ ಅಡುಗೆ ಸಹಾಯಕರ ಸೇವೆ ದೊಡ್ಡದು. ಎಲೆಮರೆಯಂತಹ ಸಮಾಜ ಸೇವಕರನ್ನು ಗುರುತಿಸಿರುವುದು ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಬಿಸಿಯೂಟದ ಸಹಾಯಕರನ್ನು ಸನ್ಮಾನಿಸಲಾಯಿತು.

ರುದ್ರಯ್ಯ ಚಿಕ್ಕಮಠ, ಬಸಯ್ಯ ಹಿರೇಮಠ, ಈರಯ್ಯ ಕಲಕಟ್ಟಿ, ಬಸಯ್ಯ ಸುರಗಿಮಠ, ಅಣ್ಣಿಗೇರಿ ಇದ್ದರು. ಡಾ.ಎಸ್.ಬಿ.ಹುಲಿಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಶಿಕ್ಷಕ ಪರುಶುರಾಮ ಪಾಣಿಗಟ್ಟಿ ನಿರೂಪಿಸಿದರು. ಶಿಕ್ಷಕ ಸುರೇಶ ಯಲ್ಲಾರಿ ವಂದಿಸಿದರು.

> ಮಹಿಳೆಯರ ಸೇವೆ ಹಾಗೂ ತ್ಯಾಗ ದೊಡ್ಡದು. ಸಮಾಜ ಹಾಗೂ ಕುಟುಂಬದ ಏಳ್ಗೆಗೆ ಸದಾ ಶ್ರಮಿಸುವ ಜೀವವೇ ಹೆಣ್ಣು. ಮಹಿಳೆಯರನ್ನು ಗೌರವಿಸುವ ಕಾರ್ಯ ನಿತ್ಯ ನಿರಂತರವಾಗಿ ನಡೆಯಲಿ.
>
> ■ ಬಸವಮಹಾಂತ ಸ್ವಾಮೀಜಿ, ಶಿರಸಂಗಿ ಮಠ

ಸಸಿ ಪೋಷಿಸಿ

ಸನ್ಮಾನಿತರಿಗೆ ಸಸಿ ನೀಡುವ ಮೂಲಕ ಪರಿಸರ ರಕ್ಷಣೆಗೆ ಮುಂದಾಗಿರುವುದು ಶ್ಲಾಘನೀಯ. ಮರಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವುದರಿಂದ ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿದೆ. ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಪೋಷಿಸಿ ಎಂದು ಕುಂದಗೋಳ ಕಲ್ಯಾಣಪುರ ಮಠದ ಬಸವಣ್ಣಜ್ಜನವರು ಸಲಹೆ ನೀಡಿದರು.

ಅಮೃತ ಸಿಂಚನ, ಕಾವ್ಯ ಸಿಂಚನ ಕೃತಿ ಲೋಕಾರ್ಪಣೆ

ಹುಬ್ಬಳ್ಳಿ: ಸಾಹಿತಿ ಸವಿತಾ ಎಸ್.ಜಿ. ಮಾವಿನಮನೆ ಅವರ ಚೊಚ್ಚಲ ಕವನ ಸಂಕಲನ 'ಅಮೃತ ಸಿಂಚನ' ಹಾಗೂ ಹುಬ್ಬಳ್ಳಿಯ ಕೇಶವ ವಿದ್ಯಾ ಕೇಂದ್ರದ ಪ್ರೌಢಶಾಲೆಯಲ್ಲಿ 8ನೇ ತರಗತಿಯ ವಿದ್ಯಾರ್ಥಿನಿ ಸಿಂಚನಾ ಅಮೃತ ಹೊಸೆಟ್ಟಿ ಅವರ 'ಕಾವ್ಯ ಸಿಂಚನ' ಕೃತಿಯನ್ನು ಪರಮ ಪೂಜ್ಯರು, ಹಿರಿಯ ಸಾಹಿತಿಗಳ ಅಮೃತ ಹಸ್ತದಿಂದ ಲೋಕಾರ್ಪಣೆಗೊಳಿಸಲಾಯಿತು.

ಬೆಳಗಾವಿ ನಗರದ ಕುಮಾರ ಗಂಧರ್ವ ಸಭಾಭವನದಲ್ಲಿ ಭಾನುವಾರ ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು ಬೆಂಗಳೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ ಇವರ ವತಿಯಿಂದ ಸಂಸ್ಥಾಪಕ ರಾಜ್ಯಾಧ್ಯಕ್ಷ ಮನೋಹರ ನಾಯಕ ಅವರು ಆಯೋಜಿಸಿದ್ದ ಅಖಿಲ ಭಾರತ ದ್ವಿತೀಯ ಕವಿಪೀಠ ಮಹಾಸಮ್ಮೇಳನ, ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಗುರು ನಮನ ನುಡಿ ಕಾರ್ಯಕ್ರಮ, ಜ್ಞಾನ ದಾಸೋಹದ ಜೋಳಿಗೆ ಗ್ರಂಥ ಬಿಡುಗಡೆ, ರಾಜ್ಯ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಸರ್ವಾಧ್ಯಕ್ಷರ ಬದುಕು ಬರಹ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರದಾನ, ರಾಷ್ಟ್ರಕವಿ ಕುವೆಂಪು ಸಾಹಿತ್ಯ ರತ್ನ ಪುಸ್ತಕ ಪ್ರಶಸ್ತಿ ಪ್ರದಾನ, ವಿವಿಧ ಗೋಷ್ಠಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸಮ್ಮೇಳನದ ಸರ್ವಾಧ್ಯಕ್ಷ, ಹಿರಿಯ ಸಾಹಿತಿ ಅಪ್ಪಾಸಾಹೇಬ ಅಲಿಬಾದಿ ಹಾಗೂ ಭಾರತಿ ಅಲಿಬಾದಿ ದಂಪತಿಗಳನ್ನು ಬೆಳಗಾವಿ ರಾಣಿ ಚೆನ್ನಮ್ಮ ವೃತ್ತದಿಂದ ಕುಮಾರ ಗಂಧರ್ವ ಸಭಾ ಭವನದವರಗೆ ಕುದುರೆ ಸಾರೋಟನಲ್ಲಿ ವಿವಿಧ ವಾದ್ಯ ಸಂಗೀತ ಕಲೆಗಳ ಸಮ್ಮೀಲನದೊಂದಿಗೆ ಭವ್ಯ ಮೆರವಣಿಗೆಯಲ್ಲಿ, ಜೈಘೋಷಣೆ ಮೊಳಗಿಸುವ ಮೂಲಕ ವೇದಿಕೆಗೆ ಕರೆತರಲಾಯಿತು.ಸಾಂಸ್ಕೃತಿಕ ಪರಂಪರೆಯಂತೆ ಸಮ್ಮೇಳನವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು. ನಂತರ ಜ್ಞಾನ ದಾಸೋಹದ ಜೋಳಿಗೆ ಗ್ರಂಥ ಬಿಡುಗಡೆ ಮಾಡಲಾಯಿತು.

ಸಮ್ಮೇಳನದಲ್ಲಿ ದಿವ್ಯ ಸಾನ್ನಿಧ್ಯವನ್ನು ವಿಜಯಪುರ ಜ್ಞಾನಯೋಗಾಶ್ರಮದ ಪರಮ ಪೂಜ್ಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು, ಶ್ರೀ ಬಸವ ಗೀತಾ ತಾಯಿಯವರು, ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಉದಯಕುಮಾರ್ ಕೆ.ಟಿ. ಉಪ ಆಯುಕ್ತರು ಕಾರ್ಪೋರೇಷನ್ ಬೆಳಗಾವಿ, ಅಧ್ಯಕ್ಷರಾಗಿ ಗುರುಗೌಡ ಪಾಟೀಲ, ಅತಿಥಿಗಳಾಗಿ, ರಾಮಲಿಂಗ ಕಾಡಪ್ಪನವರ, ದೀಪಾ ಕುಡಚಿ, ಶ್ರೀರಂಗ ಜೋಶಿ, ಜಿ.ಎಸ್. ಬಿರಾದಾರ, ಶ್ರೀ ಮನೋಹರ ನಾಯಕ, ಸುನೀತಾ ಮನೋಹರ ನಾಯಕ, ಸುಮಾ ಹಡಪದ, ಶ್ರೀ ಆನಂದ ಹಕ್ಕೆನ್ನವರ, ಶ್ರೀ ಅಮೃತ ಶಿವಪ್ಪ ಹೊಸೆಟ್ಟಿ, ಸುಚಿತ ಹೊಸೆಟ್ಟಿ, ರುಕ್ಮಾ ಸಹದೇವ ಗಡಕರ, ಶೀತಲ್ ಚೌಹಾನ್, ಶ್ರೀ ಸುನೀಲ್ ಚೌಹಾನ್ ಮುಂತಾದವರು ಉಪಸ್ಥಿತರಿದ್ದರು.



ನನೆಗುದಿಗೆ ಬಿದ್ದಿರುವ ಹೊನ್ನಾಳ–ತಿನ್ನೂರ್ ಬ್ರಿಡ್ಜ್ ಕಾಮಗಾರಿ

ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣ: ಜಾರಕಿಹೊಳಿ

• **ಕಲಬುರಗಿ:** ಭೀಮಾ ನದಿ ದಡದಲ್ಲಿನ ಜಿಲ್ಲೆಯ ಜೇವರ್ಗಿ ವಿಧಾನಸಭಾ ಕ್ಷೇತ್ರದ ಹೊನ್ನಾಳ್ ಹಾಗೂ ಚಿತ್ತಾಪುರ ಕ್ಷೇತ್ರದಲ್ಲಿರುವ ತಿನ್ನೂರ್ ಗ್ರಾಮಗಳ ನಡುವೆ ಸಂಪರ್ಕ ಬೆಸೆಯುವ ಸೇತುವೆ ಕಾಮಗಾರಿ ನಾನಾ ಕಾರಣಗಳಿಂದಾಗಿ ನನೆಗುದಿಗೆ ಬಿದ್ದಿದ್ದು ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಸುತ್ತಲಿನ ಹತ್ತಾರ ಹಳ್ಳಿಗರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ ಡಾ.ಅಜಯ್ ಸಿಂಗ್ ಸೋಮವಾರ ಸದನದಲ್ಲಿ ಪ್ರಸ್ತಾಪಿಸಿದರು.

ಸದನದಲ್ಲಿ ಶಾಸಕ ಅಜಯ್ ಸಿಂಗ್ ಗಂಭೀರ ಪ್ರಸ್ತಾಪ

ಕಳೆದ ಅವಧಿಯಲ್ಲಿ ಸಂಭವಿಸಿದ ಭೀಕರ ಭೀಮಾ ಪ್ರವಾಹದ ಅಬ್ಬರಕ್ಕೆ ಸೇತುವೆ ಕಾಮಗಾರಿಯಲ್ಲಿ ಅಳವಡಿಸಲಾಗಿದ್ದ 15 ಗಡ್ಡರ್‌ಗಳು, ಬೆಲೆ ಬಾಳುವ ಸಲಕರಣೆಗಳು ಮತ್ತು ಯಂತ್ರೋಪಕರಣಗಳು ಕೊಚ್ಚಿ ಹೋಗಿದ್ದವು. ಈ ಬೆಳವಣಿಗೆಯಿಂದಾಗಿ ಹಾಗೂ ತಾಂತ್ರಿಕ ಕಾರಣಗಳಿಂದ ಕಾಮಗಾರಿ ಅರ್ಧಕ್ಕೆ ನಿಂತು ಸಾರ್ವಜನಿಕರ ಸಂಚಾರಕ್ಕೆ ಅಡೆತಡೆಯುಂಟಾಗಿದೆ.



ಅತಿವೃಷ್ಟಿ, ಪ್ರವಾಹದ ಹೊಡೆತಕ್ಕೆ ಸೇತುವೆ ಯೋಜನೆ ಏರುಪೇರಾಗಿದೆ. ಯೋಜನೆ ವೆಚ್ಚ ಮತ್ತು ಕಾಲಮಿತಿಯಲ್ಲಿ ಆಗಿರುವ ವಿಳಂಬವನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಈ ನನೆಗುದಿಗೆ ಬಿದ್ದಿರುವ ಕಾಮಗಾರಿಗೆ ಮರುಜೀವ ನೀಡಬೇಕು. ಈ ವಿಷಯವಾಗಿ ಶೀಘ್ರ ಸಭೆ ಕರೆದು ಅಧಿಕಾರಿಗಳೊಂದಿಗೆ ಚರ್ಚೆ ಏರ್ಪಾಡು ಮಾಡಿ ಪರಿಹಾರ ಹುಡುಕಬೇಕು ಎಂದು ಡಾ. ಅಜಯ್ ಸಿಂಗ್ ಸದನದ ಗಮನ ಸೆಳೆದರು.

> **ಈ ಸೇತುವೆಯ ಕಾಮಗಾರಿ ಪೂರ್ಣಗೊಳಿಸಿದರೆ ಹೋತಿನಮಡು, ರಾಂಪೂರ, ಬಿರಾಳ್, ಬಿರಾಳ ಬಿ, ಮಲ್ಲಾ ಕೆ, ಮಲ್ಲಾ ಬಿ ಸೇರಿದಂತೆ ಗಡಿ ಭಾಗದ ಹತ್ತಾರು ಹಳ್ಳಿಗಳ ಜನರಿಗೆ ಮತ್ತು ರೈತರಿಗೆ ಸುಗಮ ಸಂಪರ್ಕಕ್ಕೆ ಹೆಚ್ಚಿನ ಅನುಕೂಲ ಕಲ್ಪಿಸಿದಂತಾಗುತ್ತದೆ.**
> ■ ಡಾ.ಅಜಯ್ ಧರ್ಮಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ,ಜೇವರ್ಗಿ ಶಾಸಕ

ವರ್ಷಾಂತ್ಯದೊಳಗೆ ಕಾಮಗಾರಿ ಪೂರ್ಣ

ಸದನದಲ್ಲಿ ಹೊನ್ನಾಳ–ತಿನ್ನೂರ್ ಅರೆಬರೆ ಸೇತುವೆ ಕಾಮಗಾರಿ ಬಗ್ಗೆ ಶಾಸಕ ಡಾ.ಅಜಯ್ ಸಿಂಗ್ ಅವರು ಪ್ರಸ್ತಾಪಿಸಿದ ವಿಷಯ ಆಲಿಸಿದ ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ, ಅತಿವೃಷ್ಟಿ ಹಾಗೂ ಪ್ರವಾಹದಿಂದಾಗಿ ಸ್ಥಗಿತಗೊಂಡ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಹೊನ್ನಾಳ್ ಹಾಗೂ ಚಿತ್ತಾಪುರದಲ್ಲಿನ ತಿನ್ನೂರ್ ಗ್ರಾಮಗಳ ಬಳಿ ಭೀಮೆಗೆ ಅಡ್ಡಲಾಗಿ ನಿರ್ಮಾಣ ಹಂತದಲ್ಲಿರುವ ಸೇತುವೆ ಕಾಮಗಾರಿಯನ್ನು ಈ ವರ್ಷದ ಅಂತ್ಯದೊಳಗೆ ಅಂದರೆ, ಡಿಸೆಂಬರ್ 2026ರ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ಸದನಕ್ಕೆ ಭರವಸೆ ನೀಡಿದರು. ಕಾಮಗಾರಿ ನೆನೆಗುದಿಗೆ ಬಿದ್ದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಈಗ ಎಲ್ಲಾ ತಾಂತ್ರಿಕ ಮತ್ತು ಆರ್ಥಿಕ ಅಡೆತಡೆಗಳನ್ನು ನಿವಾರಿಸಿ ಕಾಮಗಾರಿಯನ್ನು ಪುನರಾರಂಭಿಸಲು ಮುಂದಾಗಲಿದೆ. ಪ್ರವಾಹದಂತಹ ನೈಸರ್ಗಿಕ ವಿಕೋಪದಿಂದ ಕಾಮಗಾರಿ ವಿಳಂಬವಾಗಿದ್ದು ನಿಜ, ಆದರೆ ಜನಸಾಮಾನ್ಯರ ಹಿತದೃಷ್ಟಿಯಿಂದ ಡಿಸೆಂಬರ್ 2026 ರ ಒಳಗೆ ಯಾವುದೇ ಕಾರಣದಿಂದ ಸೇತುವೆಯನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದು ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.



ಕಿರುಸುದ್ದಿ

ಬಜರಂಗದಳದಿಂದ ಮತಾಂತರ ತಡೆ: ಎಫ್‌ಐಆರ್ ದಾಖಲು

• **ಕಲಬುರಗಿ:** ಕಲಬುರಗಿ ತಾಲೂಕಿನ ಶರಣಸಿರಸಗಿ ಗ್ರಾಮದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಕ್ಕೆ ಯತ್ನಿಸುತ್ತಿದ್ದ ಎವರ್ ಲಾಸ್ಟಿಂಗ್ ಲೈಫ್ ಫಾದರ್ ಹಾಗೂ ಇತರರ ಮೇಲೆ ನಗರದ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕಳೆದ ಮಾರ್ಚ್ 8ರಂದು ಸಾಯಂಕಾಲ ಐದು ಗಂಟೆ ಸುಮಾರಿಗೆ ಕಲಬುರಗಿ ತಾಲೂಕಿನ ಶರಣ ಸಿರಸಗಿಯಲ್ಲಿ ಮತಾಂತರಕ್ಕೆ ಯತ್ನ ನಡೆಯುತ್ತಿದೆ ಎಂಬ ಮಾಹಿತಿ ದೊರೆತ ಬಳಿಕ ಸ್ಥಳಕ್ಕೆ ಧಾವಿಸಿದ ಜರಂಗದಳ ಕಾರ್ಯಕರ್ತರು ಮತಾಂತರ ತಡೆದಿದ್ದು, ಎವರ್ ಲಾಸ್ಟಿಂಗ್ ಲೈಫ್ ಎಂಬ ಕ್ರಿಶ್ಚಿಯನ್ ಧರ್ಮಕ್ಕೆ ಸಂಬಂಧಿಸಿದ ಸಂಸ್ಥೆಯ ಸುಮಾರು 10–20 ಜನ ಗ್ರಾಮದಲ್ಲಿ ಮುಗ್ಧ ಜನರ ಬಳಿ ಬಂದು ನಿಮ್ಮಲ್ಲಿ ಯಾವುದೇ ರೀತಿಯ ಸಮಸ್ಯೆಗಳಿದ್ದರೆ, ಯೇಸು ಕ್ರಿಸ್ತ ದೇವರಿದ್ದು, ಆತನು ಎಲ್ಲಾ ಸಮಸ್ಯೆ ಬಗೆಹರಿಸಲಿದ್ದಾನೆ ಎಂದು ಹೇಳುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡುತ್ತಿರುವ ಎವರ್ ಲಾಸ್ಟಿಂಗ್ ಲೈಫ್ ಫಾದರ್ ಹಾಗೂ ಇತರರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿ ಅವರನ್ನು ಬಂಧಿಸಬೇಕು ಎಂದು ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ 55/2026 ಕಲಂ 03 ಅಡಿ ದೂರು ದಾಖಲಾಗಿದೆ.

ನಿರ್ಮಾಣ ಹಂತದ ಮೆಟ್ಟಿಲು ಬಿದ್ದು ದಂಪತಿ ದುರ್ಮರಣ

• **ಹಟ್ಟಿಚಿನ್ನದಗಣಿ:** ಮನೆಯ ನಿರ್ಮಾಣ ಹಂತದಲ್ಲಿದ್ದ ಮೆಟ್ಟಿಲು ಕುಸಿದು ಬಿದ್ದ ಪರಿಣಾಮ ದಂಪತಿ ಮೃತಪಟ್ಟ ಘಟನೆ ಹಟ್ಟಿಚಿನ್ನದಗಣಿಗೆ ಸಮೀಪದ ರೋಡಲಬಂಡಾ ಗ್ರಾಪಂ ವ್ಯಾಪ್ತಿಯ ಯಲಗಟ್ಟಾ ಗ್ರಾಮದಲ್ಲಿ ಸೋಮವಾರ ನಡೆದಿದೆ. ದ್ಯಾವಪ್ಪ ಸೂಗೂರು(35) ಹಾಗೂ ಶಿವಮ್ಮ(33) ಮೃತ ದುರ್ದೈವಿಗಳು.



ಮನೆ ನಿರ್ಮಾಣ ಹಂತದಲ್ಲಿದ್ದು, ಮನೆಗೆ ಹೊಂದಿಕೊಂಡ ಮೆಟ್ಟಿಲು ಬಿದ್ದಿದ್ದರಿಂದ ದಂಪತಿ ಸಿಕ್ಕಿ ಬಿದ್ದು ಮೃತಪಟ್ಟಿದ್ದಾರೆ. ಅವೈಜ್ಞಾನಿಕವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಕುಸಿದು ಬೀಳುವುದಕ್ಕೆ ಕಾರಣವೆಂದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಹೇಳಲಾಗುತ್ತಿದೆ. ಮೃತ ದೇಹಗಳನ್ನು ಲಿಂಗಸುಗೂರು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಗಿದ್ದು, ಹಟ್ಟಿ ಪೊಲೀಸ್ ಠಾಣಯಲ್ಲಿ ಪ್ರಕರಣ ದಾಖಲಾಗಿದೆ.

ಕುಮ್ಮನಸಿರಸಗಿಯಲ್ಲಿ ಪಥಸಂಚಲನ

• **ಕಲಬುರಗಿ:** ರಾಷ್ಟ್ರೀಯತೆಮತ್ತು ಹಿಂದುತ್ವದ ಆಧಾರದ ಮೇಲೆ ಇಡೀ ಸಮಾಜವನ್ನು ಒಗ್ಗೂಡಿಸುವ ಅದ್ವಿತೀಯ ಶಕ್ತಿ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕಿದೆ ಎಂದು ಯಡ್ರಾಮಿ ರೇಣುಕಗಿರಿಯ ಕೆಂಚ ವೃಷಭೇಂದ್ರ ಶಿವಾಚಾರ್ಯರು ಅಭಿಮತ ವ್ಯಕ್ತಪಡಿಸಿದರು.

ಜಿಲ್ಲೆಯ ಯಡ್ರಾಮಿ ತಾಲೂಕಿನ ಕುಮ್ಮನಸಿರಸಗಿ ಗ್ರಾಮದಲ್ಲಿ ಆರ್‌ಎಸ್‌ಎಸ್ ಚೇತಕ್ ಶಾಖೆಯ ವಾರ್ಷಿಕೋತ್ಸವ ಹಾಗೂ ಯುಗಾದಿ ಉತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಗಣವೇಷಧಾರಿಗಳ ಆಕರ್ಷಕ ಪಥಸಂಚಲನದ ಬಳಿಕ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಆಗಮಿಸಿದ್ದ ಕಲಬುರಗಿ ವಿಭಾಗ ಸಂಪರ್ಕ ಪ್ರಮುಖ ಸಾಗರ ಸತಾಳ್ಕರ್ ಮಾತನಾಡಿ, ಸಂಘವು ನಿಸ್ವಾರ್ಥ ಸೇವೆಯ ಬುನಾದಿಯ ಮೇಲೆ ಬೆಳೆದು ಬಂದಿದೆ. ಭೌಗೋಳಿಕವಾಗಿ ನಾವೆಲ್ಲರೂ ಹಿಂದುಗಳು ಎಂಬ ಸತ್ಯವನ್ನು ಅರಿತು ಮುನ್ನಡೆಯಬೇಕಿದೆ ಎಂದರು.

ಇದೇ ವೇಳೆ ಅವರು ಸಮಾಜದ ಪ್ರಗತಿಗಾಗಿ ಐದು ಪ್ರಮುಖ ಪರಿವರ್ತನೆಗಳನ್ನು ಪ್ರತಿಪಾದಿಸಿದರು. ಜಾತಿ–ಮತಗಳ ಭೇದ ಮರೆತು ಒಂದಾಗುವುದು. ಸಂಸ್ಕಾರಯುತ ಕುಟುಂಬಗಳ ನಿರ್ಮಾಣ. ದೇಶಿ ವಸ್ತುಗಳ ಬಳಕೆಗೆ ಆದ್ಯತೆ ನೀಡುವುದು. ಪ್ರಕೃತಿಯನ್ನು ಉಳಿಸಿ, ಬೆಳೆಸುವುದು. ಸಮಾಜದಲ್ಲಿ ಶಿಸ್ತು ಮತ್ತು ಮೌಲ್ಯಗಳ ಪಾಲನೆ ಮಾಡಬೇಕು ಎಂದು ಕರೆ ನೀಡಿದರು.



ಗ್ರಾಮದ ಬೀದಿಗಳಲ್ಲಿ ಪುಷ್ಪವೃಷ್ಟಿ

ಸಂಜೆ ಗ್ರಾಮದ ಶ್ರೀಶರಣಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಪಥಸಂಚಲನದಲ್ಲಿ ನೂರಾರು ಗಣವೇಷಧಾರಿ ಸ್ವಯಂಸೇವಕರು ಘೋಷ್ ವಾದ್ಯಕ್ಕೆ ತಕ್ಕಂತೆ ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದರು. ಗ್ರಾಮಸ್ಥರು ರಂಗೋಲಿ ಹಾಕಿ ಹಾಗೂ ಪುಷ್ಪವೃಷ್ಟಿ ಮಾಡುವ ಮೂಲಕ ಮೆರವಣಿಗೆಯನ್ನು ಸಂಭ್ರಮದಿಂದ ಸ್ವಾಗತಿಸಿದರು.

ಈರಣ್ಣ ವಿಶ್ವಕರ್ಮ, ಮೌನೇಶ್ ಭಜಂತ್ರಿ, ಶಿವರಾಯ ಹೊನ್ನಳ್ಳಿ, ಶಿವಾನಂದ ಕುದುರೆಗೊಂಡ, ಶಂಕರ್ ಲಿಂಗ ಮಲ್ನಾಡ, ಮಹೇಂದ್ರ ದನ್ನೂರ್, ಆನಂದಕುಸ್ತಿ, ರುದ್ರಗೌಡ ಬಿರಾದಾರ ಸೇರಿದಂತೆ ಅನೇಕ ಹಿರಿಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಹಿಂದು ಸಮಾಜ ಒಗ್ಗಟ್ಟಾಗಲಿ: ಗೋಪಿ

• **ಗಾದಿಗನೂರು:** ಗ್ರಾಮಗಳಲ್ಲಿ ಉತ್ಸವ ಜಾತ್ರೆ ಜಯಂತಿ ಕಾರ್ಯಕ್ರಮ ಮಾತ್ರ ನಡೆಯುತ್ತಿದ್ದವು. ಆದರೆ, ಇಂದು ಭಾರತ ಮಾತೆಯ ಭಾವಚಿತ್ರವನ್ನು ಗ್ರಾಮದ ಎಲ್ಲಾ ಹಿಂದೂ ಬಾಂಧವರು ಸೇರಿ ಮೆರವಣಿಗೆ ಮಾಡಿರುವುದನ್ನು ಕಂಡು ಬಹಳ ಸಂತೋಷ ಆಯಿತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಗೋಪಿ ತಿಳಿಸಿದರು.

ಗ್ರಾಮದ ಶ್ರೀ ರೇವಣಸಿದ್ದೇಶ್ವರ ಆವರಣದಲ್ಲಿ ಹಿಂದು ಸಮ್ಮೇಳನ ಸಮಿತಿ ಏರ್ಪಡಿಸಿದ್ದ ಹಿಂದು ಸಮ್ಮೇಳನ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಿಂದೂ ಸಮಾಜ ಒಗ್ಗಟ್ಟು ಆಗಬೇಕೆಂಬುವುದು ನಮ್ಮೆಲ್ಲರ ಆಶಯವಾಗಿದೆ. ಜಾತಿ ಮತ ಪಂಥಗಳನ್ನು ಮೀರಿ ಹಿಂದೂ ಸಮಾಜ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ಥಾಪನೆಯಾಗಿ ನೂರು ವರ್ಷಗಳ ಕಾಲ ಅನೇಕ ಸಾಮಾಜಿಕ ಕಾರ್ಯ



ನಿರ್ವಹಿಸುತ್ತಾ ಬಂದಿದೆ ಶತಾಬ್ದಿ ವರ್ಷ ಆಚರಣೆ ಸಂದರ್ಭದಲ್ಲಿ ಪಂಚ ಪರಿವರ್ತನೆ ಎಂಬ ಮಾಹಿತಿಯನ್ನು ಇಟ್ಟುಕೊಂಡು ಹಿಂದು ಸಮಾಜ ಪರಿವರ್ತನೆ ಹಾಗಬೇಕು ಎಂದು ತಿಳಿಸಿದರು.

ನಮ್ಮ ಮನೆಯನ್ನು ಸ್ವಚ್ಛಗೊಳಿಸಿ ಸುಂದರವಾಗಿ ಕಾಣುವಂತೆ ಮಾಡುತ್ತೇವೆ ಹಾಗೆ ಮನೆಯ ಮುಂದೆ ಇರುವ ರಸ್ತೆ ಚರಂಡಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಪ್ಲಾಸ್ಟಿಕ್ ಮುಕ್ತ ಭಾರತವನ್ನು ಕಟ್ಟಲು ನಾವೆಲ್ಲರೂ ಕೈ ಜೋಡಿಸುವ ಕಾರ್ಯ ಮಾಡಬೇಕು. ನಾಗರಿಕ ಶಿಷ್ಟಾಚಾರ ಪಾಲನೆ ಆಗಬೇಕು ಎಂದು ತಿಳಿಸಿದರು. ಹಿಂದು ಸಮ್ಮೇಳನ ಕಾರ್ಯಕ್ರಮ ಮುಂಚಿತವಾಗಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ಆವರಣದಲ್ಲಿ ಭಾರತ ಮಾತೆಯ ಭಾವಚಿತ್ರವನ್ನು ಎತ್ತಿನ ಬಂಡಿಯಲ್ಲಿ ಕಟ್ಟಿ ಹೂವುಗಳಿಂದ ಅಲಂಕಾರ ಮಾಡಿದರು. ಗಾದಿಲಿಂಗಪ್ಪ ಪೂಜಾರಿ ನೇತೃತ್ವದಲ್ಲಿ ಭಾರತ ಮಾತಾ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಯಲ್ಲಿ ಕಳಶ, ಕುಂಭ, ಭಜಂತ್ರಿ ತಂಡದಿಂದ ತಾಸೆ ಬಾರಿಸಿದರು. ಮಕ್ಕಳ ಮಾಹಾನ್ ಪುರುಷರ ವೇಷಗಳನ್ನು ಧರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗ್ರಾಮದ ಹಿಂದೂ ಬಾಂಧವರು ಎಲ್ಲರೂ ಸೇರಿಕೊಂಡು ಮೆರವಣಿಗೆ ನಡೆಸಿದರು.

ಕಾರ್ಯಕ್ರಮದಲ್ಲಿ ಹಿಂದೂ ಸಮ್ಮೇಳನ ಸಮಿತಿ ಗೌರವಾಧ್ಯಕ್ಷ ಎಂ. ಗಾಳೆಪ್ಪ ಹಾಗೂ ಮುಖ್ಯ ಅತಿಥಿಗಳಾಗಿ ಹುಲಿಗೆಮ್ಮದೇವಿ ದೇವಸ್ಥಾನ ಸಂಸ್ಥಾಪಕರಾದ ಹನುಮಂತಮ್ಮ ಹಾಗೂ ಊರಿನ ಮುಖಂಡರು ಹಿಂದು ಸಮ್ಮೇಳನ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮಿಶ್ರಿಕೋಟಿ ಗ್ರಾಮದೇವಿಯರ ಜಾತ್ರೆ ಸಂಪನ್ನ

• **ಕಲಘಟಗಿ:** ತಾಲೂಕಿನ ಮಿಶ್ರಿಕೋಟಿ ಹಾಗೂ ಹುಬ್ಬಳ್ಳಿ ತಾಲೂಕಿನ ಚವರಗುಡ್ಡ ಗ್ರಾಮದೇವಿಯರ ಸುಪ್ರಸಿದ್ಧ ಜಾತ್ರೆಯು, ವಿವಿಧ ಧಾರ್ಮಿಕವಿಧಿವಿಧಾನಗಳೊಂದಿಗೆ ಯಶಸ್ವಿಯಾಗಿ ಸೋಮವಾರ ಸಂಪನ್ನಗೊಂಡಿತು.

ಐತಿಹಾಸಿಕ ಜಾತ್ರೆಯಲ್ಲಿ ಭಕ್ತರು ಭಕ್ತಿಪೂರ್ವಕವಾಗಿ ಭಾಗವಹಿಸಿದ್ದರು. ವಿಶೇಷವಾಗಿ ಮುಸ್ಲಿಂ ಧರ್ಮದ ಮುಖಂಡರಿಂದ ಭಾನುವಾರ ಬಿಸಿಲಿನಲ್ಲಿ ಶರಬತ್ ಸೇವೆ ಏರ್ಪಡಿಸುವ ಮೂಲಕ ಭಾವೈಕ್ಯತೆಗೆ ಸಾಕ್ಷಿಯಾದರು. ಈ ಪ್ರಸಿದ್ಧ ಜಾತ್ರೆಯು ಉತ್ತರ ಕರ್ನಾಟಕ ಸಂಸ್ಕೃತಿ ಮತ್ತು ಭಕ್ತಿ ಸಂಕೇತವಾಗಿ ಅದ್ದೂರಿಯಾಗಿ ಮುಕ್ತಾಯಗೊಂಡಿದೆ.

ಕಳೆದ 9 ದಿನಗಳಿಂದ ನಡೆಯುತ್ತಿದ್ದ ಗ್ರಾಮದೇವಿ ಜಾತ್ರಾ ಮಹೋತ್ಸವ ಸೋಮವಾರ ರಾತ್ರಿ ಸಂಪನ್ನಗೊಂಡಿತು. ಸಹಸ್ರಾರು ಭಕ್ತರ ಸಮ್ಮುಖದಲ್ಲಿ ದೇವಿಯರ ಮೂರ್ತಿಯ ಮೆರವಣಿಗೆಯೊಂದಿಗೆ ಮಹೋತ್ಸವ ತೆರೆ ಕಂಡಿತು. ಸೋಮವಾರ ಬೆಳಗಿನಿಂದ ಮಧ್ಯಾಹ್ನವರೆಗೆ ವಿಶೇಷ ಧಾರ್ಮಿಕ ವಿಧಿವಿಧಾನಗಳು ನಡೆದ ಬಳಿಕ, ರಾತ್ರಿಯ ವೇಳೆ 300ಕ್ಕೂ ಹೆಚ್ಚು ಸೇವಕರು ಮಡಿ–ಹುಡಿಯಿಂದ ದೇವಿಯರ ಮೂರ್ತಿಗಳನ್ನು ಹೊತ್ತು ಮೆರವಣಿಗೆ ಮೂಲಕ ಹೊಸ ಬಸ್ ನಿಲ್ದಾಣ ಸಮೀಪದ ಚೌತಮನೆಯಿಂದ ಜಾಡಗೇರಿ ಓಣಿ, ಮಧ್ಯಾಹ್ನ ಓಣಿ, ಪ್ಯಾಟಿ ಬಸವೇಶ್ವರ ದೇವಾಲಯದಿಂದ ಬಳಿಕ ದ್ಯಾಮವ್ವ ದುರ್ಗವ್ವ ದೇವಿಯರ ಪಾದ ಕಟ್ಟೆ ತಲುಪಿ ದೇವಿ ಮೂರ್ತಿಗಳನ್ನು ವಿಸರ್ಜಿಸಲಾಯಿತು.

ಈ ಸಮಯದಲ್ಲಿ ಊರಿನಲ್ಲಿ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲಾಯಿತು. ಗ್ರಾಮದಲ್ಲಿ ಯಾರು ಕೂಡಾ ಹೊರಗೆ ಬರದಂತೆ ಸೂಚಿಸಲಾಗಿತ್ತು. ದೇವಸ್ಥಾನಕ್ಕೆ ಅಮ್ಮನವರನ್ನು ತೆಗೆದುಕೊಂಡು ಹೋಗಿ ಕಿಲೆ ಓಣಿ ದೇವಸ್ಥಾನದಲ್ಲಿ ಇರಿಸಿದ ತರುವಾಯ ಮತ್ತೆ ಗ್ರಾಮದಲ್ಲಿ ವಿದ್ಯುತ್ ಪೂರೈಕೆ ಮಾಡಲಾಯಿತು. ಗ್ರಾಮದಲ್ಲಿ ಯುಗಾದಿ ಸಮಯಕ್ಕೆ ಚಂಡಿಕಾ ಹೋಮ ನೆರವೇರಿಸಿ, ಪುನರ್ ಪ್ರತಿಷ್ಠಾ ಮಾಡಿ ಉಡಿ ತುಂಬಲಾಗುವುದು ಎಂದು ಉತ್ಸವ ಸಮಿತಿ ತಿಳಿಸಿದೆ.



ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಬೆಂಕಿಗಾಹುತಿ

• **ಬೆಳಗಾವಿ:** ನಗರದ ಮಜಗಾಂವ್ ಕೈಗಾರಿಕಾ ಪ್ರದೇಶದಲ್ಲಿ ಮರದ ಕಾರ್ಖಾನೆಯೊಂದರಲ್ಲಿ ಕಾಣಿಸಿಕೊಂಡ ಬೆಂಕಿ ಕ್ಷಣಾರ್ಧದಲ್ಲಿ ಆವರಿಸಿದ ಪರಿಣಾಮ ಲಕ್ಷಾಂತರ ರೂ. ಮೌಲ್ಯದ ಮರಮುಟ್ಟು ಹಾಗೂ ಯಂತ್ರೋಪಕರಣಗಳು ಸುಟ್ಟು ಕರಕಲಾದ ಘಟನೆ ನಡೆದಿದೆ. ಮಜಗಾಂವನಲ್ಲಿರುವ ಆಶ್ಪಾಕ್ ಹವಾಲದಾರ್ ಎಂಬುವರ ವುಡ್ ಫ್ಯಾಕ್ಟರಿಯೊಂದರಲ್ಲಿ ಬೆಳಗ್ಗೆ 3 ಗಂಟೆ ಸುಮಾರಿಗೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಸ್ಥಳೀಯರು ಮಾಹಿತಿ ನೀಡುತ್ತಿದ್ದಂತೆಯೇ ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿ, ಸುಮಾರು 4 ಗಂಟೆ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ಈ ಅವಘಡದಲ್ಲಿ ಸುಮಾರು 15 ಲಕ್ಷ ರೂ. ಮೌಲ್ಯದ ಪ್ಲೈವುಡ್, ಟಿಂಬರ್ ಸೇರಿದಂತೆ ವಿವಿಧ ಬಗೆಯ ಮರಗಳು ಮತ್ತು 10ಕ್ಕೂ ಹೆಚ್ಚು ಯಂತ್ರೋಪಕರಣಗಳು ಬೆಂಕಿಗಾಹುತಿಯಾಗಿವೆ. ಘಟನಾ ಸ್ಥಳಕ್ಕೆ ಉದ್ಯಮ್‌ಬಾಗ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ.

ವುಡ್ ಫ್ಯಾಕ್ಟರಿಯಲ್ಲಿ ಅಗ್ನಿ ಅವಘಡ

ಬೈಲಹೊಂಗಲ ಬಂದ್ ಯಶಸ್ವಿ

• **ಬೈಲಹೊಂಗಲ:** ಪಟ್ಟಣದಲ್ಲಿರುವ ವೀರರಾಣಿ ಕಿತ್ತೂರು ರಾಣಿ ಚನ್ನಮ್ಮಾಜಿಗೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಆರೋಪಿಸಿ ವಿವಿಧ ಕನ್ನಡಪರ, ರೈತಪರ ಸಂಘಟನೆಗಳು ಹಾಗೂ ಹಲವಾರು ಸಂಘ ಸಂಸ್ಥೆಗಳು ಸೋಮವಾರ ಕರೆ ನೀಡಿದ್ದ ಬೈಲಹೊಂಗಲ ಬಂದ್ ಬಹುತೇಕ ಯಶಸ್ವಿಯಾಯಿತು.

ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ ಅವರ ನೇತೃತ್ವದಲ್ಲಿ ನಡೆದ ಬಂದ್‌ಗೆ ಹಲವು ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಬೆಂಬಲ ಸೂಚಿಸಿದರು. ಬೆಳಗ್ಗೆ ಪಟ್ಟಣದ ಕೇಂದ್ರ ಬಸ್ ನಿಲ್ದಾಣದ ಸಮೀಪದ ಕರೆಮ್ಮದೇವಿ ದೇವಸ್ಥಾನದ ಬಳಿ ಸೇರಿದ್ದ ಪ್ರತಿಭಟನಾಕಾರರು ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಬೈಕ್‌ಗ್ಗಳ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸುವ ಪ್ರಯತ್ನ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಮಾತನಾಡಿ, ಚನ್ನಮ್ಮಾಜಿಯ ಐಕ್ಯ ಸ್ಥಳಕ್ಕೆ ಸಮರ್ಪಕ ಅಭಿವೃದ್ಧಿ ಮಾಡಬೇಕು ಹಾಗೂ ರಾಕ್ ಗಾರ್ಡನ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ಉದ್ಘಾಟನೆ ಮಾಡಬೇಕು ಎಂದು ಅವರು ಒತ್ತಾಯಿಸಿದರು. ಈ ವೇಳೆ ಮಾಜಿ ಜಿಪಂ ಸದಸ್ಯ ಬಿ.ಎಂ.ಚಿಕ್ಕನಗೌಡ್ರ, ಸಮಾಜ ಸೇವಕ ರಫೀಕ ಬಡೇಘರ, ಕಿತ್ತೂರು ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ ಸೇರಿದಂತೆ ಅನೇಕರು ಇದ್ದರು.

ಇಂದಿನ ಉತ್ಪನ್ನವಾರು ದರ (ಹುಬ್ಬಳ್ಳಿ)

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಕಡಲೆಬೇಳೆ	10400	14600
ಕಡಲೆಕಾಳು	1010	5251
ಉದ್ದಿನಕಾಳು	5859	6511
ತೆಂಗಿನಕಾಯಿ	24000	39000
ಒಣ ಮೆಣಸಿನಕಾಯಿ	5619	52209
ಹೆಸರುಬೇಳೆ	8624	8624
ಬಟಾಣಿ	5323	5323
ಹೆಸರುಕಾಳು	1419	6111
ಕಡಲೆಕಾಯಿ ಬೀಜ	15000	15000
ಹುರುಳಿ ಕಾಳು	3500	3621
ಬೆಲ್ಲ	4250	4250
ಜೋಳ	1710	3675
ಮೆಕ್ಕೆಜೋಳ	1550	1925
ಮಡಿಕೆ (ಮಟಕಿ)	12630	13235
ಸಾಸುವೆ	4500	5616
ಈರುಳ್ಳಿ	600	2200
ಆಲೂಗಡ್ಡೆ	1400	1800
ರಾಗಿ	2129	2129
ಅಕ್ಕಿ	2100	2100
ಕುಸುಬೆ	4609	5220
ಸಾವೆ/ಸಾವಿ	4130	4130
ಸೋಯಾಬಿನ್	3670	5669
ತೊಗರಿ	3100	5316
ತೊಗರಿ ಬೇಳೆ	12100	12100
ಗೋಧಿ	1529	5025

ಸಾರ್ವಜನಿಕ ತಿಳುವಳಿಕೆ ನೋಟಿಸು

ನಮ್ಮ ಪಕ್ಷಗಾರರಾದ ಶ್ರೀಯುತ ಶೇಖರಗೌಡ ತಂದೆ ಲಿಂಗನಗೌಡ ಪಾಟೀಲ ಸಾ॥ ಕೊಟೂರ ತಾ/ಜಿ॥ ಧಾರವಾಡ ಇವರು ನೀಡಿದ ಮಾಹಿತಿ ಪತ್ರ ಅಧಿಕಾರದ ಮೆರೆಗೆ ನೀಡುವ ಸಾರ್ವಜನಿಕ ನೋಟಿಸು ಏನೆಂದರೆ,

ನಮ್ಮ ಪಕ್ಷಗಾರರು ಗದಗ ಜಿಲ್ಲಾ ನರಗುಂದ ತಾಲೂಕ ಹದಲಿ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಜಮೀನಿನ ರಿ.ಸ.ನಂ 87/5 ಕ್ಷೇತ್ರ 7 ಎಕರೆ 00 ಗುಂಟೆ ನೇಷ್ಟರ ಪೂರಾ ಜಮೀನನ್ನು ಶ್ರೀಯುತ ಸೋಮಶೇಖರಗೌಡ ತಂದೆ ಕಲ್ಲಪ್ಪಗೌಡ ಮುಲ್ಕಿಪಾಟೀಲ ಸಾ॥ ಯಾವಗಲ್ಲ ತಾ॥ ರೋಣ ಜಿ॥ ಗದಗ ಇವರಿಂದ ಉಪನೋಂದಣಿ ಅಧಿಕಾರಿಗಳ ನರಗುಂದ ಕಛೇರಿಯಲ್ಲಿ ಖರೀದಿ ಪತ್ರ ದಸ್ತನೊಂದ ಮಾಡಿಕೊಳ್ಳುವವರಿದ್ದಾರೆ. ಮೇಲ್ಕಂಡ ಖರೀದಿ ಜಮೀನಿನ ಬಗ್ಗೆ ಯಾವುದೇ ವ್ಯಕ್ತಿಗಳ ಹಕ್ಕು ಹಿತ ಸಂಬಂಧ ಯಾರಾದರೂ ತಂಟೆ ತಕರಾರು, ಹಕ್ಕು ಹಿತಾಸಕ್ತಿ, ವ್ಯಾಜ್ಯ ಹಾಗೂ ಪಾಲ್ಗಿ, ಬ್ಯಾಂಕ ಬೋಜಾ, ಒಪ್ಪು ಮೋಕ್ತಿಯಾರ ಪತ್ರಗಳ, ವಗ್ಯೆರೆಗಳಿನಾದರೂ ಇದ್ದಲ್ಲಿ ಈ ನೋಟಿಸು ಪ್ರಕಟವಾದ 7 ದಿನಗಳೊಳಗಾಗಿ ಈ ಕೆಳಕಾಣಿಸಿದ ವಿಳಾಸಕ್ಕೆ ದಾಖಲೆ ಸಮೇತ ಲೇಖಿ ಮುಖಾಂತರ ತಿಳಿಸತಕ್ಕದ್ದು, ನಂತರ ಅವಧಿಯೊಳಗೆ ಯಾವುದೇ ರೀತಿಯ ತಕರಾರುಗಳು ಇಲ್ಲಾ ಅಂತಾ ಪರಿಗಣಿಸಿ ಖರೀದಿ ಮಾಡಿಕೊಳ್ಳುವವರು ಇರುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ದಿನಾಂಕ: 09–03–2026
ಸ್ಥಳ: ನರಗುಂದ

ಸಹಿ ಆಗಿದೆ
ಎಸ್ ಬಿ ಮುದೇನಗುಡಿ
(ವಕೀಲರು ನರಗುಂದ)
ಸಾ:ಹದಲಿ, ಗಣೇಶ ಗುಡಿ ಹತ್ತಿರ, ತಾ: ನರಗುಂದ, ಜಿ: ಗದಗ ದೂ: 9482076861

ಸಾರ್ವಜನಿಕ ಪ್ರಕಟಣೆ

ಇದರಲ್ಲಿ ನಮ್ಮ ಪಕ್ಷಗಾರರಾದ ಶ್ರೀ ರಾಮನಗೌಡ ತಂದೆ ಲಿಂಗನಗೌಡ ಪಾಟೀಲ, ಸಾ: ಮುಕ್ಕಲ ತಾ: ಕಲಘಟಗಿ ಜಿ: ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ನಮ್ಮ ಪಕ್ಷಗಾರರು ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಸಂಶಿ ಹೋಬಳಿ ಸಂಶಿ ಗ್ರಾಮದ ಹದ್ದಿನಲ್ಲಿ ಬರುವ ರಿ.ಸ.ನಂ: 108/1 ಕ್ಷೇತ್ರ 12 ಎಕರೆ 16 ಗುಂಟೆ ಆಕಾರ 30 ರೂ 56 ಪೈ ನೇ ಜಮೀನನ್ನು ಸದರ ಜಮೀನಿನ ಮಾಲಿಕರಾದ ಶ್ರೀಮತಿ ಗಂಗಾ ಈಶ್ವರಗೌಡ ಪಾಟೀಲ @ ಸಿಲ್ವಿಯಾ ಲೂಯಿಸ ಡಿಸೋಜಾ ಸಾ: ವಸೈ, ಮುಂಬಯಿ (ಮಹಾರಾಷ್ಟ್ರ) 401201 ಇವರಿಂದ ಖರೀದಿಸಲು ಇಚ್ಛಿಸಿದ್ದು. ಸದರಿ ಮೇಲ್ಕಂಡ ಜಮೀನಿನಲ್ಲಿ ಯಾರಿಗಾದರೂ ವ ಸಾರ್ವಜನಿಕರಿಗಾಗಲಿ ಯಾವುದೇ ಸ್ವರೂಪದ ಹಕ್ಕು ವ ಹಿತಸಂಬಂಧ ಹಾಗೂ ಹಿತಾಸಕ್ತಿಗಳು ಇದ್ದ ಪಕ್ಷದಲ್ಲಿ ಅಂತಹ ಹಕ್ಕು ವ ಹಿತಸಂಬಂಧ ಹಾಗೂ ಹಿತಾಸಕ್ತಿಗಳಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಹಾಗೂ ತಕರಾರುಗಳೊಂದಿಗೆ ಈ ನೋಟಿಸು ಪ್ರಕಟವಾದ ಹತ್ತು ದಿನಗಳ ಒಳಗಾಗಿ ಮೇಲ್ಕಂಡ ವಿಳಾಸಕ್ಕೆ ತಿಳಿಸಬೇಕು. ತದನಂತರ ಬಂದ ಯಾವುದೇ ತಕರಾರುಗಳನ್ನು ವ ದಾಖಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಸದರಿ ಜಮೀನಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು ನೋಂದು ಮಾಡಿಕೊಳ್ಳುತ್ತಾರೆ ಅಂತಾ ನೀಡಲಾದ ಸಾರ್ವಜನಿಕ ನೋಟಿಸು.

ಕುಂದಗೋಳ
ದಿ : 09–03–2026

ಶ್ರೀ ಎಮ್. ಆಯ್. ನಲವಡಿ,
ವಕೀಲರು ಹಾಗೂ ಕಾನೂನು ಸಲಹೆಗಾರರು ಸಾ॥ ಶಿವಾಜಿನಗರ ಕಿಲ್ಲಾ, ತಾ॥ ಕುಂದಗೋಳ, ಜಿ॥ ಧಾರವಾಡ
ಮೊ ಸಂಖ್ಯೆ: 9448874503

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com

ಸಂಖ್ಯೆ:ಗ್ರಾಕುನೀ&ನೈವಿ/ಜಿದು/ಆಶಾ/ಹೊ.ಗು/ಟೆಂಡರ್/2025–26/1770
ದಿನಾಂಕ:06.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(E-Procurement Portal Only)

ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಕಛೇರಿ ಹಾಗೂ ಉಪ ವಿಭಾಗ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ 07 ಜನ ಡಾಟಾ ಎಂಟ್ರಿ ಆಪರೇಟರ್‌ಗಳು, 11 ಜನ ಗ್ರೂಪ್–ಡಿ ನೌಕರರು, 05 ಜನ ವಾಹನ ಚಾಲಕರು ಹಾಗೂ 03 ಪ್ರಯೋಗಾಲಯಗಳಲ್ಲಿ Senior Chimest for District Lab-01, Chimest for Taluk Labs-02, Sample Cell Incharge-01, Junior Analysist-01, Sample Collector-06, House Keeping for Labs-04, Senior Micro Biologist-01 and Junior Micro Biologist-01 ರವರುಗಳ ಸೇವೆಯನ್ನು ಒದಗಿಸಲು ಮಾನವ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ರೂ. 129.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. (1) ಟೆಂಡರ್ ಪ್ರಕಟಣೆ ದಿನಾಂಕ 05.03.2026 (2) ಇ–ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 23.03.2026 ಅಪರಾಹ್ನ : 4.00 ಗಂಟೆ (3) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಿತ್ರದುರ್ಗ. ದಿನಾಂಕ: 24.03.2026. (4) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ಮತ್ತು ದಿನಾಂಕ : 25.03.2026 (5) ಇ–ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ ರೂ. 75000–00 (6) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂಖ್ಯೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಿತ್ರದುರ್ಗ ಫೋನ್ : 08194–234488 ಹೆಚ್ಚಿನ ವಿವರಗಳನ್ನು www.kppp.karnataka.gov.in ರಲ್ಲಿ ನೋಡಬಹುದು.

DIPR/CTA/KSMCA/749/2025-26

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕ್ರಿಮಿನಲ್ ಮಿಸ್ಲೇನಿಯಸ್ . ನಂ:241 /2025
ಮಾನ್ಯ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಮುಂಡರಗಿ ಇವರಲ್ಲಿ

ಅರ್ಜಿದಾರರು: 1) ಶ್ರೀ ರುದ್ರೇಶ ತಂದೆ ಟಾಕನಗೌಡ ಹಿರೇಗೌಡ್ರ ವಯಾ 28 ವರ್ಷ, ಉದ್ಯೋಗ : ಶೇತ್ಕಿ ಸಾ॥ ಶಿಂಗಟಾಲೂರ ತಾ॥ ಮುಂಡರಗಿ ಜಿ॥ ಗದಗ
2) ಶ್ರೀಮತಿ ಈರಮ್ಮ ಕೋಂ ಗವಿಸಿದ್ದಪ್ಪ ಕನ್ನಾರಿ ವಯಾ :37 ವರ್ಷ, ಉದ್ಯೋಗ : ಶೇತ್ಕಿ ಸಾ॥ ಹಳ್ಳಿಕೇರಿ ತಾ॥ ಮುಂಡರಗಿ ಜಿ॥ ಗದಗ,
3) ಶ್ರೀಮತಿ ರೇಖಾ ಕೋಂ ಬಸವರಾಜ ಪಡೇಸೂರು ವಯಾ :33 ವರ್ಷ, ಉದ್ಯೋಗ : ಶೇತ್ಕಿ ಸಾ॥ ಶಿಂಗಟಾಲೂರ ತಾ॥ ಮುಂಡರಗಿ ಜಿ॥ ಗದಗ,
4) ಶ್ರೀಮತಿ ಶಿಪ್ಪವ್ವ ಕೋಂ ಟಾಕನಗೌಡ ಮಗಳ @ ಹಿರೇಗೌಡ್ರ ವಯಾ :55 ವರ್ಷ, ಉದ್ಯೋಗ : ಶೇತ್ಕಿ ಸಾ॥ ಶಿಂಗಟಾಲೂರ ತಾ॥ಮುಂಡರಗಿ ಜಿ॥ ಗದಗ,

ವಿರುದ್ಧ
ಮೆ॥ ತಹಶೀಲ್ದಾರ ಕಾರ್ಯಾಲಯ ಮುಂಡರಗಿ (ಜನನ–ಮರಣ ವಿಭಾಗ)
ಸಾ॥ ಮುಂಡರಗಿ ತಾ॥ ಮುಂಡರಗಿ ಜಿ॥ ಗದಗ,

ಸಾರ್ವಜನಿಕ ಪತ್ರಿಕಾ ಪ್ರಕಟಣೆಗಾಗಿ

ಇದರಲ್ಲಿ ಮೇಲ್ಕಂಡ ಸದರ ಅರ್ಜಿದಾರ ನಂ–1ನೇಯವರ ತಂದೆಯಾದ ದಿ॥ ಟಾಕನಗೌಡ ತಂದೆ ಶೇಕರಗೌಡ ಹಿರೇಗೌಡರ್ ಇವರು ದಿನಾಂಕ: 16–05–2007 ರಂದು ಅರ್ಜಿದಾರರ ಮನೆಯಾದ ಗದಗ ಜಿಲ್ಲಾ ಮುಂಡರಗಿ ತಾಲೂಕ ಶಿಂಗಟಾಲೂರ ಗ್ರಾಮದಲ್ಲಿ ಮೋತಿಯಾಗಿದ್ದು ಮೆ॥ ತಹಶೀಲ್ದಾರ ಕಾರ್ಯಾಲಯ ಜನನ–ಮರಣ ವಿಭಾಗ ಮುಂಡರಗಿ ತಾ॥ ಮುಂಡರಗಿ ಜಿ ॥ಗದಗ, ಇವರ ವಿರುದ್ಧ ಜನನ–ಮರಣ ದಾಖಲೆಯನ್ನು ದಾಖಲು ಮಾಡಲು ಮಾನ್ಯ ಜೆ.ಎಮ್.ಎಫ್.ಸಿ. ನ್ಯಾಯಾಲಯ ಮುಂಡರಗಿ ಇವರಲ್ಲಿ ಪ್ರಕರಣ ದಾಖಲಿಸಿದ್ದು ಅಂದು ದಿನಾಂಕ 11–03–2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರು ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾವುದೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವದು ತಿಳಿಯಿರಿ.

ಮುಂಡರಗಿ
1/2/2026

ಶಿರಸ್ತೇದಾರರು
ಜೆ.ಎಮ್.ಎಫ್.ಸಿ.ನ್ಯಾಯಾಲಯ ಮುಂಡರಗಿ
ಅರ್ಜಿದಾರನ ಪರ ವಕೀಲರು
ಶ್ರೀ. ಎಸ್.ಆಯ್ ಉಳ್ಳಾಗಡ್ಡಿ ವಕೀಲರು, ಮುಂಡರಗಿ,

ಅಸಲ ದಾವಾ ನಂ.523/2025
ಮಾನ್ಯ 1ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಗೋಕಾಕ ಇವರ ನ್ಯಾಯಾಲಯದಲ್ಲಿ

1) ಗುಂಡುರಾವ ತಂದೆ ಕಲ್ಯಾಣರಾವ ದೇಶಪಾಂಡೆ
2) ವಿನಾಯಕ ತಂದೆ ಕಲ್ಯಾಣರಾವ ದೇಶಪಾಂಡೆ
ಇಬ್ಬರು ಸಾ॥ ಶ್ರೀನಗರ ಗೋಕಾಕ, ತಾ॥ ಗೋಕಾಕ
ವಾದಿಯರು

ವಿರುದ್ಧ
1) ಕರ್ನಾಟಕ ಸರಕಾರ, ಪ್ರತಿನಿಧಿಸುವರು, ಜಿಲ್ಲಾಧಿಕಾರಿಗಳು ಬೆಳಗಾವಿ
2) ತಹಶೀಲ್ದಾರ, ಗೋಕಾಕ ಪ್ರತಿವಾದಿಯರು

ಸಾರ್ವಜನಿಕ ನೋಟಿಸು

ವಾದಿಯರ, ಸಹೋದರನಾದ ರಮೇಶ ತಂದೆ ಕಲ್ಯಾಣರಾವ ದೇಶಪಾಂಡೆ ಇವರು ದಿನಾಂಕ: 24/12/2009 ರಂದು ಮದುವೆ ಆಗದೆ ತೀರಿಕೊಂಡಿದ್ದು ಇರುತ್ತದೆ. ಕಾರಣ ವಾದಿಯರು, ಹಿಂದು ವಾರಸಾ ಕಾಯ್ದೆಯ ಪ್ರಕಾರ ಅನುಸೂಚಿಯ ವರ್ಗ II ರ ಪ್ರಕಾರ ತಮ್ಮನ್ನು ಮೃತ ರಮೇಶ ತಂದೆ ಕಲ್ಯಾಣರಾವ ದೇಶಪಾಂಡೆ ಇವರ ವಾರಸುದಾರರು ಅಂತಾ ಘೋಷಿಸಬೇಕೆಂದು ಈ ದಾವೆಯನ್ನು ಮಾಡಿದ್ದು ಇರುತ್ತದೆ. ಈ ಮೇಲೆ ನಮೂದಿಸಿದ ವಾದಿಯರನ್ನು ಅನುಸೂಚಿಯ ವರ್ಗ II ರ ಪ್ರಕಾರ ಮೃತ ರಮೇಶ ತಂದೆ ಕಲ್ಯಾಣರಾವ ದೇಶಪಾಂಡೆ ಇವರ ವಾರಸುದಾರರು ಅಂತಾ ಘೋಷಿಸಲು ಯಾರದ್ದಾದರು ತಕರಾರು ವಗೈರೆ ಇದ್ದಲ್ಲಿ ಅಂತವರು ದಿನಾಂಕ: 15/04/2026 ರಂದು ಮುಂಜಾನೆ 11–00 ಘಂಟೆಗೆ ಸುಮಾರಿಗೆ ಅಥವಾ ಅದರ ಒಳಗಾಗಿ, ಸ್ವತ: ಆಗಲಿ ವ ನಿಮ್ಮ ಪರ ನ್ಯಾಯವಾದಿಗಳ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು. ಒಂದು ವೇಳೆ ಯಾರು ಹಾಜರಾಗದೆ ಇದ್ದಲ್ಲಿ ವಾದಿಯರನ್ನು ಅನುಸೂಚಿಯ ವರ್ಗ IIರ ಪ್ರಕಾರ ಮೃತ ರಮೇಶ ತಂದೆ ಕಲ್ಯಾಣರಾವ ದೇಶಪಾಂಡೆ ಇವರ ವಾರಸುದಾರರು ಅಂತಾ ಘೋಷಿಸಲು ಯಾರದ್ದು ಯಾವುದೇ ತಕರಾರು ಇಲ್ಲಾ ಅಂತಾ ಪರಿಗಣಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ ಹೊತ್ತು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರದೊಂದಿಗೆ ದಿನಾಂಕ. 09/03/2026 ರಂದುಕೊಡಲಾಗಿದೆ.

ಗೋಕಾಕ
ದಿನಾಂಕ:09/03/2026

ಮೆ॥ ನ್ಯಾಯಾಲಯದ ಆದೇಶದ ಮೇರೆಗೆ
(ಎಮ್.ಪಿ.ನಾಯ್ಕ)
ಶಿರಸ್ತೇದಾರರು
ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಗೋಕಾಕ

(ಎ.ಡಿ.ಶಿವರಾದಿ)
ಬೆಂಚ ಕ್ಲರ್ಕ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಗೋಕಾಕ
(ಕೆ.ಎಸ್.ಬೆಂಬಳಗಿ)
ವಾದಿಯರ ಪರ ವಕೀಲರು

ಕೇಜ್ರಿವಾಲ್, ಸಿಸೋಡಿಯಾಗೆ ಹೈ ನೋಟಿಸ್

ಪುಟ ೧➡ ನೈಜ ಅಪರಾಧ ಪ್ರಕರಣದ ಆರೋಪಿಗಳ ಖುಲಾಸೆಯಿಂದ ಅನುಷ್ಠಾನ ನಿರ್ದೇಶನಾಲಯದ ತನಿಖಾ ಪ್ರಕ್ರಿಯೆಗಳಿಗೆ ತೊಡಕಾಗಕೂಡದು ಎಂದು ಸಿಬಿಐ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದ ಹಿನ್ನೆಲೆ ಯಲ್ಲಿ, ನ್ಯಾಯಮೂರ್ತಿ ಶರ್ಮಾ ನೋಟಿಸ್ ಜಾರಿಗೊಳಿಸಿದ್ದಾರೆ. ಅಧೀನ ನ್ಯಾಯಾಲಯದಲ್ಲಿ ಇಡಿ ಆರೋಪಪಟ್ಟಿಯನ್ನು ವಸ್ತುಶಃ ವಾಪಸ್ ಕಳುಹಿಸಲಾಗಿದೆ ಎಂದು ತುಷಾರ್ ಮೆಹ್ತಾ ಆರೋಪಿಸಿದ್ದರು.

ಇಡಿ ಪ್ರಕರಣ ವಿಚಾರಣೆ ಮುಂದೂಡಲು ಸೂಚನೆ: ಹೈಕೋರ್ಟ್ ನಿಗದಿತ ದಿನಾಂಕ ನೀಡಿದ ನಂತರವೇ ಇಡಿ ಪ್ರಕರಣದ ತನಿಖೆ ನಡೆಸುವಂತೆ, ಅದುವರೆಗೆ ವಿಚಾರಣೆ ಮುಂದೂಡಿ ಈ ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆಗಳನ್ನು ಗಮನಿಸುವಂತೆ ಅಧೀನ ನ್ಯಾಯಾಲಯಕ್ಕೆ ತಾನು ಸೂಚನೆ ನೀಡುವುದಾಗಿ ನ್ಯಾಯಮೂರ್ತಿ ಶರ್ಮಾ ಹೇಳಿದ್ದಾರೆ. ಹೈಕೋರ್ಟ್‌ನಲ್ಲಿ ಮಾ.16ರಂದು ಪ್ರಕರಣದ ವಿಚಾರಣೆ ನಡೆಯಲಿದೆ.

ವಿಚಾರಣೆಯಿಲ್ಲದೆ ಆರೋಪಿಗಳ ಖುಲಾಸೆ: ಅಬಕಾರಿ ನೀತಿಯನ್ನು ದಿಲ್ಲಿಯ ಆಪ್ ಸರ್ಕಾರ ಕೆಲವು ವ್ಯಾಪಾರಿಗಳಿಗೆ ಪೂರಕವಾಗಿ ತಿರುಚಿತ್ತು ಮತ್ತು ಈ ನೀತಿಯಲ್ಲಿ ಆಗಿದ್ದ ಅಕ್ರಮ ಹಣ ವರ್ಗಾವಣೆ ಪತ್ತೆ ಮಾಡಲು ಸಿಬಿಐ ಯಶಸ್ವಿಯಾಗಿತ್ತು. ಆದರೆ ಅಧೀನ ನ್ಯಾಯಾಲಯವು ಆಪ್ ನಾಯಕರ ಭ್ರಷ್ಟಾಚಾರ ಸಾಬೀತುಪಡಿಸಬಲ್ಲ ಪೂರಕ ದಾಖಲೆಗಳಿದ್ದರೂ ಅವನ್ನು ಪರಿಗಣಿಸದೆಯೇ ಆರೋಪಿಗಳನ್ನು ಬಿಡುಗಡೆ ಮಾಡಿದೆ. ದಿಲ್ಲಿಯ ಇತಿಹಾಸದಲ್ಲೇ ಇದೊಂದು ಬೃಹತ್ ಹಗರಣವಾಗಿದೆ ಮತ್ತು ಬಲುದೊಡ್ಡ ನಾಚಿಕೆಗೇಡಿನ ವಿಚಾರ ಇದಾಗಿದೆ. ಆರೋಪಿಗಳ ವಿಚಾರಣೆ ನಡೆಸದೆಯೇ ದೋಷಮುಕ್ತಗೊಳಿಸಿದ ತೀರ್ಪು ಇದಾಗಿದೆ ಎಂದು ಅಧೀನ ನ್ಯಾಯಾಲಯದ ಆದೇಶವನ್ನು ತುಷಾರ್ ಮೆಹ್ತಾ ಆಕ್ಷೇಪಿಸಿದ್ದರು.

23 ಆರೋಪಿಗಳು ದೋಷಮುಕ್ತ: ಕೇಜ್ರಿವಾಲ್, ಸಿಸೋಡಿಯಾ, ಕೆ. ಕವಿತಾ ಸಹಿತ 23 ಆರೋಪಿಗಳನ್ನು ಫೆ.27ರಂದು ದೋಷಮುಕ್ತಗೊಳಿಸಿ ತೀರ್ಪಿತ್ತಿದ್ದ ಅಧೀನ ನ್ಯಾಯಾಲಯ, ಸಿಬಿಐ ತನಿಖೆಯಲ್ಲಿ ನ್ಯೂನತೆಗಳಿವೆ. ಸಿಬಿಐ ಸಲ್ಲಿಸಿರುವ ಬೃಹದಾಕಾರದ ಆರೋಪಪಟ್ಟಿಯಲ್ಲೂ ಲೋಪಗಳಿವೆ ಮತ್ತು ಪೂರಕ ಸಾಕ್ಷ್ಯಗಳು ಅಥವಾ ಹೇಳಿಕೆಗಳ ಒಳಗೊಂಡಿಲ್ಲವೆಂದು ಸಿಬಿಐ ತರಾಟೆಗೆತ್ತಿಕೊಂಡು ಟೀಕಿಸಿತ್ತು. ಸಿಸೋಡಿಯಾ ವಿರುದ್ಧ ಮೇಲ್ನೋಟಕ್ಕೆ ಆರೋಪಿ ಪ್ರಕರಣ ದಾಖಲಿಸಲು ಸಿಬಿಐ ವಿಫಲವಾಗಿದೆ ಎಂದು ಹೇಳಿತ್ತು. ಕೇಜ್ರಿವಾಲ್‌ರನ್ನು ಯಾವುದೇ ಸಾಕ್ಷ್ಯಾಧಾರಗಳಿಲ್ಲದೆಯೇ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಸಿಬಿಐ ವಿಶೇಷ ನ್ಯಾಯಾಧೀಶರು ತನಿಖಾ ಸಂಸ್ಥೆಯನ್ನು ತರಾಟೆಗೆತ್ತಿಕೊಂಡಿದ್ದರು. ಸಿಸೋಡಿಯಾ 530 ದಿನ ಜೈಲಲ್ಲಿದ್ದರು.

ಆದಾಯ ಹೆಚ್ಚಳ ಮತ್ತು ಮದ್ಯ ವ್ಯಾಪಾರದಲ್ಲಿ ಮಾರ್ಪಾಡುಗಳ ನೆಪದಲ್ಲಿ 2021ರಲ್ಲಿ ದಿಲ್ಲಿ ಸರಕಾರ ಹೊಸ ಅಬ್ಕಾರಿ ನೀತಿ ರೂಪಿಸಿತ್ತು. ಆದರೆ ಇದರ ಅನುಷ್ಠಾನದಲ್ಲಿ ಅವ್ಯವಹಾರಗಳಾಗಿವೆ ಎಂದು ಆರೋಪಗಳು ವ್ಯಕ್ತವಾದ ಹಿನ್ನೆಲೆಯಲ್ಲಿ, ನೀತಿ ಬಗ್ಗೆ ಸಿಬಿಐ ತನಿಖೆಗೆ ಲೆ.ಗವರ್ನರ್ ವಿನಯಕುಮಾರ್ ಸಕ್ಸೇನಾ ಆದೇಶಿಸಿದ್ದು, ನೀತಿ ಹಿಂಪಡೆಯಲಾಗಿತ್ತು.

ಪಿಎಂಗೆ ಪತ್ರ ಬರೆದು ಧನ್ಯವಾದ ಸಮರ್ಪಿಸಿದ ರಾಕೇಶ್

• **ಬೆಂಗಳೂರು:** ಧಾರವಾಡದ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್ಮೇಶನ್ ಟೆಕ್ನಾಲಜಿ' (ಐಐಐಟಿ) ವಿದ್ಯಾರ್ಥಿ ರಾಕೇಶ್ ಗಡುಪುಡಿ ಅವರು 'ಸದೃಢ ಭಾರತಕ್ಕಾಗಿ ಪಿಎಂ ಯುವ ಸಾಧಕರ ವಿದ್ಯಾರ್ಥಿವೇತನ ಪ್ರಶಸ್ತಿ ಯೋಜನೆ' (ಪಿಎಂ ಯಶಸ್ವಿ) ಯಲ್ಲಿ ನೆರವು ಪಡೆದ ಹಿನ್ನೆಲೆಯಲ್ಲಿ ಪ್ರಧಾನಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ತನ್ನ ಅಧ್ಯಯನವನ್ನು ಮುಂದುವರಿಸಲು ಆರ್ಥಿಕ ತೊಂದರೆಯನ್ನು ಎದುರಿಸಿದ ವಿದ್ಯಾರ್ಥಿಗೆ ವಿದ್ಯಾರ್ಥಿವೇತನವು ಗಮನಾರ್ಹ ನಿರಾಳತೆಯನ್ನು ನೀಡಿದೆ. ಆತ್ಮವಿಶ್ವಾಸದಿಂದ ತನ್ನ ಶಿಕ್ಷಣವನ್ನು ಮುಂದುವರಿಸಲು ಅನುವು ಮಾಡಿಕೊಟ್ಟಿದೆ ಎಂದಿದ್ದಾರೆ.

ರಾಕೇಶ್ ಅವರು ಈ ಬಗ್ಗೆ ಪ್ರಧಾನಿಗೆ ಪತ್ರ ಬರೆದು, ತಾವು ಬಡ ಕುಟುಂಬದಿಂದ ಬಂದವರು. ತಮ್ಮ ಶಿಕ್ಷಣವನ್ನು ಬೆಂಬಲಿಸಲು ವಿದ್ಯಾರ್ಥಿವೇತನವು ನಿರ್ಣಾಯಕವಾಗಿದೆ ಎಂದು ತಿಳಿಸಿದ್ದಾರೆ.

ಕಾಲೇಜಿನ ಮೊದಲ ವರ್ಷದಲ್ಲಿ ವಿದ್ಯಾರ್ಥಿವೇತನ ಯೋಜನೆಯ ಬಗ್ಗೆ ತಮಗೆ ತಿಳಿದಿರಲಿಲ್ಲ, ಆದರೆ, ಅದರ ಬಗ್ಗೆ ತಿಳಿದ ನಂತರ ಅವರು ತಮ್ಮ ಎರಡನೇ ವರ್ಷದಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಾಗಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಅರ್ಜಿಯನ್ನು ಸಂಸ್ಥೆಯು ಅನುಮೋದಿಸಿತ್ತಾದರೂ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂತಿಮ ಅನುಮೋದನೆ ಜನವರಿ 2025 ರಿಂದ ಬಾಕಿ ಉಳಿದಿತ್ತು. ಈ ವಿಳಂಬವು ಆರ್ಥಿಕ ಸಂಕಷ್ಟಕ್ಕೆ ಕಾರಣವಾಗುತ್ತಿದೆ. ಅಧ್ಯಯನದತ್ತ ಗಮನ ಕೇಂದ್ರೀಕರಿಸಲು ತಮ್ಮ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಪ್ರಧಾನಿಯವರ ನೆರವು ಕೋರಿ ಬರೆದ ಪತ್ರದಲ್ಲಿ ರಾಕೇಶ್ ಅವರು ತಿಳಿಸಿದ್ದರು. ಪ್ರಕ್ರಿಯೆಯಲ್ಲಿನ ವಿಳಂಬದಿಂದಾಗಿ ಅರ್ಹ ವಿದ್ಯಾರ್ಥಿಗಳು ತೊಂದರೆ ಎದುರಿಸದಂತೆ ತ್ವರಿತ ಅನುಮೋದನೆ ನೀಡಬೇಕೆಂದು ಅವರು ವಿನಂತಿಸಿದ್ದರು.

ಸಮಸ್ಯೆಗೆ ಶೀಘ್ರ ಪರಿಹಾರ

ಈ ಸಮಸ್ಯೆ ಪರಿಹಾರವಾದ ಬಳಿಕ ಮತ್ತು ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿದ ನಂತರ, ರಾಕೇಶ್ ಅವರು ಡಿಸೆಂಬರ್ 2025 ರಲ್ಲಿ ಪ್ರಧಾನಿಯವರಿಗೆ ಮತ್ತೆ ಪತ್ರ ಬರೆದು ತಮ್ಮ ಗೌರವ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಪಾರದರ್ಶಕ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳ ಪಾತ್ರವನ್ನು ಕೊಂಡಾಡಿದ್ದಾರೆ. ಅವರ ಮಾತುಗಳಲ್ಲೇ ಹೇಳುವುದಾದರೆ, ದೀರ್ಘಕಾಲದ ಅಭಿಮಾನಿಯಾಗಿ, ಎಲ್ಲರನ್ನೂ ಒಳಗೊಳ್ಳುವ ಭಾರತವನ್ನು ನಿರ್ಮಿಸುವ ನಿಮ್ಮ ದೂರದೃಷ್ಟಿ ಮತ್ತು ಸಮರ್ಪಣೆಯಿಂದ ನಾನು ಸದಾ ಸ್ಫೂರ್ತಿ ಪಡೆದಿದ್ದೇನೆ. ದೇಶದ ಯುವಕರಿಗೆ ನಿಮ್ಮ ಬದ್ಧತೆ ಮತ್ತು ಪಾರದರ್ಶಕ ಆಡಳಿತವು 'ಪಿಎಂ ಕುಂದುಕೊರತೆ ಪೋರ್ಟಲ್'ನಂತಹ ವೇದಿಕೆಗಳ ಮೂಲಕ ಸ್ಪಷ್ಟವಾಗಿದೆ ಎಂದು ಪ್ರಧಾನಿಯವರನ್ನು ಪ್ರಶಂಸಿಸಿದ್ದಾರೆ. ಸಮಸ್ಯೆಯ ಪರಿಹಾರದ ನಂತರ, ವಿದ್ಯಾರ್ಥಿವೇತನದ ಬೆಂಬಲವು ತನ್ನ ಮತ್ತು ಕುಟುಂಬಕ್ಕೆ ಅಮೂಲ್ಯವಾಗಿದೆ ಎಂದು ರಾಕೇಶ್ ಪತ್ರದಲ್ಲಿ ತಿಳಿಸಿದ್ದಾರೆ. ಇದು ವಿಶ್ವಾಸದಿಂದ ತನ್ನ ಶಿಕ್ಷಣವನ್ನು ಮುಂದುವರಿಸಲು ಅನುವು ಮಾಡಿಕೊಟ್ಟಿದೆ ಎಂದಿರುವ ಅವರು ವಿದ್ಯಾರ್ಥಿಗಳ ಸ್ಥಿರ ಬೆಂಬಲ ಕಲ್ಯಾಣಕ್ಕಾಗಿ ನಿರಂತರ ಪ್ರಯತ್ನಗಳಿಗಾಗಿ ಪ್ರಧಾನಮಂತ್ರಿಯವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ, ಧನ್ಯವಾದ ಅರ್ಪಿಸಿದ್ದಾರೆ.

- **ಧಾರವಾಡದ ವಿದ್ಯಾರ್ಥಿಗೆ ನಿರಾಳತೆ ತಂದ ಪಿಎಂ ಯಶಸ್ವಿ ವಿದ್ಯಾರ್ಥಿವೇತನ**
- **ಸದೃಢ ಭಾರತಕ್ಕಾಗಿ ಪಿಎಂ ಯುವ ಸಾಧಕರ ವಿದ್ಯಾರ್ಥಿವೇತನ ಪ್ರಶಸ್ತಿ ಯೋಜನೆ ವಿದ್ಯಾರ್ಥಿಗಳಿಗೆ ಸಹಕಾರಿ**

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

ಹೈಕಮಾಂಡ್ ಇರು ಅಂದರೆ ಇರುತ್ತೇನೆ
- ಸಿದ್ದರಾಮಯ್ಯ

-ಹೈಕಮಾಂಡ್ ಹೋಗು ಅಂದರೆ ಹೋಗುತ್ತೇನೆ ಅಂತ ಹೇಳಿಲ್ಲ, ಹಾಗಾಗಿ ನಮಗೆ ಸಂಶಯ ಪರಿಹಾರವಾಗಿಲ್ಲ!

ದಿನ ಭವಿಷ್ಯ

ಮೇಷ ಯೋಜಿಸಿ ಕಾರ್ಯ ಎಸಗಿ. ಇಲ್ಲವಾದರೆ ಗೊಂದಲ ಸೃಷ್ಟಿ. ಅಧಿಕ ಹೊಣೆಗಾರಿಕೆಯ ಭಾರ. ಖರ್ಚು ನಿಯಂತ್ರಿಸುವ ಕಲೆ ಅರಿಯಿರಿ.

ವೃಷಭ ಹೆಚ್ಚು ಕ್ರಿಯಾಶೀಲ ದಿನ. ಆದರೆ ಪ್ರತಿಫಲ ನಿರೀಕ್ಷೆಗೆ ತಕ್ಕಂತಿರದು. ಆರ್ಥಿಕ ಒತ್ತಡ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶ.

ಮಿಥುನ ವೃತ್ತಿಪರವಾಗಿ, ಪ್ರಾಕ್ಟಿಕಲ್ ಆಗಿ ಕಾರ್ಯ ಎಸಗಿ. ಭಾವುಕತೆ ನಿಮ್ಮ ಸಮಸ್ಯೆ ಪರಿಹರಿಸದು. ಕೌಟುಂಬಿಕ ಬಿಕ್ಕಟ್ಟು. ಕೂಡಿ ಬಾಳಿದರೆ ನೆಮ್ಮದಿ ಎಂದರಿಯಿರಿ.

ಕಟಕ ವಿಶೇಷ ಘಟಿಸದ ಸಹಜ ದಿನ. ಸಂತೋಷ, ಬೇಸರ ಎರಡನ್ನೂ ಅನುಭವಿಸುವಿರಿ. ಅನಿರೀಕ್ಷಿತ ಧನಲಾಭ. ಕೌಟುಂಬಿಕ ಸಮ್ಮಿಲನ.

ಸಿಂಹ ನಿಮ್ಮ ಸುತ್ತಲಿನ ಬದಲಾವಣೆಗೆ ಹೊಂದಿಕೊಳ್ಳಿ.ನಿಮ್ಮದೇ ನಿಲುವಿಗೆ ಹಠ ಹಿಡಿಯದಿರಿ. ಹಣದ ಸಮಸ್ಯೆ ಪರಿಹಾರ.

ಕನ್ಯಾ ವೃತ್ತಿಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಆದೀತು. ಪ್ರಗತಿಗೆ ಅಡ್ಡಿ. ಉದ್ಯಮ ಪಾಲುದಾರಿಕೆಗೆ ಒಪ್ಪಿಕೊಳ್ಳದಿರಿ. ಸ್ವಂತ ನಿಲುವು ಸಡಿಲಿಸದಿರಿ.

ತುಲಾ ನೀವಿಂದು ಏಕಾಗ್ರತೆ ಕಳಕೊಳ್ಳದಿರಿ. ಅಪ್ರಿಯ ಬೆಳವಣಿಗೆಗೆ ಶಾಂತವಾಗಿ ಪ್ರತಿಕ್ರಿಯಿಸಿ. ಎಲ್ಲರನ್ನು ಮೆಚ್ಚಿಸುವ ಪ್ರಯತ್ನ ಬಿಡಿ. ಸಾಂಸಾರಿಕ ನೆಮ್ಮದಿ.

ವೃಶ್ಚಿಕ ವಸ್ತು ಕಳ್ಳತನ ಆದೀತು. ಎಚ್ಚರ ವಹಿಸಿ. ನಿಮ್ಮ ಅಭಿಲಾಷೆಗೆ ಹೆತ್ತವರ ಸಮ್ಮತಿ ದೊರಕಲಿದೆ. ದೊಡ್ಡ ಚಿಂತೆಯೊಂದು ಪರಿಹಾರ.

ಧನು ಅತಿ ಭಾವುಕತೆ ಪ್ರದರ್ಶಿಸಬೇಡಿ. ಯಾವುದೇ ಸನ್ನಿವೇಶದಲ್ಲಿ ಶಾಂತವಾಗಿರಿ. ಜಗಳಕ್ಕಿಂತ ರಾಜಿ ಹೊಂದಾಣಿಕೆ ಫಲ ನೀಡಬಲ್ಲುದು.

ಮಕರ ಸಾಧಾರಣ ಪ್ರಗತಿ. ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆ ಸಂಭವ. ಹಣವನ್ನು ನೀರಿನಂತೆ ಖರ್ಚು ಮಾಡದಿರಿ. ಆತ್ಮೀಯರ ಸಂಗದಲ್ಲಿ ನೆಮ್ಮದಿ.

ಕುಂಭ ಅತಿಯಾದ ಕೆಲಸದ ಒತ್ತಡ. ಉದ್ವಿಗ್ನತೆ ತರುವ ವಿಚಾರಗಳನ್ನು ಮನದಿಂದ ದೂರವಿಡಿ. ಆತ್ಮೀಯರ ಸಂಗದಲ್ಲಿ ಸಂತೋಷ ಪಡೆಯಲೆತ್ನಿಸಿ.

ಮೀನ ಫಲಪ್ರದ ದಿನವಲ್ಲ. ಗೊಂದಲ ಕಾಡಲಿದೆ. ಹಣದ ಕೊರತೆ ಸಂಭವ. ಇದರಿಂದ ಖರೀದಿಗೆ ಅಡ್ಡಿ. ಆಪ್ತರಿಂದ ನಿಮ್ಮ ಆಶಯಕ್ಕೆ ಭಂಗ ಬರಬಹುದು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 6,0,8,2

ತಮಿಳುನಾಡು ಮಾದರಿ ಔಷಧ ಪೂರೈಕೆ ವ್ಯವಸ್ಥೆ ಜಾರಿ: ಸಚಿವ

ಔಷಧ ವಿತರಣೆ ಶೀಘ್ರ ಕ್ರಮ

• **ವಿಧಾನಪರಿಷತ್:** ತಮಿಳುನಾಡು ಮಾದರಿ ಯಲ್ಲಿ ಅತ್ಯಂತ ಪಾರದರ್ಶಕವಾಗಿ ಔಷಧ ಪೂರೈಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. 880.60 ಕೋಟಿ ರೂ.ಗಳ ಮೊತ್ತದಲ್ಲಿ ಬಹುತೇಕ ಅಗತ್ಯ ಔಷಧಗಳನ್ನು ಕೆಎಸ್‌ಎಂಎಸ್‌ಸಿಎಲ್ ವತಿಯಿಂದ ತ್ವರಿತವಾಗಿ ಖರೀದಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಜೀವ ರಕ್ಷಕ ಔಷಧಿಗಳ ಕೊರತೆಯಿಂದಾಗಿ ಸರ್ಕಾರಿ ಆಸ್ಪತ್ರೆಗಳಿಗೆ ನಿಯಮಿತ ಪೂರೈಕೆಯಿಲ್ಲದೆ ರೋಗಿಗಳಿಗೆ ತೊಂದರೆ ಕುರಿತು ಪ್ರಸ್ತಾಪಿಸಿದ ಮೇಲ್ಮನೆ ಸದಸ್ಯ ಡಾ.ಧನಂಜಯ ಸರ್ಜಿ ಅವರ ಪ್ರಶ್ನೆಗೆ ದಿನೇಶ್ ಗುಂಡೂರಾವ್ ಉತ್ತರಿಸಿದರು.

ರಾಜ್ಯದಲ್ಲಿ ಜೀವ ರಕ್ಷಕಗಳ ಔಷಧಿ ಕೊರತೆ ಇಲ್ಲ. ಔಷಧ ಪೂರೈಕೆಗೆ ಸಾಕಷ್ಟು ಅನುದಾನ ನೀಡಲಾಗಿದೆ. ಔಷಧಿ ಪೂರೈಕೆಯಲ್ಲಿ ಪಾರದರ್ಶಕತೆ ತರುವ ಕೆಲಸ ಮಾಡಲಾಗಿದೆ. ಈ ವ್ಯವಸ್ಥೆ ಅಳವಡಿಸುವ ನಿಟ್ಟಿನಲ್ಲಿ ಕೆಲವೊಂದು ವಿಳಂಬವಾಗಿರಬಹುದು, ಆದರೆ, ಕೆಎಸ್‌ಎಂಸಿಎಲ್ ಮುಖಾಂತರ ಕಳೆದ ಆಗಸ್ಟ್‌ನಲ್ಲಿಯೇ ಪಟ್ಟಿಮಾಡಿ ಕ್ರಮವಹಿಸಿದ್ದೇವೆ. ಬಹಳಷ್ಟು ಔಷಧಗಳು ಸರಿಯಾದ ತಪಾಸಣೆಯಾಗದೆಯೇ ವಿತರಣೆಯಾಗುತ್ತಿತ್ತು. ಕಡಿಮೆ ಬಳಕೆಯ ಔಷಧಗಳ ಹೆಚ್ಚು ಖರೀದಿಯೂ ಆಗುತ್ತಿತ್ತು. ಈಗ ಅವಶ್ಯಕ ಔಷಧಗಳ ಹೆಚ್ಚು ಖರೀದಿ ಮಾಡುತ್ತಿದ್ದೇವೆ. ಬೇರೆ-ಬೇರೆ ರಾಜ್ಯಗಳ ಮಾದರಿ ಅಧ್ಯಯನ ನಡೆಸಿದ್ದೇವೆ ಎಂದರು.

ರಾಜ್ಯದ ಎಲ್ಲ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಎಬಿ-ಎಆರ್‌ಕೆ ಮೊದಲಾದ ಅನುದಾನಗಳನ್ನು ಜೀವ ರಕ್ಷಕ ಔಷಧಿ ಖರೀದಿಸಿ ರೋಗಿಗಳಿಗೆ ನೀಡಲು ನಿರ್ದೇಶನ ನೀಡಲಾಗಿದೆ. ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು ಗವರ್ನಮೆಂಟ್ - ಇ- ಮಾರ್ಕೆಟ್ ಪ್ಲೇಸ್ ಮೂಲಕ ನೇರ ಖರೀದಿಗೂ ಅವಕಾಶ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.



ಗುಣಮಟ್ಟ ಖಾತರಿಗೆ ವಿಳಂಬ

ತಮಿಳುನಾಡು ರಾಜ್ಯ ಬಹಳ ಅಚ್ಚುಕಟ್ಟಾದ ಖರೀದಿ ಪ್ರಕ್ರಿಯೆ ನಡೆಸುತ್ತದೆ. ನಮ್ಮ ಟೆಂಡರ್‌ಗಳಲ್ಲಿ ಅನವಶ್ಯಕ ಕಂಡೀಶನ್‌ಗಳಿಂದ ಹೆಚ್ಚು ಬಿಡ್‌ದಾರರು ಬರುತ್ತಿರಲಿಲ್ಲ. ಯಾವ ಔಷಧ ಎಷ್ಟು ಅಗತ್ಯ ಇದೆ ಎಂದು ಪರಿಶೀಲನೆ ಮಾಡಿ, ಪಾರದರ್ಶಕ ವ್ಯವಸ್ಥೆ ಮುಖಾಂತರ ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದೇವೆ. ಖರೀದಿಸಿದ ಔಷಧಗಳನ್ನು ಉಗ್ರಾಣದಲ್ಲಿಯೂ ಮತ್ತೊಮ್ಮೆ ಪರೀಕ್ಷೆ ನಡೆಸಿ, ಗುಣಮಟ್ಟ ಖಾತರಿ ಪಡಿಸಿಕೊಳ್ಳುವ ಪ್ರಕ್ರಿಯೆ ನಡೆಸುತ್ತಿದ್ದೇವೆ. ಇದರಿಂದ ಸ್ವಲ್ಪ ವಿಳಂಬ ಆಗಿದೆ. ಎಬಿಆರ್‌ಕೆ ಅಡಿಯಲ್ಲಿ ಎಲ್ಲ ಜಿಲ್ಲೆಗಳಲ್ಲಿ ಸುಮಾರು 300 ಕೋಟಿ ರೂ. ಹಣ ಇದ್ದು, ಹೆಚ್ಚುವರಿಯಾಗಿ 30 ಕೋಟಿ ರೂ. ಅನುದಾನ ಬಿಡುಗಡೆ ಮಾಡಿ, ಸ್ಥಳೀಯವಾಗಿಯೂ ಖರೀದಿಸಲು ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ಕೆಎಸ್‌ಎಂಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಐಎಎಸ್ ಅಧಿಕಾರಿಯನ್ನು ನೇಮಕ ಮಾಡಿ, ಸರಿಯಾಗಿ ವ್ಯವಸ್ಥಿತವಾಗಿ ನಡೆಸಲು ಕ್ರಮ ವಹಿಸಲಾಗಿದೆ. ಮೊದಲು ವರ್ಷಕ್ಕೊಮ್ಮೆ ಔಷಧ ಸರಬರಾಜು ಆಗುತ್ತಿತ್ತು. ಈಗ ಹೊಸ ಕ್ರಮದಿಂದ ಪ್ರತಿ ಮೂರು ತಿಂಗಳಿಗೆ ಅಗತ್ಯವಿರುವ ಔಷಧ ಸರಬರಾಜು ಮಾಡಲಾಗುತ್ತದೆ. ಇದರಿಂದ ಅವಧಿ ಮುಗಿದು ಹಾಳಾಗುವುದು ತಪ್ಪುತ್ತದೆ. ಜನರಿಗೆ ಉಚಿತವಾಗಿ ಔಷಧ ನೀಡುವುದು ಸರ್ಕಾರದ ಆದ್ಯ ಕರ್ತವ್ಯ, ಆ ನಿಟ್ಟಿನಲ್ಲಿ ಕ್ರಮಬದ್ಧ ರೀತಿಯಲ್ಲಿ ಆರೋಗ್ಯ ಇಲಾಖೆ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

5 ದಿನ ಒಪಿಡಿ ಬಂದ್

• **ಬೆಂಗಳೂರು:** ಮುಂಬಡ್ತಿ, ವರ್ಗಾವಣೆಯಲ್ಲಿನ ನ್ಯೂನ್ಯತೆ ಸರಿಪಡಿಸುವುದು, ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ ಮುಷ್ಕರ ನಡೆಸಲು ಸಜ್ಜಾಗಿದ್ದಾರೆ.

ಮಾ.11 ರಿಂದ15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಡೆಸ್ಪನ್ಸರಿಗಳಲ್ಲಿನ ಎಲ್ಲ ವೃಂದದ ವೈದ್ಯರು, ಅಧಿಕಾರಿಗಳು, ನೌಕರರು ಕಪ್ಪುಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಗಳನ್ನು ಮಾತ್ರ ನಿರ್ವಹಿಸುವ ಮೂಲಕ ಮುಷ್ಕರ ನಡೆಸಲು ಹಾಗೂ ಮಾ.16 ರಂದು ಬೇಡಿಕೆ ಈಡೇರಿಸುವವರೆಗೂ ಇಲಾಖೆಯ ಎಲ್ಲ ನೌಕರರು, ಕರ್ತವ್ಯಕ್ಕೆ ಅನಿರ್ದಿಷ್ಟಾವಧಿವರೆಗೆ ಗೈರು ಹಾಜರಾಗುವ ಮೂಲಕ ಮುಷ್ಕರ ಕೈಗೊಳ್ಳಲು ನಿರ್ಧರಿಸಲಾಗಿದೆ.

ಸರ್ಕಾರಿ ವೈದ್ಯರು ಮತ್ತು ವೈದ್ಯಾಧಿಕಾರಿಗಳ ಅಹವಾಲು ಆಲಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಭೆ ಕರೆದಿದ್ದರು. ಆದರೆ, ಸಭೆಯಲ್ಲಿ ಭಾಗವಹಿಸಲು ನಿರಾಕರಿಸಿರುವ ವೈದ್ಯಾಧಿಕಾರಿಗಳ ಸಂಘ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ, ಮನವಿ ಸಲ್ಲಿಸಿ, ಹೊರರೋಗಿಗಳ ಚಿಕಿತ್ಸೆಗಳನ್ನು ಸ್ಥಗಿತಗೊಳಿಸುವ ಬಗ್ಗೆ ತಿಳಿಸಿದೆ.

ಪ್ರಮುಖ ಬೇಡಿಕೆಗಳೇನು?

- ಸರ್ಕಾರಿ ಆಸ್ಪತ್ರೆಗಳಿಗೆ ಕಾಲ-ಕಾಲಕ್ಕೆ ಸಮರ್ಪಕ ಔಷಧ ಪೂರೈಸುವುದು.
- 5 ವರ್ಷಗಳಿಂದ ಮುಂಬಡ್ತಿ ನೀಡಿಲ್ಲ. ಕೂಡಲೇ ನೀಡಬೇಕು.
- ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೀಘ್ರ ತಿದ್ದುಪಡಿ ಮಾಡಬೇಕು.
- ಖಾಲಿಯಿರುವ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು. ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ನೀಡಬೇಕು.

ಈವರೆಗೂ ನಮ್ಮ ಬೇಡಿಕೆ ಈಡೇರಿಲ್ಲ, ಮುಖ್ಯಮಂತ್ರಿಗಳು ಸಭೆ ಕರೆಸಿ ಚರ್ಚೆ ಮಾಡಲಾಗುವುದು ಎಂದಿದ್ದಾರೆ. ಒಂದು ವೇಳೆ ಅದು ಸಾಧ್ಯವಾಗದಿದ್ದರೆ, ಮಾ. 11 ರಿಂದ ನಾವು ಮುಷ್ಕರವನ್ನು ಕೈಗೊಳ್ಳಲಿದ್ದೇವೆ.

■ **ಡಾ.ರವೀಂದ್ರನಾಥ್ ಎಂ. ಮೇಟಿ, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ**

ಪಕ್ಷಾಧ್ಯಕ್ಷರಾಗಿ 6 ವರ್ಷ: ಶಾಸಕರಿಗಿಂದು ಔತಣ

ಪುಟ ೧➡ ಔತಣಕೂಟದ ಮೂಲಕ ಶಾಸಕರು, ಪರಿಷತ್ ಸದಸ್ಯರು ಹಾಗೂ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಇದಾಗಿದೆ ಎಂದು ವಿಶ್ಲೇಷಿಸಲಾಗಿದೆ. ಔತಣಕೂಟದ ನಂತರ ಬುಧವಾರ ನಡೆಯುವ ಕಾಂಗ್ರೆಸ್‌ನ ಶಾಸಕಾಂಗ ಪಕ್ಷದ ಸಭೆಯ ವೇದಿಕೆಯು ಡಿ.ಕೆ. ಶಿವಕುಮಾರ್ ಅವರಿಗೆ ಮತ್ತೊಂದು ಅವಕಾಶವಾಗಿದ್ದು, ಈ ಎರಡು ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುವ ಯೋಜನೆ ರೂಪಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಮಾಜಿ ಸಚಿವ, ಶಾಸಕರಿಗೂ ಭೋಜನ

ಪುಟ ೧➡ ಈಗ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಶಾಸಕರಿಗೆ ಭೋಜನಕೂಟ ಇಟ್ಟುಕೊಂಡಿದ್ದೇನೆ ಎಂದು ತಿಳಿಸಿದ್ದಾರೆ.

ಬಹಿರಂಗವಾಗಿ ಹೇಳಲ್ಲ: ಡಿಕೆಶಿ

ಸೋಮವಾರ ಇಡೀ ದಿನ ಓಡಾಡಿದರೂ ತಮ್ಮ ನಡೆಯನ್ನು ಬಿಟ್ಟುಕೊಡದ ಶಿವಕುಮಾರ್ ಅವರು, ದಿಲ್ಲಿಯಲ್ಲಿ ನಾನು ಯಾರನ್ನು ಭೇಟಿ ಮಾಡುತ್ತೇನೆ ಎಂದು ಬಹಿರಂಗವಾಗಿ ಹೇಳಲು ಆಗುವುದಿಲ್ಲ ಎಂದು ಹೇಳಿದ್ದು, ಪುಣೆಯಲ್ಲಿರುವ ನನ್ನ ಸ್ನೇಹಿತರ ಮನೆ ಮದುವೆ ಕಾರ್ಯಕ್ರಮವಿತ್ತು. ಹೀಗಾಗಿ ದಿಲ್ಲಿಗೆ ಬಂದಿದ್ದೆ. ದಿಲ್ಲಿಗೆ ಬಂದ ಮೇಲೆ ನಾನು ಎಲ್ಲರನ್ನೂ ಭೇಟಿ ಮಾಡುತ್ತೇನೆ ಎಂದು ಹೇಳಿದರು.

ಸಂಘರ್ಷ ಹೆಚ್ಚಳಕ್ಕೆ ಮದ್ದು

ಪುಟ ೧➡ **ಹೋರಾಟದ ಶಪಥ:** ಈ ನೇಮಕ ಇರಾನ್ ಸರ್ಕಾರದ ತೀವ್ರ ಪ್ರತಿರೋಧವನ್ನು ತೋರಿಸುವ ಮತ್ತೊಂದು ಸಂಕೇತವಾಗಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ನಡುವೆಯೂ ಟೆಹ್ರಾನ್ ತನ್ನ ಹೋರಾಟ ಬಿಡಲು ಸಿದ್ಧವಾಗಿಲ್ಲ ಎಂಬ ಸಂದೇಶ ನೀಡಿದೆ. ಈ ಬೆಳವಣಿಗೆಯ ನಂತರ ಜಾಗತಿಕ ಮಾರುಕಟ್ಟೆಗಳು ಕುಸಿದವು. ಅಂತಾರಾಷ್ಟ್ರೀಯ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ ಸುಮಾರು 120 ಡಾಲರ್‌ಗೆ ಏರಿತು. ಯುದ್ಧ ಆರಂಭವಾದಾಗಿಗಿಂತ ಇದು ಸುಮಾರು ಶೇ.65ಕ್ಕೂ ಹೆಚ್ಚು, ಇರಾನ್ ಹಾರ್ಮುಜ್ ಜಲಸಂಧಿ ಪ್ರದೇಶದಲ್ಲಿ ನಡೆಸಿದ ದಾಳಿಗಳಿಂದ ವಿಶ್ವದ ತೈಲ ಸಾಗಣೆಯ ಐದನೇ ಭಾಗ ಸಾಗುವ ಪ್ರಮುಖ ಮಾರ್ಗದಲ್ಲಿ ಟ್ಯಾಂಕರ್ ಸಂಚಾರ ಬಹುತೇಕ ನಿಂತಿದೆ.

ಇಸ್ರೇಲ್‌ನಲ್ಲಿ ಮೊಳಗಿದ ಸೈರನ್: ಇಸ್ರೇಲ್‌ನಲ್ಲಿ ಸೋಮವಾರ ಹಲವು ಬಾರಿ ಎಚ್ಚರಿಕೆ ಸೈರನ್ ಮೊಳಗಿದವು. ಇರಾನ್‌ನ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ನಿರಂತರವಾಗಿದ್ದವು. ಮಧ್ಯ ಇಸ್ರೇಲ್‌ನಲ್ಲಿ ನಡೆದ ಕ್ಷಿಪಣಿ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಓರ್ವ ಮಹಿಳೆ ಗಾಯಗೊಂಡಿದ್ದಾರೆ.

ಲೆಬನಾನ್ ಮೇಲೆ ಇಸ್ರೇಲ್ ಹೊಸ ದಾಳಿ

ಇಸ್ರೇಲ್ ಸೋಮವಾರ ಲೆಬನಾನ್ ರಾಜಧಾನಿ ಬೈರೂತ್ ದಕ್ಷಿಣ ಭಾಗದಲ್ಲಿ ವಾಯುದಾಳಿ ನಡೆಸಿದೆ. ಈ ದಾಳಿಗಳು ಹೆಜ್ಬೊಲ್ಲಾ ಸಂಬಂಧಿತ ಹಣಕಾಸು ಸಂಸ್ಥೆ ಅಲ್-ಕಾರ್ಡ್ ಅಲ್-ಹಸನ್ ಗುರಿಯಾಗಿಸಿಕೊಂಡು ನಡೆದಿವೆ ಎಂದು ಇಸ್ರೇಲ್ ತಿಳಿಸಿದೆ. ಈ ಯುದ್ಧದಲ್ಲಿ ಇದುವರೆಗೆ ಕನಿಷ್ಠ 1,230 ಜನರು ಇರಾನ್‌ನಲ್ಲಿ, 397 ಜನರು ಲೆಬನಾನ್‌ನಲ್ಲಿ ಮತ್ತು 11 ಜನರು ಇಸ್ರೇಲ್‌ನಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಠಿಣ ನಿಲುವಿನ ನಾಯಕ ಮೊಜ್ತಬಾ

ಯುದ್ಧ ಆರಂಭವಾದ ಬಳಿಕ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಮೊಜ್ತಬಾ ಖಮೇನಿ, ತಮ್ಮ ತಂದೆಯ ಉತ್ತರಾಧಿಕಾರಿಯಾಗಿ ಬಹುಕಾಲದಿಂದಲೇ ಪರಿಗಣಿಸಲಾಗುತ್ತಿದ್ದರು. ಮೊಜ್ತಬಾ ತಂದೆ, ತಾಯಿ, ಪತ್ನಿ ಮತ್ತು ಪುತ್ರ ಕೂಡ ಅದೇ ಇಸ್ರೇಲಿ ದಾಳಿಯಲ್ಲಿ ಮೃತರಾಗಿದ್ದಾರೆ. ಇರಾನ್‌ನ ಕೆಲವು ರಾಜಕೀಯ ನಾಯಕರು ಈ ನೇಮಕವನ್ನು ವಂಶಪಾರಂಪರ್ಯ ಅಧಿಕಾರದಂತೆ ಎಂದು ಟೀಕಿಸಿದ್ದಾರೆ. ಇದು 1979ರ ಇಸ್ಲಾಮಿಕ್ ಕ್ರಾಂತಿಯಲ್ಲಿ ಉರುಳಿಸಲಾದ ರಾಜತಂತ್ರದಂತೆಯೇ ಎಂದಿದ್ದಾರೆ. ಹೊಸ ಸುಪ್ರೀಂ ಲೀಡರ್ ಆಗಿರುವ ಮೊಜ್ತಬಾ ಖಾಮೇನಿ ಈಗ ಇರಾನ್ ಸಶಸ್ತ್ರ ಪಡೆಗಳ ಮುಖ್ಯಸ್ಥರಾಗಿದ್ದು, ದೇಶದ ಅಣು ಕಾರ್ಯಕ್ರಮದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಹೊಂದಿದ್ದಾರೆ.

ಇರಾನ್‌ನ ಹಲವೆಡೆ ದಾಳಿ

ಇಸ್ರೇಲ್ ತನ್ನ ಸೇನೆಗಳು ಇರಾನ್‌ನ ಇಸ್ಫಾಹಾನ್ ನಗರದಲ್ಲಿರುವ ರೆವಲ್ಯೂಷನರಿ ಗಾರ್ಡ್ ಮತ್ತು ಬಸಿಜ್ ಪಡೆಗಳ ಕಮಾಂಡ್ ಕೇಂದ್ರಗಳು, ರಾಕೆಟ್ ಎಂಜಿನ್ ಉತ್ಪಾದನಾ ಘಟಕ ಮತ್ತು ಕ್ಷಿಪಣಿ ಉಡಾವಣೆ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದವು ಎಂದು ತಿಳಿಸಿದೆ. ಆದರೆ ಇರಾನ್ ಇದನ್ನು ಇನ್ನೂ ದೃಢಪಡಿಸಿಲ್ಲ.

ಅರಬ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

ಇರಾನ್ ಕುವೈತ್, ಕತಾರ್ ಮತ್ತು ಬಹರೈನ್ ಮೇಲೂ ದಾಳಿ ನಡೆಸಿದ್ದು, ಬಹರೈನ್‌ನಲ್ಲಿ ವಸತಿ ಪ್ರದೇಶದ ಮೇಲೆ ದಾಳಿ ನಡೆದ ಪರಿಣಾಮ ಮಕ್ಕಳನ್ನು ಒಳಗೊಂಡಂತೆ 32 ಜನರು ಗಾಯಗೊಂಡಿದ್ದಾರೆ. ಬಹರೈನ್‌ನ ಏಕೈಕ ತೈಲ ಶುದ್ಧೀಕರಣ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅಲ್ಲದೆ ಒಂದು ಉಪ್ಪುನೀರನ್ನು ಶುದ್ಧೀಕರಿಸುವ ಘಟಕಕ್ಕೂ ಹಾನಿಯಾಗಿರಬಹುದು ಎಂದು ಆರೋಪಿಸಲಾಗಿದೆ. ಇರಾಕ್‌ನ ಬಾಗ್ದಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಅಮೆರಿಕ ಸೇನಾ ನೆಲೆಯಲ್ಲಿ ಡ್ರೋನ್ ದಾಳಿ ನಡೆದಿದ್ದು, ವಾಯು ರಕ್ಷಣಾ ವ್ಯವಸ್ಥೆ ಅದನ್ನು ಹೊಡೆದುರುಳಿಸಿದೆ.

ಬಗರ್‌ಹುಕುಂ ಜಮೀನು ಮಂಜೂರಿಗೆ ಕ್ರಮ

ಪುಟ ೧➡ ಕಾಲಾನಂತರ ಈ ವೃತ್ತಿಯನ್ನು ನಿಷೇಧಿಸಿದ ಮೇಲೆ ಆ ಜಮೀನಿನಲ್ಲಿ ಕೆಲವರು ಕೃಷಿ ಮಾಡಿಕೊಂಡಿದ್ದರೆ, ಕೆಲವು ಪ್ರದೇಶಗಳನ್ನು ಸರ್ಕಾರವೇ ಜನಕಲ್ಯಾಣ ಕಾರ್ಯಕ್ರಮಗಳಿಗೆ ನೀಡಿದೆ. ಆದರೆ, ಅದೇ ಪ್ರದೇಶಗಳನ್ನು ಪ್ರಸ್ತುತ ಬಗರ್ ಹುಕುಂ ಯೋಜನೆಯಲ್ಲಿ ಮಂಜೂರು ಮಾಡಲು 2003ರ ಸರ್ಕಾರಿ ಆದೇಶದ ಕಾರಣಕ್ಕೆ ಕೆಲ ಕಾನೂನು ತೊಡಕುಗಳಿವೆ ಎಂದರು.

ಆದೇಶದಲ್ಲಿ 150 ಎಕರೆಗಿಂತ ಹೆಚ್ಚಿದ್ದರೆ ಆ ಜಮೀನನ್ನು ಅರಣ್ಯ ಇಲಾಖೆಗೆ ನೀಡಬೇಕು. ಲಭ್ಯವಿರುವ ಗ್ರಾಮದಲ್ಲಿ ಕನಿಷ್ಠ 10 ಎಕರೆ ಜಾಗವನ್ನು ಸ್ಮಶಾನಕ್ಕೆ ಕಾಯ್ದಿರಿಸಬೇಕು. ಪ್ರತಿ ಗ್ರಾಮದಲ್ಲೂ ಸೇಂದಿವನ ಜಮೀನನ್ನು ಗಮನದಲ್ಲಿಟ್ಟುಕೊಂಡು ಆಶ್ರಯ ಯೋಜನೆ, ಮೊರಾರ್ಜಿ ದೇಸಾಯಿ ನವೋದಯ ವಸತಿ ಶಾಲೆ, ಪರಿಶಿಷ್ಟ ಜಾತಿ-ಪಂಗಡ, ಹಿಂದುಳಿದ ವರ್ಗಗಳ ಹಾಸ್ಟೆಲ್ ಸ್ಮಶಾನ ಉದ್ದೇಶಕ್ಕಾಗಿ, ಸಾರ್ವಜನಿಕ ಶಿಕ್ಷಣ ಕಟ್ಟಡ ಆರೋಗ್ಯ ಕೇಂದ್ರ, ಬಸ್ಸು ನಿಲ್ದಾಣ ಉದ್ದೇಶಕ್ಕಾಗಿ ಕನಿಷ್ಠ 10 ರಿಂದ 50 ಎಕರೆ ಮೀಸಲಿಡಬೇಕು. ಪ್ರತಿ ಗ್ರಾಮ ಪಂಚಾಯತ್ ಕೇಂದ್ರಕ್ಕೆ ಸಂಬಂಧಿಸಿದಂತೆ ಕೋಮುಗಲಭೆ ಪ್ರಕರಣಗಳಲ್ಲಿ ಸಂತ್ರಸ್ತರಾದ ಜನರಿಗೆ ಹಾಗೂ ಪರಿಶಿಷ್ಟ ಜಾತಿ-ಪಂಗಡಗಳ ಕುಟುಂಬಗಳ ಮೇಲೆ ದೌರ್ಜನ್ಯ ನಡೆದು ಸಂತ್ರಸ್ತರಾದವರ ಕುಟುಂಬಗಳಿಗೆ ಕನಿಷ್ಠ 3 ಮೂರು ಎಕರೆ ನೀಡುವ ಉದ್ದೇಶಕ್ಕಾಗಿ ಜಮೀನು ಮೀಸಲಿರಿಸಬೇಕು. ಭೂರಹಿತ ಹಾಗೂ ಅತಿಸಣ್ಣ ಹಿಡುವಳಿದಾರರು 1990ಕ್ಕಿಂತ ಹಿಂದಿನಿಂದಲೂ ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನನ್ನು ಸ್ವಂತ ಹಿಡುವಳಿ ಜಮೀನನ್ನಾಗಿ ಸೇರಿದಂತೆ 5 ಎಕರೆ ಮಿತಿಗೆ ಒಳಪಟ್ಟು ಸಕ್ರಮಗೊಳಿಸುವುದು ಎಂದು ಹೇಳಲಾಗಿದೆ.

ಬಗರ್‌ಹುಕುಂ ಭೂ ಮಂಜೂರಾತಿ ಸಂದರ್ಭದಲ್ಲಿ ಈ ಎಲ್ಲಾ ಐದು ನಿಯಮಗಳನ್ನು ಯಥಾವತ್ ಪಾಲಿಸಿದರೆ ಆಗುವ ಕೆಲಸಗಳೂ ಆಗುವುದಿಲ್ಲ. ಅಲ್ಲದೆ, ಸುಮಾರು ಜಮೀನುಗಳು ಕಡತದಲ್ಲಿ ಈಗಾಗಲೇ ಅರಣ್ಯ ಇಲಾಖೆ ಎಂದು ನಮೂದಿಸಲಾಗಿದೆ. ಅರಣ್ಯ ಜಮೀನು ರಕ್ಷಣೆಗೆ ಸುಪ್ರೀಂ ಕೋರ್ಟ್‌ನಿಂದ ಕಟ್ಟುನಿಟ್ಟಿನ ಆದೇಶವಿದೆ. ಹೀಗಾಗಿ ರೈತರಿಗೆ ಏನಾದರೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ನಿಯಮಗಳನ್ನು ಸರಳೀಕರಿಸಲು ಮುಂದಾಗಿದ್ದೇವೆ ಎಂದರು.

ನೀಲ ಸಾಗರದ ನಡುವಲ್ಲಿ ಮಾ ತುಝೇ ಸಲಾಂ...

ಪುಟ ೧➡ ಬಣ್ಣಗಳ ಓಕುಳಿಯಂಥ ಪಟಾಕಿಗಳು ಆಗಸವನ್ನು ತುಂಬಿದ ಸಂಭ್ರಮ.. ಡ್ರೋನ್ ಶೋ.. ಇವೆಲ್ಲವೂ ಇನ್ನೂ ಕಣ್ಣೆದುರಿಗೇ ಇದೆ. ಈಗಲೂ ಕಣ್ಣು ಮುಚ್ಚಿದರೆ ಆ ಸ್ಟೇಡಿಯಂನಲ್ಲೇ ಇದ್ದೇನೆ ಎನಿಸುತ್ತಿದೆ. ಆ ಕ್ರೀಡಾಂಗಣದಲ್ಲಿ ನೆರೆದಿದ್ದ ಲಕ್ಷಕ್ಕೂ ಹೆಚ್ಚು ಮಂದಿ ಕೇವಲ ಪ್ರೇಕ್ಷಕರಲ್ಲ, ಅಭಿಮಾನಿಗಳಲ್ಲ.. ಅವರು ತಮ್ಮ ತಮ್ಮ ಬದುಕಿನ ನೋವುಗಳನ್ನು ಜಂಜಡಗಳನ್ನು ಮರೆತು, ಹೊಸ ಭರವಸೆಯನ್ನು ಹುಡುಕಿಕೊಂಡು ಬಂದಿದ್ದವರು.

ಪಂದ್ಯ ಶುರುವಾದಾಗ ನನ್ನ ಕಣ್ಣಮುಂದೆ ಪದೇ ಪದೇ ಬಂದು ಹೋಗುತ್ತಿದ್ದುದು 2023ರ ಆ ಏಕದಿನ ವಿಶ್ವಕಪ್ ಫೈನಲ್‌ನ ದೃಶ್ಯಗಳು. ಅಂದು ಕೂಡ ನಾನು ಅದೇ ಸ್ಟೇಡಿಯಂನಲ್ಲೇ ಇದ್ದೆ. ಆಸ್ಟ್ರೇಲಿಯಾದ ವಿರುದ್ಧ ಭಾರತ ಸೋತಾಗ ಲಕ್ಷಾಂತರ ಜನರ ನಡುವೆಯೂ ಅಂದು ಅನುಭವಿಸಿದ ಆ ಏಕಾಂಗಿತನ, ಆ ಸ್ಮಶಾನ ಸದೃಶ ಮೌನ ಬಹಳ ದಿನ ನನ್ನನ್ನು ಕಾಡಿತ್ತು. ಪ್ರತಿ ಬಾರಿಯೂ ಭಾರತ ತಂಡ ಹೊಸದೊಂದು ಟೂರ್ನಿಯ ಫೈನಲ್ ತಲುಪಿದಾಗ, ಆ ಹಳೆಯ ಗಾಯ ಹಸಿಯಾಗುತ್ತಿತ್ತು. ಮತ್ತೆ ಹಾಗೆಯೇ ಆಗುತ್ತದೆಯೇ? ಎಂಬ ಆತಂಕ ಸಣ್ಣದಾಗಿ ಇಣುಕುತ್ತಲೇ ಇತ್ತು. ಅಂದು ನಮ್ಮ ತಂಡ ಅನುಭವಿಸಿದ ಆ ಸೋಲು, ಅರ್ಧಕ್ಕೆ ಮುರಿದುಬಿದ್ದ ಕೋಟಿ ಕೋಟಿ ಜನರ ಕನಸಾಗಿತ್ತು. ಆ ನೋವನ್ನು ನಾನೂ ಇಷ್ಟು ದಿನ ಉಸಿರಿನಲ್ಲಿ ಹೊತ್ತು ತಿರುಗಿದ್ದೆ.

ಹೀಗಾಗಿ, ಮತ್ತೆ ಈ ಸಲದ ಟಿ20 ಫೈನಲ್‌ಗೆ ಅದೇ ಅಹಮದಾಬಾದ್ ಗೆ ಹೊರಟು ನಿಂತಾಗ ಸಣ್ಣ ಅಳುಕು ಇದ್ದದ್ದಂತೂ ಹೌದೇ. 2023 ಮತ್ತೆ ಮರುಕಳಿಸದಿರಲಿ ಎಂಬ ನನ್ನ ಪ್ರಾರ್ಥನೆಯೇ ಪ್ರತಿ ಭಾರತೀಯ ಕ್ರಿಕೆಟ್ ಅಭಿಮಾನಿಯದ್ದು ಕೂಡ ಆಗಿರುತ್ತದೆ ಎಂಬುದರಲ್ಲಿ ಅನುಮಾನವೇನೂ ಇರಲಿಲ್ಲ.. ಆದರೂ...

ಮಂಜುನಾಥನ ಕನಸು: ಗೇಟ್ ಎರಡರ ಬಳಿ ಕನ್ನಡ ಮಾತನಾಡುತ್ತ ನಿಂತಿದ್ದ ಮಂಜುನಾಥ ಮತ್ತು ಅವನ ಸ್ನೇಹಿತ ಕೊಪ್ಪಳದವರು. ಅವರಿಗೆ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡುವುದು ಗೊತ್ತಿರಲಿಲ್ಲ. ಹಳ್ಳಿಯಲ್ಲಿ ಗೊಬ್ಬರ ಮಾರಿದ ಹಣವನ್ನೆಲ್ಲಾ ಕೂಡಿಟ್ಟು, ಯಾರೋ ಪರಿಚಯಸ್ಥರ ಮೂಲಕ ಹರಸಾಹಸಪಟ್ಟು ಟಿಕೆಟ್ ಪಡೆದು ಇಲ್ಲಿಗೆ ಬಂದಿದ್ದರು. ಯಾಕೆ ಅಷ್ಟೆಲ್ಲ ಖರ್ಚು ಮಾಡಿಕೊಂಡು ಬಂದಿದ್ದೀರಿ ಎಂದರೆ ಅಯ್ಯೋ ವರ್ಷಪೂರ್ತಿ ದುಡಿಯೋದು ಇದ್ದೇ ಇದೆ ಎಂದ ಮಂಜುನಾಥ. ಈ ಸಲ ಮಾತ್ರ ಗೆಲ್ಲಲೇಬೇಕು. ನನ್ ಸ್ನೇಹಿತರು ಈ ಸ್ಟೇಡಿಯಂನಲ್ಲಿ ಫೈನಲ್ ಆದರೆ ಭಾರತ ಗೆಲ್ಲೋದಿಲ್ಲ ಎಂದು ಹೆದರಿಸಿ ಬೇರೆ ಕಳಿಸಿದ್ದಾರೆ ಎಂದು ಭಯದಲ್ಲೇ ಹೇಳಿದ್ದ. ಕೊನೆಗೆ ಅವನೂ ಖುಷಿಯಿಂದಲೇ ಮನೆಗೆ ಹೊರಟಿರುತ್ತಾನೆ.

ಪಂಜಾಬಿನ ಯೋಧನೊಬ್ಬನ ತಂದೆ ತಾಯಿ ಸ್ಟೇಡಿಯಂನಲ್ಲಿ ನಮ್ಮ ಹತ್ತಿರದಲ್ಲೇ ಕುಳಿತಿದ್ದರು. ಅವರ ಮಗ ಕ್ರಿಕೆಟ್ ಅಭಿಮಾನಿಯಂತೆ. ಆತನಿಗೆ ಬರೋದಕ್ಕೆ ಆಗೋದಿಲ್ಲ ಅಂತ ಇವರುಗಳು ಬಂದಿದ್ದರು. ಹೊರಗೆ ಕನ್ನಡಿಗೆ ಕೆ.ಎಲ್ ರಾಹುಲ್‌ನ ಜರ್ಸಿ ತೊಟ್ಟು ಟಿ ಶರ್ಟ್ ಮಾರುತ್ತಿದ್ದ ಬಿಹಾರದ ಅಲೋಕ್ ಪ್ರಕಾರ ರಾಹುಲ್‌ಗೆ ಅನ್ಯಾಯವಾಗಿದೆ..ಅವನೂ ಈ ಟೀಂಲಿ ಇರ್ಬೇಕಿತ್ತು ಅಂತ ತನ್ನ ವ್ಯಾಪಾರದ ಮಧ್ಯೆಯೇ ವಾದ ಮಂಡನೆ ಮಾಡಿದ.

ಹೈದರಾಬಾದ್‌ನಿಂದ ಬಂದಿದ್ದ ರವಿ ಎಂಬ ಐಟಿ ಉದ್ಯೋಗಿ, ಹದಿನೈದು ವರ್ಷ ಹಳೆಯದಾದ, ಬಣ್ಣ ಗೆಟ್ಟಿದ್ದ ಒಂದು ಟೀ-ಶರ್ಟ್ ಧರಿಸಿ ಬಂದಿದ್ದ. ಇದು ನನ್ನ ಲಕ್ಕಿ ಶರ್ಟ್.. 2007ರಲ್ಲಿ ಧೋನಿ ಕಪ್ ಎತ್ತಿದಾಗಲೂ ನಾನು ಇದನ್ನೇ ಹಾಕಿದ್ದೆ. 2023ರಲ್ಲಿ ಮರೆತು ಬೇರೆ ಶರ್ಟ್ ಹಾಕಿದ್ದಕ್ಕೆ ನಾವು ಸೋತಿದ್ವಿ ಅಂತ ನನ್ನ ಹೆಂಡತಿ ಬೈಯುತ್ತಿದ್ದಳು, ಎಂದು ಗಂಭೀರವಾಗಿ ಹೇಳುತ್ತಿದ್ದ. ಭಾರತದ ಜರ್ಸಿ ತೊಟ್ಟು ನೀಲ ಸಾಗರ ನಿರ್ಮಾಣ ಮಾಡಿದ್ದ ಎಲ್ಲರ ಒಳಗೂ ಇಂತಹ ಅದೆಷ್ಟೋ ಕಥೆಗಳು ನಿನ್ನೆ ಅಲ್ಲಿ ಓಡಾಡಿಕೊಂಡಿದ್ದವು.

ಕ್ರೀಡೆಯಲ್ಲಿ ಸೋಲು-ಗೆಲುವು ಸಹಜವಿರಬಹುದು, ಆದರೆ ನೂರಾರು ಕೋಟಿ ಜನರ ಪ್ರಾರ್ಥನೆ ಒಂದಾಗಿ ಗೆದ್ದಾಗ ಸಿಗುವ ಆ ಪರಮ ಸುಖಕ್ಕೆ ಸಾಟಿಯಿಲ್ಲ! ನಂಬಿಕೆ ಮತ್ತು ತಾಳ್ಮೆಯಿದ್ದರೆ ಕಾಲ ಎಲ್ಲ ಗಾಯಗಳನ್ನೂ ಮಾಗಿಸುತ್ತದೆ ಮತ್ತು ಹೊಸ ಇತಿಹಾಸವನ್ನು ಬರೆಯುತ್ತದೆ ಎಂಬುದಕ್ಕೆ ಭಾನುವಾರದ ಆ ರಾತ್ರಿಯೇ ಸಾಕ್ಷಿ.

ಶಾಸಕರಿಗಿರಲಿ ಆದಾಯ, ಖರ್ಚಿನ ಅರಿವು: ಸಿಎಂ



ಪುಟ ೧➡ **ಸಾಲದ ಅವಶ್ಯಕತೆ ಬಗ್ಗೆ ಶಾಸಕರು ತಿಳಿದುಕೊಳ್ಳಲಿ:** ಪ್ರತಿ ವರ್ಷ ಹೊಸ ಆರ್ಥಿಕ ವರ್ಷ ಪ್ರಾರಂಭವಾಗುವ ಮುಂಚೆ ಮಂಡನೆ ಮಾಡುವ ಬಜೆಟ್‌ನಲ್ಲಿ ಮುಂದಿನ ವರ್ಷಕ್ಕೆ ನಮ್ಮ ಆದ್ಯತೆಗಳೇನು, ಜನರಿಗೆ ಎಲ್ಲೆಲ್ಲಿ ಖರ್ಚು ಮಾಡಬೇಕು, ಹೊಸದಾಗಿ ತೆರಿಗೆ ಹಾಕಬೇಕಾ ಅಥವಾ ಸರ್ಕಾರಕ್ಕೆ ಸಾಲ ಮಾಡೋ ಅವಶ್ಯಕತೆ ಇದೆಯಾ, ಇದ್ದರೆ ಏಕೆ ಇದೆ. ಸಾಲದಿಂದ ಜನರಿಗೆ ಅನುಕೂಲ ಆಗುತ್ತಿದೆಯಾ ಇಲ್ಲವಾ ಮುಂತಾದ ವಿಷಯಗಳ ಬಗ್ಗೆಯೂ ಶಾಸಕರು ವಿಧಾನಸಭೆಯಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಸಂಪನ್ಮೂಲಗಳು ಹೇಗೆ ಸಂಗ್ರಹ ಆಗುತ್ತಿವೆ. ಅದನ್ನು ಖರ್ಚು ಮಾಡಲು ಹೇಗೆ ಯೋಜನೆ ಮಾಡಲಾಗುತ್ತದೆ, ಅದೆಲ್ಲಕ್ಕಿಂತ ಮುಖ್ಯವಾಗಿ, ನಾವು ಖರ್ಚು ಮಾಡಿದ ಹಣದಿಂದ ಜನರಿಗೆ ನಿಜವಾಗಲೂ ಅನುಕೂಲ ಆಗುತ್ತಿದೆಯಾ ಎಂಬುದನ್ನು ಶಾಸಕರು ಅರ್ಥ ಮಾಡಿಕೊಳ್ಳಬೇಕು, ಸಾರ್ವಜನಿಕ ನಿಧಿಯನ್ನು ಸರ್ಕಾರ ಹೇಗೆ ಬಳಸುತ್ತದೆ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಹೇಳಿದರು.

ಈ ರೀತಿಯ ತರಬೇತಿಗಳು ಬಹಳ ಉಪಯುಕ್ತವಾಗಲಿವೆ. ಅದಕ್ಕಾಗಿ ಮತ್ತೊಮ್ಮೆ ಸಭಾಧ್ಯಕ್ಷರಿಗೆ ಧನ್ಯವಾದ ತಿಳಿಸುತ್ತೇನೆ. ಈ ಸಭೆಗೆ ವಿರೋಧ ಪಕ್ಷದ ನಾಯಕರಾದಿಯಾಗಿ ಅನೇಕರು ಹಾಜರಾಗಿದ್ದೀರಿ ಎಂದ ಸಿಎಂ, ಎಂಎಲ್‌ಎ ಮತ್ತು ಎಂಎಲ್ಸಿಗಳಿಗೆ ಧನ್ಯವಾದ ಹೇಳಿದರು. ಸಭೆಯಲ್ಲಿ ಸಭಾಧ್ಯಕ್ಷ ಯು.ಟಿ ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಸೇರಿದಂತೆ ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು.

ಎಲ್ಪಿಜಿ ಬುಕ್ಕಿಂಗ್ ಅವಧಿ 25 ದಿನಗಳಿಗೆ ವಿಸ್ತರಣೆ

ಪುಟ ೧➡ ಇನ್ನೊಂದೆಡೆ, ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯ ಆತಂಕ ತಕ್ಷಣದ ಮಟ್ಟಿಗೆ ಇಲ್ಲ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 130 ಡಾಲರ್ ಮೀರಿದರೆ ಮಾತ್ರ ಬೆಲೆ ಏರಿಕೆ ಸಾಧ್ಯತೆ ಇದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಪ್ರಸ್ತುತ ಭಾರತದಲ್ಲಿ ಸಾಕಷ್ಟು ಇಂಧನ ಸಂಗ್ರಹವಿದ್ದು, ದೇಶದ ಯಾವುದೇ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಅಥವಾ ಡೀಸೆಲ್ ಕೊರತೆ ಉಂಟಾಗುವ ಸಾಧ್ಯತೆ ಇಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಚ್ಚಾ ತೈಲವನ್ನು ಹಾರ್ಮುಜ್ ಕಣಿವೆಯ ಮಾರ್ಗವಲ್ಲದೆ ಇತರ ಮಾರ್ಗಗಳಿಂದ ಪಡೆಯುವ ಕ್ರಮವನ್ನೂ ವೇಗಗೊಳಿಸಲಾಗಿದೆ.

ಕ್ರೀಡಾಂಗಣ ನಿರ್ಮಾಣ ಮಾಡಲ್ಲ: ಸಚಿವ ವೆಂಕಟೇಶ್

ವಿಧಾನಸಭೆ: ಟಿ.ನರಸೀಪುರದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ಕೆಎಸ್ಐಸಿ) ಘಟಕ ಮುಚ್ಚುವುದಿಲ್ಲ, ಅಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಸ್ತಾಪ ಕೈ ಬಿಡಲಾಗಿದೆ ಎಂದು ರೇಷ್ಮೆ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಶ್ರೀವತ್ಸ ಟಿ.ಎಸ್. ಅವರು ರೇಷ್ಮೆ ಸೀರೆಗಳ ಮಾರಾಟ, ಉತ್ಪಾದನೆ ಮತ್ತು ಮಾರಾಟ ಪ್ರಕ್ರಿಯೆ ಸರಳಗೊಳಿಸುವ ಸಂಬಂಧ ವಿಷಯ ಪ್ರಸ್ತಾಪಿಸಿದರು.



ಇದಕ್ಕೆ ಉತ್ತರಿಸಿದ ಸಚಿವರು, ಮೈಸೂರು ರೇಷ್ಮೆ ಸೀರೆಗಳಿಗೆ ಗಣನೀಯ ಬೇಡಿಕೆಯಿದೆ. ದಿನಕ್ಕೆ 300 – 400 ಸೀರೆಗಳು ಉತ್ಪಾದನೆಯಾಗುತ್ತಿವೆ. ಎಚ್ಚರಿಕೆಯಿಂದ ಗುಣಮಟ್ಟದ ಸೀರೆಗಳನ್ನು ತಯಾರು ಮಾಡಲಾಗುತ್ತದೆ. ಸೀರೆಗಳ ಉತ್ಪಾದನೆ ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತಿದೆ. ರೇಷ್ಮೆ ನೇಯ್ಗೆ ಕಾರ್ಖಾನೆಯ ಸಂಯೋಜಿತ ರೇಷ್ಮೆ ನೇಯ್ಗೆ ಘಟಕದಲ್ಲಿ ಇ-ಜಕಾರ್ಡ್ ಮಗ್ಗಗಳನ್ನು ಸ್ಥಾಪಿಸಲಾಗಿದೆ. ಈ ಯಂತ್ರಗಳಿಂದ ಹೆಚ್ಚುವರಿ ಪ್ರತಿ ತಿಂಗಳು 7500 ಮೀಟರ್‌ನಷ್ಟು ಉತ್ಪಾದಿಸಲಾಗುತ್ತಿದೆ ಎಂದರು.

ಸೆಕೆಂಡ್ಸ್ ಸೇಲ್‌ಗೆ ಸರತಿ ಸಾಲು: ಸೀರೆಯಲ್ಲಿ ಸಣ್ಣ ಹಾನಿ ಇದ್ದರೂ ಮಹಿಳೆಯರು ಖರೀದಿ ಮಾಡುವುದಿಲ್ಲ, ಆದ್ದರಿಂದ ಮಗ್ಗದ ಮೂಲಕ ನಿಧಾನವಾಗಿ ಗುಣಮಟ್ಟದ ಸೀರೆ ನೇಯಲಾಗುತ್ತದೆ. ಗುಣಮಟ್ಟ ಇರುವುದರಿಂದ ಬೇಡಿಕೆ ಜಾಸ್ತಿ ಇರುತ್ತದೆ. ಬೇರೆ ರಾಜ್ಯಗಳಿಂದಲೂ ಬೇಡಿಕೆ ಇದೆ. ಹೊರ ರಾಜ್ಯ, ಹೊರ ದೇಶಗಳಿಂದಲೂ ಬೇಡಿಕೆ ಇದ್ದು, ಆನ್‌ಲೈನ್ ಮೂಲಕ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ. ಜನ ಸೀರೆ ಖರೀದಿಗೆ ಬೆಳಗ್ಗೆ 3 ಗಂಟೆಯಿಂದ ಸರತಿ ಸಾಲಿನಲ್ಲಿ ನಿಲ್ಲುತ್ತಾರೆಂದು ಶ್ರೀವತ್ಸ ಹೇಳುತ್ತಾರೆ. ಆದರೆ ಅದು ಸೆಕೆಂಡ್ಸ್ ಸೇಲ್ ಎಂದು ಮಾರಾಟ ಮಾಡುತ್ತಾರೆ, ಅದರಲ್ಲಿ ರಿಯಾಯಿತಿ ಇರುತ್ತದೆ. ಆ ಕೆಲವೇ ದಿನ ಮಾತ್ರ ಜನ ಸರತಿ ಸಾಲಿನಲ್ಲಿ ನಿಲ್ಲುತ್ತಾರೆ ಎಂದು ವಿವರಿಸಿದರು.

> ಮೈಸೂರು ರೇಷ್ಮೆ ಸೀರೆ ನಮ್ಮ ಹೆಮ್ಮೆ. ಅದನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ವಿದೇಶದಲ್ಲಿರುವವರೂ ಅದನ್ನು ಮೆಚ್ಚಿ ಖರೀದಿಸುತ್ತಿದ್ದಾರೆ. ಒಂದು ಸೀರೆಗಾಗಿ ಎರಡು ತಿಂಗಳು ಕಾಯಬೇಕಾದ ಅನಿವಾರ್ಯತೆ ಇದೆ. ಅಗತ್ಯವಿದ್ದರೆ ಈ ಸೀರೆಯ ಬೆಲೆ ಜಾಸ್ತಿ ಮಾಡಿ, ಆದರೆ ಮೈಸೂರು ರೇಷ್ಮೆ ಕಾರ್ಖಾನೆ ಮುಚ್ಚಬೇಡಿ.
> ■ **ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ**

ಆನ್‌ಲೈನ್ ಮಾರಾಟ ರದ್ದು: ಬೇಡಿಕೆಯ ಹಿನ್ನೆಲೆಯಲ್ಲಿ ಗುಣಮಟ್ಟದ ಮೈಸೂರು ರೇಷ್ಮೆ ಸೀರೆಗಳ ಉತ್ಪಾದನೆ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಸ್ಥಳೀಯವಾಗಿರುವ ಬೇಡಿಕೆಯನ್ನು ಮೊದಲು ನಿವಾರಿಸುತ್ತೇವೆ. ಆನ್‌ಲೈನ್‌ನಲ್ಲಿ ರೇಷ್ಮೆ ಸೀರೆಗಳ ಮಾರಾಟವನ್ನು ನಿಲ್ಲಿಸಿ ಸ್ಥಳೀಯವಾಗಿ ಮಾರಾಟ ಮಾಡುವ ಚಿಂತನೆ ಇದೆ ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.

ನಿಗಮದಲ್ಲಿ ಕಳೆದ ಮೂರು ವರ್ಷಗಳಿಂದ ಒಟ್ಟು 3,10,667 ಸೀರೆಗಳು ತಯಾರಾಗಿವೆ. ಈ ಪೈಕಿ 3,09,659 ಸೀರೆಗಳು ಮಾರಾಟವಾಗಿವೆ. ನಿಗಮ 2022–23ರಲ್ಲಿ 46.75 ಕೋಟಿ ರೂ., 2023–24 ಸಾಲಿನಲ್ಲಿ 73.40 ಕೋಟಿ ರೂ. ಹಾಗೂ 2024–25ರಲ್ಲಿ 101.15 ಕೋಟಿ ರೂ. ಲಾಭ ಗಳಿಸಿದೆ ಎಂದು ಮಾಹಿತಿ ನೀಡಿದರು.

400 ಪಶುವೈದ್ಯಾಧಿಕಾರಿಗಳ ನೇಮಕ

ವಿಧಾನಸಭೆ: ರಾಜ್ಯದಲ್ಲಿ 400 ಪಶುವೈದ್ಯಾಧಿಕಾರಿಗಳ ಖಾಯಂ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದೆ ಎಂದು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಸಿಮೆಂಟ್ ಮಂಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆಚ್ಚುವರಿಯಾಗಿ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿದೆ ಎಂದರು. ಪಶುವೈದ್ಯಕೀಯ ಪರೀಕ್ಷಕರ 300 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ ಎಂದರು.

ಕಾರ್ಖಾನೆ ಮುಚ್ಚಲು ಹುನ್ನಾರ

ಸಂಸ್ಥೆಯು ಉತ್ತಮ ಲಾಭ ಮಾಡುತ್ತಿದೆ. ಆದರೆ, ಮೈಸೂರು ರೇಷ್ಮೆ ನೂಲು ತಯಾರಿಕಾ ಕಾರ್ಖಾನೆಯಲ್ಲಿ ದುಡಿಯುವವರಿಗೆ ತಿಂಗಳಿಗೆ 3000 ರೂ. ವೇತನ ನೀಡಲಾಗುತ್ತಿದೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1912ರಲ್ಲಿ ಸ್ಥಾಪಿಸಿದ ಟಿ. ನರಸೀಪುರದ ಘಟಕ ಮುಚ್ಚಲು ಸರ್ಕಾರ ಹೊರಟಿದೆ. ಕಾರ್ಖಾನೆ ಜಾಗ ಮಾರಾಟಕ್ಕೆ ಮುಂದಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಗಂಭೀರವಾಗಿ ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೆ.ವೆಂಕಟೇಶ್, ಅಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಇದೆ ಎಂದು ಯಾರೋ ಮುಖ್ಯಮಂತ್ರಿಯವರಿಗೆ ತಪ್ಪು ಮಾಹಿತಿ ನೀಡಿದ್ದರು. ಬಳಿಕ ಅವರಿಗೆ ಅದು ಗೊತ್ತಾಗಿದೆ. ಆ ಜಾಗ ಕೊಡುವ ಚಿಂತನೆಯನ್ನು ಕೈ ಬಿಡಲು ಸರ್ಕಾರ ತೀರ್ಮಾನ ಮಾಡಿದೆ. ಆ ಜಾಗ ಈಗ ಮಾರಾಟಕ್ಕಿಲ್ಲ. ಟಿ.ನರಸೀಪುರದ ಕೆಎಸ್ಐಸಿ ಘಟಕ ಮುಂದುವರೆಯಲಿದೆ, ಮುಚ್ಚುವುದಿಲ್ಲ. ಅಲ್ಲಿ ಕ್ರೀಡಾಂಗಣ ನಿರ್ಮಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬುಡಕಟ್ಟು ಸಮುದಾಯಗಳಿಗೆ ಪರಿಹಾರ: ಸಚಿವ ಈಶ್ವರ ಖಂಡ್ರೆ

ವಿಧಾನ ಪರಿಷತ್: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಮತ್ತು ಇತರೆ ಸಮುದಾಯದ ಕುಟುಂಬಗಳನ್ನು ಅವರ ಸ್ವಂತ ಇಚ್ಛೆಯ ಮೇರೆಗೆ (ಸ್ವಯಂಪ್ರೇರಿತವಾಗಿ) ಸ್ಥಳಾಂತರಿಸಿ, ಅವರಿಗೆ ಸೂಕ್ತ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಶಾಂತರಾಮ್ ಬುಡ್ನಾ ಸಿದ್ದಿ ಅವರು ನಿಯಮ 72ರ ಮೇರೆಗೆ ಮಂಡಿಸಿದ ಸೂಚನೆಗೆ ಉತ್ತರಿಸಿರುವ ಸಚಿವರು, ಈ ಪುನರ್ವಸತಿ ಯೋಜನೆಯನ್ನು ಸರ್ಕಾರದ ಆದೇಶದ ಅನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಒಟ್ಟು 1,382 ಕುಟುಂಬಗಳು ವಾಸಿಸುತ್ತಿವೆ. ಈ ಪೈಕಿ ಪುನರ್ವಸತಿ ಸೌಲಭ್ಯಕ್ಕಾಗಿ ಸ್ವಯಂ-ಪ್ರೇರಿತವಾಗಿ 670 ಕುಟುಂಬಗಳು ಅರ್ಜಿ ಸಲ್ಲಿಸಿವೆ. ಅರ್ಜಿ ಸಲ್ಲಿಸಿದವರ ಪೈಕಿ 356 ಕುಟುಂಬಗಳಿಗೆ ಪುನರ್ವಸತಿ ಪ್ರಕ್ರಿಯೆ ಪೂರ್ಣಗೊಳಿಸಿ, ಒಟ್ಟು 142 ಕೋಟಿ ರೂ. ಪರಿಹಾರ ಧನವನ್ನು ವಿತರಿಸಲಾಗಿದೆ. ಇನ್ನುಳಿದ 314 ಕುಟುಂಬಗಳಿಗೆ ಪರಿಹಾರ ವಿತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ತಿಳಿಸಿದರು.

ಬಾಕಿ ಇರುವ 314 ಕುಟುಂಬಗಳ ಪೈಕಿ 76 ಕುಟುಂಬಗಳ ಸ್ಥಿರಾಸ್ತಿಯ ಮೌಲ್ಯಮಾಪನವನ್ನು ಈಗಾಗಲೇ ವಿವಿಧ ಇಲಾಖೆಗಳ ವತಿಯಿಂದ ಪೂರ್ಣಗೊಳಿಸಲಾಗಿದೆ. ಅರ್ಜಿದಾರರ ಮನೆ, ಜಮೀನು ಹಾಗೂ ಇತರೆ ತೋಟಗಾರಿಕಾ ಬೆಳೆ ಮತ್ತು ಮರಗಳ ಮೌಲ್ಯಮಾಪನವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ದರಗಳ ಪಟ್ಟಿಯಂತೆ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಸಮಿತಿಯು ಈ ಮೌಲ್ಯಮಾಪನಕ್ಕೆ ಅನುಮೋದನೆ ನೀಡಿದ ನಂತರ, ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಪರಿಹಾರ ಮೊತ್ತವನ್ನು ಪಾವತಿಸಲಾಗುವುದು ಎಂದು ಸಚಿವರು ವಿವರಿಸಿದರು.

ಕಿರುಸುದ್ದಿ

ಪ್ರಸ್ತಾವನೆ ನೀಡಲು ಅಧಿಕಾರಿಗಳಿಗೆ ಗಡುವು

ವಿಧಾನಸಭೆ: ನೂತನ ಕಂದಾಯ ಗ್ರಾಮ – ಉಪಗ್ರಾಮ ರಚನೆಗೆ ಪ್ರಸ್ತಾವನೆ ನೀಡಲು ಅಧಿಕಾರಿಗಳಿಗೆ ಮಾ. 16ರ ವರೆಗೆ ಗಡುವು ನಿಗದಿಪಡಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಸೋಮವಾರ ಪ್ರಶ್ನೋತ್ತರ ಕಲಾಪದಲ್ಲಿ ವೇಳೆ ಜೆಡಿಎಸ್ ಶಾಸಕ ಎಚ್.ಟಿ. ಮಂಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲವು ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ದಾಖಲೆ ರಹಿತ ವಸತಿ ಪ್ರದೇಶಗಳನ್ನು ಗುರುತಿಸಿ ಲಕ್ಷಾಂತರ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸಹಕರಿಸಿದ್ದಾರೆ. ಆದರೆ, ಕೆಲ ಅಧಿಕಾರಿಗಳ ಅಸಡ್ಡೆಯಿಂದ ಅರ್ಹತೆ ಇದ್ದರೂ ಹಲವು ವಸತಿ ಪ್ರದೇಶಗಳಿಗೆ ದಾಖಲೆ ನೀಡಲು ಸಾಧ್ಯವಾಗಿಲ್ಲ. ಹೀಗಾಗಿ ಮಾ.16ರೊಳಗೆ ಎಲ್ಲಾ ಅರ್ಹ ಕಂದಾಯ ಗ್ರಾಮ-ಉಪಗ್ರಾಮ ರಚನೆಗೆ ಪ್ರಸ್ತಾವನೆ ನೀಡುವಂತೆ ಅಧಿಕಾರಿಗಳಿಗೆ ಗಡುವು ನೀಡಲಾಗಿದೆ ಎಂದರು. ಕೃಷ್ಣರಾಜಪೇಟೆ ತಾಲೂಕಿನಲ್ಲಿ 7 ದಾಖಲೆರಹಿತ ವಸತಿ ಪ್ರದೇಶಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಜನಗಣತಿ ಪ್ರಗತಿಯಲ್ಲಿದೆ. ಜನಗಣತಿ ಸಂದರ್ಭದಲ್ಲಿ ಕಂದಾಯ ಗ್ರಾಮ ಘೋಷಿಸುವಂತಿಲ್ಲ. ಹೀಗಾಗಿ, ಜನಗಣತಿ ಮುಗಿದ ಕೂಡಲೇ ಆ ಭಾಗದ ಅರ್ಹ ಫಲಾನುಭವಿಗಳಿಗೆ ದಾಖಲೆ ಮಾಡಿಕೊಡುತ್ತೇವೆ. ಪ್ರಸ್ತುತ ಎಲ್ಲವೂ ಆನ್ ಲೈನ್ ಡಿಜಿಟಲೀಕೃತವಾಗಿದೆ. ನಾಳೆ ಯಾರು ಇರಲಿ ಇಲ್ಲದಿರಲಿ ದಾಖಲೆ ಆಗಿಯೇ ಆಗುತ್ತದೆ ಎಂದು ಅವರು ಸದನಕ್ಕೆ ಮಾಹಿತಿ ನೀಡಿದರು. ಸರ್ಕಾರ ಕಳೆದ ಎರಡುವರೆ ವರ್ಷದಲ್ಲಿ 2.17 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಿದೆ. ಇನ್ನೂ 1.50 ರಿಂದ 2 ಲಕ್ಷ ಮನೆಗಳಿಗೆ ಹಕ್ಕುಪತ್ರ ನೀಡಲು ಪ್ರಸ್ತಾವನೆ ಬಂದಿವೆ. ಈ ಜವಾಬ್ದಾರಿಯನ್ನು ಸಂಪೂರ್ಣ ಅಧಿಕಾರಿಗಳಿಗೆ ವಹಿಸದೆ, ಜನ ಪ್ರತಿನಿಧಿಗಳೂ ಈ ಬಗ್ಗೆ ಆಸಕ್ತಿ ತೆಗೆದುಕೊಂಡರೆ ಮತ್ತಷ್ಟು ಜನರಿಗೆ ಅನುಕೂಲವಾಗಲಿದೆ ಎಂದೂ ಅವರು ಅಭಿಪ್ರಾಯಪಟ್ಟರು.

ಯಾವುದೇ ಪರಿವರ್ತಕ ಖರೀದಿಸಿಲ್ಲ: ಜಾರ್ಜ್

ವಿಧಾನ ಪರಿಷತ್: ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024–25ನೇ ಸಾಲಿನಲ್ಲಿ ಕೇರಳ ಎಲೆಕ್ಟ್ರಿಕಲ್ ಆ್ಯಂಡ್ ಅಲೈಡ್ ಇಂಜಿನಿಯರಿಂಗ್ ಕೋ-ಲಿಮಿಟೆಡ್ (ಕೆಇಎಲ್)ನಿಂದ ಯಾವುದೇ ಪರಿವರ್ತಕ (ಟ್ರಾನ್ಸ್‌ಫಾರ್ಮರ್)ಗಳನ್ನು ಖರೀದಿಸಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದ್ದಾರೆ.



ಪ್ರಶ್ನೋತ್ತರ ಕಲಾಪದ ವೇಳೆಯಲ್ಲಿ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024–25ನೇ ಸಾಲಿನಲ್ಲಿ ಅವಶ್ಯವಿರುವ ಪರಿವರ್ತಕಗಳನ್ನು ಟೆಂಡರ್ ಮುಖಾಂತರ ಹಾಗೂ 4ಜಿ ವಿನಾಯಿತಿ ಪಡೆಯಲಾದ ಕವಿಕಾ (ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ) ಸಂಸ್ಥೆಯಿಂದ ಖರೀದಿಸಲಾಗಿದೆ ಎಂದರು. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇಂಧನ ಇಲಾಖೆಗೆ 4ಜಿ ವಿನಾಯಿತಿಗೆ ಅರ್ಜಿ ಸಲ್ಲಿಸುತ್ತಾರೆ. 4ಜಿ ವಿನಾಯಿತಿ ದೊರೆತ ನಂತರ ಪರಿವರ್ತಕಗಳನ್ನು ಸರಬರಾಜು ಮಾಡಲು ಆದೇಶ ನೀಡುವಂತೆ ಕೋರಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪತ್ರಗಳನ್ನು ಸಲ್ಲಿಸುತ್ತಾರೆ. ಪರಿವರ್ತಕಗಳನ್ನು ಸರಬರಾಜು ಮಾಡಲು ಖರೀದಿ ಆದೇಶ ನೀಡುತ್ತಾರೆ ಎಂದು ಸಚಿವರು ಹೇಳಿದರು.

10ನೇ ವಾರಕ್ಕೆ ಎಎಂಸಿ ನೋಂದಣಿ ಕಡ್ಡಾಯ: ದಿನೇಶ್ ಗುಂಡೂರಾವ್

ಭ್ರೂಣಹತ್ಯೆ ತಡೆಗೆ ಕ್ರಮ

ವಿಧಾನ ಪರಿಷತ್: ಗರ್ಭಧರಿಸಿ 12 ವಾರ ಕಳೆದ ನಂತರ ಲಿಂಗ ಪತ್ತೆ ಮಾಡುವ ಪ್ರಕ್ರಿಯೆ ಮಾಡಲಾಗುತ್ತದೆ. ಈವರೆಗೂ 12 ವಾರಗಳ ನಂತರ ಎಎಂಸಿ ನೋಂದಣಿ ಮಾಡಲಾಗುತ್ತಿತ್ತು. ಈಗ ಬದಲಾವಣೆ ಮಾಡಿ 10ನೇ ವಾರಕ್ಕೆ ಕಡ್ಡಾಯ ನೋಂದಣಿ ಮಾಡಲಾಗುತ್ತದೆ. ಇದರಿಂದ ಭ್ರೂಣ ಹತ್ಯೆ ತಡೆಯಲು ಸಹಾಯಕವಾಗಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಚುಕ್ಕೆ ಗುರುತಿನ ಪ್ರಶ್ನೆ ಕಲಾಪದಲ್ಲಿ ಹೆಣ್ಣು ಭ್ರೂಣ ಹತ್ಯೆ ತಡೆಯಲು ಕೈಗೊಂಡ ಕ್ರಮಗಳ ಕುರಿತು ಸದಸ್ಯೆ ಉಮಾಶ್ರೀ ಅವರ ಪರವಾಗಿ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇದೊಂದು ಸಾಮಾಜಿಕ ಪಿಡುಗು. ಈಗಾಗಲೇ ಪಿಎನ್‌ಟಿಡಿಟಿ ಕಾಯ್ದೆ ಸೇರಿದಂತೆ ಹಲವಾರು ಕಾನೂನುಗಳಿವೆ. ಬಾಲಿಕಾ ಸಾಫ್ಟ್‌ವೇರ್ ಅಡಿ ಎಲ್ಲ ಸ್ಕ್ಯಾನಿಂಗ್ ಸೆಂಟರ್ ಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ನಡೆಸಲಾಗುತ್ತಿದೆ. ಈವರೆಗೆ 80 ಪ್ರಕರಣಗಳಲ್ಲಿ ದಂಡ ವಿಧಿಸಿ, 70 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಈಗಾಗಲೇ 3 ವೈದ್ಯರು, 5 ನರ್ಸ್‌ಗಳ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ತಿಳಿಸಿದರು.

ಎಲ್ಲ ಸರ್ಕಾರಗಳು ಕೂಡ ಹೆಣ್ಣು ಮಗುವನ್ನು ರಕ್ಷಿಸುವ ಉದ್ದೇಶದಿಂದ ಭಾಗ್ಯಲಕ್ಷ್ಮಿ ಬಾಂಡ್, ಗೃಹಲಕ್ಷ್ಮಿಯಂತಹ ಯೋಜನೆಗಳ ಮೂಲಕ ಹೆಣ್ಣುಮಕ್ಕಳ ಕುರಿತು ಸಕಾರಾತ್ಮಕ ಭಾವನೆ ಮೂಡುವಂತೆ ಪ್ರಯತ್ನ ಮಾಡಿದೆ. ಮಹಿಳೆಯರಿಗೆ ಉಚಿತ ಶಿಕ್ಷಣ, ಎಲ್ಲ ಆದ್ಯತೆ ನೀಡುವ ಮೂಲಕ ಮಹಿಳೆಯರು ಸಾಮಾಜಿಕವಾಗಿ ಸಮಾನರು ಎನ್ನುವುದನ್ನು ಮನವರಿಕೆ ಮಾಡುತ್ತಿದ್ದೇವೆ. ಹೆಚ್ಚೆಚ್ಚು ಪರಿಣಾಮಕಾರಿ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಖಚಿತ ಮಾಹಿತಿ ಆಧರಿಸಿ ಏಳು ಕಡೆ ದಾಳಿ ನಡೆಸಿ ಕಾನೂನು ಪ್ರಕಾರ ಕೇಸ್ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸ್ಕ್ಯಾನಿಂಗ್ ಸೆಂಟರ್‌ಗಳು ಹೆಚ್ಚು ಇರುವುದರಿಂದ ನಗರದಲ್ಲಿ 5 ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಅವರು ನಿಯಮಿತವಾಗಿ ಸ್ಕ್ಯಾನಿಂಗ್ ಸೆಂಟರ್ ತಪಾಸಣೆ ಮಾಡುತ್ತಾರೆ. ಈಗ ಮೊಬೈಲ್ ಅಲ್ಟ್ರಾಸೌಂಡ್ ಮಷಿನ್ ಮತ್ತೊಂದಷ್ಟು ಸವಾಲು ತಂದೊಡ್ಡಿದೆ. ಹೀಗೆ ಸರ್ಕಾರ ಭ್ರೂಣ ಹತ್ಯೆ ತಡೆಯಲು ಜನಜಾಗೃತಿ, ಕಾನೂನಾತ್ಮಕ, ಇಲಾಖೆಯಿಂದ ಸದಾ ಜಾಗೃತವಾಗಿ ಪ್ರಯತ್ನಿಸುತ್ತಿದೆ ಎಂದು ವಿವರಿಸಿದರು.

1 ಲಕ್ಷ ರೂ.ವರೆಗೆ ಏರಿಕೆ

ಭ್ರೂಣ ಲಿಂಗ ಪತ್ತೆ ಕುರಿತು ಮಾಹಿತಿ ನೀಡುವವರಿಗೆ ನೀಡಲಾಗುವ ಬಹುಮಾನದ ಮೊತ್ತವನ್ನು 50 ಸಾವಿರ ರೂ.ಗಳಿಂದ 1 ಲಕ್ಷ ರೂ.ವರೆಗೆ ಏರಿಕೆ ಮಾಡಲಾಗಿದೆ, ಡಿಎಚ್‌ಒಗಳಿಗೆ ಅಧಿಕ ಕಾರ್ಯ ಒತ್ತಡ ಇರುವ ಹಿನ್ನೆಲೆಯಲ್ಲಿ ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿಯೇ ವಿಶೇಷ ಗುಪ್ತ ಕಾರ್ಯಾಚರಣೆ ನಡೆಸಲು, ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಸಾಧಿಸಲು ವಿಶೇಷ ಜಿಲ್ಲಾ ನೋಡೆಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ

ಮಾಜಿ ಸೈನಿಕರಿಗೆ ಶೀಘ್ರ ನಿವೇಶನ ಮಂಜೂರು

ವಿಧಾನಸಭೆ: ಮಾಜಿ ಸೈನಿಕರ ಕೋಟಾದಲ್ಲಿ ನಿವೇಶನ ಕೋರಿ ರಾಜ್ಯದಲ್ಲಿ ಬಾಕಿ ಇರುವ ಅರ್ಜಿಗಳನ್ನು ಪರಿಗಣಿಸಿ ಈ ವರ್ಷಾಂತ್ಯದೊಳಗೆ ಬಡಾವಣೆ ನಿರ್ಮಿಸಿ ನಿವೇಶನ ಮಂಜೂರು ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಬಿ.ಪಿ. ಹರೀಶ್ ಪ್ರಶ್ನೆಗೆ ಉತ್ತರ ನೀಡಿದ ಅವರು, ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 338 ಜನ ಮಾಜಿ ಸೈನಿಕರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಅಲ್ಲದೆ, ರಾಜ್ಯಾದ್ಯಂತ ಎಲ್ಲಾ ಮಾಜಿ ಸೈನಿಕರಿಗೂ ಅರ್ಹತೆ ಆಧಾರದಲ್ಲಿ ನಿವೇಶನ ನೀಡಬೇಕು ಎಂದು ಸರ್ಕಾರವೂ ಘೋಷಿಸಿದೆ ಎಂದರು. ಈ ಯೋಜನೆಯ ಅನುಷ್ಠಾನಕ್ಕೆ ಜಮೀನಿನ ಅಗತ್ಯವಿದೆ. ವಾಸಯೋಗ್ಯ ಸ್ಥಳವನ್ನು ಗುರುತಿಸಿ ಬಡಾವಣೆ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು. ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ 14 ಎಕರೆ ಜಾಗವನ್ನು ಗುರುತಿಸಲಾಗಿದೆ. ಇದರಲ್ಲಿ ಕನಿಷ್ಠ 350 ನಿವೇಶನಗಳನ್ನು ನಿರ್ಮಿಸಬಹುದು ಎಂದು ಸದನಕ್ಕೆ ಮಾಹಿತಿ ನೀಡಿದರು.

ಬೆರಳ ತುದಿಯಲ್ಲಿದೆ ಮಾಹಿತಿ

ಪ್ರಸ್ತುತ ಯಾವ ತಾಲೂಕು, ಯಾವ ಜಿಲ್ಲೆಯಲ್ಲಿ ಎಷ್ಟು ಜನ ಸೈನಿಕರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆಂಬ ದಾಖಲೆ ಬೆರಳ ತುದಿಯಲ್ಲಿದೆ. ಈ ಎಲ್ಲಾ ಅರ್ಜಿಗಳನ್ನೂ ಆನ್‌ಲೈನ್ ಮೂಲಕ ಡಿಜಿಟಲೀಕರಿಸಲಾಗಿದೆ. ಮೊದಲು ಈ ವ್ಯವಸ್ಥೆ ಇರಲಿಲ್ಲ, ನಿಖರ ದಾಖಲೆಗಳೂ ಲಭ್ಯವಿರಲಿಲ್ಲ. ಯಾವ ತಾಲೂಕಿನಲ್ಲಿ ಎಷ್ಟು ಅರ್ಜಿ ಇದೆ ಎಂದು ತಹಶೀಲ್ದಾರ್‌ಗೆ ಪತ್ರ ಬರೆಯಬೇಕಿತ್ತು. ಆದರೆ, ಪ್ರಸ್ತುತ ಎಲ್ಲವನ್ನೂ ಡಿಜಿಟಲೀಕರಿಸಲಾಗಿದೆ. ನಮ್ಮ ಬೆರಳ ತುದಿಯಲ್ಲಿ ಎಲ್ಲಾ ಮಾಹಿತಿ ಲಭ್ಯವಿದ್ದು, ವರ್ಷಾಂತ್ಯದೊಳಗೆ ಮಾಜಿ ಸೈನಿಕರಿಗೆ ನಿವೇಶನ ನೀಡಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಅಗಲಿದ ಗಣ್ಯರಿಗೆ ಸಂತಾಪ

ವಿಧಾನ ಪರಿಷತ್: ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ಬಸ್ರೂರು ಅಪ್ಪಣ್ಣ ಹೆಗಡೆ, ವಿಧಾನ ಪರಿಷತ್ ಮಾಜಿ ಸದಸ್ಯ ಪಿ. ರಾಮಯ್ಯ ಅವರಿಗೆ ಮೇಲ್ಮನೆಯಲ್ಲಿ ಸೋಮವಾರ ಸಂತಾಪ ವ್ಯಕ್ತಪಡಿಸಲಾಯಿತು.

ಈ ವೇಳೆ ಮಾತನಾಡಿದ ಸಭಾನಾಯಕ ಎನ್.ಎಸ್. ಬೋಸರಾಜು, ರಾಜಕಾರಣ, ಸಹಕಾರ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ದಿವಂಗತ ಬಸ್ರೂರು ಅಪ್ಪಣ್ಣ ಹೆಗಡೆ ಅವರು ನೀಡುರವ ಕೊಡುಗೆ ಅಪಾರ. 1983 ರಿಂದ 85ರ ಅವಧಿಯಲ್ಲಿ ಶಾಸಕರಾಗಿ, ನಂತರ 1988 ರಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಅವರ ನಿಧನದಿಂದ ರಾಜ್ಯದ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಿದೆ ಎಂದು ವಿಷಾಧಿಸಿದರು. ದಿವಂಗತ ಪಿ. ರಾಮಯ್ಯ ಅವರು ಕೂಡ ಪತ್ರಿಕಾ ರಂಗದಲ್ಲಿ ನೀಡಿದ ಕೊಡುಗೆ ಅನನ್ಯ. ಹಿಂದು ರಾಮಯ್ಯ ಎಂದೇ ಅವರು ಪ್ರಸಿದ್ಧಿ ಪಡೆದಿದ್ದರು ಎಂದು ಸ್ಮರಿಸಿದರು.

ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಪಿ. ರಾಮಯ್ಯ ಅವರನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಅವರು ಒಂದು ರೀತಿ ಪತ್ರಿಕೋದ್ಯಮದ ಮಾಸ್ಟರ್ ಆಗಿದ್ದರು. ಅವರು ವಿಧಾನ ಪರಿಷತ್ ಸದಸ್ಯನಾಗಿ ನಾಮನಿರ್ದೇಶನ ಮಾಡಿದ ಸಮಯದಲ್ಲೂ ತಮಗೆ ಶಿಫಾರಸ್ಸು ಮಾಡಿದ ಪಕ್ಷ ಪರವಾಗಿ ಅವರು ವಕಾಲತ್ತು ವಹಿಸಲಿಲ್ಲ. ಜನರಿಗಾಗಿ ಅವರು ಧ್ವನಿಯನ್ನು ಮೊಳಗಿಸಿದರು ಎಂದು ಸಂತಾಪ ಸೂಚಿಸಿದರು.

ವಿಧಾನ ಪರಿಷತ್ ಸದಸ್ಯ ಶಿವಕುಮಾರ್ ಮಾತನಾಡಿ, ನನ್ನ ವೃತ್ತಿ ಜೀವನ ಆರಂಭದಲ್ಲಿ ನನ್ನ ಪ್ರತಿ ಹಂತದಲ್ಲಿಯೂ ಮಾರ್ಗದರ್ಶನ ನೀಡಿದ್ದ ಪಿ. ರಾಮಯ್ಯ ಅವರು ಶ್ರೇಷ್ಠ ಜೀವಿ. ಕುಡಿಯಲು ನೀರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ನೀರಿನ ಸಮಸ್ಯೆಯನ್ನು ಬಗೆ ಹರಿಸುವಲ್ಲಿ ಬೆಳಕು ಚೆಲ್ಲಿದರು. ಅಂದಿನ ಸಣ್ಣ-ಪುಟ್ಟ ಪತ್ರಿಕೆಗಳಲ್ಲಿ ಪಿಎಫ್, ವಾರದ ರಜೆ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಅವರ ಪಾತ್ರ ಹೆಚ್ಚಿದೆ ಎಂದು ಹೇಳಿದರು.



ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದ ವೇಳೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಡಾ. ಶರಣಪ್ರಕಾಶ್ ಪಾಟೀಲ್ ಜತೆ ಚರ್ಚೆ ಮಾಡುತ್ತಿರುವ ಎಂಎಲ್‌ಸಿ ಕೆ. ಗೋವಿಂದರಾಜ್.

49 ಪ್ರಜಾಸೌಧ ನಿರ್ಮಾಣ

ವಿಧಾನಸಭೆ: ಹಿಂದಿನ ಸರ್ಕಾರ ಐದು ವರ್ಷಗಳಲ್ಲಿ 14 ಪ್ರಜಾಸೌಧಗಳನ್ನು ಮಾತ್ರ ಕೊಟ್ಟಿದ್ದರೆ, ನಮ್ಮ ಸರ್ಕಾರ ಎರಡು ವರ್ಷಗಳಲ್ಲಿ 49 ಪ್ರಜಾಸೌಧಗಳನ್ನು ಮಂಜೂರು ಮಾಡಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್ ಶಾಸಕ ವೆಂಕಟಶಿವಾರೆಡ್ಡಿ ಜಿ.ಕೆ. ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಿಂದೆ ಹೊಸದಾಗಿ ರಚಿಸಿರುವ ತಾಲೂಕುಗಳಲ್ಲಿ ತಾಲೂಕು ಆಡಳಿತ ಕಚೇರಿ (ಪ್ರಜಾಸೌಧ)ಯೂ ಇಲ್ಲವಾಗಿದೆ. ತಾಲೂಕು ರಚಿಸಿದಾಗ ತಾಲೂಕು ಕಚೇರಿ ಇರಬೇಕು. ಈ ಹಿನ್ನೆಲೆಯಲ್ಲಿ ಮೊದಲು ಹೊಸ ತಾಲೂಕುಗಳಲ್ಲಿ ಪ್ರಜಾಸೌಧಕ್ಕೆ ಮಂಜೂರಾತಿ ನೀಡಲಾಗಿದೆ. ಹಿಂದಿನ ಸರ್ಕಾರ ಐದು ವರ್ಷಗಳಲ್ಲಿ ಕೇವಲ 14 ಪ್ರಜಾಸೌಧಗಳನ್ನು ಮಂಜೂರು ಮಾಡಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಎಲ್ಲ 49 ತಾಲೂಕುಗಳಿಗೂ ಪ್ರಜಾಸೌಧಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ 500 ಕೋಟಿ ರೂ. ವೆಚ್ಚ ಬರುತ್ತದೆ ಎಂದು ಸಚಿವರು ಹೇಳಿದರು.

ಕ್ಯಾಪಿಟಲ್ ಕಾಮಗಾರಿಗೆ ಮರು ಟೆಂಡರ್: ಸಚಿವ

ವಿಧಾನಸಭೆ: ಮಂಗಳೂರು ಹಳೇ ಬಂದರಿನಲ್ಲಿ ಕ್ಯಾಪಿಟಲ್ ಡ್ರೆಜ್ಜಿಂಗ್ ಕಾಮಗಾರಿಗೆ ಶೀಘ್ರವೇ ಮರು ಟೆಂಡರ್ ಕರೆಯಲು ಕ್ರಮ ವಹಿಸಲಾಗುತ್ತಿದೆ ಎಂದು ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಾಳ ಎಸ್. ವೈದ್ಯ ತಿಳಿಸಿದ್ದಾರೆ.

ಬಿಜೆಪಿ ಶಾಸಕ ವೇದವ್ಯಾಸ ಕಾಮತ್ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ಸಾಗರಮಾಲ ಯೋಜನೆಯಲ್ಲಿ 29.05 ಕೋಟಿ ರೂ. ವೆಚ್ಚದ ಈ ಕಾಮಗಾರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 50:50 ಅನುಪಾತದಲ್ಲಿ 2018ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿತ್ತು. ಆದರೂ ಕಾಮಗಾರಿಯ 1ರಿಂದ 7ನೇ ಟೆಂಡರ್ ಕರೆಯಲ್ಲಿ ಯಾವುದೇ ಅರ್ಹ ಗುತ್ತಿಗೆದಾರರು ಭಾಗವಹಿಸಿಲ್ಲ. ಎಂಟನೇ ಕರೆಯಲ್ಲಿ ಆಯ್ಕೆಯಾಗಿದ್ದ ಗುತ್ತಿಗೆ ಸಂಸ್ಥೆಯು ಭದ್ರತಾ ಠೇವಣಿ ಪಾವತಿಸಿ ಕರಾರು ಮಾಡಿಕೊಳ್ಳಲು ವಿಫಲರಾಗಿದ್ದರಿಂದ ಟೆಂಡರ್ ರದ್ದಾಗಿದೆ ಎಂದು ವಿವರಿಸಿದ್ದಾರೆ. ಈ ಕಾಮಗಾರಿಯು ವಿಶಿಷ್ಟ ತಾಂತ್ರಿಕ ಸ್ವರೂಪದ್ದಾಗಿದ್ದು, ನುರಿತ ಗುತ್ತಿಗೆದಾರರ ಲಭ್ಯತೆ ಕಡಿಮೆಯಿರುವುದು ಪ್ರಕ್ರಿಯೆ ವಿಳಂಬಕ್ಕೆ ಕಾರಣವಾಗಿದೆ. ಕಾಮಗಾರಿಯ ಅಂದಾಜು ಪಟ್ಟಿಯು ಹಳೆಯ ದರಗಳನ್ನು ಆಧರಿಸಿದ್ದರಿಂದ ಗುತ್ತಿಗೆದಾರರು ಆಸಕ್ತಿ ತೋರಿಸುತ್ತಿಲ್ಲ. ಪರಿಷ್ಕೃತ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಚಾಲ್ತಿ ದರಪಟ್ಟಿಗೆ ಶೇ. 10.60ರಷ್ಟು ಹೆಚ್ಚಿನ ದರ ನಮೂದಿಸಿದ್ದರಿಂದ ಬಿಡ್ ತಿರಸ್ಕರಿಸಲಾಗಿದೆ. ಶೀಘ್ರವೇ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಡ್ರೆಜ್ಜಿಂಗ್ ಕಾಮಗಾರಿ ವಿಳಂಬದಿಂದಾಗಿ ಮೀನುಗಾರರಿಗೆ ಉಂಟಾಗುತ್ತಿರುವ ತೊಂದರೆಯನ್ನು ಪರಿಹರಿಸಲು, ಅಳಿವೆ ಬಾಗಿಲು ಮತ್ತು ನಿರ್ದಿಷ್ಟ ಭಾಗಗಳಲ್ಲಿ ಡ್ರೆಜ್ಜಿಂಗ್ ಕಾಮಗಾರಿಯನ್ನು ಕೈಗೊಳ್ಳಲು 2 ಕೋಟಿ ರೂ.ಗಳ ಅನುದಾನ ನೀಡಿ, ಕಾಮಗಾರಿಯ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಭರವಸೆ

ಸಂಶೋಧನಾ ಆಸ್ಪತ್ರೆಗಳಲ್ಲಿ ಹಾಸಿಗೆ ಹೆಚ್ಚಳ

ವಿಧಾನ ಪರಿಷತ್: ಮೈಸೂರಿನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಶಿವಕುಮಾರ್ ಕೆ. ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳ ಮೂಲಸೌಕರ್ಯ ಬಲವರ್ಧನೆ, ಸಿಬ್ಬಂದಿ ನೇಮಕಾತಿ ಮತ್ತು ಹೊಸ ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಸರ್ಕಾರವು ಹೆಚ್ಚಿನ ಒತ್ತು ನೀಡಿದ್ದು, ಎಂಎಂಸಿಆರ್ ಅಡಿಯಲ್ಲಿ ಒಟ್ಟು 37 ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಎಂಎಂಸಿಆರ್‌ಐ ಕಾಲೇಜು 8, ಕೆ.ಆರ್. ಆಸ್ಪತ್ರೆ 10, ಚೆಲುವಾಂಬ ಆಸ್ಪತ್ರೆ 3, ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ 2 ವಿಭಾಗಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ 12 ವಿಭಾಗಗಳು, ಟ್ರಾಮಾ ಕೇರ್ ಸೆಂಟರ್ 2 ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ ಎಂದರು.



ಕಟ್ಟಡ ನಿರ್ಮಾಣಕ್ಕೆ ₹75 ಕೋಟಿ ಅನುದಾನ

ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವದ ನೆನಪಿಗಾಗಿ ಸರ್ಕಾರವು ವಿಶೇಷ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಕೆ.ಆರ್. ಆಸ್ಪತ್ರೆ ಆವರಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಸುಸಜ್ಜಿತ ಹೊಸ ಹೊರರೋಗಿ ಕಟ್ಟಡ ನಿರ್ಮಾಣಕ್ಕೆ 75 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಈ ಕಾಮಗಾರಿಗೆ 2024 ರ ಜು.12 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿದೆ ಎಂದು ಹೇಳಿದರು.

ಸಂಸ್ಥೆಯಲ್ಲಿ ಒಟ್ಟು 445 ಮಂಜೂರಾದ ಹುದ್ದೆಗಳಿದ್ದು, ಅದರಲ್ಲಿ 328 ಹುದ್ದೆಗಳು ಭರ್ತಿಯಾಗಿವೆ. ಖಾಯಂ ವೈದ್ಯರು – 229, ಗುತ್ತಿಗೆ ಆಧಾರಿತ ವೈದ್ಯರು – 84 ಮತ್ತು ಒಂದು ವರ್ಷದ ಕಡ್ಡಾಯ ಸೇವೆ – 15, ಖಾಲಿ ಹುದ್ದೆಗಳು 117 ಇವೆ ಎಂದು ತಿಳಿಸಿದರು.

ಸಂಸ್ಥೆಯ ವಿವಿಧ ಆಸ್ಪತ್ರೆಗಳಲ್ಲಿ ಒಟ್ಟು 2,150 ಹಾಸಿಗೆಗಳು ಲಭ್ಯವಿದ್ದು, ದೈನಂದಿನ ಒಳರೋಗಿ (ಐಪಿಡಿ) ಮತ್ತು ಹೊರರೋಗಿ (ಒಪಿಡಿ) ಸೇವೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ. ವೈದ್ಯರು ಮತ್ತು ಹಾಸಿಗೆಗಳ ಸಂಖ್ಯೆಯು ಸದ್ಯದ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಸಮರ್ಪಕವಾಗಿದೆ.

ಮೊದಲು ಮಾತನಾಡಿದ ಶಿವಕುಮಾರ್ ಕೆ, ಡಯಾಲಿಸಿಸ್ ಸೌಲಭ್ಯ ಸರಿಯಾಗಿ ಸಿಗುತ್ತಿಲ್ಲ., ಚಲುವಾಂಬ ಆಸ್ಪತ್ರೆಯಲ್ಲಿ ಒಂದು ಹಾಸಿಗೆಯಲ್ಲೇ ಎರಡ್ಮೂರು ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಶಿಶು ಮರಣ ದರವು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿಗೆ ಇದೆ. ವೈದ್ಯಕೀಯ ಸೌಲಭ್ಯಗಳನ್ನು ಉತ್ತಮಪಡಿಸಬೇಕು ಎಂದು ಆಗ್ರಹಿಸಿದರು.


ನಗರ ವ್ಯಾಪ್ತಿ ಜಮೀನುಗಳಿಗೆ ಮಂಜೂರು ಇಲ್ಲ: ಸಚಿವ

ವಿಧಾನಸಭೆ: ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4)ರನ್ವಯ ನಗರಗಳು ಮತ್ತು ನಗರ ಪುರಸಭೆಗಳ ಪರಿಮಿತಿಯೊಳಗೆ ಬರುವ ಪ್ರದೇಶ ಹಾಗೂ ಅಂಥ ಪರಿಮಿತಿಗಳಿಂದ ಅಂತರದೊಳಗೆ ಬರುವ ಜಮೀನುಗಳನ್ನು ಬಗರ್ ಹುಕುಂ ಮಂಜೂರಾತಿಗೆ ಅವಕಾಶವಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್ ಅವರ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ. ಕರ್ನಾಟಕ ನಗರ ಪಾಲಿಕೆಗಳ ಕಾಯ್ದೆ, 1976ರಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 18 ಕಿ.ಮೀ. ವ್ಯಾಪ್ತಿ, ಉಪಬಂಧಗಳಡಿಯಲ್ಲಿ ಬರುವ ಇತರ ನಗರ ಪಾಲಿಕೆಗಳ 10 ಕಿ.ಮೀ. ವ್ಯಾಪ್ತಿ, ನಗರ ಪೌರಸಭೆಗಳ 5 ಕಿ.ಮೀ. ಮತ್ತು ಪುರಸಭೆ ಮತ್ತು ಪಟ್ಟಣ ಪಂಚಾಯತ್‌ನ 3 ಕಿ.ಮೀ. ವ್ಯಾಪ್ತಿಯಲ್ಲಿ ಬಗರ್ ಹುಕುಂ ಮಂಜೂರಾತಿಗೆ ಅವಕಾಶವಿಲ್ಲ ಎಂದು ವಿವರಿಸಿದ್ದಾರೆ. ನಿರ್ದಿಷ್ಟಪಡಿಸಿದ ಪರಿಮಿತಿಯೊಳಗೆ ಜಮೀನುಗಳನ್ನು ಯಾವುದೇ ವ್ಯಕ್ತಿ ಅಥವಾ ಯಾವುದೇ ಖಾಸಗಿ ಸಂಸ್ಥೆಗೆ ಮಂಜೂರು ಮಾಡಲು ಅವಕಾಶವಿಲ್ಲ, ಈಗಾಗಲೇ ಭೂ ಮಂಜೂರಾತಿ ಆಗಿರುವ ಪ್ರಕರಣಗಳಲ್ಲಿ ಭೂ ಪರಿವರ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಾಂಶುಪಾಲರ ಹುದ್ದೆ ಭರ್ತಿ: ಸಚಿವ ಮಧು

ಉಪನ್ಯಾಸಕರಿಗೆ ಪದೋನ್ನತಿ

ವಿಧಾನ ಪರಿಷತ್: ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಶೀಘ್ರದಲ್ಲೇ ಉಪನ್ಯಾಸಕರಿಗೆ ಪದೋನ್ನತಿ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಡಿ.ಟಿ. ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಂದ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲು ಈಗಾಗಲೇ ಕರಡು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ 461 ಆಕ್ಷೇಪಣೆಗಳನ್ನು ಪ್ರಸ್ತುತ ಪರಿಶೀಲಿಸಲಾಗುತ್ತಿದೆ. ಈ ಪ್ರಕ್ರಿಯೆ ಮುಗಿದ ತಕ್ಷಣ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು. ನಂತರ ಚಾಲ್ತಿಯಲ್ಲಿರುವ ನಿಯಮಗಳನ್ವಯ ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಮೂಲಕ ಅರ್ಹ ಉಪನ್ಯಾಸಕರಿಗೆ ಪ್ರಾಂಶುಪಾಲರಾಗಿ ಬಡ್ತಿ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಒಟ್ಟು 1,225 ಪ್ರಾಂಶುಪಾಲರ ವೃಂದದ ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ 306 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮೀಸಲಿಡಲಾಗಿದೆ. ಈ ಪೈಕಿ 247 ಹುದ್ದೆಗಳನ್ನು ಸೇವಾನಿರತ ಉಪನ್ಯಾಸಕರಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಆಯ್ಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಸಂಪಾದಕೀಯ

ವಿಶ್ವವಿಜೇತ ಭಾರತ !

ಭಾರತೀಯ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್‌ನ್ನು ಸೋಲಿಸಿ ಈ ಪ್ರಶಸ್ತಿಯನ್ನು ಮತ್ತೊಮ್ಮೆ ಗೆಲ್ಲುವ ಮೂಲಕ ಹೊಸ ಇತಿಹಾಸವನ್ನೆ ಸೃಷ್ಟಿಸಿದೆ.ಹಲವು ಪ್ರಥಮಗಳನ್ನೂ ಸಾಧಿಸಿದೆ. ಭಾರತವು ಟಿ20ವಿಶ್ವಕಪ್ ಗೆಲ್ಲುತ್ತಿರುವುದು ಇದು ಮೂರನೇ ಬಾರಿ. ಬೇರಾವ ತಂಡವೂ ಮೂರು ಬಾರಿ ಟಿ20 ವಿಶ್ವಕಪ್ ಪ್ರಶಸ್ತಿ ಗೆದ್ದಿಲ್ಲ. ಭಾರತವು ಸತತ ಎರಡನೇ ಬಾರಿ ಗೆಲ್ಲುತ್ತಿರುವುದು ಕೂಡಾ ಹೊಸದೊಂದು ದಾಖಲೆಯೆ. ಟಿ20 ವಿಶ್ವಕಪ್‌ನ್ನು



ಯಾವುದೇ ಆಯೋಜಕ ತಂಡವು ತವರಿನಲ್ಲಿ ಗೆದ್ದುದಿಲ್ಲ, ಆ ಮೂಲಕ ಭಾರತವು ತವರಿನಲ್ಲೇ ಈ ಪ್ರಶಸ್ತಿ ಗೆದ್ದ ಸಾಧನೆಯನ್ನೂ ಮಾಡಿದೆ. ಏಕದಿನ ಕ್ರಿಕೆಟಿನಲ್ಲಿ ಎರಡು ಬಾರಿ ವಿಶ್ವಕಪ್ ಗೆದ್ದುದನ್ನೂ ಸೇರಿಸಿದರೆ ಭಾರತವೀಗ ಒಟ್ಟು 5 ವಿಶ್ವಕಪ್‌ಗಳನ್ನು ಗೆದ್ದಂತಾಗಿದೆ. ಇವೆಲ್ಲವನ್ನು ಒಟ್ಟು ಸೇರಿಸಿದರೆ ಭಾರತವೀಗ ಸೀಮಿತ ಓವರುಗಳ ಕ್ರಿಕೆಟಿನಲ್ಲಿ ವಿಶ್ವವಿಜೇತ ತಂಡವೇ ಹೌದು ಎಂದು ನಿರ್ವಿವಾದವಾಗಿ ಹೇಳಬಹುದು.

ಭಾರತವು ಫೈನಲ್ ಪಂದ್ಯವನ್ನು ಸುಲಭದಲ್ಲಿ ಗೆದ್ದಿರಬಹುದು. ಆದರೆ ಫೈನಲ್‌ವರೆಗೆ ಸಾಗಿ ಬಂದ ಹಾದಿ ಸುಲಭದ್ದೇನಾಗಿರಲಿಲ್ಲ. ಸುಪರ್8 ಹಂತದಲ್ಲಿ ಮೊದಲ ಪಂದ್ಯವನ್ನು ದಕ್ಷಿಣ ಆಫ್ರಿಕಾದೆದುರು ಸೋತ ಬಳಿಕ ಮುಂದಿನಪಂದ್ಯಗಳೆಲ್ಲವೂಒಂದು ರೀತಿಯಲ್ಲಿನಾಕೌಟ್ ಪಂದ್ಯದಂತಿದ್ದವು. ಅವೆಲ್ಲವನ್ನು ಭಾರತವು ಸಾಹಸದಿಂದಲೇ ಗೆದ್ದಿತು. ಭಾರತದ ಈ ಬಾರಿಯ ಗೆಲುವಿನಲ್ಲಿ ಬ್ಯಾಟಿಂಗ್ ಶಕ್ತಿಯೇ ಪ್ರಮುಖ ಪಾತ್ರ ವಹಿಸಿತು ಎಂಬುದನ್ನೂ ನಿರಾಕರಿಸಲಾಗುವುದಿಲ್ಲ. ಸುಪರ್ 8 ಹಂತದ ಬಳಿಕ ಮೂರು ಬಾರಿ 250ಕ್ಕಿಂತ ಹೆಚ್ಚು ರನ್ ಗಳಿಸಿದ್ದು, 198 ರನ್‌ಗಳನ್ನು ನಿರಾಯಾಸವಾಗಿ ಬೆಂಬತ್ತಿ ಗೆಲುವು ಸಾಧಿಸಿದ್ದು ಅದಕ್ಕೆ ನಿದರ್ಶನಗಳು. ಸದಾ ಅವಗಣನೆಗೆ ಒಳಗಾಗುತ್ತಿದ್ದ ಸಂಜು ಸ್ಯಾಮ್ಸನ್ ನಿರ್ಣಾಯಕ ಪಂದ್ಯಗಳಲ್ಲಿ ಬ್ಯಾಟಿಂಗ್‌ನಲ್ಲಿ ಮಿಂಚಿದ್ದು ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದುದು ಈ ಟೂರ್ನ್‌ಮೆಂಟಿನ ಅವಿಸ್ಮರಣೀಯ ಕ್ಷಣವಾಗಿ ದಾಖಲಾಗಬಲ್ಲುದು. ಬೌಲಿಂಗ್‌ನಲ್ಲಿ ಬೂಮ್ರಾ ಭಾರತದ ಪಾಲಿಗೆ ಮ್ಯಾಚ್‌ವಿನ್ನರ್ ಎಂಬುದನ್ನು ಪದೇಪದೇ ಸಾಬೀತುಪಡಿಸುತ್ತಲೇ ಬರುತ್ತಿದ್ದಾರೆ.

ಅಂತೂ ಭಾರತವು 2023ರ ನವೆಂಬರ್ 19ರಂದು ಇದೇ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಏಕದಿನ ವಿಶ್ವಕಪ್ ಫೈನಲಿನಲ್ಲಿ ಅನುಭವಿಸಿದ ಘೋರ ಕಹಿನೆನಪನ್ನು ಅಳಿಸಿ ಹಾಕಿ ಹೊಸ ಸ್ಮರಣೀಯ ಕ್ಷಣವನ್ನು ದಾಖಲಿಸಲು ಸಫಲವಾಯಿತೆನ್ನುವುದು ಕೋಟ್ಯಂತರ ಭಾರತೀಯರ ಪಾಲಿಗೆ ಅತ್ಯಂತ ಭಾವುಕ ವಿದ್ಯಮಾನ. ಅಂದಿನ ಸೋಲಿನ ಬಳಿಕ ಭಾರತವು ಯಾವುದೇ ನಾಕೌಟ್ ಪಂದ್ಯವನ್ನು ಸೋತಿದ್ದಿಲ್ಲ. 20ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದು, ನಾಲ್ಕು ಖಂಡಗಳ ತಂಡಗಳು ಸೆಮಿಫೈನಲಿನಲ್ಲಿ ಸೆಣಸುವಂತಾದುದು, ಹೊಸದಾಗಿ ವಿಶ್ವಕಪ್‌ಗೆ ಪ್ರವೇಶ ಪಡೆದ ಕೆಲವು ತಂಡಗಳು ಅಚ್ಚರಿಯ ಗೆಲುವುಗಳನ್ನು ದಾಖಲಿಸಿದ್ದು, ಬಲಿಷ್ಠ ಆಸ್ಟ್ರೇಲಿಯಾ ಗುಂಪು ಹಂತದಲ್ಲೇ ಹೊರಬಿದ್ದುದು ಈ ಬಾರಿಯ ವಿಶ್ವಕಪ್ ಟೂರ್ನಿಯನ್ನು ಅವಿಸ್ಮರಣೀಯಗೊಳಿಸಿತೆನ್ನಬೇಕು.

ಮೋಕ್ಷವನ್ನು ಪಡೆಯುವ ಬಗೆ

ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಮ್
ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷಂ ಚ ವಿಂದತಿ

-ಸಮಯೋಚಿತ ಪದ್ಯ ಮಾಲಿಕಾ

ಮಾನವನು ಶಾಸ್ತ್ರಾದಿಗಳನ್ನು ಕೇಳಿ ಧರ್ಮವನ್ನು ತಿಳಿಯುತ್ತಾನೆ. ಕೇಳಿ ದುರ್ಬುದ್ಧಿಯನ್ನು ಬಿಡುತ್ತಾನೆ. ಕೇಳಿ ಜ್ಞಾನವನ್ನು ಪಡೆಯುತ್ತಾನೆ. ಕೇಳಿ ಮೋಕ್ಷವನ್ನು ಪಡೆಯುತ್ತಾನೆ -ಎಂಬುದು ಶ್ಲೋಕಾರ್ಥ.

ಶಾಸ್ತ್ರವೆಂದಾಕ್ಷಣ ಅದಕ್ಕೆ ಮಡಿವಂತಿಕೆಯನ್ನು ಕಟ್ಟಿ ದೂರ ಇರಿಸುವ ಸ್ವಭಾವ ನಮ್ಮದು. ಶಾಸ್ತ್ರವೆಂಬುದು ಮೈಲಿಗೆ ವ್ಯಾಪ್ತಿಯನ್ನು ಮೀರಿ ನಿಂತ ವಿಷಯ. 'ಶಾಸ್ತೀತಿ ಶಾಸ್ತ್ರಮ್' ಎಂಬುದು ಶಾಸ್ತ್ರ ಶಬ್ದದ ನಿರ್ವಚನ. ಬದುಕನ್ನು ಚೆನ್ನಾಗಿ, ಸಮರ್ಥವಾಗಿ ಅರ್ಥಪೂರ್ಣವಾಗಿ ನಿರ್ವಹಿಸಲು ಪೂರಕವಾದ ಅಧ್ಯಯನ ಹಾಗೂ ಅನುಭವಗಳ



ಹಿನ್ನೆಲೆಯಲ್ಲಿ ವಿಧಿಸುವ ನಿಯಮವೇ ಶಾಸ್ತ್ರ. ಹೀಗೆ ಬದುಕಿದರೆ ಒಳ್ಳೆಯದು; ಇದು ಒಳ್ಳೆಯ ಬದುಕಲ್ಲ ಎಂಬುದಾಗಿ ವಾಸ್ತವಿಕ ವಿಚಾರವನ್ನು ಹೇಳುತ್ತದೆ.

ಶಾಸ್ತ್ರಾದಿ ವಿಚಾರಗಳು ಮನುಷ್ಯರನ್ನು ಪ್ರಬುದ್ಧರನ್ನಾಗಿ ರೂಪಿಸುತ್ತವೆ. ಶಾಸ್ತ್ರಾದಿಗಳ ಸರಿಯಾದ ಜ್ಞಾನ ಸಾಮಾನ್ಯ ಮಟ್ಟಕ್ಕಿಂತಲೂ ಎತ್ತರಕ್ಕೆ ಏರಿಸುತ್ತದೆ. ಶಾಸ್ತ್ರಾನುಭವಗಳ ಮೂಲಕ ಧರ್ಮ ಸೂಕ್ಷ್ಮತೆಗಳನ್ನು ತಿಳಿದುಕೊಳ್ಳಲು ಸಾಧ್ಯ. ಧರ್ಮದ ಆಳ- ಅಗಲಗಳ ಜ್ಞಾನ ಲಭ್ಯವಾಗುವುದು ಶಾಸ್ತ್ರಗಳ ಅಧ್ಯಯನ ಅನುಷ್ಠಾನಗಳಿಂದ ಸಾಧ್ಯವಾಗುತ್ತದೆ.

ಮನುಕುಲ ಲೋಕಮುಖಿಯಾಗಿ ಬದುಕುವುದಕ್ಕೂ ಸತ್ಕರ್ಮದಲ್ಲಿ ತೊಡಗಿಕೊಳ್ಳುವುದಕ್ಕೂ ಧರ್ಮ ಜ್ಞಾನ ಬೇಕಾಗುತ್ತದೆ. ದುರ್ಬುದ್ಧಿಯನ್ನು ದೂರ ಮಾಡುವ ಶಕ್ತಿ ಧರ್ಮಕ್ಕಿದೆ. ಹಿತಾಹಿತಗಳ ಪರಿಕಲ್ಪನೆಯನ್ನು ನೀಡಿ ಸತ್ಕರ್ಮದಲ್ಲಿ ತೊಡಗಿಸುವ ಕಾರ್ಯವನ್ನು ಧರ್ಮ ಮಾಡುತ್ತದೆ.

ಕೇಳುವಿಕೆಯಿಂದಲೇ ಜ್ಞಾನ ವಿಸ್ತಾರಗೊಳ್ಳುತ್ತದೆ. ಧರ್ಮಶಾಸ್ತ್ರಾದಿಗಳ ವಚನ, ಧರ್ಮಜ್ಞ ಹಿತೋಕ್ತಿ, ಜೀವನಾನುಭವಗಳ ಕಥನಗಳು ಆಸಕ್ತರ ಬದುಕಿಗೆ ಬೆಳಕಾಗುತ್ತವೆ, ಜ್ಞಾನವನ್ನು ಪಕ್ವಗೊಳಿಸುತ್ತವೆ. ಜ್ಞಾನಿಯಾದ ಮೇಲೆ ಕೈಗೊಳ್ಳುವ ಕಾರ್ಯವೆಲ್ಲವೂ ವಿವೇಕವಾಗಿರುತ್ತದೆ. ಅಧ್ಯಾತ್ಮದ, ಮೋಕ್ಷಪರವಾದ ತತ್ತ್ವೋಪದೇಶದ ಮಾತುಗಳು, ಜ್ಞಾನ ಬಿಂದುಗಳು ಮೋಕ್ಷಕ್ಕೆ ಪೂರಕವಾಗಿ ನಿಲ್ಲುತ್ತವೆ.

ಮೋಕ್ಷವೆಂಬುದು ಪರಮೋನ್ನತವಾದ ಸ್ಥಾನ. ಒಮ್ಮೆ ಮೋಕ್ಷವನ್ನು ಪಡೆದ ಮೇಲೆ ಜನನ ಮರಣಗಳ ಚಕ್ರದಿಂದ ಬಿಡುಗಡೆ ಹೊಂದುತ್ತಾನೆ. ಸಾಧಕರು ಬಯಸುವುದು ಈ ಶಾಶ್ವತ ಪದವನ್ನು. ಹಂತ ಹಂತವಾಗಿ ಮೋಕ್ಷವನ್ನು ಹೇಗೆ ಪಡೆಯಬಹುದು, ಪೂರ್ವಭಾವಿಯಾಗಿ ಏನೆಲ್ಲಾ ಮಾಡಬೇಕು, ಯಾವ ಬಗೆಯ ಸಿದ್ಧತೆ ನಡೆಸಬೇಕು ಎಂಬುದರ ಬಗ್ಗೆ ಈ ಶ್ಲೋಕ ತಿಳಿಸಿ ಕೊಡುತ್ತದೆ.

ಕೇವಲ ಎಣಿಸುವುದರಿಂದ, ಬಯಸುವುದರಿಂದ ಯಾರೂ ಮೋಕ್ಷಕ್ಕೆ ಅರ್ಹರೆನಿಸರು. ಮೊದಲಿನಿಂದಲೂ ಆ ದಿಸೆಯಲ್ಲಿ ಪ್ರಯತ್ನ ನಡೆಸಿ ತಮ್ಮನ್ನು ಅಣಿಗೊಳಿಸಬೇಕು. ಆಗ ಮಾತ್ರ ಸಾಧ್ಯವಾದೀತು. ಕವಿಯು ಉಲ್ಲೇಖಿಸಿದ ಮಾರ್ಗದಲ್ಲಿ ಸಾಗಿದರೆ ಮೋಕ್ಷವೆಂಬುದು ಎಲ್ಲರಿಂದಲೂ ಪಡೆಯಲು ಅಸಾಧ್ಯವಾದರೂ ಒಬ್ಬ ಉತ್ತಮ ವ್ಯಕ್ತಿಯಾಗಿ ಲೋಕಪ್ರಿಯನಾಗಿ ಮೂಡಿಬರಲು ಸಾಧ್ಯವಾಗುತ್ತದೆ. ಈ ಕಾರಣದಿಂದಲಾದರೂ ಪ್ರಯತ್ನ ನಡೆಸಬೇಕು. ರಾಷ್ಟ್ರದ, ಸಮಾಜದ ಸಭ್ಯವ್ಯಕ್ತಿಯಾಗಿ ಎಲ್ಲರ ಮೆಚ್ಚುಗೆಗಾದರೂ ಪಾತ್ರನಾಗಬಹುದು.

ಬೆಳೆಗಳಿಗೆ ಪೂರಕ 'ಗೋಕೃಪಾಮೃತ'



ಕಳೆದೆರಡು ವಾರದ ಹಿಂದೆ ಸ್ವತಃ ಗೋಪಾಲ್ ಸುತಾರಿಯಾರವರು ಗುಜರಾತ್‌ನ ಗಾಂಧೀನಗರದಿಂದ ಬೆಂಗಳೂರಿನ ಶಿವಾನಂದ ವೃತ್ತದಲ್ಲಿರುವ ಗಾಂಧೀ ಭವನಕ್ಕೆ ಗೋಕೃಪಾಮೃತದ ಪ್ರಚಾರದ ನಿಮಿತ್ತ ಏರ್ಪಡಿಸಿದ್ದ ರೈತರೊಂದಿಗಿನ ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ರಾಜ್ಯದ ಹಲವು ಜಿಲ್ಲೆಗಳಿಂದ ಸಾಕಷ್ಟು ರೈತರು, ಗೋಪಾಲಕರು ಸೇರಿದಂತೆ ಸಮಾಜಮುಖಿ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಸಾಕಷ್ಟು ಜನ ಭಾಗವಹಿಸಿದ್ದರು. ತುಂಬಿದ ಸಭಾಂಗಣವನ್ನು ಉದ್ದೇಶಿಸಿ ಇವರು ನೀಡಿದ ಮಾಹಿತಿ ಬಂದಂತಹವರನ್ನು ದಿಗ್ಭ್ರಮೆಗೊಳಿಸಿತ್ತು, ಮೂಕವಿಸ್ಮಿತರನ್ನಾಗಿಸಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಗೋಕೃಪಾಮೃತವನ್ನು ಉಚಿತವಾಗಿ ಹಂಚಲಾಯಿತು. ಆಗಷ್ಟೇ ನನಗೆ ಅರಿವಾಗಿದ್ದು, ಬಂದವರಲ್ಲಿ ಬಹುತೇಕರು ಬರುವಾಗ ತಮ್ಮೊಂದಿಗೆ ಒಂದು ಖಾಲಿ ಬಾಟಲಿಯನ್ನು ಹಿಡಿದು ತಂದಿದ್ದರ ಹಿಂದಿನ ಮರ್ಮ.

ಇಂದು ಭಾರತ ಸುಭದ್ರವಾಗಿರಬೇಕೆಂದರೆ ಇಲ್ಲಿಯ ಪ್ರತಿಯೊಬ್ಬ ರೈತ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಸದೃಢನಾಗಬೇಕು. ಆಗಷ್ಟೇ ದೇಶವಾಸಿಗಳು ಆರೋಗ್ಯದಿಂದ ಸದೃಢರಾಗಿ ಸ್ವಾಸ್ಥ್ಯ ಸಮಾಜವನ್ನು ಕಟ್ಟಲು ಸಾಧ್ಯ. ಹೀಗಾಗಿ ರಾಸಾಯನಿಕ ಮುಕ್ತ ಮತ್ತು ಸಾವಯವ ಕೃಷಿಯಲ್ಲಿ ಬೆಳೆದ ಆಹಾರ ಧಾನ್ಯಗಳನ್ನು ಪ್ರತಿಯೊಬ್ಬರು ಮುಂದೊಂದು ದಿನ ಸೇವಿಸುವಂತಾಗಬೇಕು. ಇದೇ ಕಾರಣಕ್ಕೆ ಗೋಕೃಪಾಮೃತದ ಕುರಿತಂತೆ ಜಾಗೃತಿ ಮೂಡಿಸುವುದು ಇಂದಿನ ದಿನಗಳಲ್ಲಿ ಅತ್ಯವಶ್ಯಕವೂ ಮತ್ತು ಅನಿವಾರ್ಯವೂ ಆಗಿದೆ ಎಂಬುದು ಕಾರ್ಯಕ್ರಮದ ಕೊನೆಯಲ್ಲಿ ಬಂದವರೆಲ್ಲರಿಗೂ ಅರಿವಾಗಿತ್ತು.

ಗೋಪಾಲ್ ಸುತಾರಿಯಾರವರಲ್ಲಿರುವ ಜ್ಞಾನಕ್ಕೆ ಒಂದೆರಡು ಗಂಟೆಗಳ ಸೀಮಿತ ಅವಧಿ ಇವರಿಗೆ ಏನೂ ಅಲ್ಲ ಎಂಬುದು ಅಂದೇ ನನಗೂ ಅರಿವಿಗೆ ಬಂದಿದ್ದು. ಇವರೊಬ್ಬ ನಡೆದಾಡುವ ಗೋಜ್ಞಾನಿ. ಸ್ವತಃ ಒಂದು ಗೋಶಾಲೆಯನ್ನು ನಡೆಸುತ್ತಿರುವ ಇವರಿಗೆ ಗೋವಿನ ಬಗ್ಗೆ, ಗೋವಿನ ಉತ್ಪನ್ನಗಳ ಬಗ್ಗೆ, ಗೋ ಆಧಾರಿತ ಸಾಂಪ್ರದಾಯಿಕ ಕೃಷಿಯ ಬಗ್ಗೆ ಮತ್ತು ಮನುಷ್ಯನಿಗೆ ಬಾಧಿಸುವ ನಾನಾ ಕಾಯಿಲೆಗಳಿಗೆ ಗೋವು ಮತ್ತು ಗೋವಿನ ಉತ್ಪನ್ನಗಳಿಂದ ಪರಿಹಾರವನ್ನೊದಗಿಸುವ ಕುರಿತಂತೆ ಅಪಾರವಾದ ಜ್ಞಾನವಿದೆ. ಕೇಳುಗರ ಪ್ರಶ್ನೆಗಳಿಗೆ ಸಮಾಧಾನವಾಗಿ ಮತ್ತು ದೀರ್ಘವಾಗಿ ಇವರು ನೀಡುವ ಉತ್ತರ ಇವರ ತಾಳ್ಮೆಯನ್ನು ಪರೀಕ್ಷೆಗೊಳಪಡಿಸುತ್ತದೆ. ಹಸನ್ಮುಖಿರಾದ ಇವರ ಪ್ರತಿಯೊಂದು ಮಾತು ಬಂದವರನ್ನು ಆಲಿಸುವಂತೆ ಮಾಡುತ್ತದೆ. ಹೀಗಾಗಿಯೇ ಅಂದು ಬಂದಿದ್ದ ಪ್ರತಿಯೊಬ್ಬರ ಮುಖ ಮನದಲ್ಲಿ ಈ ಕಾರ್ಯಕ್ರಮ ನಮ್ಮ ಇಂದಿನ ಸಮಯವನ್ನು ವ್ಯರ್ಥ ಮಾಡಲಿಲ್ಲ, ಬದಲಿಗೆ ಇನ್ನಷ್ಟು ಜ್ಞಾನವನ್ನು ಹೊಂದಲು ಸಹಕಾರಿಯಾಯಿತು ಎಂಬ ಭಾವನೆಯನ್ನು ಮೂಡಿಸಿದ್ದು ಎದ್ದು ಕಾಣುತ್ತಿತ್ತು.

ಭಾರತದ ವಿವಿಧ ರಾಜ್ಯಗಳಲ್ಲಿ ಲಕ್ಷಾಂತರ ರೈತರು ಇಂದು ಗೋಕೃಪಾಮೃತವನ್ನು ಕೃಷಿಯಲ್ಲಿ ಬಳಸುತ್ತಿರುವುದರ ಪರಿಣಾಮ ಬೆಳೆದ ಬೆಳೆಯ ಉತ್ಪಾದನೆ ಇಮ್ಮಡಿ ಮುಮ್ಮಡಿಯಾಗಿದ್ದು, ಗುಣಮಟ್ಟವು ಸಹ ಶ್ರೇಷ್ಠವಾಗಿರುವುದು ಕಂಡುಬಂದಿದೆ. ಇದರಿಂದ ರೈತರ ಆರ್ಥಿಕ ಸ್ಥಿತಿಯೂ ಸುಧಾರಿಸುತ್ತಿರುವುದು ಗೋಚರವಾಗಿದೆ. ಹೀಗಾಗಿ ಅನೇಕ ರೈತರು ಇದನ್ನಿಂದು ತಮ್ಮ ಕೃಷಿ ಪದ್ಧತಿಗಳನ್ನು ಸಂಪೂರ್ಣವಾಗಿ ಬದಲಾಯಿಸಿದ ಕ್ರಾಂತಿಕಾರಿ ಉತ್ಪನ್ನವೆಂದೇ ಪರಿಗಣಿಸುವಂತಾಗಿದೆ. ಇದನ್ನು ಬಳಸುವುದರಿಂದ ಕೃಷಿಯಲ್ಲಿ ವಿಭಿನ್ನ ಮಟ್ಟವನ್ನು ತಲುಪಬಹುದು ಎಂಬುದು ರುಜುವಾತಾಗಿದೆ. ಇದು ಪರಿಸರ ಸ್ನೇಹಿ ಮಾತ್ರವಲ್ಲದೆ ಉತ್ತಮ ಗುಣಮಟ್ಟದ ಮತ್ತು ಹೆಚ್ಚಿನ ಇಳುವರಿ ನೀಡುವ ಬೆಳೆಗಳನ್ನು ಉತ್ಪಾದಿಸಲು ರೈತರಿಗೆ ಸಹಾಯ ಮಾಡುವುದು ಶತಸಿದ್ಧವಾಗಿದೆ. ಹೇಳಬೇಕೆಂದರೆ ಈ ಉತ್ಪನ್ನವು ಸಾವಯವ ಮತ್ತು ನೈಸರ್ಗಿಕ ಕೃಷಿಯತ್ತ ರೈತರು ಮತ್ತೆ ಮರಳಲು ಬೇಕಾದ ಒಂದು ಪ್ರಮುಖ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿ ಗೋಆಧಾರಿತ ಕೃಷಿಯನ್ನು ಪುನರುತ್ಥಾನಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗಿದೆ.

ಇವರೇ ಹೇಳುವಂತೆ ಗೋಕೃಪಾಮೃತ ಎಂಬುದೊಂದು ದುರ್ಬಲ ಪ್ರಜಾತಿಯ ದೇಶಿ ಗೋವುಗಳ ಪಂಚಗವ್ಯದ ಮಿಶ್ರಣವಾಗಿದೆಯಂತೆ. ಮುಖ್ಯವಾಗಿ ಇದರಲ್ಲಿ ಸುಮಾರು 40ಕ್ಕೂ ಹೆಚ್ಚು ವಿವಿಧ ಸ್ನೇಹಿ ಬ್ಯಾಕ್ಟೀರಿಯಾಗಳಿದ್ದು, ಇದು ಮಣ್ಣಿನ ಗುಣಮಟ್ಟ ಮತ್ತು ರಚನೆಯನ್ನು ಸುಧಾರಿಸುತ್ತದೆ. ಇದರ ಬಳಕೆಯಿಂದ ಸಸ್ಯಗಳ ರೋಗನಿರೋಧಕ ಕ್ಷಮತೆ ಹೆಚ್ಚುತ್ತದೆ. ಇದರಿಂದ ಸಹಜವಾಗಿ ಬೆಳೆಯ ಗುಣಮಟ್ಟ ಮತ್ತು ಉತ್ಪಾದನೆ ಹೆಚ್ಚುತ್ತದೆ. ಈ ಉತ್ಪನ್ನವು ಸಂಪೂರ್ಣವಾಗಿ ನೈಸರ್ಗಿಕ ಮತ್ತು ಸಾವಯವವಾಗಿದ್ದು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಗೆ ಪರಿಪೂರ್ಣ ಪರ್ಯಾಯವಾಗಿದೆ.



ಮುಖ್ಯ ವಿಚಾರವೇನೆಂದರೆ ಈ ದ್ರಾವಣದ ಪ್ರಯೋಗವನ್ನು ಮಾಡುವುದರಿಂದ ಭೂಮಿಯಲ್ಲಿ ದೊಡ್ಡ ಪ್ರಮಾಣದ ಎರೆಹುಳುಗಳು ವೃದ್ಧಿಯಾಗುವುದು ಕಂಡುಬಂದಿದೆ. ಹೀಗಾಗಿ ಎರೆಹುಳು ಗೊಬ್ಬರವನ್ನು ಬಳಸುವ ಅವಶ್ಯಕತೆ ಇದನ್ನು ಬಳಸಿದ ನಂತರ ಅಷ್ಟಾಗಿ ಬರುವುದಿಲ್ಲ. ಇದರ ಪ್ರಯೋಗದಿಂದ ಭೂಮಿಯ ಗುಣ ಮತ್ತು ಸತ್ವ ವೃದ್ಧಿಯಾಗಿರುವುದು ಲ್ಯಾಬೋರೇಟರಿ ಪರೀಕ್ಷೆಗಳಿಂದ ರುಜುವಾತಾಗಿದೆ. ವಿಶೇಷವಾಗಿ ಇದನ್ನು ಬಳಸಿ ಬೆಳೆದ ವಿವಿಧ ತರಕಾರಿ ಬೆಳೆಗಳು ಹಾಗೂ ತೋಟಗಳಲ್ಲಿನ ಕೃಷಿಯಲ್ಲಿ ಹೆಚ್ಚುವರಿ ಆದಾಯ ಬಂದಿರುವುದಕ್ಕೆ ರಾಜ್ಯದಲ್ಲಿನ ಲಕ್ಷಾಂತರ ರೈತರೇ ಜ್ವಲಂತ ಸಾಕ್ಷಿಯಾಗಿದ್ದಾರೆ.

ಗೋಕೃಪಾಮೃತವನ್ನು ತಯಾರಿಸುವ ವಿಧಾನ ಅತ್ಯಂತ ಸರಳ ಹಾಗೂ ಸುಲಭವೂ ಆಗಿದೆ. ಯಾವುದೇ ವಯೋಮಿತಿ ಇಲ್ಲದೆ ಮನೆಯ ಸದಸ್ಯರಲ್ಲಿ ಯಾರಾದರೊಬ್ಬರು ದಿನದಲ್ಲಿ ಒಂದೈದು ನಿಮಿಷ ಇದಕ್ಕಾಗಿ ಸಮಯ ಕೊಟ್ಟು ಮಾಡಬಹುದಾದ ಸರಳ ವಿಧಾನವಾಗಿದೆ. ಮೊದಲಿಗೆ ಒಂದು ಬಕೆಟ್‌ನಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಅದರಲ್ಲಿ ಎರಡು ಕೆಜಿ ರಾಸಾಯನಿಕ ಮುಕ್ತವಾದ ದೇಶಿ ಬೆಲ್ಲವನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ಆ ಬೆಲ್ಲದ ನೀರನ್ನು ಡ್ರಮ್‌ನಲ್ಲಿರುವ ಇನ್ನೂರು ಲೀಟರ್ ನೀರಿಗೆ ಹಾಕಬೇಕು. ಅದೇ ದಿನದ ದೇಶಿ ಗೋವಿನ ಎರಡು ಲೀಟರ್ ಮಜ್ಜಿಗೆಯನ್ನು ನಂತರ ಅದಕ್ಕೆ ಸೇರಿಸಬೇಕು. ಇಲ್ಲವಾದಲ್ಲಿ ಒಂದೆರಡು ದಿನದ ದೇಶಿ ಗೋವಿನ ಮಜ್ಜಿಗೆಯೂ ಆಗುತ್ತದೆ. ಆದರೆ ಬಹಳ ಹಳೆಯ ಮಜ್ಜಿಗೆಯನ್ನು ಹಾಕಬಾರದು. ಹಾಕಿದಲ್ಲಿ ಅದು ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎಂದು ಹೇಳಲಾಗುತ್ತದೆ. ಹೀಗೆ ಮಿಶ್ರಣ ಮಾಡಿದ ದ್ರಾವಣದ ಡ್ರಮ್‌ನ್ನು ಸಾಧ್ಯವಾದಷ್ಟು ನೆರಳಿನಲ್ಲಿಯೇ ಇಡಬೇಕು. ಮರದ ನೆರಳು ಹೆಚ್ಚು ಸೂಕ್ತವಾದುದು. ಅನಂತರ ಡ್ರಮ್‌ನ ಬಾಯಿಯನ್ನು ಒಂದು ಸ್ವಚ್ಛ ಹತ್ತಿಯ ಬಟ್ಟೆಯಿಂದ ಮುಚ್ಚಿಟ್ಟು ಕಟ್ಟಿಡಬೇಕು. ಏಕೆಂದರೆ ಅದರ ಒಳಗೆ ಯಾವುದೇ ಕ್ರಿಮಿ ಕೀಟಗಳು ಸೇರಿದಂತೆ ಯಾವುದೇ ಜೀವಿಗಳು ಬೀಳಬಾರದು. ಒಂದೊಮ್ಮೆ ಮರದ ನೆರಳು ಇಲ್ಲವಾದಲ್ಲಿ ಹಸಿರು ಬಲೆ ಅಥವಾ ಶೇಡ್ ನೆಟ್‌ನಿಂದ ನೆರಳನ್ನು ತಾತ್ಕಾಲಿಕವಾಗಿ ಕಲ್ಪಿಸಿ ಅದರ ಅಡಿಯಲ್ಲಿ ದ್ರಾವಣದ ಡ್ರಮ್‌ನ್ನು ಇಡಬಹುದು. ಸ್ವಚ್ಛವಾಗಿರುವ ಒಂದು ಕೋಲಿನಿಂದ ಪ್ರತಿನಿತ್ಯ ಎರಡರಿಂದ ನಾಲ್ಕು ನಿಮಿಷ ಬೆಳಿಗ್ಗೆ ಮತ್ತು ಸಂಜೆ ಈ ದ್ರಾವಣವನ್ನು ತಿರುಗಿಸಬೇಕು. ಎಡದಿಂದ ಬಲಕ್ಕೆ ತಿರುಗಿಸಿದಲ್ಲಿ ಒಳಿತು. ಹೀಗೆ ಪ್ರತಿನಿತ್ಯ ಮಾಡಿದಲ್ಲಿ ಆರರಿಂದ ಏಳು ದಿನಗಳಲ್ಲಿ ಬೆಳೆಗಳಿಗೆ ಪೂರಕವಾದ ಗೋಕೃಪಾಮೃತ ತಯಾರಾಗುತ್ತದೆ. ಹೀಗೆ ತಯಾರಾದ ಗೋಕೃಪಾಮೃತವನ್ನು ನಂತರ ಹೊಲ ಗದ್ದೆಗಳಿಗೆ ಮತ್ತು ಬೆಳೆಗಳಿಗೆ ಸಿಂಪಡಿಸಬಹುದು. ಎಲ್ಲವನ್ನು ಸಿಂಪಡಿಸಿ ಕೇವಲ ಹತ್ತು ಲೀಟರ್‌ನಷ್ಟು ಮಾತ್ರ ಉಳಿದಾಗ ಪುನಃ ಅದರಲ್ಲಿ ಇನ್ನೂರು ಲೀಟರ್ ನೀರು, ಎರಡು ಕೆಜಿ ದೇಶಿ ಬೆಲ್ಲದ ನೀರು ಮತ್ತು ಎರಡು ಲೀಟರ್ ದೇಶಿ ಗೋವಿನ ತಾಜಾ ಮಜ್ಜಿಗೆಯನ್ನು ಹಾಕಿ ದಿನದಲ್ಲಿ ಎರಡು ಬಾರಿ ಎರಡರಿಂದ ನಾಲ್ಕು ನಿಮಿಷ ಒಂದು ಕೋಲಿನಿಂದ ತಿರುಗಿಸಿದಲ್ಲಿ ಪುನಃ ಒಂದು ವಾರದಲ್ಲಿ ಇನ್ನೂರು ಲೀಟರ್ ಗೋಕೃಪಾಮೃತ ತಯಾರಾಗುತ್ತದೆ.

ಹೀಗೆ ತಯಾರಾದ ಗೋಕೃಪಾಮೃತವು ವರ್ಷದಲ್ಲಿ ಸುಮಾರು ನಾಲ್ಕು ಬಾರಿ ತನ್ನ ಬಣ್ಣವನ್ನು ಬದಲಾಯಿಸುತ್ತದೆ. ಹಳೆಯದಾದರೆ ಹಸಿರು ಬಣ್ಣದಾಗುತ್ತದೆ ಮತ್ತು ಸ್ವಲ್ಪ ಕಪ್ಪು ಬಣ್ಣದಲ್ಲಿ ಕಂಡುಬರುತ್ತದೆ. ಯಾವುದೇ ಬಣ್ಣ ಬದಲಾದರೂ ಇದರ ಗುಣ ಮಾತ್ರ ಬದಲಾಗದೇ ಇರುವುದು ಇದರ ವಿಶೇಷ. ಒಂದೊಮ್ಮೆ ದ್ರಾವಣವು ಹಳೆಯದಾಗಿದ್ದು ಅದರಲ್ಲಿ ಸಣ್ಣ ಪುಟ್ಟ ಕ್ರಿಮಿ ಕೀಟಗಳು ಬಿದ್ದಿದ್ದರೆ ಅದನ್ನು ಹೊರತೆಗೆದು ನಂತರ ಎಂದಿನಂತೆ ಉಪಯೋಗಿಸಬಹುದು. ಈ ದ್ರಾವಣವನ್ನು ಏಳು ದಿನದ ನಂತರ ಇಲ್ಲವೇ ಒಂದು ತಿಂಗಳ ನಂತರವೂ ಸಹ ಉಪಯೋಗಿಸಬಹುದು. ಇದರ ವಾಸನೆ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗಿರಬಹುದು. ಒಮ್ಮೊಮ್ಮೆ ಮೇಲಕ್ಕೆ ಕೆನೆ ಕಟ್ಟಬಹುದು, ಕೆನೆ ಕಟ್ಟದೆಯೂ ಇರಬಹುದು. ಆದರೆ ಈಗಾಗಲೇ ಹೇಳಿದಂತೆ ಗುಣ ಮಾತ್ರ ಬದಲಾಗುವುದಿಲ್ಲ. ಇನ್ನೂ ಹೆಚ್ಚಿನ ಮಾಹಿತಿಗಾಗಿ ತಾವಿರುವ ಸಮೀಪದಲ್ಲಿ ಇದನ್ನು ಬಳಸುತ್ತಿರುವವರನ್ನು ಮುಖತಃ ಸಂಪರ್ಕಿಸಿ ಪ್ರಾತ್ಯಕ್ಷಿಕೆ ಮಾಹಿತಿಯನ್ನು ಪಡೆದುಕೊಂಡರೆ ಒಳ್ಳೆಯದು. ಹಾಗೆಯೇ ಅಲ್ಲಿಂದ ಕನಿಷ್ಠ ಒಂದು ಲೀಟರ್ ಗೋಕೃಪಾಮೃತವನ್ನು ತಂದು ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು. ಹೀಗೆ ಪ್ರತಿಯೊಬ್ಬ ರೈತರು ಮಾಡಿದ್ದಲ್ಲಿ ಬೆವರಿಗೆ ತಕ್ಕ ಬೆಲೆಯನ್ನು ಪಡೆದು ಆರ್ಥಿಕ ಸುಧಾರಣೆಯನ್ನು ಕಾಣಬಹುದು. ಇದೇ ಗೋಪಾಲ್ ಸುತಾರಿಯಾರವರ ಆಶಯ ಮತ್ತು ಕನಸು.

ಭಾರತದ ಸಂವಿಧಾನವನ್ನು ಅಂಬೇಡ್ಕರ್ ಸಂವಿಧಾನ ಎಂದೆನ್ನುವ ಮುನ್ನ...

ಪ್ರಸಾದ್ ಕುಮಾರ್ ಮಾರ್ನಬೈಲ್

'ಸಂವಿಧಾನದ ಕರಡು ರಚನೆಯ ವಿಚಾರದಲ್ಲಿ ನನಗೆ ನೀಡಿರುವ ಶ್ರೇಯಸ್ಸು ಅದು ನಿಜವಾಗಿಯೂ ನನಗೆ ಸೇರಿದ್ದಲ್ಲ ಬದಲಾಗಿ ಅದು ಸಂವಿಧಾನದ ಸ್ಥೂಲ ಕರಡನ್ನು ಸಿದ್ಧಪಡಿಸಿರುವ ಸಂವಿಧಾನ ಸಭೆಯ ಸಾಂವಿಧಾನಿಕ ಸಲಹೆಗಾರರಾದ ಬಿ.ಎನ್ ರಾವ್ ಅವರಿಗೆ ಸೇರಿದ್ದು' (The credit that is given to me does not really belong to me. It belongs partly to Sir B.N. Rau the Constitutional Advisor to the Constituent Assembly who prepared a rough draft of the Constitution for the consideration of the Drafting Committee.)

ಇದು 1949ರ ನವೆಂಬರ್ 25ರಂದು ಸಂವಿಧಾನ ಸಮಿತಿಯಲ್ಲಿ ಸ್ವತಃ ಡಾ.ಬಿ.ಆರ್.ಅಂಬೇಡ್ಕರ್ ಅವರಾಡಿದ ಮಾತುಗಳು! ಈ ಮೂಲಕ ದೇಶಗಳನ್ನು ಸುತ್ತಿ ಕೋಶಗಳನ್ನು ಓದಿ ಸಂವಿಧಾನ ರಚನೆಗೆ ಆಮೂಲಾಗ್ರ ಕಾಣಿಕೆ ಸಲ್ಲಿಸಿದ ಬೆಣಗಲ್ ನರಸಿಂಗ ರಾವ್ ಅವರಿಗೆ ಸ್ವತಃ ಅಂಬೇಡ್ಕರ್‌ರವರೇ ಅಂದು ಸೆಲ್ಯೂಟ್ ಹೊಡೆದಿದ್ದರು. ಆದರೆ ಕಾಲದ ಜೊತೆಗಿನ ಓಡುವಿಕೆಯಲ್ಲಿ ನಾವುಗಳು ಮಾತ್ರ 'ರಾವ್' ಅವರನ್ನು ಬದಿಗೆ ಸರಿಸಿ ಬರೇ ಅಂಬೇಡ್ಕರ್‌ರವರನ್ನು ಮಾತ್ರ ಹಿಡಿದುಕೊಂಡಿದ್ದೇವೆಯೇನೋ ಎಂದೆನ್ನಿಸುತ್ತಿದೆ!

ಭಾರತದ ಸಂವಿಧಾನ ಅದು ಒಂದು ದಿನದ ಅಥವಾ ಓರ್ವ ವ್ಯಕ್ತಿಯ ಪರಿಶ್ರಮವಂತು ಅಲ್ಲವೇ ಅಲ್ಲ! ನಿಸ್ಸಂಶಯವಾಗಿ ಭಾರತದ ಸಂವಿಧಾನದ ರಚನೆಯ ಹಿಂದ ಡಾ.ಬಿ.ಆರ್.ಅಂಬೇಡ್ಕರ್‌ರವರ ದೊಡ್ಡ ಪರಿಶ್ರಮವಿದೆ. ಹಾಗಂತ ಭಾರತದ ಸಂವಿಧಾನವನ್ನು ಇಡಿಯಾಗಿ 'ಅಂಬೇಡ್ಕರ್ ಸಂವಿಧಾನ'ವೆಂದು ಘೋಷಿಸುವುದು ನಿಜಕ್ಕೂ ಒಪ್ಪತಕ್ಕ ವಿಚಾರವಲ್ಲ. ಬದಲಾಗಿ ಈ ರೀತಿಯಾಗಿ ಹೇಳುವುದು ಅದು ಸಂವಿಧಾನ ರಚನಾ ಸಮಿತಿಗೆ, ಅದರ ಹಿಂದೆ ಅವಿರತವಾಗಿ ಶ್ರಮಿಸಿದ ಇತರ ಸದಸ್ಯರುಗಳಿಗೆ ಮಾಡು ವಂತಹ ಅಪಮಾನವಾಗುತ್ತದೆಯಷ್ಟೇ. ಅದರಲ್ಲೂ ಕರ್ನಾಟಕದ (ಮಂಗಳೂರಿನ) ಶ್ರೀಯುತ ಬೆಣಗಲ್ ನರಸಿಂಗ ರಾವ್ (ಬಿ.ಎನ್ ರಾವ್)ರಂಥ ಅಪ್ರತಿಮ ವ್ಯಕ್ತಿತ್ವಕ್ಕೆ ಮಣ್ಣೆರಚಿದಂತಾಗುತ್ತದೆ! ಹೌದು, ಭಾರತದ ಸಂವಿಧಾನದ ರಚನೆಯ ಹಿಂದೆ ಹಲವಾರು ವ್ಯಕ್ತಿಗಳ ಕಠಿಣ ಪರಿಶ್ರಮವಿದೆ. ಅದೇನು ಓರ್ವ ವ್ಯಕ್ತಿಯಿಂದ ರಚಿಸಲ್ಪಟ್ಟ ಪುಸ್ತಕವಲ್ಲ, ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ರೀತಿಯಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ ಹಾಗೂ ಅಲ್ಲಗಳೆಯಬಾರದು.

ಸಂವಿಧಾನ ರಚನೆಯ ಹಾದಿಯತ್ತ ನೋಡುವುದಾದರೆ...

ಡಾ. ರಾಜೇಂದ್ರ ಪ್ರಸಾದ್‌ರ ಅಧ್ಯಕ್ಷತೆಯಲ್ಲಿ 'ಸಂವಿಧಾನ ರಚನಾ ಸಮಿತಿ' ಎಂಬ ಸಮಿತಿಯು 1946ರಲ್ಲಿ ರೂಪು ತಳೆದಿರುವುದು ಗೊತ್ತೇ ಇರುವಂತಹ ವಿಚಾರ. ಈ ಸಮಿತಿಯ ಉದ್ದೇಶ ದೇಶಕ್ಕೊಂದು ಸಂವಿಧಾನವನ್ನು ರಚಿಸುವುದು. ಅಂದಿನ ಅಖಂಡ ಭಾರತಕ್ಕೆ (ಆಗಿನ್ನು ವಿಭಜನೆಗೊಂಡಿರಲಿಲ್ಲ) ಒಪ್ಪತಕ್ಕ, ಎಲ್ಲರಿಗೂ ನ್ಯಾಯಸಮ್ಮತವಾಗುವಂತಹ, ಉತ್ತರ- ದಕ್ಷಿಣ, ಪೂರ್ವ-ಪಶ್ಚಿಮ ಎಂಬಿತ್ಯಾದಿ ಎಲ್ಲಾ ಸಂಸ್ಕಾರಸಂಸ್ಕೃತಿಗಳಿಗೆ ಅನ್ವಯಿಸುವ, ದೀನ, ದಲಿತ, ಅಲ್ಪ ಸಂಖ್ಯಾತರುಗಳೆಲ್ಲರನ್ನೂ ಒಟ್ಟೊಟ್ಟಿಗೆ ಕರೆದುಕೊಂಡು ಹೋಗಬಹುದಾದ ವಿಶಾಲ ಸಂವಿಧಾನವನ್ನು ರಚಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ, ಮೇಲಾಗಿ ಆ ದಿನಗಳಲ್ಲಿ ಬ್ರಿಟಿಷ್ ಆಡಳಿತವೇ ಕೊನೆಯಾಗಿರಲಿಲ್ಲ! ಆದ್ದರಿಂದಲೇ ಇವೆಲ್ಲವುಗಳನ್ನು ಗಮನಿಸಿಕೊಂಡು ಸವಿಸ್ತಾರವಾದ ಸಂವಿಧಾನದ ರಚನೆಯಾಗಬೇಕೆಂಬ ಉದ್ದೇಶದಿಂದ ಈ ಸಮಿತಿಯು ಬರೋಬ್ಬರಿ 389 ಸದಸ್ಯರುಗಳನ್ನು ತನ್ನೊಳಗೆ ನೇಮಿಸಿಕೊಂಡು ಕಾರ್ಯಪ್ರವೃತ್ತತೆಗೆ ಇಳಿದಿತ್ತು! ಸರೋಜಿನಿ ನಾಯ್ಡು, ಹನ್ಸ ಮೆಹತಾ, ದುರ್ಗಾ ಬಾಯಿ ದೇಶ್‌ಮುಖ್ ಸೇರಿದಂತೆ ಒಟ್ಟು 15 ಮಹಿಳಾ ಪ್ರತಿನಿಧಿಗಳು ಹಾಗು ಸರ್ದಾರ್ ವಲ್ಲಭಬಾಯಿ ಪಟೇಲ್, ನೆಹರು, ಜೆ.ಬಿ. ಕೃಪಲಾನಿ, ಡಾ.ಬಿ.ಆರ್ ಅಂಬೇಡ್ಕರ್, ಬಿ.ಎನ್. ರಾವ್, ಡಾ. ರಾಜೇಂದ್ರ ಪ್ರಸಾದ್, ಎಸ್. ಎನ್ ಮುಖರ್ಜಿ, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಎಸ್.ರಾಧಾಕೃಷ್ಣನ್ ಮುಂತಾದ ಘಟಾನುಘಟಿ ನಾಯಕರುಗಳು ಈ ಸಮಿತಿಯೊಳಗೆ ಇದ್ದರು. (ವಿಭಜನೆಯ ಬಳಿಕ ಈ ಸಂಖ್ಯೆ 299 ಕ್ಕೆ ಇಳಿಕೆಯಾಯಿತು) ಮಾತ್ರವಲ್ಲದೆ ಸಂವಿಧಾನ ರಚನೆಯ ವಿವಿಧ ಸ್ತರಗಳ ಆಳ ಅಧ್ಯಯನಕ್ಕಾಗಿ, ಸಾಧಕ ಬಾಧಕಗಳ ಚರ್ಚೆಗಾಗಿ ಒಟ್ಟು 22 ಉಪಸಮಿತಿಗಳನ್ನು ಕೂಡ ರಚಿಸಿಕೊಂಡಿತ್ತು! ಸಂವಿಧಾನ ಕರಡು ಸಮಿತಿ, ಸಂವಿಧಾನ ಸಲಹಾ ಸಮಿತಿ, ನಿಯಮಗಳ ಪ್ರಕ್ರಿಯಾ ಸಮಿತಿ, ಕೇಂದ್ರೀಯ ಅಧಿಕಾರ ಸಮಿತಿ, ಕೇಂದ್ರೀಯ ಸಂವಿಧಾನ ಸಮಿತಿ, ಪ್ರಾಂತೀಯ ಸಮಿತಿ, ರಾಜ್ಯ ಸಮಿತಿ, ಮಾರ್ಗದರ್ಶಿ ಸಮಿತಿ ಹೀಗೆ ಒಟ್ಟು 8 ಸಮಿತಿಗಳು ತೀರಾ ಪ್ರಮುಖ ಸಮಿತಿಗಳಾಗಿ ಗುರುತಿಸಲ್ಪಟ್ಟಿದ್ದವು.

ಇವೆಲ್ಲ ಸಮಿತಿಗಳು ಬರೇ ನಾಮಕಾವಸ್ಥೆಗೆ ಸೃಷ್ಟಿಯಾದ ಸಮಿತಿಗಳಲ್ಲ, ಬದಲಾಗಿ ಎಲ್ಲಾ ಸಮಿತಿಗಳು ತಮ್ಮ ಪರಿಧಿಯೊಳಗೆ ತಮಗೆ ನೀಡಲ್ಪಟ್ಟ ಕೆಲಸವನ್ನು ಶ್ರಮವಹಿಸಿಕೊಂಡು ಮಾಡಿ ತಮ್ಮ ವರದಿಯನ್ನು ಸಂವಿಧಾನ ಸಮಿತಿಗೆ ನೀಡಬೇಕಾಗಿತ್ತು. ಹಾಗೆಯೇ 1947ರ ಏಪ್ರಿಲ್- ಆಗಸ್ಟ್ ಸುಮಾರಿಗೆ ಅಧ್ಯಯನ ವರದಿಗಳನ್ನು ಈ ಸಮಿತಿಗಳು ಸಂವಿಧಾನ ಸಮಿತಿಗೆ ನೀಡಿದ್ದವು ಕೂಡ. ಇವೆಲ್ಲವೂ ಸುಭದ್ರ ಸಂವಿಧಾನದ ರಚನೆಗೆ ಒಂದಲ್ಲ ಒಂದು ವಿಧದಲ್ಲಿ ಸಹಕಾರಿಯಾಗಿ ನಿಂತ ವರದಿಗಳೇ.

ಸಂವಿಧಾನ ಕರಡು ಸಮಿತಿಗೆ ಅಂಬೇಡ್ಕರ್ ಅಧ್ಯಕ್ಷರಾದರೆ, ಸಂವಿಧಾನ ಸಲಹಾ ಸಮಿತಿಗೆ ಸರ್ದಾರ್ ವಲ್ಲಭ ಬಾಯಿ ಪಟೇಲರ ಅಧ್ಯಕ್ಷತೆಯಿತ್ತು. ನಂಬಲೇ ಬೇಕಾದ ವಿಚಾರವೆಂದರೆ ಭಾರತದ ಸಂವಿಧಾನದ ಮೊದಲ ಕರಡು ರೂಪುಗೊಂಡದ್ದು ನಾವು ಅಂದುಕೊಂಡಂತೆ ಅಂಬೇಡ್ಕರ್‌ರವರ ಕರಡು ಸಮಿತಿಯಿಂದಲ್ಲ, ಬದಲಾಗಿ ಸಂವಿಧಾನ ಸಲಹಾ ಸಮಿತಿಯಿಂದ!

ಹೌದು, ಸಲಹಾ ಸಮಿತಿಯಲ್ಲಿದ್ದ ಮಂಗಳೂರಿನ ಬೆಣಗಲ್ ನರಸಿಂಗ ರಾವ್‌ರವರು ಇನ್ನೋರ್ವ ಮುತ್ಸದ್ದಿ ಎಸ್.ಎನ್. ಮುಖರ್ಜಿಯ ಸಹಾಯದಿಂದ ಮೊತ್ತ ಮೊದಲ ಕರಡನ್ನು ರಚಿಸಿ 1947ರ ಅಕ್ಟೋಬರ್‌ನಲ್ಲಿ 'ಸಂವಿಧಾನ ಕರಡು ಸಮಿತಿಗೆ' ನೀಡಿದ್ದರು ಎಂಬುದು ಗಮನೀಯ. ಈ ಸಂವಿಧಾನದ ಕರಡಲ್ಲಿ ಒಟ್ಟು 243 ವಿಧಿಗಳು ಹಾಗೂ 13 ಪರಿಚ್ಛೇದಗಳಿದ್ದವು. ಮುಂದೆ ಇದೇ ಕರಡನ್ನು ಬ್ಲೂಪ್ರಿಂಟ್ ಎಂಬಂತೆ ಬಳಸಿಕೊಂಡು ಅದಕ್ಕೆ ಒಂದಷ್ಟು ತಿದ್ದುಪಡಿಗಳನ್ನು, ಒಂದಷ್ಟು ಸೇರ್ಪಡೆಗಳನ್ನು ಮಾಡಿಕೊಂಡು ಅಂಬೇಡ್ಕರ್‌ರವರು ಫೆಬ್ರವರಿ 21, 1948 ರಲ್ಲಿ ಸಂವಿಧಾನದ ಇನ್ನೊಂದು ಕರಡನ್ನು ಸಿದ್ಧಪಡಿಸಿ ಸಂವಿಧಾನ ಸಮಿತಿಗೆ ನೀಡಿದ್ದು!

ಹೀಗೆ ತನ್ನ ಟೇಬಲ್‌ಗೆ ಬಂದ 'ಕರಡು ಸಂವಿಧಾನ'ವನ್ನು ಸಂವಿಧಾನ ಸಭೆಯು ಬೇಷರತ್ ಒಪ್ಪಿ ಅಂಗೀಕರಿಸಿಲ್ಲ, ಬದಲಾಗಿ ಅದನ್ನು ಮುದ್ರಿಸಿ ಸಾರ್ವಜನಿಕರ ಅವಗಾಹನೆಗೆ ದೊರೆಯುವಂತೆ ಮಾಡಲಾಯಿತು. ಸಾರ್ವಜನಿಕರಿಂದ ಬಂದ ಟೀಕೆ, ಟಿಪ್ಪಣಿ, ಬದಲಾವಣೆಗಳನ್ನೆಲ್ಲಾ ಸ್ವೀಕರಿಸಿಕೊಂಡು ಅದನ್ನು ವಿಶ್ಲೇಷಿಸಲು ಅದಕ್ಕಾಗಿಯೇ ಒಂದು ವಿಶೇಷ ಸಮಿತಿಯನ್ನು ಕೂಡ ಅಂದು ರಚಿಸಲಾಗಿತ್ತು. ಮಾತ್ರವಲ್ಲದೆ ಸ್ವತಃ ಸಂವಿಧಾನ ಸಮಿತಿಯೇ ಎರಡು ಹಂತಗಳಲ್ಲಿ ಕರಡು ಸಂವಿಧಾನದ ಪ್ರತಿಯೊಂದು ವಿಧಿಗಳನ್ನು ಅಧ್ಯಯನ ನಡೆಸಿ ಸಾಧಕ ಬಾಧಕಗಳ ಬಗ್ಗೆ ಆಳವಾಗಿ ವಿಶ್ಲೇಷಿಸಿತ್ತು. ಇವೆಲ್ಲಾ ಹಂತಗಳನ್ನು ದಾಟಿದ ಬಳಿಕವೇ 1949ರ ನವೆಂಬರ್ 26ರಂದು ಸಂವಿಧಾನ ಅಂತಿಮವಾಗಿ ಅಳವಡಿಕೆಯಾದದ್ದು. ಒಟ್ಟಿನಲ್ಲಿ 1946ರಿಂದ 1949ರ ವರೆಗೆ ಅಂದರೆ ಒಟ್ಟು 2 ವರ್ಷ 11 ತಿಂಗಳು ಹಾಗೂ 18 ದಿನಗಳ ಕಾಲ ಸಂವಿಧಾನ ಸಮಿತಿಯು ಸಂವಿಧಾನ ರಚನೆಗಾಗಿ ಕಠಿಣ ಶ್ರಮವಹಿಸಿತ್ತು ಎಂಬುದು ನಿಸ್ಸಂಶಯ. ಇಂತಹ ಪರಿಶ್ರಮವನ್ನು, ದೇಶ ಸೇವೆಯನ್ನು ನಗಣ್ಯವೆನ್ನಲು ಸಾಧ್ಯವೇ!'

ಸಂವಿಧಾನವನ್ನು 'ಅಂಬೇಡ್ಕರ್ ಸಂವಿಧಾನ'ವೆಂದು ಕರೆದರೆ ಈ ಮೇಲಿನ ಶ್ರಮವನ್ನೆಲ್ಲಾ ಮೂಲೆಗುಂಪು ಮಾಡಿದಂತೆ ಅಲ್ಲವೇ? ಅದರಲ್ಲೂ ಸಂವಿಧಾನದ ಪ್ರಪ್ರಥಮ ಕರಡು ನಿರ್ಮಾಣಗೈದ ನರಸಿಂಗ್ ರಾವ್ ಅವರ ಕಠಿಣ ಶ್ರಮ, ಸಾಧನೆಯನ್ನು ಇಲ್ಲಿ ಪರಿಗಣಿಸಲೇಬೇಕು. ಪ್ರಪಂಚದ ವಿವಿಧ ರಾಷ್ಟ್ರಗಳ ಸಂವಿಧಾನವನ್ನು ಅಭ್ಯಸಿಸುವ ಸಲುವಾಗಿ ಹಾಗೂ ಅಲ್ಲಿನ ಕಾನೂನು ತಜ್ಞರೊಡನೆ , ವಿಷಯ ಪರಿಣಿತರುಗಳೊಡನೆ ಚರ್ಚಿಸುವ ಸಲುವಾಗಿ ಸ್ವತಃ ನರಸಿಂಗ ರಾವ್ ಬೇರೆ ಬೇರೆ ದೇಶಗಳನ್ನು ದಣಿವರಿಯದೇ ಸುತ್ತಿ ಬಂದಿದ್ದರು. ನಿರಂತರ ಅಧ್ಯಯನಶೀಲತೆ, ವಿಶ್ಲೇಷಣೆಗಳ ಮೂಲಕ ಅದ್ಭುತವಾದ ಕರಡು ಸಂವಿಧಾನವನ್ನು ರಚಿಸುವಲ್ಲಿ ಈ ಮೂಲಕ ಯಶಸ್ವಿಯಾಗಿದ್ದರು. ಮೇಲಾಗಿ ಇಷ್ಟೆಲ್ಲಾ ಅವಿರತ ಶ್ರಮಕ್ಕೆ ಅವರು ಒಂದೇ ಒಂದು ರೂಪಾಯಿ ವೇತನವನ್ನು ಕೂಡ ಸರಕಾರದಿಂದ ಪಡೆದುಕೊಂಡಿರಲಿಲ್ಲ! ಅಂದರೆ ಸರಿಸುಮಾರು ಮೂರು ವರ್ಷಗಳ ಕಾಲ ಅವರು ಪುಕ್ಕಟೆಯಾಗಿ ದೇಶಕ್ಕಾಗಿ ದುಡಿದಿದ್ದರು! ಸಂವಿಧಾನದ ರಚನೆಯ ಹಿಂದಿನ ಇವರ ಶ್ರಮವನ್ನು ಗುರುತಿಸಿ ಸಂವಿಧಾನ ಸಭೆಯಲ್ಲಿ ಮಾತನಾಡಿದ ಡಾ. ರಾಜೇಂದ್ರ ಪ್ರಸಾದ್, ''ಡಾ.ಬಿ.ಆರ್ ಅಂಬೇಡ್ಕರ್‌ವರು ಸಂವಿಧಾನದ ಎಲ್ಲಾ ಹಂತಗಳಲ್ಲೂ ಕೌಶಲ್ಯಪೂರ್ಣ ಪೈಲಟ್ ಆದರೆ ಬಿ.ಎನ್.ರಾವ್ ಯೋಜನೆಯನ್ನು ಅದ್ಭುತವಾಗಿ ಕಲ್ಪಿಸಿಕೊಂಡು ಅದರ ಅನುಷ್ಠಾನಕ್ಕೆ ಅಡಿಪಾಯ ಹಾಕಿದ ಶ್ರೇಷ್ಠ ವ್ಯಕ್ತಿ' ಎಂದು ಗೌರವಿಸಿರುತ್ತಾರೆ.

ಕೈಬರಹದ ಸಂವಿಧಾನ

ಇನ್ನು ಅಂತಿಮ ಹಂತಕ್ಕೆ ಬಂದ ಸಂವಿಧಾನವನ್ನು ಪುಸ್ತಕ ರೂಪಕ್ಕೆ ಇಳಿಸಿದ ಕೆಲಸ ಕೂಡ ಸಣ್ಣದೇನಲ್ಲ. ನೆನಪಿರಲಿ, ಭಾರತದ ಸಂವಿಧಾನ ಅದ್ಯಾವುದೇ ಮೆಷಿನ್ ಪ್ರಿಂಟೆಡ್ ಪುಸ್ತಕವಲ್ಲ. ಬದಲಾಗಿ ಪ್ರೇಮ್ ಬಿಹಾರಿ ನಾರಾಯಣ ರೈಝದ ಎಂಬವರ ಹಸ್ತಾಕ್ಷರದಲ್ಲಿ ಮೂಡಿ ಬಂದಿರುವ ಸುಂದರ ಪುಸ್ತಕವದು. ಅಂದಿನ ಕಾಲದ ಪ್ರಖ್ಯಾತ ಕ್ಯಾಲಿಗ್ರಾಫರ್ ಆಗಿದ್ದ ಇವರು ಭಾರತದ ಸಂವಿಧಾನವನ್ನು ಸುಂದರವಾದ ಚೌಕಟ್ಟಿನೊಳಗೆ ಅಂದವಾಗಿ ಬರೆದು ಸಮರ್ಪಿಸಿದ್ದರು. ಸರಿಸುಮಾರು 250 ಪುಟಗಳ ಸಂವಿಧಾನವನ್ನು ಸುಂದರವಾದ ಇಟಾಲಿಕ್ ಶೈಲಿಯಲ್ಲಿ ಬರೆಯಲು ಅವರು ಬಳಸಿದ್ದು ಬರೋಬ್ಬರಿ 432 ಪೆನ್‌ಗಳನ್ನು ಹಾಗು 303 ನಿಬ್‌ಗಳನ್ನು! ತೆಗೆದು ಕೊಂಡ ಕಾಲಾವಧಿ ಬರೋಬ್ಬರಿ 6 ತಿಂಗಳುಗಳು!

ಸಂವಿಧಾನ ರಚನೆಯ ಹಿಂದಿನ ಈ ಎಲ್ಲಾ ಪರಿಶ್ರಮಗಳನ್ನು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವೇ?

ಭಾರತದ ಸಂವಿಧಾನದ ರಚನೆಯ ಹಿಂದೆ ಡಾ.ಬಿ.ಆರ್. ಅಂಬೇಡ್ಕರ್‌ವರ ಶ್ರಮ ಖಂಡಿತವಾಗಿಯೂ ಇದೆ. ಬೆಣಗಲ್‌ರವರು ಸಿದ್ಧಪಡಿಸಿ ಕೊಟ್ಟ ಅಧ್ಯಯನಶೀಲ ಕರಡನ್ನು ಮತ್ತೊಂದಷ್ಟು ಅಧ್ಯಯನ, ವಿಶ್ಲೇಷಣೆಗೆ ಒಳಪಡಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಂಡು ಪ್ರಬುದ್ಧ ರೂಪದ ಸಂವಿಧಾನವನ್ನು ಭಾರತಕ್ಕೆ ಧಕ್ಕುವಂತೆ ಮಾಡಿದ್ದು ಇದೇ ಅಂಬೇಡ್ಕರ್‌ರವರು ಎಂಬುದು ನಿರ್ವಿವಾದ. ಈ ಬಗ್ಗೆ ಅದ್ಯಾವ ಗೊಂದಲವೂ ಇರಬಾರದು. ಹಾಗಂತ ಈ ದೇಶದ ಸಂವಿಧಾನವನ್ನು ಅವರೊಬ್ಬರೇ ಮಾಡಿದ್ದಾರೆ ಎಂದೆನ್ನುತ್ತಾ ಇತರರ ಕೆಲಸಗಳನ್ನು, ಪಟ್ಟಿರುವ ಕಠಿಣ ಪರಿಶ್ರಮವನ್ನು ಮೂಲೆಗುಂಪಾಗಿಸುವುದು ಮಾತ್ರ ಒಪ್ಪತಕ್ಕ ವಿಚಾರವಲ್ಲ ಎಂಬುದಷ್ಟೇ ಈ ಲೇಖನದ ಉದ್ದೇಶ.

ಧರ್ಮದ ಅಮಲು, ಜಾಗತಿಕ ಅಸ್ಥಿರತೆ ಮತ್ತು ಇಸ್ಲಾಮ್ ಮೂಲಭೂತವಾದ

ಹರ್ಷ ಹೆಗಡೆ ಕೊಂಡದಕುಳಿ

ಧಾರ್ಮಿಕ ಮೂಲಭೂತವಾದಕ್ಕೆ ಅಷ್ಟೊಂದು ಶಕ್ತಿ ಇದೆಯಾ? - ಈ ಹೊತ್ತಿಗೆ ಅಂಥದ್ದೊಂದು ಪ್ರಶ್ನೆ ಕೇಳಿಕೊಳ್ಳಲೇಬೇಕಾದ ಅವಶ್ಯಕತೆಯಿದೆ. ಇವತ್ತು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ, ಅದರ ಹಿಂದಿನ ಕಾರಣಗಳನ್ನು ಅವಲೋಕಿಸಿದರೆ ಈ ಪ್ರಶ್ನೆಯ ತೀವ್ರತೆ ಅರ್ಥವಾಗುತ್ತದೆ. ಪ್ರಶ್ನೆಗಿಂತಲೂ ಅದರ ಉತ್ತರದ ವ್ಯಗ್ರತೆ ಇನ್ನೂ ಭಯಾನಕವಾದದ್ದು. ಮನುಷ್ಯ ತನ್ನ ಹಸಿವಿಗಿಂತ, ತನ್ನ ಕುಟುಂಬದ ಭವಿಷ್ಯಕ್ಕಿಂತ ಹೆಚ್ಚಾಗಿ ತನ್ನ ಧರ್ಮದ ಅಸ್ಮಿತೆಯನ್ನು ಆರಾಧಿಸಲು ಶುರುಮಾಡಿದಾಗ ಏನಾಗುತ್ತದೆ ಎಂಬುದಕ್ಕೆ ಇವತ್ತು ನಡೆಯುತ್ತಿರುವ ಜಾಗತಿಕ ಯುದ್ಧಗಳೇ ಸಾಕ್ಷಿ. ಅಲ್ಲಿ ತರ್ಕ, ಮಾನವೀಯ ನೆಲೆ, ಭವಿಷ್ಯ, ಕನಸುಗಳು ಇವೆಲ್ಲಾ ನಗಣ್ಯ. ಇಂದಿನ ಜಾಗತಿಕ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದರಲ್ಲೂ ವಿಶೇಷವಾಗಿ ಮಧ್ಯಪ್ರಾಚ್ಯ ದೇಶಗಳ 'ಇಸ್ಲಾಮಿಕ್ ಮೂಲಭೂತವಾದ'ದ ಏರಿಳಿತಗಳನ್ನು ನೋಡಿದರೆ, ಮನುಷ್ಯನು ಪ್ರಗತಿಗಿಂತ ಹೆಚ್ಚಾಗಿ ಧರ್ಮದ ಅಮಲಿನಲ್ಲಿ ಅವನತಿಯತ್ತ ಮುಖ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಏನೂ ಇಲ್ಲದ ಬಡ ರಾಷ್ಟ್ರವೊಂದು ತನ್ನ ಧರ್ಮದ ರಕ್ಷಣೆ ಎನ್ನುವ ಘೋಷಣೆ ಕೇಳಿದ ತಕ್ಷಣ ರಣಭಯಂಕರವಾಗಿ ಎದ್ದು ನಿಲ್ಲುತ್ತದೆ ಎಂದರೆ ಅದರ ಹಿಂದಿನ ಧಾರ್ಮಿಕ ಮೂಲಭೂತವಾದ ಅದೆಷ್ಟು ಗಟ್ಟಿಯಾದದ್ದೆಂದು ಅಂದಾಜಿಸಬಹುದು. ಅಲ್ಲಿ ಆರ್ಥಿಕ ಪ್ರಗತಿಯ ಚರ್ಚೆಗಳಿಗಿಂತಲೂ ಧಾರ್ಮಿಕ ಪ್ರವಚನಗಳು ಹೆಚ್ಚು ಮಹತ್ವ ಪಡೆಯುತ್ತದೆಯೆಂದಾದರೆ, ಶಿಕ್ಷಣದ ಗುರಿಗಳು ಅರ್ಥಹೀನವಾಗುತ್ತವೆ ಎಂದಾದರೆ ಅಲ್ಲಿರುವುದು ಕೇವಲ 'ಧರ್ಮದ ಉಳಿವು' ಎಂಬ ಭಾವನಾತ್ಮಕ ಕಿಚ್ಚೇ ಹೊರತು ಮತ್ತೇನೂ ಅಲ್ಲ. ಇಸ್ಲಾಮಿಕ್ ಮೂಲಭೂತವಾದದ ವಿಷಯಕ್ಕೆ ಬಂದಾಗ ಇದು ಅಕ್ಷರಶಃ ಸತ್ಯ. ಅಲ್ಲದೇ ಸಮಸ್ಯೆಯೆಂದರೆ ಇದು ಕೇವಲ ಒಂದು ದೇಶಕ್ಕೆ ಸೀಮಿತವಾಗಿರದೇ, ಗಡಿಗಳಿಲ್ಲದ ಒಂದು ಸಿದ್ಧಾಂತವಾಗಿ ವಿಶ್ವಾದ್ಯಂತ ಹರಡಿರುವುದು. ಮಧ್ಯಪ್ರಾಚ್ಯದ ಮರಳುಗಾಡಿನಿಂದ ಹಿಡಿದು ಯುರೋಪಿನ ಸುಸಜ್ಜಿತ ನಗರಗಳವರೆಗೆ, ಈ ಮೂಲಭೂತವಾದದ ನೆರಳು ವ್ಯಾಪಿಸಿರುವುದು ಕಳವಳಕಾರಿ ಸಂಗತಿ.

ನಾನಿಲ್ಲಿ ಧರ್ಮವನ್ನು ಆಚರಿಸುವವರ ಕುರಿತು ಆಡುತ್ತಿಲ್ಲ. ಮನುಷ್ಯ ಎಂದಾದ ಮೇಲೆ ಆತ ಒಂದು ನಿಯಮವನ್ನು ಅನುಸರಿಸಲೇಬೇಕು. ಬದುಕು ಹೀಗೀಗೆ ಸಾಗಬೇಕು ಎಂದಾಗಲು, ಉದ್ದೇಶಗಳಿರಲು ಧರ್ಮಕ್ಕಿಂತಲೂ ಸುಲಭವಾದದ್ದು ಬೇರೆಯದಿಲ್ಲ, ಆದರೆ ಇಲ್ಲಿ ಉಲ್ಲೇಖಿಸಿರುವುದು ತಮ್ಮದು ಮಾತ್ರ ಶ್ರೇಷ್ಠ ಎನ್ನುವ ಮಾನಸಿಕತೆಯ ಧರ್ಮಾಂಧ ಮೂಲಭೂತವಾದದ ಬಗ್ಗೆ. ತಮ್ಮ ಧರ್ಮ ಗ್ರಂಥದ ಅಕ್ಷರಶಃ ಪಾಲನೆಯ ನೆಪ (?) ಮತ್ತು ಅದನ್ನು ಜಗತ್ತಿನ ಮೇಲೆ ಹೇರುವ ಹಠ, ಇಂದು ಅನೇಕ ದೇಶಗಳನ್ನು ಯುದ್ಧಭೂಮಿಯನ್ನಾಗಿ ಮಾಡಿದೆ. ಒಂದು ಕಾಲದಲ್ಲಿ ವ್ಯಾಪಾರದ ಬಹುಮುಖ್ಯ ಮಾರ್ಗಗಳಾಗಿದ್ದ, ಆರ್ಥಿಕತೆಯನ್ನೇ ಉಸಿರಾಡುತ್ತಿದ್ದ ಪ್ರದೇಶಗಳು ಇಂದು ಮದ್ದು ಗುಂಡುಗಳನ್ನು ಸ್ಫೋಟಿಸುವ ರಣಭೀಕರತೆಗೆ ಸಾಕ್ಷಿಯಾಗುತ್ತಿವೆ. ಅಫ್ಘಾನಿಸ್ತಾನದ ಗುಡ್ಡಗಾಡು ಪ್ರದೇಶಗಳಲ್ಲಿ ಅಥವಾ ಸಿರಿಯಾದ ಬೀದಿಗಳಲ್ಲಿ ನಡೆಯುವ ಹೋರಾಟಗಳು ಕೇವಲ ಭೂಮಿಗಾಗಿಯೋ, ಪ್ರಾದೇಶಿಕ ರಕ್ಷಣೆಗಾಗಿಯೋ ನಡೆಯುತ್ತಿರುವುದಲ್ಲ; ಅವು ನಡೆಯುತ್ತಿರುವುದು ಒಂದು ನಿರ್ದಿಷ್ಟ ಜೀವನಶೈಲಿ ಮತ್ತು ನಂಬಿಕೆಯನ್ನು ಜಾರಿಗೊಳಿಸಲು.

ಇದರರ್ಥ ಇಷ್ಟೇ, ವಿನಾಶದ ಹಾದಿಯಲ್ಲಿ ಆದರ್ಶದ ಮುಖವಾಡ ಹೊತ್ತು ನಡೆಯುತ್ತಿರುವುದು. ಅಷ್ಟಕ್ಕೂ ಈ ಮೂಲಭೂತವಾದ ಅಷ್ಟೆಲ್ಲಾ ಮತಿಭ್ರಮಣೆ ಮಾಡುತ್ತದೆಯಾ ಎಂದರೆ, ಮೂಲಭೂತವಾದದ ಅತಿ ದೊಡ್ಡ ಶಕ್ತಿ ಇರುವುದೇ ಅದು ನೀಡುವ 'ಸ್ವರ್ಗದ ಭರವಸೆ'ಯಲ್ಲಿ, ಇಲ್ಲೆಲ್ಲಿಯೂ ಇರದ, ಯಾರೊಬ್ಬರೂ ಕಾಣದ, ಇದೆಯೋ ಇಲ್ಲವೋ ಅದೂ ಗೊತ್ತಿರದ ಸ್ವರ್ಗದ ಜೀವನದ ಆಸೆಯೇ ಇದೆಲ್ಲದರ ಹಿಂದಿನ ಚಾಲಕ ಶಕ್ತಿ. ಒಬ್ಬ ಯುವಕ ತನ್ನ ಮೈಮೇಲೆ ಬಾಂಬು ಕಟ್ಟಿಕೊಂಡು ಜನನಿಬಿಡ ಪ್ರದೇಶಕ್ಕೆ ಕೇವಲ ಸಾಯಲಿಕ್ಕಾಗಿ ನುಗ್ಗುತ್ತಾನೆ ಎಂದರೆ, ಅವನ ಹಿಂದೆ ಕೆಲಸ ಮಾಡಿರುವುದು ಸಾವಿರಾರು ವರ್ಷಗಳ ಕಾಲವೂ ಹರಿದುಕೊಂಡು ಬಂದಿರುವ ಸಿದ್ಧಾಂತದ ಪ್ರಭಾವ. ಆಧುನಿಕ ವಿಜ್ಞಾನ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಗಿಂತಲೂ ಅವನಿಗೆ ತನ್ನ ಧರ್ಮದ ಶ್ರೇಷ್ಠತೆಯೇ ಮಿಗಿಲಾಗಿ ಕಾಣುತ್ತದೆ. ಈ ಮನಸ್ಥಿತಿಯೇ ಇಂದು ಜಗತ್ತಿನ ಅತಿ ದೊಡ್ಡ ಸವಾಲಾಗಿರುವುದು.

ಇಸ್ಲಾಮಿಕ್ ಮೂಲಭೂತವಾದವು ಕೇವಲ ಧರ್ಮಗ್ರಂಥಗಳ ಮೇಲೆಯೋ, ಉಗ್ರವಾದದ ಮೇಲೆಯೋ ನಿಂತಿಲ್ಲ, ಬದಲಿಗೆ ಅದು ಯುವ ಮನಸ್ಸುಗಳ ತಲೆಕೆಡಿಸುವ Brainwashing ಪ್ರಕ್ರಿಯೆಯ ಮೇಲೆ ನಿಂತಿದೆ. ಶಾಲೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ 'ನಮ್ಮವರೇ ಶ್ರೇಷ್ಠ, ಉಳಿದವರೆಲ್ಲ ವಿರೋಧಿಗಳು' ಎಂಬ ವಿಷಬೀಜ ಬಿತ್ತಿದಾಗ, ಅಲ್ಲಿ ಧರ್ಮದ ನಿಜವಾದ ಬೋಧನೆಯ ಬದಲಿಗೆ ದ್ವೇಷದ ಬೆಳೆ ಬೆಳೆಯುತ್ತದೆ. ತಾನು ನಂಬಿದ ದೇವರಿಗಾಗಿ ಪ್ರಾಣ ಕೊಡುವುದು ಮತ್ತು ಇನ್ನೊಬ್ಬರ ಪ್ರಾಣ ತೆಗೆಯುವುದು ಪುಣ್ಯದ ಕೆಲಸ ಎಂದು ನಂಬಿದಾಗ, ನಾಗರಿಕ ಸಮಾಜದ ಬಾಂಧವ್ಯ ಕುಸಿಯತೊಡಗುತ್ತದೆ. ಮೊದಲು ಇದನ್ನು ಅಲ್ಲಗಳೆದಿದ್ದ ಪಾಶ್ಚಿಮಾತ್ಯ ದೇಶಗಳು ಸಹ ಇಂದು ಈ ಇಸ್ಲಾಮ್ ಮೂಲಭೂತವಾದದ ಬಿಸಿ ಅನುಭವಿಸುತ್ತಿವೆ. ವಲಸೆಯ ಹೆಸರಿನಲ್ಲಿ ಹೋದ ಈ ಮೂಲಭೂತವಾದಿಗಳು ಅಲ್ಲಿನ ಸ್ಥಳೀಯ ಸಂಸ್ಕೃತಿಯೊಂದಿಗೆ ಸಂಘರ್ಷಕ್ಕಿಳಿಯುತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಏನನ್ನಾದರೂ ಹೇಳಿದರೆ ಸಾಕು, ಇಡೀ ಜಗತ್ತಿನ ಮೂಲಭೂತವಾದಿಗಳು ಒಂದಾಗಿ ಬೀದಿಗಿಳಿಯುತ್ತಾರೆ. ಇದು ನಾಗರಿಕ ಸಮಾಜದ ಭವಿಷ್ಯದ ಹಾದಿಯನ್ನೇ ಮುಚ್ಚಿಹಾಕುತ್ತಿದೆ.

ಕೊನೆಯದಾಗಿ, ಧರ್ಮ ಎಂಬುದು ಮನುಷ್ಯನನ್ನು ಸನ್ಮಾರ್ಗಕ್ಕೆ ನಡೆಸುವ ದಾರಿದೀಪವಾಗಬೇಕಿತ್ತು. ಆದರೆ ಇಂದು ಅದು ಪ್ರತಿಷ್ಠೆ ಮತ್ತು ಅಸ್ಮಿತೆಯ ಹಠಕ್ಕೆ ಬಲಿಯಾಗಿದೆ. ಇಸ್ಲಾಮಿಕ್ ಮೂಲಭೂತವಾದದ ಕಿಡಿಗಳು ಜಗತ್ತನ್ನು ಬೂದಿ ಮಾಡುವ ಮುನ್ನ, ಮಾನವತ್ವದ ಮಳೆ ಸುರಿಯಬೇಕಿದೆ. ಇಲ್ಲದಿದ್ದರೆ, ಮುಂದಿನ ಪೀಳಿಗೆಗೆ ಉಳಿಯುವುದು ಕೇವಲ ರಕ್ತಸಿಕ್ತ ಇತಿಹಾಸದ ಪುಟಗಳು ಮಾತ್ರ.

ಅಷ್ಟಕ್ಕೂ ಅದು ಸುಲಭವೇನಲ್ಲ, ಯಾಕೆಂದರೆ ಅದು 'ವಸುಧೈವ ಕುಟುಂಬಕಮ್' ಎಂದು ಬೋಧಿಸಿಯೂ ಇಲ್ಲ, ಧರ್ಮಕ್ಕಿಂತಲೂ ರಾಷ್ಟ್ರ ಮುಖ್ಯ ಎಂದೂ ಹೇಳಿಲ್ಲ.

ತೀವ್ರಗೊಂಡ ಮಧ್ಯಪ್ರಾಚ್ಯ ಯುದ್ಧ: ತೈಲ ಉತ್ಪಾದನೆ, ಪ್ರಮುಖ ಹಡಗು ಮಾರ್ಗಗಳಿಗೆ ಅಡ್ಡಿ

ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ

ಚಿಕಾಗೋ: ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರಗೊಂಡು ತೈಲ ಉತ್ಪಾದನೆ ಮತ್ತು ಪ್ರಮುಖ ಹಡಗು ಮಾರ್ಗಗಳಿಗೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ, ಸೋಮವಾರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗಳ ಗಡಿ ತಲುಪಿ ನಂತರ ಅಲ್ಪ ಕುಸಿತ ಕಂಡಿತು.

ಮಾರುಕಟ್ಟೆ ಏರಿಕೆ ಮತ್ತು ಪೂರೈಕೆ ಭೀತಿ: ದಿನದ ಆರಂಭದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ 119.50 ಡಾಲರ್‌ಗೆ ಏರುವ ಮೂಲಕ ಭಾರಿ ಜಿಗಿತ ದಾಖಲಿಸಿತು. ಜಿ7 ರಾಷ್ಟ್ರಗಳು ತಮ್ಮ ತುರ್ತು ತೈಲ ದಾಸ್ತಾನುಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ವರದಿಗಳ ನಂತರ ಬೆಲೆ ಸುಮಾರು 106 ಡಾಲರ್‌ಗೆ ಇಳಿಕೆಯಾದರೂ, ಅಸ್ಥಿರತೆ ಮುಂದುವರಿದಿದೆ. ವಿಶ್ವದ ಶೇ.20ರಷ್ಟು ತೈಲ ಸಾಗಣೆಯಾಗುವ ಹಾರ್ಮುಜ್ ಜಲಸಂಧಿಯಲ್ಲಿ ತೈಲ ಟ್ಯಾಂಕರ್‌ಗಳ ಸಂಚಾರ ಬಹುತೇಕ ಸ್ಥಗಿತಗೊಂಡಿರುವುದು ಆತಂಕ ಹೆಚ್ಚಿಸಿದೆ. ರಫ್ತು ನಿರ್ಬಂಧಗಳಿಂದಾಗಿ ಇರಾಕ್, ಕುವೈತ್ ಮತ್ತು ಯುಎಇ ಈಗಾಗಲೇ ತೈಲ ಉತ್ಪಾದನೆಯಲ್ಲಿ ಕಡಿತಗೊಳಿಸಿವೆ.

ಮೂಲಸೌಕರ್ಯಗಳ ಮೇಲೆ ದಾಳಿ: ಇಂಧನ ಮತ್ತು ಸೌಲಭ್ಯಗಳ ಮೇಲೆ ನಡೆದ ಉದ್ದೇಶಿತ ದಾಳಿಗಳಿಂದಾಗಿ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಂಡಿದೆ. ಇರಾನ್‌ನಿಂದ ಪ್ರಮುಖ ನೀರು ಶುದ್ಧೀಕರಣ ಘಟಕದ ಮೇಲೆ ದಾಳಿ ನಡೆದಿದೆ ಎಂದು ಆರೋಪಿಸಲಾಗಿದ್ದು, ತನ್ನ ಸಂಸ್ಕರಣಾ ಘಟಕಕ್ಕೆ ಬೆಂಕಿ ಬಿದ್ದ ಹಿನ್ನೆಲೆಯಲ್ಲಿ ಬಹ್ರೇನ್‌ನ ರಾಷ್ಟ್ರೀಯ ತೈಲ ಕಂಪನಿ ಫೋರ್ಸ್ ಮೆಜರ್(ಅನಿವಾರ್ಯ ಪರಿಸ್ಥಿತಿಯ ಕಾರಣ ಒಪ್ಪಂದದಿಂದ ವಿನಾಯಿತಿ) ಘೋಷಿಸಿದೆ. ಟೆಹ್ರಾನ್‌ನ ತೈಲ ಡಿಪೋಗಳ ಮೇಲೆ ಇಸ್ರೇಲ್ ನಡೆಸಿದ ದಾಳಿ ಇಂಧನ ಕೊರತೆಯ ಭೀತಿಯನ್ನು ಹೆಚ್ಚಿಸಿದೆ.

ಆರ್ಥಿಕ ಪರಿಣಾಮ: ತೈಲ ಬೆಲೆ ಏರಿಕೆಯ ಬಿಸಿ ಜಾಗತಿಕವಾಗಿ ತಟ್ಟುತ್ತಿದ್ದು, ಅಮೆರಿಕದಲ್ಲಿ ಪೆಟ್ರೋಲ್ ಬೆಲೆ ಒಂದೇ ವಾರದಲ್ಲಿ 50 ಸೆಂಟ್ಸ್‌ಗಳಷ್ಟು ಏರಿಕೆಯಾಗಿದೆ. ಮಧ್ಯಪ್ರಾಚ್ಯದ ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿರುವ ಏಷ್ಯಾದ ಆರ್ಥಿಕತೆಗಳು ಈ ಬೆಲೆ ಏರಿಕೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಷೇರು ಮಾರುಕಟ್ಟೆಗಳು ಭಾರಿ ಕುಸಿತ ಕಂಡಿವೆ.

ವದಂತಿ ಹರಡಿದ ಆರೋಪ: 313ಕ್ಕೂ ಅಧಿಕ ಮಂದಿ ಬಂಧನ

ಇರಾನ್ ಕೊಲ್ಲಿ ದೇಶಗಳ ಮೇಲೆ ನಡೆಸಿದ ದಾಳಿಗಳಿಗೆ ಸಂಬಂಧಿಸಿ ತಪ್ಪು ಮಾಹಿತಿ ಹರಡಿದ ಮತ್ತು ವದಂತಿಗಳನ್ನು ಹಂಚಿಕೊಂಡ ಪ್ರಜೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿರುವ ಗಲ್ಫ್ ದೇಶಗಳು, ಇಂತಹ ವದಂತಿ ಹಂಚಿಕೊಂಡ ಮತ್ತು ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ 313ಕ್ಕೂ ಅಧಿಕ ಮಂದಿಯನ್ನು ಬಂಧಿಸಿವೆ. ಇರಾನ್ ವಿಮಾನ ನಿಲ್ದಾಣಗಳನ್ನು, ಸೇನಾ ನೆಲೆಗಳನ್ನು ಮತ್ತು ಇಂಧನ ಸ್ಥಾವರಗಳ ಮೇಲೆ ದಿನನಿತ್ಯ ಡ್ರೋನ್ ಮತ್ತು ಕ್ಷಿಪಣಿ ದಾಳಿಗೆ ಸಂಬಂಧಿಸಿ ಈ ವದಂತಿಗಳನ್ನು ಹರಡಲಾಗಿದ್ದು, ವಿಡಿಯೋ ಕ್ಲಿಪ್ಸ್‌ಗಳನ್ನು ಹಂಚಿಕೊಂಡ ಮತ್ತು ತಪ್ಪು ಮಾಹಿತಿಗಳನ್ನು, ವದಂತಿಗಳನ್ನು ಹರಡಿ ಜನರನ್ನು ಪ್ರಚೋದಿಸಿದ ಆರೋಪದಡಿ ಈ ಬಂಧನ ನಡೆದಿದೆ ಎಂದು ಖತಾರ್‌ನ ಗೃಹಸಚಿವಾಲಯದ ಹೇಳಿಕೆ ತಿಳಿಸಿದೆ. ಬಂಧಿತರಲ್ಲಿ ಕುವೈತ್, ಬಹ್ರೈನ್, ಸಂಯುಕ್ತ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ ಸೇರಿದಂತೆ ವಿವಿಧ ದೇಶಗಳ ಜನರು ಸೇರಿದ್ದು, ಆರ್ಥಿಕ ಮತ್ತು ಸೈಬರ್ ಕ್ರೈಮ್‌ಗಳಿಗಾಗಿ ಇರುವ ಇಲಾಖೆಯ ಮೂಲಕ ಈ ಬಂಧನ ನಡೆದಿದೆ. ಅರಬ್ ದೇಶಗಳಲ್ಲಿ ದೇಶದ ವಿರುದ್ಧ, ಅಪಪ್ರಚಾರ ನಡೆಸುವಂತಹವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.



ತೈಲ ಬೆಲೆ ಮತ್ತು ಪೂರೈಕೆಯಲ್ಲಿ ಸ್ಥಿರತೆ ಕಾಯಲು ಭಾರತ ನೆರವು

ಭಾರತ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣ ಜಾಗತಿಕ ತೈಲ ಬೆಲೆ ಮತ್ತು ಪೂರೈಕೆ ಸರಪಣಿಯಲ್ಲಿ ಸ್ಥಿರತೆ ಉಂಟಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಶ್ವದ 3ನೇ ಅತಿದೊಡ್ಡ ತೈಲ ಆಮದು ದೇಶವಾಗಿರುವ ಭಾರತವು, ಜಗತ್ತಿನ 4ನೇ ಅತಿದೊಡ್ಡ ಸಂಸ್ಕರಣಾದಾರ ಮತ್ತು 5ನೇ ಅತಿದೊಡ್ಡ ರಫ್ತುದಾರ ದೇಶವಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತೈಲ ಪೂರೈಕೆ ಸರಪಣಿಯನ್ನು ಸ್ಥಿರವಾಗಿ ಕಾಯ್ದುಕೊಳ್ಳುವಲ್ಲಿ ಭಾರತ ವಹಿಸಿರುವ ಪಾತ್ರವೀಗ ಜಗತ್ತಿನ ಗಮನ ಸೆಳೆದಿದೆ. ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಆಸುಪಾಸಿನಲ್ಲಿ ಉಳಿಯುವ ಸಾಧ್ಯತೆ ಇದೆ ಎಂದು ಜಾಗತಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿ ಯಾವುದೇ ಪೆಟ್ರೋಲ್, ಡೀಸೆಲ್ ಪಂಪ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲಷ್ಟಿ, ಪೂರೈಕೆ ವ್ಯವಸ್ಥೆ ಸಮರ್ಪಕವಾಗಿದೆ. ಯಾವುದೇ ಅಡಚಣೆಗಳ ಅಪಾಯವನ್ನು ನಿವಾರಿಸಲು ಕೇಂದ್ರ ಸರ್ಕಾರವು ಹಾರ್ಮುಜ್ ಜಲಸಂಧಿಯ ಮಾರ್ಗವನ್ನು ಹೊರತುಪಡಿಸಿ ಪರ್ಯಾಯ ಮಾರ್ಗಗಳ ಮೂಲಕ ತೈಲ ಪಡೆಯುವ ಪ್ರಕ್ರಿಯೆಗೆ ಇನ್ನಷ್ಟು ವೇಗ ನೀಡಿದೆ ಎಂದು ಮೂಲಗಳು ತಿಳಿಸಿವೆ. ಭಾರತವೀಗ ವಿಮಾನ ಇಂಧನವನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹ ಹೊಂದಿದ್ದು, ಯಾವುದೇ ಕಳವಳಕ್ಕೆ ಅವಕಾಶ ಇಲ್ಲ. ಭಾರತವು ಪ್ರಮುಖ ವೈಮಾನಿಕ ಇಂಧನ ಉತ್ಪಾದಕ ಮತ್ತು ರಫ್ತುದಾರನೂ ಆಗಿರುವುದರಿಂದ ವಿಮಾನ ಇಂಧನ ಪೂರೈಕೆ ಬಗೆಗೆ ಚಿಂತೆ ಬೇಕಾಗಿಲ್ಲ ಇತರ ಅನೇಕ ದೇಶಗಳಲ್ಲಿ ಈಗ ತೈಲ ಬಿಕ್ಕಟ್ಟು ಉಂಟಾಗಿರುವುದಕ್ಕೆ ಹೋಲಿಸಿದರೆ ಭಾರತ ತೈಲ ಕ್ಷೇತ್ರದಲ್ಲಿ ಸಾಕಷ್ಟು ಸುಭದ್ರವಾಗಿದೆ ಎಂದು ಮೂಲಗಳು ಬೊಟ್ಟು ಮಾಡಿವೆ. ಕೇಂದ್ರ ಸರ್ಕಾರ ತೈಲ ಪೂರೈಕೆ ಕ್ಷೇತ್ರದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಸರ್ವ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಯುದ್ಧ ನಿಲ್ಲಲು ಮೋದಿಯ ಒಂದು ಕರೆ ಸಾಕು: ಯುಎಇ

ಹೊಸದಿಲ್ಲಿ: ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಮತ್ತು ಇರಾನ್‌ಗೆ ಒಂದೇ ಒಂದು ಫೋನ್ ಕರೆ ಮಾಡಿ ಸಂಘರ್ಷ ನಿಲ್ಲಿಸುವಂತೆ ಹೇಳಿದರೆ ಎಲ್ಲ ಸಮಸ್ಯೆಗಳು ಬಗೆಹರಿಯುತ್ತದೆ ಎಂದು ಯುಎಇ ರಾಯಭಾರಿ ಹುಸೇನ್ ಹಸನ್ ಮಿರ್ಜಾ ಹೇಳಿದ್ದಾರೆ. ಸಂಘರ್ಷದಲ್ಲಿ ಯುಎಇ ಭಾಗಿಯಾಗಲು ಯಾವುದೇ ಕಾರಣವಿಲ್ಲ, ಅಬುಧಾಬಿ ಸೂಕ್ಷ್ಮ ಭೌಗೋಳಿಕ ರಾಜಕೀಯ ಸ್ಥಾನದಲ್ಲಿದೆ. ಇದು ಇರಾನ್‌ಗೆ ನೆರೆಯ ರಾಷ್ಟ್ರ ಮತ್ತು ಅಬ್ರಹಾಂ ಒಪ್ಪಂದಗಳಲ್ಲಿ ಇಸ್ರೇಲ್‌ಗೆ ಪಾಲುದಾರ. ಆ ನಿಲುವು ನಿಖರವಾಗಿ ಯುಎಇಯನ್ನು ಉಪಯುಕ್ತವಾಗಿಸುತ್ತದೆ ಎಂದು ಮಿರ್ಜಾ ಹೇಳಿದರು.



ಸೌದಿಯಲ್ಲಿ ಯಾವುದೇ ಭಾರತೀಯ ಸತ್ತಿಲ್ಲ

ದುಬೈ: ಸೌದಿ ಅರೇಬಿಯಾದಲ್ಲಿ ಸಂಭವಿಸಿದ ಕ್ಷಿಪಣಿ ದಾಳಿಯಲ್ಲಿ ಭಾರತೀಯ ಯುವಕ ಮೃತಪಟ್ಟಿಲ್ಲ ಎಂದು ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸ್ಪಷ್ಟನೆ ನೀಡಿದೆ. ದಾಳಿಯಲ್ಲಿ ಭಾರತೀಯನೊಬ್ಬ ಗಾಯಗೊಂಡಿದ್ದು ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ತಿಳಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಿತ ಸೌದಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ ಎಂದು ರಾಯಭಾರ ಕಚೇರಿ ತಿಳಿಸಿದೆ.

ಭಾರತದ ಮೇಲೆ ಯುದ್ಧದ ಬಿಸಿ

ತನ್ನ ತೈಲ ಅಗತ್ಯದ ಶೇ.85ರಷ್ಟು ಭಾಗವನ್ನು ಆಮದು ಮಾಡಿಕೊಳ್ಳುವ ಭಾರತಕ್ಕೆ ಜಾಗತಿಕ ತೈಲ ಬೆಲೆ ಏರಿಕೆ ಭಾರಿ ಹೊಡೆತ ನೀಡಲಿದೆ ಎನ್ನಲಾಗಿದೆ. ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್ ತಲುಪಿದರೆ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ಗಣನೀಯವಾಗಿ ಏರಲಿವೆ. ಇದು ಸಾರಿಗೆ ವೆಚ್ಚವನ್ನು ಹೆಚ್ಚಿಸಿ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ(ಹಣದುಬ್ಬರ) ಕಾರಣವಾಗಲಿದೆ.

ಹೂಡಿಕೆದಾರರಿಗೆ ನಷ್ಟ

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಷೇರುಪೇಟೆಯಲ್ಲಿ ರಕ್ತಪಾತವಾಗಿದೆ. ಕಚ್ಚಾ ತೈಲ ಬೆಲೆ 120 ಡಾಲರ್ ಗಡಿ ದಾಟಿ ಗಗನಕ್ಕೇರಿದ್ದು, ಭಾರತೀಯ ಷೇರುಪೇಟೆ ಮೇಲೆ ನಕರಾತ್ಮಕ ಪರಿಣಾಮವಾಗಿದೆ. ಸೋಮವಾರದ ಬೆಳಗಿನ ವಹಿವಾಟು ಆರಂಭವಾದ ಕೆಲವೇ ನಿಮಿಷಗಳಲ್ಲಿ, ಬಿಎಸ್‌ಇ ಸೆನ್ಸೆಕ್ಸ್ ಸುಮಾರು 2,400 ಅಂಕಗಳಷ್ಟು ಕುಸಿದು 76,424ರ ಮಟ್ಟಕ್ಕೆ ಇಳಿಯಿತು. ಅದೇ ರೀತಿ, ಎನ್‌ಎಸ್‌ಇ ನಿಫ್ಟಿ ಕೂಡ 700ಕ್ಕೂ ಹೆಚ್ಚು ಅಂಕಗಳನ್ನು ಕಳೆದುಕೊಂಡು 23,750ರ ಸಮೀಪಕ್ಕೆ ಕುಸಿದಿದೆ. ಈ ಭಾರೀ ಪತನದಿಂದಾಗಿ ಬಿಎಸ್‌ಇಯಲ್ಲಿ ಲಿಸ್ಟ್ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯದಲ್ಲಿ ಬರೋಬ್ಬರಿ 12.39 ಲಕ್ಷ ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಕೇವಲ 10 ನಿಮಿಷಗಳಲ್ಲಿ, ಒಟ್ಟು ಮಾರುಕಟ್ಟೆ ಮೌಲ್ಯ 437 ಲಕ್ಷ ಕೋಟಿ ರೂ.ಗೆ ಕುಸಿದಿದ್ದು, ಸಾಮಾನ್ಯ ಹೂಡಿಕೆದಾರರಿಂದ ಹಿಡಿದು ದೊಡ್ಡ ಸಂಸ್ಥೆಗಳವರೆಗೆ ಎಲ್ಲರ ಸಂಪತ್ತಿಗೂ ದೊಡ್ಡ ಪೆಟ್ಟು ಬಿದ್ದಿದೆ.

ಇಸ್ರೇಲ್ ದಾಳಿಗೆ ಅಮೆರಿಕ ಆಕ್ಷೇಪ

ವಾಷಿಂಗ್ಟನ್: ಇರಾನ್‌ನ ಸುಮಾರು 30 ತೈಲ ಘಟಕಗಳ ಮೇಲೆ ಇಸ್ರೇಲ್ ನಡೆಸಿದ ವ್ಯಾಪಕ ದಾಳಿಯ ನಂತರ ಅಮೆರಿಕ ಮತ್ತು ಇಸ್ರೇಲ್ ನಡುವೆ ಭಿನ್ನಾಭಿಪ್ರಾಯ ಉಂಟಾಗಿದೆ. ವರದಿಗಳ ಪ್ರಕಾರ, ದಾಳಿಯ ತೀವ್ರತೆ ಅಮೆರಿಕ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿದ್ದರಿಂದ ಶ್ವೇತಭವನ ಟೆಲ್ ಅವಿವ್‌ಗೆ ಎಂಬ ಆಶ್ಚರ್ಯ ಮತ್ತು ಆಕ್ರೋಶದ ಸಂದೇಶ ರವಾನಿಸಿದೆ.

ಇರಾನ್ ತೈಲ ಘಟಕಗಳ ಮೇಲೆ ದಾಳಿ

ಟೆಹ್ರಾನ್ ಬಳಿಯ ಮೂರು ತೈಲ ಡಿಪೋಗಳು ಮತ್ತು ಒಂದು ಸಂಸ್ಕರಣಾ ಘಟಕದ ಮೇಲೆ ನಡೆದ ಈ ದಾಳಿ ಭೀಕರ ಬೆಂಕಿ ಮತ್ತು ಆಮ್ಲ ಮಳೆಗೆ ಕಾರಣವಾಗಿದೆ. ಇಂಧನ ಮೂಲಸೌಕರ್ಯಗಳನ್ನು ನಾಶಪಡಿಸುವುದರಿಂದ ಜಾಗತಿಕ ತೈಲ ಬೆಲೆಗಳು ಏರಿಕೆಯಾಗುತ್ತವೆ ಮತ್ತು ಇರಾನ್‌ನ ಸಾಮಾನ್ಯ ನಾಗರಿಕರು ನಮ್ಮ ವಿರುದ್ಧ ತಿರುಗಿಬೀಳಬಹುದು ಎಂದು ಅಮೆರಿಕದ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107 ಯುಎಸ್ ಡಾಲರ್ ದಾಟಿದೆ. ಈ ತಾಣಗಳು ಕ್ಷಿಪಣಿ ಉಡಾವಣೆಗೆ ಇಂಧನ ಪೂರೈಸುತ್ತಿದ್ದವು ಎಂದು ಇಸ್ರೇಲ್ ವಾದಿಸಿದರೂ, ಪ್ರಾದೇಶಿಕ ಉದ್ವಿಗ್ನತೆಯ ಬಗ್ಗೆ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಸುಳ್ಳು ಆರೋಪಗಳಿಂದ ತನ್ನ ಮೇಲೆ ದಾಳಿ: ಸೌದಿ

ರಿಯಾದ್: ಇರಾನ್ ''ಸುಳ್ಳು ಆರೋಪ''ಗಳನ್ನು ಆಧರಿಸಿ ಸೌದಿ ಅರೇಬಿಯಾದ ಮೇಲೆ ತನ್ನ ದಾಳಿಗಳನ್ನು ಮುಂದುವರಿಸಿದೆ ಎಂಬುದಾಗಿ ಸೌದಿ ಅರೇಬಿಯಾ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ತನ್ನ ಯುದ್ಧ ವಿಮಾನಗಳು ಮತ್ತು ಮರು ಇಂಧನ ತುಂಬುವಿಕೆಯೊಂದಿಗೆ ಸಮರ ವಿಮಾನಗಳು ನೇರವಾಗಿ ಯುದ್ಧದಲ್ಲಿ ಪಾಲ್ಗೊಂಡಿವೆ ಎಂಬುದಾಗಿ ಇರಾನ್ ಮಾಡುತ್ತಿರುವ ಆರೋಪಗಳನ್ನು ಸೌದಿ ಅರೇಬಿಯಾ ಖಂಡಿಸಿದೆ.

ಕೊಲ್ಲಿ ದೇಶಗಳ ಮೇಲೆ ದಾಳಿ ನಡೆಸಿದ್ದಕ್ಕಾಗಿ ಶನಿವಾರ ಇರಾನಿನ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಅರಬ್ ಕೊಲ್ಲಿ ದೇಶಗಳ ಕ್ಷಮೆಯಾಚಿಸಿದ್ದು, ಇನ್ನು ಮುಂದೆ ಈ ದೇಶಗಳಿಂದಲೇ ದಾಳಿಗಳಾಗದ ಹೊರತಾಗಿ ಅವುಗಳ ಮೇಲೆ ದಾಳಿ ನಡೆಸುವುದಿದಲ್ಲ ಎಂಬುದಾಗಿ ಹೇಳಿಕೆ ನೀಡಿದ್ದರು. ಆದರೆ ಇರಾನ್ ಅಧ್ಯಕ್ಷರ ಈ ಹೇಳಿಕೆ ವಾಸ್ತವದಲ್ಲಿ ಜಾರಿಯಾಗಿಲ್ಲ ಎಂಬುದಾಗಿ ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ಸೋಮವಾರ ಹೇಳಿದೆ. ಇರಾನ್ ಆಧಾರರಹಿತ ಆರೋಪಗಳ ಮೂಲಕ ಕೊಲ್ಲಿ ದೇಶಗಳ ಮೇಲೆ ದಾಳಿಗಳನ್ನು ಮುಂದುವರಿಸಿದೆ. ಯುದ್ಧ ವಿಮಾನಗಳು ಮತ್ತು ಯುದ್ಧದಲ್ಲಿ ತೊಡಗಿರುವ ಯುದ್ಧ ವಿಮಾನಗಳಿಗೆ ಮರುಇಂಧನ ತುಂಬುವಿಕೆಯಂತಹ ಇರಾನಿನ ಆರೋಪಗಳು ಸುಳ್ಳು ಮತ್ತು ಆಧಾರರಹಿತವಾದುದು ಎಂಬುದನ್ನು ಈ ಹಿಂದೆಯೇ ಸ್ಪಷ್ಟೀಕರಿಸಲಾಗಿದ್ದರೂ, ಇರಾನ್ ದಾಳಿಯನ್ನು ಮುಂದುವರಿಸಿದೆ ಎಂದು ಅದು ಕಿಡಿ ಕಾರಿದೆ.

ತನ್ನ ಯುದ್ಧ ವಿಮಾನಗಳ ಗಸ್ತು ತಿರುಗುವಿಕೆಯು ಆತ್ಮರಕ್ಷಣಾ ಉದ್ದೇಶದ್ದಾಗಿವೆ ಎಂದಿರುವ ಸೌದಿ ಅರೇಬಿಯಾ, ಇರಾನಿನ ದಾಳಿಗಳು ಮುಂದುವರಿದಿರುವುದು ಸಂಘರ್ಷವನ್ನು ಇನ್ನಷ್ಟು ಉಲ್ಬಣಿಸುವ ಕೃತ್ಯವಾಗಿದೆ. ಅಲ್ಲದೆ ಇದು ಈಗ ಮತ್ತು ಭವಿಷ್ಯದ ದ್ವಿಪಕ್ಷೀಯ ಸಂಬಂಧಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಚ್ಚರಿಕೆ ನೀಡಿದೆ. ಇರಾನ್ ಈಗ ಕೊಲ್ಲಿ ದೇಶಗಳ ವಿರುದ್ಧ ಏನು ಕೃತ್ಯಗಳನ್ನು ಎಸಗುತ್ತಿದೆಯೋ ಅದು ಇರಾನಿಗೆ ಭಾರೀ ಹಾನಿಯನ್ನುಂಟು ಮಾಡಲಿದೆ ಎಂದೂ ಅದು ಹೇಳಿದೆ.

ಇರಾನ್ ಸೇನಾ ನೆಲೆಗಳ ಮೇಲೆ ಇಸ್ರೇಲ್ ದಾಳಿ

ಜೆರುಸಲೇಂ: ಇರಾನ್‌ನ ಟೆಹ್ರಾನ್, ಇಸ್ಫಹಾನ್ ಮತ್ತು ದಕ್ಷಿಣ ಭಾಗದ ಆಯಕಟ್ಟಿನ ಮಿಲಿಟರಿ ಮೂಲಸೌಕರ್ಯಗಳ ಮೇಲೆ ಸೋಮವಾರ ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ವ್ಯಾಪಕ ವೈಮಾನಿಕ ದಾಳಿ ನಡೆಸಿವೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ)ನ ಕಮಾಂಡ್ ಕೇಂದ್ರಗಳು ಮತ್ತು ಇಸ್ಫಹಾನ್‌ನಲ್ಲಿರುವ ಕ್ಷಿಪಣಿ ಎಂಜಿನ್ ಉತ್ಪಾದನಾ ಘಟಕಗಳನ್ನು ಈ ಭಾರಿ ಬಾಂಬ್ ದಾಳಿಯ ಮೂಲಕ ಗುರಿಯಾಗಿಸಲಾಗಿದೆ. ಭಯೋತ್ಪಾದಕ ಆಡಳಿತದ ಮೂಲಸೌಕರ್ಯಗಳನ್ನು ಹತ್ತಿಕ್ಕಲು ಈ ಕಾರ್ಯಾಚರಣೆ ಅನಿವಾರ್ಯ ಎಂದು ಇಸ್ರೇಲ್ ಘೋಷಿಸಿದೆ. ತೈಲ ಡಿಪೋಗಳ ಮೇಲೆ ನಡೆದ ದಾಳಿಯಿಂದಾಗಿ ಇಡೀ ರಾಜಧಾನಿ ನಗರ ಕಪ್ಪು ಹೊಗೆಯಿಂದ ಆವೃತವಾಗಿದೆ ಎಂದು ವರದಿಯಾಗಿದೆ.

ಕಿರುಸುದ್ದಿ

ಹೋಳಿ ಹಬ್ಬ ಗಲಾಟೆ: ಏಳು ಆರೋಪಿಗಳ ಸೆರೆ

ಹೊಸದಿಲ್ಲಿ: ನೈಋತ್ಯ ದಿಲ್ಲಿಯ ಉತ್ತಮ್ ನಗರದಲ್ಲಿ ಹೋಳಿ ಹಬ್ಬದಂದು ಎರಡು ಕುಟುಂಬಗಳ ನಡುವಿನ ಗಲಾಟೆಯಲ್ಲಿ ಯುವಕನ ಹತ್ಯೆಗೆ ಸಂಬಂಧಿಸಿದಂತೆ ದಿಲ್ಲಿ ಪೊಲೀಸರು ಇನ್ನೂ ಏಳು ಆರೋಪಿಗಳನ್ನು ಬಂಧಿಸಿದ್ದಾರೆ. ಆ ಮೂಲಕ ಈ ಪ್ರಕರಣದಲ್ಲಿ ಬಂಧಿಸಲಾದ ಒಟ್ಟು ಆರೋಪಿಗಳ ಸಂಖ್ಯೆ 14ಕ್ಕೆ ಏರಿದೆ. ಇದರಲ್ಲಿ ಇಬ್ಬರು ಅಪ್ರಾಪ್ತರೂ ಇದ್ದಾರೆ.

ನ್ಯಾ. ಹೆರಾಲ್ಡ್ ಪ್ರಕರಣ: ಏಪ್ರಿಲ್‌ನಲ್ಲಿ ವಿಚಾರಣೆ

ಹೊಸದಿಲ್ಲಿ: ಗಾಂಧಿ ಕುಟುಂಬದ ವಿರುದ್ಧ ಜಾರಿ ನಿರ್ದೇಶನಾಲಯ(ಇಡಿ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ದಿಲ್ಲಿ ಹೈಕೋರ್ಟ್ ಸೋಮವಾರ ಏ.20ಕ್ಕೆ ನಿಗದಿಪಡಿಸಿದೆ. ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ತನ್ನ ಚಾರ್ಜ್‌ಶೀಟ್ ಮಾನ್ಯ ಮಾಡಲು ನಿರಾಕರಿಸಿದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಇಡಿ ಪ್ರಶ್ನಿಸಿದೆ. ಇಡಿ ಪರ ವಕೀಲರು ಅಲ್ಪಾವಧಿಯನ್ನು ಕೋರಿದ ನಂತರ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ, ವಿಚಾರಣೆ ಮುಂದೂಡಿದರು. ಈ ಪ್ರಕರಣ, ಸುಮಾರು 2,000 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿರುವ ಮತ್ತು ಪಿತೂರಿ ನಡೆಸಿರುವ ಆರೋಪಗಳನ್ನು ಒಳಗೊಂಡಿದೆ.

ಸಂಸತ್ ಆವರಣದಲ್ಲಿ ವಿಪಕ್ಷಗಳ ಪ್ರತಿಭಟನೆ

ಹೊಸದಿಲ್ಲಿ: ಸಂಸತ್ ಆವರಣದಲ್ಲಿ ಮಧ್ಯಪ್ರಾಚ್ಯ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ ಮೌನವನ್ನು ಪ್ರಶ್ನಿಸಿ ಮತ್ತು ಈ ಬಗ್ಗೆ ಸಂಸತ್‌ನಲ್ಲಿ ಸಂಪೂರ್ಣ ಚರ್ಚೆ ಮಾಡುವಂತೆ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಇತರರು ಪ್ರತಿಭಟನೆ ನಡೆಸಿದ್ದಾರೆ. ಈ ಬಗ್ಗೆ ಎಕ್ಸ್ ಪೋಸ್ಟ್‌ವೊಂದರಲ್ಲಿ ಖರ್ಗೆ ಅವರು, ಬಜೆಟ್‌ನ ಅಧಿವೇಶನದ ದ್ವಿತೀಯಾರ್ಧದಲ್ಲಿ, ಮಧ್ಯಪ್ರಾಚ್ಯದ ಯುದ್ಧದ ಕುರಿತು ಸಂಪೂರ್ಣವಾಗಿ ಚರ್ಚಿಸಬೇಕು. ವಿದೇಶಾಂಗ ಸಚಿವ ಜೈಶಂಕರ್ ಅವರೊಬ್ಬರ ಹೇಳಿಕೆ ಪಡೆದರೆ ಸಾಲದು. ಜಾಗತಿಕ ವಿಚಾರದ ಬಗ್ಗೆ ಮತ್ತು ಇದರಿಂದ ಭಾರತಕ್ಕೆ ಆಗುವಂತಹ ಸಮಸ್ಯೆಯನ್ನು ಹೇಗೆ ಎದುರಿಸಬಹುದು ಎಂಬುದರ ಕುರಿತು ಚರ್ಚಿಸಬೇಕು. ಅಂತೆಯೇ ಸಾಗರೋತ್ತರ ವ್ಯವಹಾರ ಮತ್ತು ಇದರಿಂದಾಗುವ ಬೆಲೆ ಏರಿಕೆ ಬಗ್ಗೆ ಚರ್ಚಿಸಿ ದೇಶದ ಜನತೆಗೆ ಸಮಸ್ಯೆಯಾಗದಂತೆ ತಡೆಯಬೇಕು ಎಂದು ಹೇಳಿದ್ದಾರೆ.

ಮುಗಿಯದ ಬಂಗಾಳ ಎಸ್‌ಐಆರ್ ಸಂಘರ್ಷ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಬಗ್ಗೆ ರಾಜಕೀಯ ಸಂಘರ್ಷ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಬೆನ್ನಲ್ಲೇ ಸೋಮವಾರ ಪಕ್ಷಗಳು ಪ್ರತ್ಯೇಕವಾಗಿ ಚುನಾವಣಾ ಆಯೋಗವನ್ನು ಭೇಟಿಯಾದವು. ಕೋಲ್ಕತ್ತಾದ ನ್ಯೂ ಟೌನ್ ಹೋಟೆಲ್‌ನಲ್ಲಿ ನಡೆದ ಸಂವಾದದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್, ಬಿಜೆಪಿ, ಸಿಪಿಐ(ಎಂ), ಕಾಂಗ್ರೆಸ್ ಮತ್ತು ಇತರ ಪಕ್ಷಗಳ ನಿಯೋಗಗಳು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಆಯೋಗದ ಪೂರ್ಣ ಪೀಠವನ್ನು ಭೇಟಿ ಮಾಡಿ ತಮ್ಮ ಕಳವಳಗಳನ್ನು ತಿಳಿಸಿದೆ. ಮತದಾರರನ್ನು ಹೊರಗಿಡುವ ಮತ್ತು ಒಳನುಸುಳುವಿಕೆ ಮತ್ತು ಚುನಾವಣಾ ಸಮಗ್ರತೆಯ ಬಗ್ಗೆ ಪ್ರತಿ-ಹಕ್ಕುಗಳ ಆರೋಪಗಳನ್ನು ಹುಟ್ಟುಹಾಕಿರುವ ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಮತ್ತು ಚುನಾವಣಾ ಆಯೋಗದ ನಡುವೆ ತೀವ್ರಗೊಳ್ಳುತ್ತಿರುವ ರಾಜಕೀಯ ಸಂಘರ್ಷದ ಮಧ್ಯೆ ಈ ಸಮಾಲೋಚನೆಗಳು ನಡೆಯುತ್ತಿವೆ. ಆಯೋಗದೊಂದಿಗಿನ ಸಭೆಯಿಂದ ಹೊರಬಂದ ಟಿಎಂಸಿ, ಪರಿಷ್ಕರಣೆ ಪ್ರಕ್ರಿಯೆಯು ಸಾಮಾನ್ಯ ನಾಗರಿಕರ ಕಿರುಕುಳಕ್ಕೆ ಕಾರಣವಾಗಿದೆ ಎಂದು ಆರೋಪಿಸಿದೆ. ಸಂವಾದದ ಸಮಯದಲ್ಲಿ ತನ್ನ ಕಳವಳಗಳನ್ನು ಸಮರ್ಪಕವಾಗಿ ಆಲಿಸಲಾಗಿಲ್ಲ ಎಂದು ಹೇಳಿದೆ. ಕಳೆದ ಕೆಲವು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆಯು ರಾಜ್ಯದ ಅತ್ಯಂತ ವಿವಾದಾತ್ಮಕ ರಾಜಕೀಯ ವಿಷಯಗಳಲ್ಲಿ ಒಂದಾಗಿದ್ದು, ಈ ಪರಿಷ್ಕರಣೆಯು ಮತದಾರ ಪಟ್ಟಿಯಿಂದ ರಾಜ್ಯದ ಮತದಾರರನ್ನು ತೆಗೆದುಹಾಕುವ ಗುರಿಯನ್ನು ಹೊಂದಿದೆ ಎಂದು ಟಿಎಂಸಿ ಆರೋಪಿಸಿದ್ದು, ಈ ಆರೋಪವನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ.

ವಿಪಕ್ಷ ಗದ್ದಲ: ನಡೆಯದ ಬಿರ್ಲಾ ಪದಚ್ಯುತಿ ಚರ್ಚೆ

ಹೊಸದಿಲ್ಲಿ: ವಿಪಕ್ಷೀಯರು ಮಧ್ಯಪ್ರಾಚ್ಯ ಸನ್ನಿವೇಶ ಬಗ್ಗೆ ಚರ್ಚೆಗೆ ಪಟ್ಟು ಹಿಡಿದು ಕೋಲಾಹಲ ನಡೆಸಿದ್ದರಿಂದ, ಸೋಮವಾರ ಸದನ ಹಲವು ಬಾರಿ ಮುಂದೂಡಲ್ಪಟ್ಟಿತಲ್ಲದೆ, ಲೋಕಸಭಾ ಸಭಾಪತಿ ಓಂ ಬಿರ್ಲಾ ಅವರ ಪದಚ್ಯುತಿಗೆ ಆಗ್ರಹಿಸುವ ನಿರ್ಣಯವನ್ನು ಚರ್ಚೆಗೆತ್ತಿಕೊಳ್ಳಲು ಸದನಕ್ಕೆ ಸಾಧ್ಯವಾಗಲಿಲ್ಲ.

ವಿಪಕ್ಷೀಯರು ತಮ್ಮ ಬೇಡಿಕೆಗಳಿಗಾಗಿ ಸದನದ ಕಲಾಪಗಳನ್ನು ಒತ್ತೆಸೆರೆಯಲ್ಲಿಡುತ್ತಿದ್ದಾರೆ ಎಂದು ಸರಕಾರ ಹಾಗೂ ಸಭಾಪತಿ ಪೀಠದಲ್ಲಿದ್ದ ಕಲಾಪಗಳ ಅಧ್ಯಕ್ಷರು ವಿಪಕ್ಷಗಳನ್ನು ತರಾಟೆಗೆತ್ತಿಕೊಂಡ ಬೆಳವಣಿಗೆಯೂ ನಡೆದಿದೆ. ವಿಪಕ್ಷೀಯರ ನಿರಂತರ ಪ್ರತಿಭಟನೆಗಳಿಂದಾಗಿ ಬೆಳಗ್ಗಿನಿಂದಲೇ ಮುಂದೂಡಲ್ಪಟ್ಟಿದ್ದ ಸದನ ಮಧ್ಯಾಹ್ನ 3ಗಂಟೆಗೆ ಮತ್ತೆ ಸೇರಿದಾಗ, ವಿಪಕ್ಷೀಯರು ಮತ್ತೆ ಘೋಷಣೆ ಕೂಗತೊಡಗಿದರು. ಸಭಾಪತಿಗಳ ಆಸನದಲ್ಲಿದ್ದು ಕಲಾಪಗಳ ನಿರ್ವಹಿಸುತ್ತಿದ್ದ ಜಗದಂಬಿಕ ಪಾಲ್, ಸಭ್ಯತೆ ಎತ್ತಿಹಿಡಿದು, ಸದನವು ಬಿರ್ಲಾ ವಿರುದ್ಧ ನಿರ್ಣಯ ಅಂಗೀಕರಿಸಲು ಅವಕಾಶ ಕೊಡಿ ಎಂದು ವಿಪಕ್ಷೀಯರನ್ನು ಒತ್ತಾಯಿಸಿದ್ದರು. ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ ಸದನದ ಕಲಾಪ ಪಟ್ಟಿಯಲ್ಲಿದೆ. ಹಾಗಾಗಿ ಪ.ಏಷ್ಯಾ ಬಿಕ್ಕಟ್ಟಿನ ಕುರಿತ ನಿಮ್ಮ ನಿಲುವಳಿ ಗೊತ್ತುವಳಿಯನ್ನು ಚರ್ಚೆಗೆ ಎತ್ತಿಕೊಳ್ಳಲಾಗದು ಎಂದು ಪಾಲ್ ವಿಪಕ್ಷೀಯರಿಗೆ ಮನವರಿಕೆ ಮಾಡಿದ್ದರು.

ವಿಪಕ್ಷೀಯರು ಕಿವಿಗೊಡದಿದ್ದಾಗ, ವಿಪಕ್ಷೀಯರು ತಮ್ಮ ಬೇಡಿಕೆಗಳಿಗಾಗಿ ಸದನದ ಕಲಾಪಗಳನ್ನು ಒತ್ತೆಸೆರೆ ಮಾಡೋ ಮುಖೇನ, ನಿತ್ಯ ತೆರಿಗೆ ಪಾವತಿದಾರರ 9 ಕೋಟಿ ರೂ. ಹಣವನ್ನು ಅಪವ್ಯಯ ಮಾಡುತ್ತಿದ್ದಾರೆ. ವಿಪಕ್ಷೀಯರ ನಡವಳಿಕೆ ತೀರಾ ಅಪ್ರಬುದ್ಧ ಮತ್ತು ಬೇಜವಾಬ್ದಾರಿಯದ್ದಾಗಿದೆ ಎಂದು ಅಧ್ಯಕ್ಷರು ಆರೋಪಿಸಿದರು.

ಜೈಶಂಕರ್ ಹೇಳಿಕೆ ವೇಳೆ ವಿಪಕ್ಷ ಸಭಾತ್ಯಾಗಕ್ಕೆ ಕಿಡಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿಕೆ ನೀಡುತ್ತಿದ್ದಾಗ ಸಭಾತ್ಯಾಗ ಮಾಡಿದ ಪ್ರತಿಪಕ್ಷಗಳ ನಡವಳಿಕೆಯನ್ನು ಕೇಂದ್ರ ಸಚಿವ ಜೆ.ಪಿ. ನಡ್ಡಾ ಸೋಮವಾರ ತೀವ್ರವಾಗಿ ಖಂಡಿಸಿದ್ದಾರೆ. ಪ್ರತಿಪಕ್ಷಗಳು ಅರಾಜಕತೆ ಸೃಷ್ಟಿಸುತ್ತಿವೆ ಎಂದು ಅವರು ಆರೋಪಿಸಿದ್ದಾರೆ.

ಸಚಿವರ ಅಧಿಕೃತ ಹೇಳಿಕೆಗೂ ಮುನ್ನ ಪೂರ್ಣ ಪ್ರಮಾಣದ ಚರ್ಚೆ ನಡೆಸಬೇಕು ಎಂದು ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದಾಗ ಕಲಾಪಕ್ಕೆ ಅಡ್ಡಿ ಉಂಟಾಯಿತು. ಗಲ್ಫ್ ರಾಷ್ಟ್ರಗಳಲ್ಲಿರುವ ಒಂದು ಕೋಟಿ ಭಾರತೀಯ ಕಾರ್ಮಿಕರ ಸುರಕ್ಷತೆ ಮತ್ತು 51 ಬಿಲಿಯನ್ ಡಾಲರ್ ಮೊತ್ತದ ವಿದೇಶಿ ಹಣದ ಒಳಹರಿವಿನ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಖರ್ಗೆ ಆತಂಕ ವ್ಯಕ್ತಪಡಿಸಿದರು. ಈ ನಡುವೆ, ವರದಿ ನೀಡುವಂತೆ ಸಭಾಪತಿ ವಿದೇಶಾಂಗ ಸಚಿವರಿಗೆ ಸೂಚಿಸಿದರು.



ಕಾಂಗ್ರೆಸ್ ಮತ್ತು ಇತರ ಪ್ರತಿಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗುತ್ತಾ ಸಾಮೂಹಿಕವಾಗಿ ಸಭಾತ್ಯಾಗ ಮಾಡಿದರು. ಇದೊಂದು ಬೇಜವಾಬ್ದಾರಿ ಮತ್ತು ಖಂಡನೀಯ ನಡವಳಿಕೆ ಎಂದು ಜೆ.ಪಿ. ನಡ್ಡಾ ಬಣ್ಣಿಸಿದ್ದಾರೆ. ರಾಷ್ಟ್ರೀಯ ಭದ್ರತೆಯ ಬಗ್ಗೆ ಚರ್ಚಿಸುವ ಬದಲು ಗದ್ದಲ ಸೃಷ್ಟಿಸುವುದೇ ಪ್ರತಿಪಕ್ಷಗಳ ಏಕೈಕ ಗುರಿಯಾಗಿದೆ, ಎಂದು ಅವರು ಪ್ರತಿಪಾದಿಸಿದರು. ಬಜೆಟ್ ಮತ್ತು ವಕ್ಫ್ ಮಸೂದೆಯಂತಹ ನಿರ್ಣಾಯಕ ಚರ್ಚೆಗಳ ಸಂದರ್ಭದಲ್ಲೂ ಪ್ರತಿಪಕ್ಷಗಳು ಇದೇ ರೀತಿ ಸಭಾತ್ಯಾಗ ಮಾಡಿದ್ದನ್ನು ಅವರು ನೆನಪಿಸಿದರು.

ಸಿಇಸಿ ಪದಚ್ಯುತಿ ನಿರ್ಣಯಕ್ಕಾಗಿ ವಿಪಕ್ಷಗಳ ಸಜ್ಜು


ಹೊಸದಿಲ್ಲಿ: ಅನಿರೀಕ್ಷಿತ ಬೆಳವಣಿಗೆಯೊಂದರಲ್ಲಿ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಲು ಪ್ರತಿಪಕ್ಷಗಳು ಅಧಿಕೃತ ನೋಟಿಸ್ ಸಲ್ಲಿಸಲು ಸಿದ್ಧತೆ ನಡೆಸಿವೆ. ಈ ವಾರವೇ ಈ ಕರಡು ಪ್ರತಿಯನ್ನು ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ತೃಣಮೂಲ ಕಾಂಗ್ರೆಸ್ ನಾಯಕರು ಈ ಕ್ರಮವನ್ನು ಎಲ್ಲಾ ಸಮಾನ ಮನಸ್ಕ ಪಕ್ಷಗಳ ಸಾಮೂಹಿಕ ತಂಡದ ಪ್ರಯತ್ನ ಎಂದು ಬಣ್ಣಿಸಿದ್ದಾರೆ. ಕಾಂಗ್ರೆಸ್ ಮತ್ತು ಇಂಡಿ ಒಕ್ಕೂಟದ ಇತರ ಸದಸ್ಯರು ಇದಕ್ಕೆ ಬೆಂಬಲ ಸೂಚಿಸಿದ್ದಾರೆ. ಲೋಕಸಭೆಯ 100 ಮತ್ತು ರಾಜ್ಯಸಭೆಯ 50 ಸಂಸದರ ಸಹಿಗಳನ್ನು ಸಂಗ್ರಹಿಸಲಾಗುತ್ತಿದೆ. ನಿಯಮದ ಪ್ರಕಾರ, ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ, ಸಂಸತ್ತಿನ ವಿಶೇಷ ಬಹುಮತದ ಮೂಲಕ ಮಾತ್ರ ಸಿಇಸಿ ಅವರನ್ನು ಪದಚ್ಯುತಗೊಳಿಸಲು ಸಾಧ್ಯವಿದೆ.

ಎಐ, ಆಟೊಮೇಷನ್, ಡಿಜಿಟಲ್ ಆರ್ಥಿಕತೆಗೆ ಹೊಂದುವ ಪಠ್ಯಕ್ರಮ ಅಗತ್ಯ

ವಾಸ್ತವಿಕ ಆರ್ಥಿಕತೆಗೆ ಶಿಕ್ಷಣ ಜೋಡಣೆಯಾಗಲಿ

ಹೊಸದಿಲ್ಲಿ: ದೇಶದ ಶಿಕ್ಷಣ ವ್ಯವಸ್ಥೆಯನ್ನು ವಾಸ್ತವಿಕ ಆರ್ಥಿಕತೆ, ಉದ್ಯೋಗ ಹಾಗೂ ಉದ್ಯಮಶೀಲತೆಯೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ವೇಗಗೊಳಿಸುವ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸೋಮವಾರ ನಡೆದ ಪೋಸ್ಟ್-ಬಜೆಟ್ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಜನರ ಆಶಯಗಳನ್ನು ಈಡೇರಿಸುವುದು ಸರ್ಕಾರದ ಮೂಲ ಗುರಿಯಾಗಿದ್ದು, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆರೋಗ್ಯ, ಪ್ರವಾಸೋದ್ಯಮ, ಕ್ರೀಡೆ ಮತ್ತು ಸಂಸ್ಕೃತಿ ಕ್ಷೇತ್ರಗಳು ಈ ಗುರಿ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.



ದೇಶದಲ್ಲಿ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮಶೀಲತೆಗೆ ಸಂಪರ್ಕಿಸುವ ನಿರಂತರ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಮಾರುಕಟ್ಟೆಯ ಅಗತ್ಯತೆಗಳಿಗೆ ಹೊಂದುವ ಪಠ್ಯಕ್ರಮ ರೂಪಿಸಲು ಭದ್ರ ನೆಲೆ ಒದಗಿಸಿದೆ. ವಿಶೇಷವಾಗಿ ಕೃತಕ ಬುದ್ಧಿಮತ್ತೆ(ಎಐ), ಆಟೊಮೇಷನ್ ಮತ್ತು ಡಿಜಿಟಲ್

ಪೋಸ್ಟ್ ಬಜೆಟ್ ವೆಬಿನಾರ್‌ನಲ್ಲಿ ಪ್ರಧಾನಿ ಮೋದಿ ಅಭಿಪ್ರಾಯ

ಆರ್ಥಿಕತೆ ಕ್ಷೇತ್ರಗಳಿಗೆ ಶಿಕ್ಷಣ ವ್ಯವಸ್ಥೆ ಹೊಂದಿಕೊಳ್ಳಬೇಕು ಎಂದು ಪ್ರಧಾನಿ ತಿಳಿಸಿದರು.

ಭಾರತವು ನಾವೀನ್ಯತೆ ಆಧಾರಿತ ಆರ್ಥಿಕತೆಯತ್ತ ಸಾಗುತ್ತಿದೆ ಎಂದು ಹೇಳಿದ ಅವರು, ಶಿಕ್ಷಣ ಸಂಸ್ಥೆಗಳು ತಮ್ಮ ಕ್ಯಾಂಪಸ್‌ಗಳನ್ನು ಉದ್ಯಮ ಸಹಕಾರ ಮತ್ತು ಸಂಶೋಧನೆ ಆಧಾರಿತ ಕಲಿಕೆಯ ಕೇಂದ್ರಗಳಾಗಿ ರೂಪಿಸಬೇಕೆಂದು ಕರೆ ನೀಡಿದರು. ಯುವ ಸಂಶೋಧಕರು ಹೊಸ ಆಲೋಚನೆಗಳ ಮೇಲೆ ನಿರ್ಬಂಧವಿಲ್ಲದೆ ಪ್ರಯೋಗ ಮಾಡಲು ಅವಕಾಶ ದೊರೆಯುವಂತೆ ಬಲವಾದ ಸಂಶೋಧನಾ ವಾತಾವರಣ ನಿರ್ಮಿಸಬೇಕು ಎಂದರು.

ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳಲ್ಲಿ ದೇಶದ ಯುವತಿಯರು ಹೆಚ್ಚಾಗಿ ಆಸಕ್ತಿ ತೋರಿಸುತ್ತಿರುವುದು ಸಂತೋಷಕರ ಬೆಳವಣಿಗೆ ಎಂದು ಮೋದಿ ಹೇಳಿದರು.

ಭವಿಷ್ಯದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವಕಾಶಗಳ ಕೊರತೆಯಿಂದ ಯಾವ ಹುಡುಗಿಯೂ ಹಿಂದೆ ಬೀಳದಂತೆ

ಮುಖ್ಯಾಂಶಗಳು

- ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮಶೀಲತೆಗೆ ಜೋಡಿಸುವ ಪ್ರಕ್ರಿಯೆ ವೇಗಗೊಳಿಸಲು ಕರೆ
- ಶಿಕ್ಷಣ ಸಂಸ್ಥೆಗಳು ಉದ್ಯಮ ಸಹಕಾರ ಮತ್ತು ಸಂಶೋಧನಾ ಕೇಂದ್ರಗಳಾಗಬೇಕು
- ಆಯುಷ್ಮಾನ್ ಭಾರತ, ಖೇಲೋ ಇಂಡಿಯಾ ಯೋಜನೆಗಳ ಸಾಧನೆ ಉಲ್ಲೇಖ

ನೋಡಿಕೊಳ್ಳಬೇಕು ಎಂದು ಅವರು ಒತ್ತಿಹೇಳಿದರು.

ಆರೋಗ್ಯ ಕ್ಷೇತ್ರದಲ್ಲಿ ಆಯುಷ್ಮಾನ್ ಭಾರತ ಯೋಜನೆ ಹಾಗೂ ಆರೋಗ್ಯ ಮಂದಿರಗಳು ಗ್ರಾಮೀಣ ಪ್ರದೇಶಗಳಿಗೂ ಆರೋಗ್ಯ ಸೇವೆಗಳನ್ನು ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸಿವೆ ಎಂದು ಪ್ರಧಾನಿ ಹೇಳಿದರು. ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇರ್ ಎಕಾನಮಿಗೆ ಸಂಬಂಧಿಸಿದ ತರಬೇತಿ ಮಾದರಿಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದರು.

ಮುಂದಿನ ಪಿಎಂ ಷಾಗೆ ಮೋದಿ ಶುಭಾಶಯ

ಭಾರತ-ನೇಪಾಳ ನಡುವಿನ ಸಂಬಂಧಕ್ಕೆ ಹೊಸ ಅಧ್ಯಾಯ

ಕಠ್ಮಂಡು: ನೇಪಾಳದ ಬಹುನಿರೀಕ್ಷಿತ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ಹೊರಬಂದಿದ್ದು, ಹೊಸ ಪಕ್ಷವೊಂದು ದಾಖಲೆಯ ಗೆಲುವು ಸಾಧಿಸಿದೆ. ಈ ಗೆಲುವು ಭಾರತ ಮತ್ತು ನೇಪಾಳ ನಡುವಿನ ಸಂಬಂಧದಲ್ಲಿ ಹೊಸ ಅಧ್ಯಾಯವನ್ನು ತೆರೆಯುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ ಎಂದು ಅನೇಕ ತಜ್ಞರು ಭರವಸೆ ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ ಭಾರತ ಮತ್ತು ಚೀನಾ ನಡುವಿನ ತಮ್ಮ ನಂಟನ್ನು ಸರಿದೂಗಿಸಿಕೊಂಡು ಹೋಗಲು ನಿರ್ಧರಿಸಿದಂತಿದೆ.

ನಮಗೇಕೆ ಮುಖ್ಯ?: ನೇಪಾಳದಲ್ಲಿ ರಾಜಕೀಯ ಅಧಿಕಾರವು ಬದಲಾದಾಗಲೆಲ್ಲಾ, ಅದರ ಸುತ್ತ ಮುತ್ತಲಿನ ದೇಶಗಳು ಗಮನ ಹರಿಸುತ್ತವೆ. ಕಾರಣ ಸರಳವಾಗಿದೆ. ನೇಪಾಳವು ಭಾರತ ಮತ್ತು ಚೀನಾ ಎಂಬ ಎರಡು ಪ್ರಮುಖ ಶಕ್ತಿಗಳ ನಡುವೆ ನೆಲೆಗೊಂಡಿದೆ.

ನೂತನ ಪಕ್ಷಕ್ಕೆ ಭಾರೀ ಗೆಲುವು: ರಾಷ್ಟ್ರೀಯ ಸ್ವತಂತ್ರ ಪಕ್ಷವು (ಆರ್‌ಎಸ್‌ಪಿ) ನೇರ ಮತದಾನದ ಮೂಲಕ 124 ಸ್ಥಾನಗಳನ್ನು ಗಳಿಸಿದ್ದು, ಸೋಮವಾರ ನೇಪಾಳದ ಸಂಸದೀಯ ಚುನಾವಣೆಗಳಲ್ಲಿ 3ನೇ ಎರಡರಷ್ಟು ಬಹುಮತಕ್ಕೆ ಹತ್ತಿರವಾಗಿದೆ. ಈ ಮೂಲಕ ಪ್ರಧಾನಿ ಅಭ್ಯರ್ಥಿ ಬಲೇನ್ ಷಾ ಇತಿಹಾಸ ಬರೆಯಲಿದ್ದಾರೆ.



ಭಾರತ ತಂಡಕ್ಕೆ ಕೋಟ್ಯಂತರ ಅಭಿಮಾನಿಗಳ ಬಹುಪರಾಕ್

ದಿಲ್ಲಿಯಿಂದ ಗಲ್ಲಿಯವರೆಗೆ ಪಸರಿಸಿದ್ದ ಸಂಭ್ರಮ

ಸಂಭ್ರಮದಲ್ಲಿ ತೇಲಿದ ದಿಗ್ವಿಜಯಿ ಭಾರತ

ಅಹಮದಾಬಾದ್: ತೀರಾ ಕ್ರಿಕೆಟ್ ಅನ್ನು ಮೈಮೇಲೆ ಆವರಿಸಿಕೊಂಡವರಂತೆ ವರ್ತಿಸುವ ಭಾರತದಲ್ಲಿ ಸೋಮವಾರ ಪೂರ್ತಿ ಜಯದ ಹೋಳಿ. ಭಾನುವಾರ ರಾತ್ರಿಯೇ ಭಾರತದ ಯುವ ತಂಡ, ಸತತ ಎರಡನೇ ಬಾರಿಗೆ ಟಿ20 ವಿಶ್ವಕಪ್ ಅನ್ನು ಮುಡಿಗೇರಿಸಿಕೊಂಡಾಗ ಎದ್ದ ಹರ್ಷದ ಹೋಳಿ, ಇಡೀ ದಿನ ಮುಂದುವರಿಯಿತು ಎಂದರೆ ತಪ್ಪಾಗಲಾರದು. ಚುಟುಕು ಕ್ರಿಕೆಟ್‌ನ ಇತಿಹಾಸದಲ್ಲೇ ಕಂಡು ಕೇಳರಿಯದ ದಾಖಲೆಗಳನ್ನು ಮಾಡಿದೆ ಸೂರ್ಯಕುಮಾರ್ ನೇತೃತ್ವದ ಭಾರತ ತಂಡ. ಸ್ಫೋಟಕ ಸಂಜು, ಆಕ್ರಮಣಕಾರಿ ಬೂಮ್ರಾ, ನೋವಲ್ಲೂ ಸಿಡಿದ ಕಿಶನ್ ಹಾಗೂ ವಿಶ್ವಕಪ್‌ನಲ್ಲೇ ಇದೇ ಮೊದಲ ಬಾರಿಗೆ ತನ್ನ ಹೊಡಿಬಡಿ ಆಟ ಪ್ರದರ್ಶಿಸಿದ ಅಭಿಷೇಕ್ ಭಾರತದ ಮುಡಿಗೆ ಜಯದ ಕಿರೀಟ ತೊಡಿಸಿದರು.

ಫೈನಲ್ ಪಂದ್ಯದ ಆರಂಭದಿಂದ ಕೊನೆವರೆಗೂ ಸಾಂಘಿಕ ಪ್ರದರ್ಶನ ನೀಡಿದ ತಂಡ, ಅತಿಥೇಯ ದೇಶಕ್ಕೆ ಮೊದಲ ಟ್ರೋಫಿ, ಸತತ ಎರಡನೇ ಬಾರಿಗೆ ಕಪ್‌ನಂಥ ದಾಖಲೆಗಳನ್ನೂ ಮಾಡಿದೆ. ಅಷ್ಟೇ ಅಲ್ಲ, ತಾವೇಕೆ ಟಿ20ಯಲ್ಲಿ ನಂಬರ್ ಒನ್ ಆಗಿದ್ದೇವೆ ಎಂಬುದನ್ನು ಜಗತ್ತಿನ ಮುಂದೆ ಸಾಬೀತುಪಡಿಸಿದರು. 2024ರಲ್ಲಿ ವಿಂಡೀಸ್‌ನಲ್ಲಿ ನಡೆದಿದ್ದ ಕೂಟದಲ್ಲಿ ಗೆದ್ದಿದ್ದ ಭಾರತ ವಿಶ್ವಕಪ್‌ಗೂ ಮುನ್ನ ತವರಲ್ಲಿ ವಿಶ್ವಕಪ್ ಗೆಲ್ಲುವ ಸವಾಲಿಗೆ ಸೈ ಎಂದಿತ್ತು. ದೊಡ್ಡ ಸ್ಕೋರ್ ಬಾರಿಸಿದ ತಂಡವಾಗಿ, ಬೌಲಿಂಗ್‌ನಲ್ಲಿ ಅಬ್ಬರಿಸಿದ ಪಡೆಯಾಗಿ ಹಾಗೂ ಕ್ಯಾಚ್‌ಗಳ ಮೂಲಕ ಶಾಕ್ ನೀಡಿದ ಭದ್ರ ತಂಡವಾಗಿ ಭಾರತ ಮಾಡಿ ತೋರಿಸಿದೆ. ಇದೀಗ 2028ರಲ್ಲಿ ನಡೆಯುವ ಒಲಿಂಪಿಕ್ಸ್ ಕೂಟದ ಚಾಂಪಿಯನ್ ಪಟ್ಟದ ಮೇಲೆ ಕಣ್ಣು ಹಾಕಿದೆ.

ಸಂಭ್ರಮದಲ್ಲಿ ತೇಲಾಡಿದ ದೇಶ: ಭಾನುವಾರದ ಗೆಲುವಿನ ಮೊಳಗು ವಿಶ್ವಾದ್ಯಂತ ಸುದ್ದಿಯಾದ ನಂತರ ಎಲ್ಲೆಡೆ ಭಾರತದ್ದೇ ಸದ್ದಾಯಿತು. ರಾಷ್ಟ್ರಪತಿಯಿಂದ, ಜನಸಾಮಾನ್ಯನ ವರೆಗೆ ಎಲ್ಲರೂ ಜಯದಲ್ಲಿ ಮುಳುಗೆದ್ದರು. ದೇಶದ ಪ್ರತಿಯೊಂದು ನಗರದ ಪ್ರತಿಯೊಂದು ನಗರಗಳಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು. ಒಂದು ಕ್ಷಣಕ್ಕೆ ಬೇರೊಂದು ಜಗತ್ತನ್ನೇ ಮರೆತಿದ್ದ ಜನರು ಕೈಯಲ್ಲಿ ತಿರಂಗಾ ಹಿಡಿದು, ಬಾಯಿಯಲ್ಲಿ ಜಯಘೋಷ ಮೊಳಗಿಸುತ್ತಾ ಸಂಭ್ರಮದಿಂದ ಗೆಲುವು ಆನಂದಿಸಿದರು. ಕ್ರಿಕೆಟಿಗರು, ರಾಜಕಾರಣಿಗಳು, ಮಾಧ್ಯಮದವರು, ಸಾಹಿತಿಗಳು, ಬೇರೆ ಕ್ರೀಡೆಯ ಕ್ರೀಡಾಪಟುಗಳು, ಹಾಲಿ-ಮಾಜಿ ಕ್ರಿಕೆಟಿಗರು ಮತ್ತು ಕೋಟ್ಯಂತರ ಅಭಿಮಾನಿಗಳು ಭಾರತ ತಂಡಕ್ಕೆ ಬಹುಪರಾಕ್ ಎಂದರು. ಗೆಲುವಿನೊಂದಿಗೆ ದೊಡ್ಡ ದೊಡ್ಡ ಇತಿಹಾಸಗಳನ್ನೇ ಸೃಷ್ಟಿಸಿರುವ ಭಾರತವು ಮುಂದಿನ ಸವಾಲುಗಳನ್ನು ಎದುರು ನೋಡಲಿದೆ.

ಸೋಲು ದಿಕ್ಕರಿಸಿ ಪುಟಿದೆದ್ದ ಭಾರತ: 2024ರಲ್ಲಿ ಯಾವುದೇ ಪಂದ್ಯದಲ್ಲೂ ಸೋಲದೆ ವಿಶ್ವಕಪ್ ಗೆದ್ದಿದ್ದ ಭಾರತ ಈ ಬಾರಿಯ ಕೂಟದಲ್ಲೂ ಅದೇ ಲಯ ಮುಂದುವರಿಸಿತು. ಪಾಕಿಸ್ತಾನ, ಯುಎಸ್ಎ, ನಮೀಬಿಯಾ, ನೆದರ್ಲೆಂಡ್ಸ್ ತಂಡಗಳ ಮೇಲೆ ಯಾವುದೇ ಆತಂಕಗಳಿಲ್ಲದೆ ಗೆದ್ದಿತು. ಭಾರತ ಮತ್ತೊಮ್ಮೆ ಸೋಲಿಲ್ಲದ ಸರ್ದಾರ ಅನ್ನಿಸಿಕೊಳ್ಳಲಿದೆ ಅನ್ನುಷ್ಟರಲ್ಲಿ, ಸೂಪರ್-8ರ ಮೊದಲನೇ ಪಂದ್ಯದಲ್ಲಿ ದ.ಆಫ್ರಿಕಾ ವಿರುದ್ಧ ಹೀನಾಯ ಸೋಲು ಕಂಡಿತು. ಭಾರತ ಸೋತಿದ್ದೇ ತಡ, ಟಿವಿಯಲ್ಲಿ ಭಾರತವನ್ನು ಟೀಕಿಸುವತ್ತ ಜನರು ಸಾಗಿದ್ದರು. ಇದೆಲ್ಲವನ್ನೂ ದಾಟಿದ ಭಾರತ ಚಾಂಪಿಯನ್ ಆಗೇ ತೋರಿಸಿದೆ. ಸೋಲು ದಿಕ್ಕರಿಸಿ ಪುಟಿದೆದ್ದ ಶ್ರೇಷ್ಠ ಭಾರತ ಎನಿಸಿಕೊಂಡಿದೆ.

ಒಲಿಂಪಿಕ್ಸ್ ಮುಂದಿನ ತಯಾರಿ: ಸೂರ್ಯ

ಪಂದ್ಯಾವಳಿಯುದ್ದಕ್ಕೂ ಹತ್ತಾರು ಸವಾಲುಗಳನ್ನು ಎದುರಿಸಿ ಕಪ್ ಗೆದ್ದ ನಾಯಕರಲ್ಲಿ ಒಬ್ಬ ಅನ್ನಿಸಿಕೊಂಡಿರುವ ಸೂರ್ಯಕುಮಾರ್ ಯಾದವ್ ಗೆದ್ದ ನಂತರ ಟ್ರೋಫಿಯೊಂದಿಗೆ ಬಂದು 2028ರಲ್ಲಿ ನಡೆಯಲಿರುವ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಗೆಲುವೇ ನಮ್ಮ ಮುಂದಿನ ಗುರಿ ಎಂದು ಘೋಷಿಸಿಬಿಟ್ಟರು. ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡ ಸೇರಿಸಲಾಗಿದ್ದು, ಭಾರತದ ಅರ್ಹತೆ ಖಚಿತವಾದಂತಿದೆ. ಈ ಮಧ್ಯೆ, ಸೂರ್ಯ ಈ ಬಗ್ಗೆ ಮಾತನಾಡುತ್ತಾ, ನಮ್ಮ ಮುಖ್ಯ ಗುರಿ ಸಾಧಿಸಿದ್ದೇವೆ. ಈಗ ಮುಂದಿನದು ಒಲಿಂಪಿಕ್ಸ್ ಎಂದರು.

ಕೋಚ್ ಗಂಭೀರ್ ಮಡಿಲಿಗೆ ಟ್ರೋಫಿ

ಇದೇ ನ್ಯೂಜಿಲೆಂಡ್ ತಂಡ ಭಾರತದಲ್ಲಿ ಟೆಸ್ಟ್ ಪಂದ್ಯವನ್ನಾಡಿದ್ದಾಗ, ವೈಟ್ ವಾಷ್ ಎದುರಿಸಿದ್ದ ಭಾರತ ಭಾರೀ ಟೀಕೆ ಎದುರಿಸಿತ್ತು. ಅದರಲ್ಲೂ ಪ್ರಧಾನ ಕೋಚ್ ಗೌತಂ ಗಂಭೀರ್ ಎಲ್ಲಿಲ್ಲದ ಟೀಕೆ ಟಿಪ್ಪಣಿಗಳನ್ನೆದುರಿಸಿದ್ದರು. ಆದರೆ ಯಾವುದಕ್ಕೂ ಹೆಚ್ಚಿನ ಉತ್ತರ ನೀಡದ ಅವರು ಫಲಿತಾಂಶದ ಮೇಲೆ ಗಮನ ಹರಿಸಿದರು. ಇದರೊಂದಿಗೆ ತಮ್ಮ ಕೋಚ್ ಅವಧಿಯಲ್ಲಿ ಎರಡನೇ ಐಸಿಸಿ ಟ್ರೋಫಿ ಮತ್ತು ಮೊದಲ ವಿಶ್ವಕಪ್ ಟ್ರೋಫಿ ಗೆದ್ದುಕೊಂಡಿದೆ.





ಮೊದಲನೇ ಬಾರಿಗೆ ಒಂದು ತಂಡ ಸತತ ಎರಡು ಬಾರಿಗೆ ವಿಶ್ವಕಪ್ ಗೆದ್ದಿದೆ. ಇದು ಪರಿಶ್ರಮದ ಪ್ರತಿಫಲ ಮತ್ತು ಅರ್ಹತೆಗೆ ತಕ್ಕ ಬಹುಮಾನ. ನಮ್ಮ ತಂಡಕ್ಕೆ ನನ್ನ ಅಭಿನಂದನೆಗಳು.
■ ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ



ಅಹಮದಾಬಾದ್‌ನಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಗೆದ್ದ ತಂಡಕ್ಕೂ, ಗೆಲುವಿಗೆ ಕಾರಣರಾದ ಸ್ಟಾಫ್‌ಗೂ ಕೋಟ್ಯಾಂತರ ಅಭಿಮಾನಿಗಳಿಗೂ ಅಭಿನಂದನೆಗಳು. ಕೋಚ್ ಗಂಭೀರ್, ನಮಗೆ ಸ್ಮೈಲ್ ಹೊಂದುತ್ತದೆ. ಅದು ಹಾಗೇ ಇರಲಿ. ಎಲ್ಲರ ಪ್ರದರ್ಶನ ಉತ್ತಮವಾಗಿತ್ತು.
■ ಮಹೇಂದ್ರ ಸಿಂಗ್ ಧೋನಿ, ಮಾಜಿ ನಾಯಕ



ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದು ಇತಿಹಾಸ ನಿರ್ಮಿಸಿದ ಭಾರತ ತಂಡಕ್ಕೆ ಅಭಿನಂದನೆಗಳು. ಸತತ ಟ್ರೋಫಿ ಗೆದ್ದಿರುವುದು ಮತ್ತು ಮೂರನೇ ಟ್ರೋಫಿ ಗೆದ್ದ ಮೊದಲ ತಂಡ ಎನಿಸಿರುವುದು ನಮ್ಮ ದೇಶದ ಘನತೆ ತೋರಿಸುತ್ತದೆ. ಇದು ಕ್ರಿಕೆಟ್ ಅಭಿಮಾನಿಗಳಿಗೆ ಕ್ರಿಕೆಟ್ ಆಚರಿಸುವಂತೆ ಮಾಡುತ್ತದೆ.
■ ದ್ರೌಪದಿ ಮುರ್ಮು, ರಾಷ್ಟ್ರಪತಿ



ಇದೊಂದು ಅದ್ಭುತ ಗೆಲುವು. ಪಂದ್ಯಾವಳಿಯುದ್ದಕ್ಕೂ ನಮ್ಮ ತಂಡ ಆಡಿರುವ ಆಟ ಶ್ಲಾಘನೀಯ. ಒತ್ತಡದ ಸಮಯದಲ್ಲಿ ನಮ್ಮ ಹುಡುಗರು ಪರಾಕ್ರಮ ತೋರಿಸಿದ್ದಾರೆ. ಕಷ್ಟದ ಸಮಯದಲ್ಲಿ ಹೋರಾಡಿ ಗೆದ್ದಿರುವುದಕ್ಕೆ ಕಪ್ ಸಾಕ್ಷಿ, ಎಲ್ಲರಿಗೂ ಅಭಿನಂದನೆಗಳು.
■ ವಿರಾಟ್ ಕೊಹ್ಲಿ, ಕ್ರಿಕೆಟಿಗ



ವಿಶ್ವ ಚಾಂಪಿಯನ್ ಭಾರತ ತಂಡಕ್ಕೆ ಬಹುಪರಾಕ್. ಟೂರ್ನಿಯುದ್ದಕ್ಕೂ ನಮ್ಮ ಯುವಕರು ಆಡಿರುವ ಆಟಕ್ಕೆ ತಕ್ಕಂತೆ ಫಲಿತಾಂಶ ಮೂಡಿ ಬಂದಿದೆ. ವಿಶ್ವ ಗೆದ್ದ ತಂಡವು ಭಾರತದ ಘನತೆ ಎತ್ತರಕ್ಕೆ ತೆಗೆದುಕೊಂಡು ಹೋಗಿದೆ. ಎಲ್ಲರಿಗೂ ಅಭಿನಂದನೆಗಳು.
■ ಅಮಿತ್ ಶಾ, ಕೇಂದ್ರ ಗೃಹ ಮಂತ್ರಿ



ನಮ್ಮ ತಂಡ ಮರಳಿ ಚಾಂಪಿಯನ್ ಆಗಿದೆ. ಸಂಜು, ಬೂಮ್ರಾ ಸೇರಿದಂತೆ ತಂಡದ ಪ್ರತಿಯೊಬ್ಬರ ಆಟಗಾರರೂ ಕೂಟದಲ್ಲಿ ಅತ್ಯುತ್ತಮ ಆಟವಾಡಿದ್ದಾರೆ. ಈ ಗೆಲುವಿನ ಮೂಲಕ ದೇಶವನ್ನು ಮತ್ತೊಮ್ಮೆ ಸಂಭ್ರಮಿಸುವಂತೆ ಮಾಡಿರುವ ತಂಡಕ್ಕೆ ಅಭಿನಂದನೆಗಳು.
■ ರಾಹುಲ್ ಗಾಂಧಿ, ವಿಪಕ್ಷ ನಾಯಕ

ಎರಡು ಬಾರಿ ಸತತ ಚಾಂಪಿಯನ್ ಆಗಿದ್ದೇವೆ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಇಶಾನ್ ಕಿಶನ್, ಬೂಮ್ರಾ ಅವರ ಆಟ ಮೆಚ್ಚುವಂತದ್ದು. ಪ್ರತಿಯೊಬ್ಬರ ಶ್ರಮವೂ ತಂಡದ ಗೆಲುವಿನಲ್ಲಿ ಮಿಂಚಿದೆ. ಆಟಗಾರರಿಗೆ, ಕೋಚ್ ಗೌತಂ ಗಂಭೀರ್ ಅವರಿಗೆ, ಕೋಚಿಂಗ್ ಸ್ಟಾಫ್ ಸೇರಿದಂತೆ ಎಲ್ಲರಿಗೂ ಅಭಿನಂದನೆ.



■ ಯುವರಾಜ್ ಸಿಂಗ್, ಮಾಜಿ ಕ್ರಿಕೆಟಿಗ

ಆಟಗಾರರೇ ನನ್ನನ್ನು ಗೆಲ್ಲಿಸಿದ್ದಾರೆ: ಗಂಭೀರ್

ಈ ಗೆಲುವು ದ್ರಾವಿಡ್, ಲಕ್ಷ್ಮಣ್‌ಗೆ ಅರ್ಪಣೆ. ಇದು ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳ ಆಶಯವಾಗಿತ್ತು ಎಂದು ಪ್ರಧಾನ ತರಬೇತುದಾರ ಗೌತಂ ಗಂಭೀರ್ ತಿಳಿಸಿದ್ದಾರೆ. ಕೋಚ್ ಆಗಿ ಮೊದಲ ಗೆಲುವು ಸಾಧಿಸಿದ ನಂತರ ಮಾಧ್ಯಮದೊಂದಿಗೆ ಮಾತನಾಡಿರುವ ಅವರು, ಇದು ಆಟಗಾರರ ಗೆಲುವಾಗಿದೆ. ಆಟಗಾರರು ನನ್ನನ್ನು ಗೆಲ್ಲಿಸಿದ್ದಾರೆ. ನನಗೆ ಯಾವಾಗಲೂ ಆಟಗಾರರು ಒಬ್ಬ ಉತ್ತಮ ಕೋಚ್ ಆಗಿದ್ದೀರಿ ಒಬ್ಬ ಉತ್ತಮ ನಾಯಕರಾಗಿದ್ದೀರಿ ಎಂದು ಬೆನ್ನಿನ ಹಿಂದೆ ನಿಂತಿದ್ದಾರೆ. ಗೆಲುವಿನ ಎಲ್ಲಾ ಶ್ರೇಯ ನಮ್ಮ ಆಟಗಾರರಿಗೆ ಹೋಗಲಿ, ಪ್ರತಿಯೊಬ್ಬರೂ ತುಂಬಾ ಪರಿಶ್ರಮ ಪಟ್ಟಿದ್ದಾರೆ. ನಾವು ಸಾಮಾನ್ಯವಾಗಿ ಸರಣಿಗಳಲ್ಲಿ ಆಡುತ್ತಿರಬೇಕಾದರೆ, ಅಲ್ಲಿನ ವೈಭವದ ಗೆಲುವಿಗೆ ಜನರು, ಐಸಿಸಿ ಕೂಟವೇ ಬೇರೆ, ಸಾಮಾನ್ಯ ಪಂದ್ಯಗಳೇ ಬೇರೆ ಅನ್ನುತ್ತಿದ್ದರು. ಆ ಹೇಳಿಕೆಯನ್ನು ನಾವು ಈಗ ಸುಳ್ಳಾಗಿಸಿದ್ದೇವೆ ಎಂದರು.

ಹೊಸ ತಂಡ ಕಟ್ಟಿ ಬೀಗಿದ ಭಾರತ

2024ರ ವಿಶ್ವಕಪ್ ಗೆದ್ದ ತಕ್ಷಣವೇ ಮೂವರು ಪ್ರಮುಖ ಆಟಗಾರರು ನಿವೃತ್ತರಾಗಿದ್ದರು. ತಂಡಕ್ಕೆ ಹೊಸ ನಾಯಕ ಸೂರ್ಯಕುಮಾರ್ ಯಾದವ್, ತಂಡಕ್ಕೆ ಹೊಸ ಕೋಚ್ ಗೌತಂ ಗಂಭೀರ್ ಜತೆಗೆ ತಂಡದಲ್ಲಿ ಐಪಿಎಲ್‌ನಲ್ಲಿ ಮಿಂಚಿದ ಅಭಿಷೇಕ್ ಶರ್ಮ ಅಂತಹ ಆಟಗಾರರೊಂದಿಗೆ ಬಲಿಷ್ಠ ಪಡೆಯನ್ನು ಕಟ್ಟಬೇಕಿತ್ತು. ಅಲ್ಲಿಂದ ಹೊಸ ತಂಡದೊಂದಿಗೆ ಮೈದಾನಕ್ಕಿಳಿದ ಭಾರತ ಗೆದ್ದು ತೋರಿಸಿದೆ.



ಭಾರತ ಮಹಿಳಾ ತಂಡ ಶುಭಾರಂಭ

ಹೈದರಾಬಾದ್: ಎಫ್‌ಐಎಚ್ ಹಾಕಿ ವಿಶ್ವಕಪ್ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಭಾರತ ಮಹಿಳೆಯರ ತಂಡ ಮಹತ್ವದ ಹೆಜ್ಜೆ ಇಟ್ಟಿದ್ದು, ಹೈದರಾಬಾದಿನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಆತಿಥ್ಯ ತಂಡ ಕೂಟದಲ್ಲಿ ಶುಭಾರಂಭ ಮಾಡಿತು.

ಸೋಮವಾರದ ಪಂದ್ಯದಲ್ಲಿ ಭಾರತೀಯರು ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿದರು. ಉರುಗ್ವೆ ತಂಡದ ವಿರುದ್ಧ ಆಡಿದ ಭಾರತ 4-0ರಿಂದ ಭರ್ಜರಿ ಗೆಲುವು ದಾಖಲಿಸಿದೆ. ಪಂದ್ಯದ ಮೊದಲ ಸುತ್ತಿನಿಂದಲೂ ಹಿಡಿತ ಸಾಧಿಸಿ ಮೆರೆದ ಭಾರತ 59ನೇ ಸೆಕೆಂಡಿನಲ್ಲೇ



ಗೋಲು ಬಾರಿಸುವ ಅವಕಾಶವಿದ್ದರೂ ಭಾರತ ಸ್ವಲ್ಪದರಲ್ಲೇ ಕಳೆದುಕೊಂಡಿತು. ಅಲ್ಲಿಂದ ಉಭಯ ತಂಡಗಳು ಸಮಾನ ಪ್ರದರ್ಶನ ನೀಡಿದವು. ಮೊದಲ ಕ್ವಾರ್ಟರ್‌ನಲ್ಲಿ ಗೋಲು ದಾಖಲಾಗಲಿಲ್ಲ. ಎರಡನೇ ಕ್ವಾರ್ಟರ್‌ನ 21ನೇ

- ಎಫ್‌ಐಎಚ್ ವಿಶ್ವಕಪ್ ಅರ್ಹತಾ ಸುತ್ತು
- ಆರಂಭಿಕ ಪಂದ್ಯದಲ್ಲಿ ಉರುಗ್ವೆ ವಿರುದ್ಧ ಜಯ

ನಿಮಿಷದಲ್ಲಿ ಪಿಸಿ ಪಡೆದ ಭಾರತ ಮೊದಲ ಗೋಲು ಗಳಿಸಿ ಮುನ್ನಡೆ ಸಾಧಿಸಿತು. ನಂತರ ಮೂರನೇ ಕ್ವಾರ್ಟರ್‌ನ 40ನೇ ನಿಮಿಷದಲ್ಲಿ ಇಶಿಕಾ ಗೋಲಿನೊಂದಿಗೆ ಅಂತರ ಹಿಗ್ಗಿಸಿದರು. 58ನೇ ನಿಮಿಷದಲ್ಲಿ ರುತುಜಾ ಗೋಲು ಗಳಿಸಿ ಗೆಲುವು ಖಚಿತ ಪಡಿಸಿದರು.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಓಪನ್: ಸೇನ್‌ಗೆ ರಜತ



ಹೊಸದಿಲ್ಲಿ: ತಮ್ಮ ವೃತ್ತಿಜೀವನದಲ್ಲಿ ಪಡೆದ ಅತ್ಯುತ್ತಮ ಫಲಿತಾಂಶವೊಂದರಲ್ಲಿ ಭಾರತದ ಶಟ್ಲರ್ ಲಕ್ಷ್ಯ ಸೇನ್, ಇಲ್ಲಿ ಮುಕ್ತಾಯಗೊಂಡಿರುವ ಆಲ್ ಇಂಗ್ಲೆಂಡ್ ಓಪನ್ ಪಂದ್ಯಾವಳಿಯಲ್ಲಿ ಅರ್ಹ ಬಂಗಾರ ತಪ್ಪಿಸಿಕೊಂಡು ಬೆಳ್ಳಿ ಗೆದ್ದರು.

ಕೂಟದಲ್ಲಿ ಅಸಾಮಾನ್ಯ ಮತ್ತು ಅತ್ಯುತ್ತಮ ಪ್ರದರ್ಶನ ನೀಡಿದ ಅವರು, ಬೆಳ್ಳಿ ಪದಕ ಗೆದ್ದು ಬೀಗಿದರು. ಸತತ ಪ್ರದರ್ಶನ, ಪಟ್ಟ ಶ್ರಮ ಹಾಗೂ ಉತ್ಸಾಹದೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿ ಫೈನಲ್‌ಗೇರಿದ್ದ ಅವರು, ಭಾನುವಾರದ ಪಂದ್ಯದಲ್ಲಿ ತೈವಾನ್‌ನ ಲಿನ್ ಚುನ್ ಇ ಅವರನ್ನು ಎದುರಿಸಿದ್ದರು. 57 ನಿಮಿಷ ನಡೆದ ಈ ಪಂದ್ಯದಲ್ಲಿ ಸೇನ್ ಎರಡೇ ಸೆಟ್‌ನಲ್ಲಿ ಸೋತರೂ ಹೋರಾಟ ನಡೆಸಿದರು. ಮೊದಲನೇ ಸೆಟ್‌ನಲ್ಲಿ ಸೇನ್ 15 ಅಂಕ ಗಳಿಸುವಷ್ಟರಲ್ಲಿ ಎದುರಾಳಿ 21 ಅಂಕ ಗಳಿಸಿದ್ದರು. ಎರಡನೇ ಸೆಟ್‌ನಲ್ಲಿ ಸೇನ್ ಕಂಬ್ಯಾಕ್ ಮಾಡಿದರೂ 20 ಅಂಕ ಮಾತ್ರ ಗಳಿಸಿದರು. ಎದುರಾಳಿ 22 ಅಂಕಗಳೊಂದಿಗೆ ಪದಕ ಗೆದ್ದು ಬೀಗಿದರು.


ಸೇಫ್ ಹೌಸ್‌ಗೆ ಇರಾನಿ ಆಟಗಾರ್ತಿಯರು

ಬ್ರಿಸ್ಬೇನ್: ಇರಾನಿ ಬೆಂಬಲಿಗರು ತಮ್ಮ ದೇಶದ ಮಹಿಳಾ ಫುಟ್‌ಬಾಲ್ ತಂಡದ ಮೇಲೆ ಮುಗಿಬಿದ್ದು ಆಕ್ರೋಶ ಹೊರಹಾಕಿದ ಹೈಡ್ರಾಮಾ ನಂತರ ಇರಾನಿನ ಐದು ಆಟಗಾರ್ತಿಯರನ್ನು ಅಲ್ಲಿನ ಸರ್ಕಾರ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದು, ಕೆಲವು ದಿನಗಳ ಮಟ್ಟಿಗೆ ಆಶ್ರಯ ನೀಡುವುದಾಗಿ ಹೇಳಿದೆ.

ಆಸ್ಟ್ರೇಲಿಯಾದಲ್ಲಿ ಮಹಿಳೆಯರ ಫುಟ್‌ಬಾಲ್ ಏಷ್ಯಾಕಪ್ ನಡೆಯುತ್ತಿದೆ. ಈ ಮಧ್ಯೆ ಇರಾನ್ ಪಂದ್ಯಾವಳಿಯಿಂದ ಲೀಗ್ ಹಂತದಲ್ಲೇ ಹೊರಬಿದ್ದಿದೆ. ಮೊದಲ ಪಂದ್ಯದಲ್ಲಿ ದ.ಕೊರಿಯಾ ವಿರುದ್ಧ ಆಡಿದ್ದ ಇರಾನ್ ರಾಷ್ಟ್ರಗೀತೆ ಸಮಯದಲ್ಲಿ ಗೊಂದಲ ಸೃಷ್ಟಿ ಮಾಡಿತ್ತು. ಇರಾನಿನ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯದ ನೀಡವ ಬಗ್ಗೆ ಕಳಕಳಿ ವ್ಯಕ್ತಪಡಿಸಿ ಕೆಲವು ಆಟಗಾರ್ತಿಯರು ರಾಷ್ಟ್ರಗೀತೆ ಹಾಡದೆ ಪ್ರತಿಭಟಿಸಿದ್ದರು. ಈ ವಿಚಾರದ ಬಗ್ಗೆ ಹತಾಶೆ ಹೊರಹಾಕಿದ ಇರಾನಿ ಬೆಂಬಲಿಗರು, ಏಷ್ಯಾಕಪ್‌ನಿಂದ ಹೊರಬಿದ್ದಿರುವ ತಂಡದ ಬಸ್ಸನ್ನು ಹಿಂಬಾಲಿಸಿ ಪ್ರತಿಷ್ಠಿತ ಆಟಗಾರ್ತಿಯರ ವಿರುದ್ಧ ಹತಾಶೆ ಹೊರ ಹಾಕಲೆತ್ನಿಸಿದ್ದಾರೆ. ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ. ಪರಿಸ್ಥಿತಿ ತೀರಾ ಕೈಮೀರಿ ಹೋದ ನಂತರ ಅಲ್ಲಿನ ಪೊಲೀಸರು ನಿಯಂತ್ರಣಕ್ಕೆ ಬಂದಿದ್ದಾರೆ. ಆಟಗಾರ್ತಿಯರ ವಿನಂತಿಯ ಮೇರೆಗೆ ಅಲ್ಲಿನ ಸರ್ಕಾರ ಕೆಲವು ದಿನಗಳ ಮಟ್ಟಿಗೆ ಆಶ್ರಯ ನೀಡುವುದಾಗಿ ಒಪ್ಪಿಕೊಂಡಿದೆ. ಪ್ರತಿಷ್ಠಿತ ಆಟಗಾರ್ತಿಯರನ್ನು ರಾಷ್ಟ್ರಗೀತೆ ಹಾಡಲು ಒತ್ತಾಯ ಮಾಡಲಾಗಿತ್ತು ಎಂದು ತಿಳಿದುಬಂದಿದೆ. ಹೀಗಾಗಿ ಆ ಆಟಗಾರ್ತಿಯರು ಇಂತಹ ಸೂಕ್ಷ್ಮ ಸಮಯದಲ್ಲಿ ಇರಾನಿಗೆ ಹೋಗುವುದು ಸೂಕ್ತವಲ್ಲ ಎಂಬುದಾಗಿ ಕೋಚ್ ತಿಳಿಸಿದ್ದಾರೆ. ಹೀಗಾಗಿ ಅಲ್ಲಿನ ಸರ್ಕಾರ ಅವರಿಗೆ ಆಶ್ರಯ ನೀಡಿದೆ. ಘಟನೆ ಬಗ್ಗೆ ಇರಾನ್ ಕೂಡ ಪ್ರತಿಕ್ರಿಯೆ ನೀಡಿದ್ದು, ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದೆ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5919

5918 ಉತ್ತರ

ಎಡದಿಂದ ಬಲಕ್ಕೆ:
1.ಆಕಾಂಕ್ಷಿಸು 3.ರಾಜನ್ಯಕ
5.ತರುಣ 6.ಮಾಧುರಿ
8.ಅಚ್ಚರಿ 10.ಜೋಕೆ
12.ಮಾನ 14.ಗಮನ
15.ಅಧೋಗತಿ
16.ವಜ್ರಕೀಟ
ಮೇಲಿನಿಂದ ಕೆಳಕ್ಕೆ
: 1.ಆಶಾಸುಂದರಿ
2.ಸುರಕ್ಷಿತ
3.ರಾಮಾಯಣ
4.ಕನಕಗಿರಿ 7.ಮಾಲಿಕೆ
8.ಅರ್ಜುನ 9.ಅಗಜೆ
11.ಜೋಗತಿ 12.ಮಾನವ
13.ಕಿರೀಟ

ಎಡದಿಂದ ಬಲಕ್ಕೆ
1.ಮೈದಾನದಿಂದ ಕೂಡಿದ ಪ್ರದೇಶ (5)
3.ಅತಿಯಾದ ಆಸೆಯ ಕಡೆಯಲ್ಲಿ ಶಕ್ತಿಯಿದೆ (3)
4.ಸೂರ್ಯನ ಬೆಳಗಿನ ಅವಧಿ ತಿರುಗಿದೆ (3)
5.ಮಾತು ಎಂಬರ್ಥದ ಶಾರದೆ (2)
6.ದೇಹದ ಸಮಾನಪದ (2)
7.ಪಾತ್ರನಾದವನು-ಅರ್ಹವ್ಯಕ್ತಿ (3)
8.ಆರು ಕಾಲುಗಳುಳ್ಳ ಕೀಟವಿಲ್ಲಿ ತಿರುಗಿದೆ (3)
10.ತುಂಬ ಕ್ಲಿಷ್ಟತೆಯಿಂದ ಕೂಡಿದ್ದು (3)
12.ವಿದಾಯದ ನಂತರದ ಗಳಿಕೆ (3)
13.ಬರೆಯುತ್ತಿರುವ ಅಕ್ಷರ (2)
14.ವಿಷ್ಣುವಿನ ಆರನೆಯ ಅವತಾರ (2)
15.ಶಿವನ ಉಗ್ರನೃತ್ಯವಿಲ್ಲಿ ತಿರುಗಿದೆ (3)
16.ಅನುಮಾನಿಸು-ಶಂಕೆಪಡು (3)
17.ಔಷಧಿಯುಕ್ತವಾದ ನಾರುಬೇರು (5)
ಮೇಲಿನಿಂದ ಕೆಳಕ್ಕೆ
1. ಶಕ್ತಿಶಾಲಿಯೀತ (4)
2.ಮೃದುತ್ವದಿಂದ ಕೂಡಿದ ಮಾತು (4)
7.ಮನಸ್ಸಿನಿಂದ ಹುಟ್ಟಿದವನು-ಮನ್ಮಥ (3)
9.ಹೇಳಬೇಕಾದ ಮುಖ್ಯ ಉದ್ದೇಶ (3)
11.ಸೌಂದರ್ಯವತಿ-ಮನೋಹರಿ (4)
12.ನೀರು-ಆಹಾರದಿಂದ ಹರಡುವ ಕರುಳಿನ ರೋಗ (4)

CHANGE OF NAME

I, **RENUKA K PATIL** (old name) Resident of Bhagirathi Nivas New Good Shed Road Belagavi - 590001, have changed my name as **RENUKA BHASKAR PATIL** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **NISARAHMED MAHABOOB SAB HAWALDAR (Old Name)** R/o Flat No. 204, B Block, Harmony Residency, Kangrali BK Shahu Nagar, Belagavi-590010 have changed my name as **NISAR AHMED HAVALDAR (New Name)** Vide Affidavit Sworn Before Notary S.F. Huilgol on 06-03-2026

CHANGE OF NAME

I, **MOHAMMED SUHEL QADEERI** (old name) Resident of 2/136, Bukhari Colony, Shiruru, Kundapura, Dt: Udupi 576228 (address), have changed my name as **MOHAMMED ASHRAF** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **AKSHATA SHRIKANT PATIL** (old name) Resident of Plot No 2233, S No 11, Mahantesh Nagar, Belagavi - 590016, Karnataka, India, have changed my name as **AKSHATA PATIL** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **RAJENDRASA RAMASA PATTAN** (old name) Resident of H No 103 Ghantikeri Oni Hubballi 580020, Karnataka, have changed my name as **RAJENDRA PATTAN** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **SONU MEHARWADE** (old name) Resident of H No: 103 Ghantikeri Oni Hubballi 580020, Karnataka, have changed my name as **SONU RAJENDRA PATTAN** (new name) henceforth I will be called and recognized by new name for all future purposes, dated: 09/03/2026.

IN THE COURT OF THE XXXth ADDL. CITY CIVIL JUDGE AT BANGALORE. (CCH - 31)

O.S.No. 8103/2011

Between : Sri. Puttaraju, Aged about 32 years,S/O. Late. Jayaram, R/at. Kodigehalli Village, Yelahanka Hobli, Bangalore North Taluk. And Others. **...Plaintiffs**

And : Sri. Venkatappa and Others. **...Defendants**

SUMMOUNS TO DEFENDANTS NO:-23.- BY WAY OF PAPER PUBLICATION

D-23. Mr. Vijaykumar. N. Guggari, S/o. Nagappa V. Guggari. Aged about 45 years, R/at. Guggari Complex, Tagore Road, Gadag-582101.

Whereas, the above named Plaintiffs have filed a above suit for partition, separate possession, of their share and for injunction, declaration declaring the sale deed as null and void, in the suit schedule against Venkatappa and others. You above named are hereby summoned/ Noticed to appear before this Hon'ble court either in person or through the pleader on **28th March 2026, at 11 A.M.** (CITY CIVIL COURT AT BANGALORE CCH-31) defend the above case failing which the matter will be disposed of ex-party.

SCHEDULE

he land bearing Sy.No.38, measuring 2 acres 12 guntas situated at Kothihosahalli Village, Yelahanka Hobli, Bangalore North Taluk and bounded on the:-
East :- Road, **West by :-** Property of N. Ramaraju,
North by :- Property of Srinivasraju,
South by :- Property of Nanjundappa.
Given under my hand and the seal of this court this the 6th day of March 2026.

BY ORDER OF THE COURT
Sd/- Senior Sheristedar
City Civil Court, Bangalore

Advocate for Plaintiffs:
S. J. KUMAR. & N. PAPANNA ADVOCATE,
No. 38/1, 2nd Floor, N.S. Iyengar Street Sheshadripuram, Bangalore-20 9886569551.

IN THE COURT OF THE 30th ADDL CITY CIVIL JUDGE AT BANGALORE (CCH 31)

O.S.No. 8103/2011

Between : Sri. Puttaraju, Aged about 32 years, S/O. Late. Jayaram, R/at. Kodigehalli Village, Yelahanka Hobli, Bangalore North Taluk. And Others. **...Plaintiffs**

And : Sri. Venkatappa and Others. **...Defendants**

SUMMOUNS TO DEFENDANTS NO:-73 and 74.- BY WAY OF PAPER PUBLICATION

D-73. Prashanth.T.H.M. Aged bout 41 years, S/o. T.H.M. Basavaraju, R/at.No.36/25, Vidyagiri Colony, Fire station Road, Bellary-583 103.

D-74. Smt.Shilpa Aradhya, W/o.Prashanth.T.H.M. Aged about 41 years, R/at.No.36/25,Vidyagiri Colony, Fire station Road, Bellary-583 103.

Whereas, the above named Plaintiffs have filed a above suit for partition, separate possession, of their share and for injunction, declaration declaring the sale deed as null and void, in the suit schedule against Venkatappa and others. You above named are hereby summoned/Noticed to appear before this Hon'ble court either in person or through the pleader on **28/3/2026, at 11 A.M.** (CITY CIVIL COURT AT BANGALORE CCH-31) defend the above case failing which the matter will be disposed of ex-party.

SCHEDULE

he land bearing Sy.No.38, measuring 2 acres 12 guntas situated at Kothihosahalli Village, Yelahanka Hobli, Bangalore North Taluk and bounded on the:- **East by :-** Road,
West by:- Property of N. Ramaraju,
North by :- Property of Srinivasraju,
South by:- Property of Nanjundappa.
Given under my hand and the seal of this court this the 6th day of March 2026.

BY ORDER OF THE COURT
Sd/- Senior Sheristedar
City Civil Court, Bangalore

Advocate for Plaintiffs:
S. J. KUMAR. & N. PAPANNA ADVOCATE,
No. 38/1, 2nd Floor, N.S. Iyengar Street, Sheshadripuram,Bangalore-20 9886569551.

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಕೃಷಿ ನಗರ, ಧಾರವಾಡ-580 005. ಕರ್ನಾಟಕ

ಸಂಖ್ಯೆ: ಆ.ಅ/ಕೃವಿವಿ/2025-26 ದಿನಾಂಕ: 09.03.2026

ಆಸಕ್ತಿ ಅಭಿವ್ಯಕ್ತ ಪಡಿಸುವುದು (ದ್ವಿತೀಯ ಕರೆ)

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಕೆ.ಸಿ-1 ರಂತೆ ಇ-ಟೆಂಡರ್ ಮೂಲಕ ವಿಜಯಪೂರ ನಗರ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ಫಾರ್ಮ ಮಷಿನರಿ ಪರೀಕ್ಷಣೆ ಸಂಸ್ಥೆ, ವಿಜಯಪೂರ ಇದರ ಆವರ್ತ ನಿಧಿಯ ಹೆಚ್ಚುವರಿ ಹಣ ಸುಮಾರು **ರೂ. 1.5 ಕೋಟಿಗಳು** ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್‌ಸೈಟ್ **https://kppp.karnataka.gov.in.** ನ್ನು ನೋಡುವುದು.

ಟೆಂಡರ್ ವೇಳಾ ಪಟ್ಟಿ

1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	16.03.2026 ಸಾಯಂಕಾಲ 5.20 ಗಂಟೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	17.03.2026 ಸಾಯಂಕಾಲ 05.21 ಗಂಟೆ

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ **ಸಂಖ್ಯೆ: 080-23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರ್‌ಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದುಕೊಳ್ಳಲು ಸದಾ ವೆಬ್‌ಸೈಟ್ **https://kppp.karnataka.gov.in.** ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಸಹಿ/-
ಆಸ್ತಿ ಅಧಿಕಾರಗಳು

ವಾ.ಸಾ.ಇ./ಧಾರವಾಡ/1332/2025-26/ದೇಶಪಾಂಡೆಪಬ್ಲಿಸಿಟಿ

Crl. Misc. No. 18/2026

IN THE COURT OF THE HON'BLE I-ADDL. CIVIL JUDGE & III J.M.F.C. COURT, HUBBALLI, AT : HUBBALLI

Petitioner : Begaum W/o Ibrahimsab Hanagikatti

V/s.

Respondent : The Registrar of Births & Deaths Reptd by its Assistant Commissioner

CITATION

Whereas the petitioner above named has filed an application under section 13 (3) of Birth and Death Act, seeking an order to register the name of the petitioner's mother-in-law **Smt. Fatobi W/o. Gafaarsab Hanagikatti who died on 29-10-2024 at Tattipur Chawl, Yallapur Oni, Hubballi,** in the concerned death register maintained by the respondent. If anybody having objection for the same, he/they shall appear before this Court either personally or through duly instructed advocate and file objections if any on 21-04-2026 at 11-00 a.m. Failing which the case will be heard & decided.

Given under my hand & seal of the Court on 09-03-2026 at Hubballi.

(COURT SEAL)

By order of the Court
Sd/- Sheristedar
I-Addl. Civil Judge (Jr. Dn.) Court, Hubballi.

A.V. Hannalli
Advocate for Petitioner.

CHANGE OF NAME

I, **NAYANA BASAVANAGOUDRA** (old name) Resident of Nisarga Nagara 1st Cross, Byadagi, District: Haveri, State: Karataka, Pin Code: 581106, have changed my name as **NAYANA CHANDRASHEKHAR CHATRAD** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **IMAM HUSSAIN MOHAMMED YUSUF CHOBDAR** (old name) Resident of Pattar Phod Galli C B T Hubli, Dharwad, State: Karnataka, Pin Code: 580020 have changed my name as **IMAMHUSSAIN CHOBDAR** (new name) henceforth I will be called and recognized by new name for all future purposes, dated: 09/03/2026.

CHANGE OF NAME

I, **SHRADHA** (old name) Resident of #228, Shivaganga Layout, Kusugal Road Keshwapur, Hubli, Dharwad, State: Karnataka, Pin Code: 580023, have changed my name as **SHRADHA NAGARAJ BAKALE** (new name) henceforth I will be called and recognized by new name for all future purposes, dated: 09/03/2026.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ನಂ.2, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು, ಮಂಡ್ಯ ಜಿಲ್ಲೆ
ಪಿನ್‌ಕೋಡ್-571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :10/2025-26 ದಿ:04.03.2026

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:10/2025-26 ದಿನಾಂಕ: 04.03.2026 ರಲ್ಲಿ ಒಟ್ಟು 13 ಕಾಮಗಾರಿ (ಕನಿಷ್ಠ ಅಂದಾಜು ಮೊತ್ತ 75.00 ಲಕ್ಷಗಳು ಮತ್ತು ಗರಿಷ್ಠ ಅಂದಾಜು ಮೊತ್ತ ರೂ.499.00 ಲಕ್ಷ ರೂಪಾಯಿ)ಗಳಿಗೆ ಅರ್ಹ ಕೆ.ಡಬ್ಲ್ಯೂ-3 ಮತ್ತು ಕೆ.ಡಬ್ಲ್ಯೂ-4 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕ ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **www.kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.2, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/864/2025-26

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ-0816-2272200, ಸಹಾಯವಾಣಿ-9449872599,
ಇ-ಮೇಲ್: ka.tumakuru.cc.@gmail.com
ವೆಬ್‌ಸೈಟ್:www.tumakurucity. mrc.gov.in

ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/23/2025-26
ದಿನಾಂಕ: 05.03.2026

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)


ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಅನುದಾನದಲ್ಲಿ ಕ್ರಮ ಸಂಖ್ಯೆ 11 ಮತ್ತು 12ರ ಕಾಮಗರಿಗಳಿಗೆ 7 ದಿನಗಳು ಹಾಗೂ ಉಳಿದ ಕಾಮಗಾರಿಗಳಿಗೆ 15ದಿನಗಳನ್ನು ನಿಗದಿಪಡಿಸಿದ್ದು, ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಲು ಹೊಸದಾಗಿ ಮತ್ತು ಮರು ಟೆಂಡರ್ ಆಹ್ವಾನಿಸಲಾಗಿದ್ದು,

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 05-03-2026 ರಿಂದ ದಿನಾಂಕ: 20-03-2026 ರವರೆಗೆ. 2. ಪ್ರಿ-ಬಿಡ್ ಮಿಟಿಂಗ್ ದಿನಾಂಕ: 11-03-2026 ಬೆಳಗ್ಗೆ 11.30 ಗಂಟೆಗೆ. 3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20-03-2026 ರಂದು ಸಾಯಂಕಾಲ 4.30ಗಂಟೆವರೆಗೆ 4. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 23-03-2026 ಸಾಯಂಕಾಲ 4.35 ಗಂಟೆಗೆ 5. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 25-03-2026ರ ಬೆಳಗ್ಗೆ 10.30 ಗಂಟೆಗೆ ದಿನಾಂಕಗಳು ಮುಂದೂಡಿಕೆ/ಯಾವುದೇ ತಿದ್ದುಪಡಿಗಳು ಇದ್ದಲ್ಲಿ ಕೇವಲ ಕೆಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು

DIPR/TUM/479/KSMCA/2025-26



CHANGE OF NAME

I, **RAJU KOTEPPA ARAHUNASI** (old name) Resident of H No: 55 Sai Nilaya Siddeshwar Park Vidyanagar Hubballi Pin - 580031 (address), have changed my name as **RAJU ARAHUNASI** (new name) henceforth I will be called and recognized by new name for all future purposes, dated: 09/03/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ತುಮಕೂರು ಮಹಾನಗರಪಾಲಿಕೆ, ತುಮಕೂರು

ವೆಬ್‌ಸೈಟ್ : **www.tumkurucity.mrc.gov.in**
ಇಮೇಲ್: **ka.tumkuru.cc@gmail.com,**
ಕಚೇರಿದೂರವಾಣಿ : 2272200, ಸಹಾಯವಾಣಿ : 9449872599

ಸಂಖ್ಯೆ:ತುಮಪಾ/ಆಶಾ/ಸಿಆರ್-80/2025-26 ದಿನಾಂಕ:04-03-2026

ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999-2000 2000ರಂತೆ ಈ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **kppp.gov.in**ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ತುಮಕೂರು ಮಹಾನಗರಪಾಲಿಕೆಯಲ್ಲಿ ಪ್ರತಿನಿತ್ಯ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ 429 ಸಂಖ್ಯೆಯ ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರ ಒದಗಿಸುವ ಕಾಮಗಾರಿ,	59.02
2.	ತುಮಕೂರು ಮಹಾನಗರಪಾಲಿಕೆಯಲ್ಲಿ ಹೊರ ಮೂಲದ ಆಧಾರದ ಮೇಲೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ 511 ಸಂಖ್ಯೆಯ ಕಾರ್ಮಿಕರಿಗೆ (ಡ್ರೈವರ್ಸ್, ಹೆಲ್ಪರ್ಸ್, ಲೋಡರ್ಸ್) ಬೆಳಗಿನ ಉಪಹಾರ ಒದಗಿಸುವ ಕಾಮಗಾರಿ.	71.80

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 05.03.2026** ರಿಂದ **ದಿನಾಂಕ:11.03.2026**ರ ವರೆಗೆ
2. ಫ್ರೀ ಬಿಡ್ ಮೀಟಿಂಗ್ **ದಿನಾಂಕ:09.03.2026ರಂದು ಬೆಳಗ್ಗೆ 11.30 ಗಂಟೆಗೆ**
3. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 11.03.2026ರಂದು ಸಾಯಂಕಾಲ 4.00 ಗಂಟೆವರೆಗೆ**
4. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.03.2026 ಬೆಳಗ್ಗೆ 11.00 ಗಂಟೆ**

ಸಹಿ/- ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರಪಾಲಿಕೆ
ತುಮಕೂರು.

DIPR/TUM/RO-292/25-26/Oysters

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2025-26 ದಿನಾಂಕ:06-03-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಮಹಾನಗರ ಪಾಲಿಕೆ ಅನುದಾನದಲ್ಲಿ	Repairing Installing and Commissioning of AQUVA, 415V, 3PH, 160KW, 215HP PUMP With Motor Dewatering at Rampur Canala in Raichur City. **Estimate Cost Rs. 8,45,000/**	DMA/2025-26/ WS/ WORK_ INDENT56149
2	2025-26 ಎಸ್.ಎಫ್.ಸಿ (ಮುಕ್ತ) & ಮಹಾ ನಗರ ಪಾಲಿಕೆ ಅನುದಾನ	ನಗರದ ವಾರ್ಡ್ ನಂ 01 ರಿಂದ 35 ವರೆಗೆ 90 ವ್ಯಾಟ್ಸ್ ಎಲ್.ಇ.ಡಿ ಲೈಟ್ ಅಳವಡಿಸುವುದು. Estimate Cost Rs. 50,00,000/-	DMA/2025-26/ EL/ WORK_ INDENT55631/ Call-2
3	2025-26 ಮಹಾನಗರ ಪಾಲಿಕೆ ರಾಯಚೂರು ಅನುದಾನ	Greenification of Raichur City. Estimate Cost Rs. 100.00 Lakhs.	DMA/2025-26/ OW/ WORK_ INDENT55094/ Call-2
4	2025-26 ಮಹಾನಗರ ಪಾಲಿಕೆ ರಾಯಚೂರು ಅನುದಾನ	Upgradation of Record Room in City Corporation Raichur Office. Estimate Cost Rs. 100.00 Lakhs.	DMA/2025-26/ BD/ WORK_ INDENT 55092/Call-2

DIP/RCR/749/KSMCA/752/2025-26

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

ನಗರಾಭಿವೃದ್ಧಿ ಇಲಾಖೆ

ಪಟ್ಟಣ ಪಂಚಾಯತ ಕಾರ್ಯಾಲಯ, ಲೋಕಾಪೂರ-587122

ತಾಲೂಕ : ಮುಧೋಳ ಜಿಲ್ಲಾ ಬಾಗಲಕೋಟೆ

Email ID: itstaff_ulb_lokapur@ymail.com
https://maps.app.goo.gl/kUKsw3c96HPAawgY7
Website:http://www.lokapurtown.mrc.gov.in

ನಂ/ಪ.ಪಂ.ಲೋ/ವರ್ಯೋ/ಸಿಆರ್/ಟೆಂ.ಪ್ರ/2025-26 ದಿನಾಂಕ : 09-03-2026

(ಇ - ಪ್ರೋಕ್ಯೂರಮೇಂಟ್‌ಅಲ್ಪಾವಧಿಟೆಂಡರ್ ಪ್ರಕಟಣೆ)

ಯಾವತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವಿವಿಧ ಯೋಜನೆಯ ಅನುದಾನಗಳಲ್ಲಿ ಈ ಕೆಳಗೆ ಕಾಣಿಸಿದೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಐಟೆಂವಾರು ದರವಾರುಗಳನ್ನು ಅರ್ಹ ಗುತ್ತಿಗೆದಾರರಿಂದ ಕೆ,ಪಿ,ಪಿ, ಪೋರ್ಟಲ್ ಮೂಲಕ ಕೆ. ಡಬ್ಲೂ 2ನಮೂನೆಯಲ್ಲಿ **https:// kppp.karnataka.gov.in** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯತ ಕಛೇರಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು. .

ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿ.ಎಮ್.ಐ.ಡಿ.ಪಿ)

ಕ್ರಸ	ಕಾಮಗಾರಿ ಹೆಸರು	ಅಂದಾಜು ಮೊತ್ತ ಲಕ್ಷಗಳಲ್ಲಿ(ರೂ ಗಳಲ್ಲಿ)	ಇ.ಎಮ್.ಡಿ (ರೂ ಗಳಲ್ಲಿ)	ಮಿಸಲಾತಿ	ಅವಧಿ ತಿಂಗಳುಗಳಲ್ಲಿ	ಗುತ್ತಿಗೆದಾರರ ದರ್ಜೆ
1	2	3	4	5	6	7
1	Laying Of Pipeline Work From The Main Road To Subhas Nagara In Lokapur Town from The Main to Subhas Nagar Installation Of 3 inch Pipelines From Jnaneshwar matha To Bhayar Oni Installation Of 3 Inch Pipe From Rammana Killari Mane in Venketeshwar Nagar to the over head tank 3 inch Pipelines Works From Yadawad Road To Bridge To Galli Durgadevi Gudl. DMA/2025-26/WS/WORK_INDENT55614	28.00	56000/-	ಸಾಮಾನ್ಯ	6	ಅರ್ಹ ಗುತ್ತಿಗೆದಾರರು
2	Development Of Main Market Road of Lokapur Town Market Road from agasi Bagilu Continue Of to Hachati Angadi kayipalle Market Road Hiremath Road Road From Kulelli House To Drama Mantapa to be developed. DMA/2025-26/RD/WORK_INDENT55616.	40.00	80000/-	ಸಾಮಾನ್ಯ	6	ಅರ್ಹ ಗುತ್ತಿಗೆದಾರರು
3	Construction Of Drains On Both Sides Main road from the old murarji School to Hanuman Temple And From Gangappa Mudhol House In Thanikeri To Subhas Huggi. DMA/2025-26/OW/WORK_INDENT55617	22.00	44000/-	ಸಾಮಾನ್ಯ	6	ಅರ್ಹ ಗುತ್ತಿಗೆದಾರರು
4	Construction Community Hall At Lokapur Town Property No 156 And Welfare hall at 238or1 in jallikatti Village. DMA/2025-26/BD/WORK_INDENT55612	20.00	30000/-	ಪರಿಶಿಷ್ಟ ಪಂಗಡ	6	ಅರ್ಹ ಗುತ್ತಿಗೆದಾರರು
5	Construction Of the CC Road in ward No 11 Loakapur Town CC Road Chikkur Road to Khabrastan. DMA/2025-26/RD/WORK_INDENT55613	20.00	25000/-	ಪರಿಶಿಷ್ಟ ಜಾತಿ	6	ಅರ್ಹ ಗುತ್ತಿಗೆದಾರರು

ಹೆಚ್ಚಿನ ಮಾಹಿತಿಗಾಗಿ http:// kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರನಲ್ಲಿ ಇತರೆ ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸಂಗ್ರಹಣೆಯಲ್ಲಿ ಪೋರ್ಟಲದಲ್ಲಿ ತಿಳಿಸಲಾಗುವುದು ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

Last Date and Time for Tender Queries/Clarifications & Receipt of Tenders 24-03-2026 Date and Time for Opening of Technical Bid & Financial Bid 26-03-2026

ಸಹಿ/-
ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತ ಲೋಕಾಪೂರ

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025-26 ದಿನಾಂಕ: 27.02.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲಕ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ಕೊನೆಯ ದಿನಾಂಕ: 23.03.2026 ರ 16.30 ರವರೆಗೆ (2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 24.03.2026 ರಂದು 16.35 ನಂತರ (3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 26.03.2026 ರಂದು ಬೆಳಿಗ್ಗೆ 11.30 ನಂತರ (ಸಾಧ್ಯವಾದಲ್ಲಿ) (4)** ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Dibburahalli-Shidlaghatta main road to Tatahalli village Shidlaghatta taluk. Chikkaballapur district (VR 261) **(RDPR/2025-26/RD/WORK_INDENT25318)**	200.00	300000.00	9 ತಿಂಗಳು
2	Improvements to road from fromT. Gollahalli-KY Road Via Tuluvanur chainage 0.00 Km to 3.40 Km Chintamani Taluk Chikkaballapur District. (**RDPR/2025-26/RD/WORK_INDENT25150)**	200.00	300000.00	9 ತಿಂಗಳು
3	Improvements to road from Pendlivarahalli cross to Kambarahalli Doddagummanahalli road to the border. Shidlaghatta taluk. Chikkaballapur District. (**RDPR/2025-26/RD/WORK_INDENT25320)**	140.00	210000.00	6 ತಿಂಗಳು
4	Improvements to road from From Muduganakunte Cross via Jakkenahalli to Kadaburu village in Gowribidanur Taluk Chikkaballapur District (**RDPR/2025-26/RD/WORK_INDENT25322)**	200.00	300000.00	9 ತಿಂಗಳು
5	Improvements to road from Kadabur village to Saragondlu village in Gowribidanur Taluk Chikkaballapur District (**RDPR/2025-26/RD/WORK_INDENT25323)**	120.00	180000.00	6 ತಿಂಗಳು
6	Improvements to road from NH 234 road via Bhaktarahalli village to Colonyin Gowribidanur Taluk Chikkaballapur District (**RDPR/2025-26/RD/WORK_INDENT25324)**	150.00	225000.00	6 ತಿಂಗಳು
7	Improvements to road from Huduguru village to Virupasandra Lakshmipur road via fishermens houses in Gowribidanur Taluk Chikkaballapur District (**RDPR/2025-26/RD/WORK_INDENT25326)**	120.00	180000.00	6 ತಿಂಗಳು
	Total	**1130.00**		

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:470/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್‌.ಟಿ ಸಂಖ್ಯೆ **23/2025-26** ದಿನಾಂಕ: **06.03.2026**

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗ ವ್ಯಾಪ್ತಿಯಲ್ಲಿನ ರಸ್ತೆ ಸಂಚಾರ ಗಣತಿ ಸಮೀಕ್ಷೆ ಕಾಮಗಾರಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು 06 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಲ್ಲಿನ ಕ್ರಸಂ-1ರ ಕಾಮಗಾರಿಯನ್ನು ದಿನಾಂಕ: 06.03.2026 ರಂದು ಹಾಗೂ ಕ್ರಸಂ-2 ರಿಂದ 6 ವರೆಗಿನ ಕಾಮಗಾರಿಗಳನ್ನು ದಿನಾಂಕ: 07.03.2026 ರಂದು ಟೆಂಡರು ದಾಖಲಾತಿಗಳನ್ನು ವೆಬ್ ಸೈಟ್ https://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 3833.61 ಲಕ್ಷಗಳು ಮತ್ತು ಕನಿಷ್ಠ 4.68 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.38,34,000/- ಮತ್ತು ಕನಿಷ್ಠ ರೂ.11,700/- ಗುತ್ತಿಗೆ ಕಾಲಾವಧಿ ಗರಿಷ್ಠ 18-ತಿಂಗಳು ಮತ್ತು ಕನಿಷ್ಠ 2-ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಕ್ರಸಂ-1ರ ಕಾಮಗಾರಿ ದಿ:13.03.2026, ಕ್ರಸಂ-2 ರಿಂದ 5 ವರೆಗಿನ ಕಾಮಗಾರಿಗಳು ದಿ:16.03.2026 ಹಾಗೂ ಕ್ರಸಂ-6 ರ ಕಾಮಗಾರಿ ದಿ: 23.03.2026 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.


ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

DIPR/DDMYS/1804/KSMCA/1015/2025-26

ಭಾರತೀಯರ ಸುರಕ್ಷತೆ ಇಂಧನ ಭದ್ರತೆಗೆ ಆದ್ಯತೆ

ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಸಂಘರ್ಷದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಗಂಭೀರ ಕಳವಳ ವ್ಯಕ್ತಪಡಿಸಿದೆ. ರಾಜ್ಯಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರು ನೀಡಿದ ಹೇಳಿಕೆಯಲ್ಲಿ, ಸಂಘರ್ಷದ ಶಮನಕ್ಕಾಗಿ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗವೇ ಪರಿಹಾರ ಎಂದು ಒತ್ತಿ ಹೇಳಿದರು. ಅಲ್ಲದೆ, ಗಲ್ಫ್ ರಾಷ್ಟ್ರಗಳಲ್ಲಿ ವಾಸಿಸುತ್ತಿರುವ ಸುಮಾರು ಒಂದು ಕೋಟಿ ಭಾರತೀಯರ ಸುರಕ್ಷತೆ, ಇಂಧನ ಭದ್ರತೆ ಮತ್ತು ವ್ಯಾಪಾರ ಚಟುವಟಿಕೆಗಳ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಿದೆ ಎಂದರು.

ಮಧ್ಯಪ್ರಾಚ್ಯ ಸಂಘರ್ಷದ ಬಗ್ಗೆ ಲೋಕಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ವಿವರಣೆ



ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ

ಪಶ್ಚಿಮ ಏಷ್ಯಾದಲ್ಲಿ ಇತ್ತೀಚೆಗೆ ಉಲ್ಬಣಗೊಂಡಿರುವ ಸಂಘರ್ಷವು ವಿಶ್ವದ ಗಮನವನ್ನು ಸೆಳೆದಿದೆ. ಫೆಬ್ರವರಿ 28, 2026ರಂದು ಪ್ರಾರಂಭವಾದ ಈ ಸಂಘರ್ಷವು ಇಸ್ರೇಲ್–ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿದೆ. ಈ ಸಂಘರ್ಷ ಎರಡು ರಾಷ್ಟ್ರಗಳ ಮಧ್ಯೆ ಸೀಮಿತವಾಗದೆ ಹಲವಾರು ಗಲ್ಫ್ ರಾಷ್ಟ್ರಗಳ ಮೇಲೂ ಪರಿಣಾಮ ಬೀರಿದೆ. ಈ ಸಂಘರ್ಷದ ಪರಿಣಾಮವಾಗಿ ಇರಾನ್ ಸುಪ್ರೀಂ ಲೀಡರ ಆಯೊತೊಲ್ಲ ಅಲಿ ಖಮೇನಿ ಸೇರಿ ನಾಯಕತ್ವ ಮಟ್ಟದ ಕನಿಷ್ಠ 40 ಮಂದಿ ಸೇರಿದಂತೆ ಹಲವಾರು ಮಂದಿ ಮೃತಪಟ್ಟಿದ್ದಾರೆ. ಜತೆಗೆ ಮೂಲಸೌಕರ್ಯಗಳ ನಾಶ ಹಾಗೂ ಸಾಮಾನ್ಯ ಜನಜೀವನದ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ರಾಜ್ಯಸಭೆಯಲ್ಲಿ ಈ ಕುರಿತು ಸ್ವಯಂಪ್ರೇರಿತ ಹೇಳಿಕೆ ನೀಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರು, ಈ ಬೆಳವಣಿಗೆಗಳು ಭಾರತ ಸೇರಿದಂತೆ ಜಾಗತಿಕ ಸಮುದಾಯಕ್ಕೆ ಕಳವಳಕಾರಿಯಾಗಿದೆ ಎಂದು ಹೇಳಿದರು.

ಭಾರತ ಸರ್ಕಾರದ ಪ್ರಾಥಮಿಕ ಪ್ರತಿಕ್ರಿಯೆ

ಸಂಘರ್ಷ ಪ್ರಾರಂಭವಾದ ದಿನವೇ ಭಾರತ ಸರ್ಕಾರವು ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿತು. ಫೆಬ್ರವರಿ 28ರಂದು ಹೊರಡಿಸಿದ ಅಧಿಕೃತ ಹೇಳಿಕೆಯಲ್ಲಿ ಎಲ್ಲ ಪಕ್ಷಗಳೂ ಸಂಯಮದಿಂದ ವರ್ತಿಸುವಂತೆ ಮತ್ತು ಸಂಘರ್ಷ ಉಲ್ಬಣಗೊಳ್ಳದಂತೆ ಕ್ರಮ ಕೈಗೊಳ್ಳುವಂತೆ ಭಾರತ ಮನವಿ ಮಾಡಿತ್ತು. ಸರ್ಕಾರದ ನಿಲುವು ಸ್ಪಷ್ಟವಾಗಿದೆ ಎಂದು ಜೈಶಂಕರ್ ಹೇಳಿದರು. ಮಾತುಕತೆ, ಸಂಧಾನ ಮತ್ತು ರಾಜತಾಂತ್ರಿಕತೆಯ ಮೂಲಕವೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಬಹುದು ಎಂಬ ನಂಬಿಕೆಯನ್ನು ಭಾರತ ಹೊಂದಿದೆ. ಅದೇ ಸಮಯದಲ್ಲಿ, ಈ ಪ್ರದೇಶದ ಎಲ್ಲಾ ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸುವುದು ಅತ್ಯಂತ ಅಗತ್ಯ ಎಂದು ಅವರು ಹೇಳಿದರು.

ಭದ್ರತೆ ಕುರಿತ ಸಂಪುಟ ಸಮಿತಿ ಸಭೆ

ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ ಮಾರ್ಚ್ 1ರಂದು ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಸಭೆ ನಡೆಯಿತು. ಈ ಸಭೆಯಲ್ಲಿ ಇರಾನ್ ಮೇಲೆ ನಡೆದ ವೈಮಾನಿಕ ದಾಳಿ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ನಡೆದ ದಾಳಿಗಳ ಬಗ್ಗೆ ಸವಿಸ್ತಾರ ಚರ್ಚೆ ನಡೆಯಿತು. ಸಮಿತಿ ಮುಖ್ಯವಾಗಿ ಮೂರು ಪ್ರಮುಖ ವಿಷಯಗಳ ಬಗ್ಗೆ ಗಮನ ಹರಿಸಿತು:

- ಗಲ್ಫ್ ರಾಷ್ಟ್ರಗಳಲ್ಲಿ ಇರುವ ಭಾರತೀಯರ ಸುರಕ್ಷತೆ
- ಪ್ರಾದೇಶಿಕ ಭದ್ರತೆ ಮತ್ತು ರಾಜಕೀಯ ಸ್ಥಿತಿ
- ಆರ್ಥಿಕ ಮತ್ತು ವಾಣಿಜ್ಯ ಚಟುವಟಿಕೆಗಳ ಮೇಲಿನ ಪರಿಣಾಮ

ಗಲ್ಫ್ ಪ್ರದೇಶದಲ್ಲಿ ವಾಸಿಸುವ ಭಾರತೀಯ ಸಮುದಾಯದ ಭದ್ರತೆ ಬಗ್ಗೆ ಸಿಸಿಎಸ್ ವಿಶೇಷ ಕಾಳಜಿ ವ್ಯಕ್ತಪಡಿಸಿದೆ.

ಸಂಘರ್ಷದ ವಿಸ್ತರಣೆ ಮತ್ತು ಪರಿಣಾಮ

ಈ ಸಂಘರ್ಷವು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಸಾವುನೋವುಗಳು ಹೆಚ್ಚುತ್ತಿದ್ದು, ಇದು ಇನ್ನಷ್ಟು ರಾಷ್ಟ್ರಗಳಿಗೆ ವ್ಯಾಪಿಸುತ್ತಿರುವುದನ್ನು ಭಾರತ ಗಮನಿಸಿದೆ. ಇದರಿಂದಾಗಿ ಹಲವೆಡೆ ಸಾಮಾನ್ಯ ಜನಜೀವನ ಮತ್ತು ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ.ಮಾರ್ಚ್ 3 ರಂದು ಭಾರತ ಸರ್ಕಾರ ಮತ್ತೆ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಮಸ್ಯೆಯನ್ನು ಪರಿಹರಿಸಲು ಕರೆ ನೀಡಿದೆ.ಈ ಸಂಘರ್ಷದಲ್ಲಿ ಪ್ರಾಣ ಕಳೆದುಕೊಂಡವರ ಬಗ್ಗೆ ಜೈಶಂಕರ್ ಸಂತಾಪ ವ್ಯಕ್ತಪಡಿಸಿದರು.



ಭಾರತಕ್ಕೆ ಇರುವ ವಿಶೇಷ ಕಳವಳ

ಪಶ್ಚಿಮ ಏಷ್ಯಾದ ಸಂಘರ್ಷವು ಭಾರತಕ್ಕೆ ವಿಶೇಷವಾಗಿ ಕಳವಳಕಾರಿ ವಿಷಯವಾಗಿದೆ. ಈ ಪ್ರದೇಶದಲ್ಲಿ ಸುಮಾರು ಒಂದು ಕೋಟಿ ಭಾರತೀಯರು ವಾಸಿಸುತ್ತಿದ್ದು, ಉದ್ಯೋಗದಲ್ಲಿದ್ದಾರೆ. ಇರಾನ್‌ನಲ್ಲಿ ಕೂಡ ಸಾವಿರಾರು ಭಾರತೀಯರು ವಿದ್ಯಾಭ್ಯಾಸ ಅಥವಾ ಉದ್ಯೋಗಕ್ಕಾಗಿ ಇದ್ದಾರೆ. ಹೀಗಾಗಿ ಈ ಪ್ರದೇಶದ ಸ್ಥಿರತೆ ಭಾರತಕ್ಕೆ ಅತ್ಯಂತ ಮುಖ್ಯವಾಗಿದೆ.

ಇಂಧನ ಭದ್ರತೆ ಮತ್ತು ವ್ಯಾಪಾರ

ಗಲ್ಫ್ ರಾಷ್ಟ್ರಗಳು ಭಾರತದ ಇಂಧನ ಭದ್ರತೆಯ ಪ್ರಮುಖ ಮೂಲವಾಗಿವೆ. ಭಾರತಕ್ಕೆ ತೈಲ ಮತ್ತು ಅನಿಲದ ದೊಡ್ಡ ಪ್ರಮಾಣದ ಪೂರೈಕೆ ಈ ಪ್ರದೇಶದಿಂದ ಬರುತ್ತದೆ.

ಅಷ್ಟೇ ಅಲ್ಲದೆ, ಈ ಪ್ರದೇಶವು ಭಾರತದ ಪ್ರಮುಖ ವ್ಯಾಪಾರ ಪಾಲುದಾರವೂ ಆಗಿದೆ. ವಾರ್ಷಿಕವಾಗಿ ಸುಮಾರು 200 ಬಿಲಿಯನ್ ಡಾಲರ್ ಮೌಲ್ಯದ ವ್ಯಾಪಾರ ಭಾರತ ಮತ್ತು ಗಲ್ಫ್ ರಾಷ್ಟ್ರಗಳ ನಡುವೆ ನಡೆಯುತ್ತದೆ. ಕಳೆದ ದಶಕದಲ್ಲಿ ಈ ಪ್ರದೇಶದಿಂದ ಭಾರತಕ್ಕೆ ಗಮನಾರ್ಹ ಹೂಡಿಕೆಗಳು ಕೂಡ ಬಂದಿವೆ.

ಭಾರತೀಯ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಸಮಸ್ಯೆಗಳು

ಸಂಘರ್ಷದ ಪರಿಣಾಮವಾಗಿ ಗಲ್ಫ್ ಪ್ರದೇಶದಲ್ಲಿ ಪ್ರಯಾಣಿಸುತ್ತಿರುವ ಭಾರತೀಯರು ಹಾಗೂ ಪರೀಕ್ಷೆಗಳಿಗೆ ಹೋಗಿದ್ದ ವಿದ್ಯಾರ್ಥಿಗಳು ಹಲವು ಸಮಸ್ಯೆಗಳನ್ನು ಎದುರಿಸಿದ್ದಾರೆ.

- **ಕೆಲವು ವಿಮಾನಯಾನ ಸೇವೆಗಳು ಸ್ಥಗಿತಗೊಂಡಿರುವುದರಿಂದ ಹಲವಾರು ಪ್ರಯಾಣಿಕರು ಮಧ್ಯಂತರ ಕೇಂದ್ರಗಳಲ್ಲಿ ಸಿಲುಕಿಕೊಂಡಿದ್ದಾರೆ.**
- **ಈ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಂಬಂಧಪಟ್ಟ ಸಚಿವಾಲಯಗಳು ಹಾಗೂ ಇಲಾಖೆಗಳು ಕ್ರಮ ಕೈಗೊಳ್ಳುವಂತೆ ಸರ್ಕಾರ ಸೂಚಿಸಿದೆ.**
- **ಪ್ರಧಾನ ಮಂತ್ರಿಯವರು ಸ್ವತಃ ಈ ಬೆಳವಣಿಗೆಗಳನ್ನು ನಿಕಟವಾಗಿ ಗಮನಿಸುತ್ತಿದ್ದು, ಅಗತ್ಯ ಕ್ರಮಗಳನ್ನು ಸಮನ್ವಯದ ಮೂಲಕ ಕೈಗೊಳ್ಳಲಾಗುತ್ತಿದೆ.**



ಭಾರತೀಯರಿಗೆ ಮುನ್ನೆಚ್ಚರಿಕಾ ಸೂಚನೆಗಳು

ಸರ್ಕಾರವು ಈ ಪ್ರದೇಶದ ಬೆಳವಣಿಗೆಗಳನ್ನು ನಿರಂತರವಾಗಿ ಗಮನಿಸುತ್ತಿದೆ.

- **ಜನವರಿ 5, 2026 ರಂದು ಇರಾನ್‌ಗೆ ಅನಗತ್ಯ ಪ್ರಯಾಣವನ್ನು ತಪ್ಪಿಸಲು ಭಾರತೀಯರಿಗೆ ಸಲಹೆ ನೀಡಲಾಗಿತ್ತು.**
- **ಜನವರಿ 14 ರಂದು ಮತ್ತೊಮ್ಮೆ ಕಠಿಣ ಪದಗಳಲ್ಲಿ ಈ ಸಲಹೆ ಪುನರುಚ್ಚರಿಸಲಾಯಿತು.**
- **ಇರಾನ್‌ನಲ್ಲಿ ಇರುವವರು ರಾಯಭಾರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳುವಂತೆ ಹಾಗೂ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.**

ನಾವಿಕರಿಗೆ ನೀಡಿದ ಸೂಚನೆ

ಮುಂಬೈಯ ಹಡಗು ಮಹಾನಿರ್ದೇಶನಾಲಯವು ಜನವರಿ 14ರಂದು ಭಾರತೀಯ ನಾವಿಕರಿಗೆ ವಿಶೇಷ ಸಲಹೆ ನೀಡಿತ್ತು. ಅದರಂತೆ...

- – ರಾಯಭಾರ ಕಚೇರಿಯ ಸೂಚನೆಗಳನ್ನು ಅನುಸರಿಸಬೇಕು
- – ಅನಗತ್ಯವಾಗಿ ದಡಕ್ಕೆ ಹೋಗುವುದನ್ನು ತಪ್ಪಿಸಬೇಕು

ಹಡಗು ಕಂಪನಿಗಳಿಗೆ ಭಾರತೀಯ ನಾವಿಕರನ್ನು ಇರಾನ್‌ಗೆ ನಿಯೋಜಿಸಬಾರದು ಎಂದು ತಿಳಿಸಲಾಗಿದೆ.



ವಿವಿಧ ರಾಷ್ಟ್ರಗಳಲ್ಲಿ ನೀಡಿದ ಸಲಹೆಗಳು

ಈ ಪ್ರದೇಶದ ಎಲ್ಲಾ ಭಾರತೀಯ ರಾಯಭಾರ ಕಚೇರಿಗಳೂ ತಮ್ಮ ದೇಶಗಳಲ್ಲಿ ಇರುವ ಭಾರತೀಯರಿಗೆ ಸಲಹೆಗಳನ್ನು ನೀಡಿವೆ. ಇಸ್ರೇಲ್, ಯುಎಇ, ಬಹ್ರೇನ್, ಕತಾರ್, ಕುವೈತ್, ಸೌದಿ ಅರೇಬಿಯಾ, ಒಮಾನ್ ಮತ್ತು ಇರಾಕ್‌ನಲ್ಲಿ ಇದೇ ರೀತಿಯ ಸೂಚನೆಗಳನ್ನು ನೀಡಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯವು ವಿಶೇಷ ನಿಯಂತ್ರಣ ಕೊಠಡಿಯನ್ನು ಕೂಡ ಸ್ಥಾಪಿಸಿದೆ.

ವಿದೇಶಿ ನಾಯಕರ ಜತೆ ಸಂಪರ್ಕ

ಈ ಅವಧಿಯಲ್ಲಿ ಭಾರತ ಸರ್ಕಾರ ಹಲವು ರಾಷ್ಟ್ರಗಳೊಂದಿಗೆ ನಿಕಟ ಸಂಪರ್ಕ ಕಾಯ್ದುಕೊಂಡಿದೆ. ಪ್ರಧಾನ ಮಂತ್ರಿಯವರು ಯುಎಇ, ಕತಾರ್, ಸೌದಿ ಅರೇಬಿಯಾ, ಕುವೈತ್, ಬಹ್ರೇನ್, ಒಮಾನ್, ಜೋರ್ಡಾನ್ ಮತ್ತು ಇಸ್ರೇಲ್ ನಾಯಕರೊಂದಿಗೆ ಮಾತನಾಡಿದ್ದಾರೆ.ಪ್ರತಿ ದೇಶವೂ ತಮ್ಮ ದೇಶದಲ್ಲಿರುವ ಭಾರತೀಯರ ಸುರಕ್ಷತೆಯನ್ನು ಖಚಿತಪಡಿಸುವ ಭರವಸೆ ನೀಡಿದೆ. ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವರೊಂದಿಗೆ ಕೂಡ ಮಾತುಕತೆ ನಡೆಸಿದ್ದಾರೆ.

ಇಂಧನ ಮಾರುಕಟ್ಟೆ ಮೇಲ್ವಿಚಾರಣೆ

ಸಂಘರ್ಷದ ಪರಿಣಾಮವಾಗಿ ಇಂಧನ ಮಾರುಕಟ್ಟೆಗಳಲ್ಲಿ ಉಂಟಾಗುವ ಬದಲಾವಣೆಗಳನ್ನೂ ಕೇಂದ್ರ ಸರ್ಕಾರ ಗಮನಿಸುತ್ತಿದೆ. ಭಾರತೀಯ ಗ್ರಾಹಕರ ಹಿತಾಸಕ್ತಿ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಜೈಶಂಕರ್ ಹೇಳಿದರು. ಅಗತ್ಯವಿದ್ದರೆ ರಾಜತಾಂತ್ರಿಕ ಮಟ್ಟದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.

ಸದನದ ಬೆಂಬಲದ ನಿರೀಕ್ಷೆ

ಈ ವಿಷಯದಲ್ಲಿ ಸರ್ಕಾರದ ಕ್ರಮಗಳಿಗೆ ರಾಜ್ಯಸಭೆಯ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂಬ ವಿಶ್ವಾಸವನ್ನು ಜೈಶಂಕರ್ ವ್ಯಕ್ತಪಡಿಸಿದರು. ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಮೇಲೆ ಭಾರತ ಮುಂದುವರಿದ ಗಮನಹರಿಸಲಿದೆ ಎಂದು ಅವರು ತಿಳಿಸಿದರು.

67,000 ಭಾರತೀಯರು ಸುರಕ್ಷಿತವಾಗಿ ಸ್ವದೇಶಕ್ಕೆ

ಈ ಸಂಘರ್ಷದ ಹಿನ್ನೆಲೆ ಹಲವಾರು ಭಾರತೀಯರು ಗಲ್ಫ್ ಪ್ರದೇಶದಿಂದ ಭಾರತಕ್ಕೆ ಮರಳಿದ್ದಾರೆ. ಸರ್ಕಾರದ ಅಂದಾಜು ಪ್ರಕಾರ ಸುಮಾರು 67,000 ಭಾರತೀಯರು ಈಗಾಗಲೇ ವಾಪಸ್ಸಾಗಿದ್ದಾರೆ. 'ರ್ಚ್ 7ರಂದು 51 ವಿಮಾನಗಳು ಭಾರತೀಯರನ್ನು ಕರೆದುಕೊಂಡು ಬಂದವು. ಮಾರ್ಚ್ 8 ರಂದು 49 ವಿಮಾನಗಳು ಮತ್ತು ಮಾರ್ಚ್ 9 ರಂದು 50 ವಿಮಾನಗಳು ಸೇವೆ ಸಲ್ಲಿಸಿವೆ.

ಭಾರತೀಯರ ಸ್ಥಳಾಂತರ

ಸಂಘರ್ಷ ಪ್ರಾರಂಭವಾದ ಬಳಿಕ ಟೆಹ್ರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

- ಮಾರ್ಚ್ 3 ರಂದು ತುರ್ತು ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಲಾಗಿದೆ.
- ವ್ಯಾಪಾರ ಕಾರಣಕ್ಕಾಗಿ ಇರಾನ್‌ನಲ್ಲಿದ್ದ ಕೆಲ ಭಾರತೀಯರಿಗೆ ಅರ್ಮೇನಿಯಾ ಮೂಲಕ ಭಾರತಕ್ಕೆ ಮರಳಲು ಸಹಾಯ ಮಾಡಲಾಗಿದೆ.
- ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದೆ.



ಭಾರತದ ಮೂರು ಪ್ರಮುಖ ನಿಲುವುಗಳು

ಅಂತಿಮವಾಗಿ ಸಚಿವ ಜೈಶಂಕರ್ ಅವರು ಸರ್ಕಾರದ ಮೂರು ಪ್ರಮುಖ ನಿಲುವುಗಳನ್ನು ವಿವರಿಸಿದರು.

1. ಭಾರತ ಶಾಂತಿ, ಮಾತುಕತೆ ಮತ್ತು ರಾಜತಾಂತ್ರಿಕ ಪರಿಹಾರಕ್ಕೆ ಬೆಂಬಲಿಸುತ್ತದೆ.
2. ಗಲ್ಫ್ ಪ್ರದೇಶದಲ್ಲಿರುವ ಭಾರತೀಯರ ಸುರಕ್ಷತೆ ಪ್ರಮುಖ ಆದ್ಯತೆ.
3. ಇಂಧನ ಭದ್ರತೆ ಮತ್ತು ವ್ಯಾಪಾರ ಹಿತಾಸಕ್ತಿಗಳನ್ನು ಕಾಪಾಡುವುದು.

ಇರಾನ್ ಯುದ್ಧನೌಕೆಗಳಿಗೆ ನಿಲುಗಡೆಗೆ ಅನುಮತಿ

ಪಶ್ಚಿಮ ಏಷ್ಯಾದ ಸಂಘರ್ಷ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಇರಾನ್ ತನ್ನ ಮೂರು ನೌಕಾಪಡೆಯ ಹಡಗುಗಳಿಗೆ ಭಾರತೀಯ ಬಂದರುಗಳಲ್ಲಿ ತಂಗಲು ಅನುಮತಿ ಕೇಳಿದ್ದು, ಕೇಂದ್ರ ಸರ್ಕಾರ ಅದಕ್ಕೆ ಅನುಮತಿ ನೀಡಿದೆ. ಫೆ.28ರಂದು ಇರಾನ್ ಭಾರತವನ್ನು ಸಂಪರ್ಕಿಸಿ ಆ ಪ್ರದೇಶದಲ್ಲಿದ್ದ ಮೂರು ಹಡಗುಗಳಿಗೆ ಭಾರತೀಯ ಬಂದರುಗಳಲ್ಲಿ ನಿಲುಗಡೆ ನೀಡುವಂತೆ ವಿನಂತಿಸಿತ್ತು. ಇದಕ್ಕೆ ಭಾರತ ಮಾರ್ಚ್ 1ರಂದು ಅನುಮೋದನೆ ನೀಡಿತು. ಅದರಂತೆ ಐರಿಸ್ ಲಾವನ್ ಎಂಬ ಇರಾನ್ ಹಡಗು ಮಾರ್ಚ್ 4ರಂದು ಕೊಚ್ಚಿ ಬಂದರು ತಲುಪಿದ್ದು, ಅದರ ಸಿಬ್ಬಂದಿ ಈಗ ಭಾರತೀಯ ನೌಕಾಪಡೆಯ ಸೌಲಭ್ಯಗಳಲ್ಲಿ ತಂಗಿದ್ದಾರೆ ಎಂದು ಸಚಿವರು ವಿವರಿಸಿದರು.

ಈ ಕ್ರಮ ಮಾನವೀಯ ದೃಷ್ಟಿಯಿಂದ ತೆಗೆದುಕೊಂಡ ಸರಿಯಾದ ನಿರ್ಧಾರವಾಗಿದ್ದು, ಇದಕ್ಕಾಗಿ ಇರಾನ್ ವಿದೇಶಾಂಗ ಸಚಿವರು ಭಾರತಕ್ಕೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಇರಾನ್‌ನ ಮೂರು ಯುದ್ಧನೌಕೆಗಳಲ್ಲಿ ಒಂದಾದ ಐರಿಸ್ ಡೆನಾ ಅನ್ನು ಅಮೆರಿಕದ ಜಲಾಂತರ್ಗಾಮಿ ನೌಕೆ ಮಾ.4ರಂದು ಟಾರ್ಪಿಡೋ ದಾಳಿ ನಡೆಸಿ ಮುಳುಗಿಸಿತ್ತು. ಶ್ರೀಲಂಕಾ ಕರಾವಳಿಯ ಸಮೀಪ ನಡೆದ ಈ ಘಟನೆ ಪಶ್ಚಿಮ ಏಷ್ಯಾದ ಸಂಘರ್ಷವು ಹಿಂದೂ ಮಹಾಸಾಗರ ಪ್ರದೇಶಕ್ಕೂ ವಿಸ್ತರಿಸುವ ಸಾಧ್ಯತೆಗಳ ಬಗ್ಗೆ ಆತಂಕ ಮೂಡಿಸಿದೆ. ಈ ದಾಳಿಯಲ್ಲಿ ಕನಿಷ್ಠ 87 ಇರಾನ್ ನೌಕಾಸೈನಿಕರು ಮೃತಪಟ್ಟಿದ್ದಾರೆ. ಇನ್ನೊಂದು ಇರಾನ್ ಹಡಗು ಐರಿಸ್ ಬುಶೆರ್ ಎಂಬ ಹಡಗು ಎಂಜಿನ್ ದೋಷವನ್ನು ಉಲ್ಲೇಖಿಸಿ ಶ್ರೀಲಂಕಾದ ತ್ರಿಂಕೊಮಲಿ ಬಂದರು ಪ್ರವೇಶಿಸಲು ಅನುಮತಿ ಪಡೆದಿದೆ.



ಕಿರುಸುದ್ದಿ

ಇಂದಿನಿಂದ ಎನ್‌ಎಸ್‌ಎಸ್ ವಿಶೇಷ ಶಿಬಿರ

ಮುಂಡರಗಿ: ಇಲ್ಲಿಯ ಶ್ರೀ ಜ.ಅ.ವಿ.ಸಮಿತಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಸ್ತುತ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವು ದತ್ತು ಗ್ರಾಮ ಬೆಣ್ಣಿಹಳ್ಳಿಯಲ್ಲಿ ಮಾ. 10ರಿಂದ 16ರವರೆಗೆ ನಡೆಯಲಿದೆ ಎಂದು ಪ್ರಾ. ಡಾ.ಎಂ.ವಿ.ಕುಲಕರ್ಣಿ ಮತ್ತು ಕಾರ್ಯಕ್ರಮಾಧಿಕಾರಿ ಅನ್ನದಾನಸ್ವಾಮಿ ಮತ್ತೂರುಮಠ ತಿಳಿಸಿದ್ದಾರೆ.ಶಿಬಿರದ ಉದ್ಘಾಟನಾ ಸಮಾರಂಭವು ಮಾ.10ರಂದು ಸಂಜೆ 6ರಂದು ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯುವುದು. ನೇತೃತ್ವವನ್ನು ಶ್ರೀಮಠದ ಉತ್ತರಾಧಿಕಾರಿಗಳಾದ ಡಾ.ಮಲ್ಲಿಕಾರ್ಜುನ ಮಹಾಸ್ವಾಮಿಗಳು ವಹಿಸುವರು. ಅಧ್ಯಕ್ಷತೆಯನ್ನು ಕಾಲೇಜಿನ ಮೇಲ್ವಿಚಾರಣಾ ಸಮಿತಿಯ ಕಾರ್ಯಾಧ್ಯಕ್ಷ ಸಿ.ಎಸ್.ಅರಸನಾಳ ವಹಿಸುವರು. ಉದ್ಘಾಟನೆಯನ್ನು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವಿಶ್ವನಾಥ ಹೊಸಮನಿ ನೆರವೇರಿಸುವರು. ಅತಿಥಿಗಳಾಗಿ ಡಾ.ಬಿ.ಜಿ.ಜವಳಿ, ಕೆ.ವಿ.ಹಂಚಿನಾಳ, ಎಂ.ಎಸ್.ಶಿವಶೆಟ್ಟಿ, ಜಿ.ಎಸ್.ಅಣ್ಣಿಗೇರಿ, ಸುರೇಶ ಕ್ಯಾದಗಿಹಳ್ಳಿ, ಕೆಂಚಪ್ಪ ಕಂಬಳಿ, ಎಂ.ಡಿ.ಪವಾರ ಮುಂತಾದವರು ಭಾಗವಹಿಸುವರು. ಮಾ.11ರಂದು ಅಪರಾಧ ತಡೆಯುವಲ್ಲಿ ಯುವಕರ ಪಾತ್ರ ವಿಷಯದ ಉಪನ್ಯಾಸ, ಮಾ. 12ರಂದು ಬೆಳಗ್ಗೆ 8 ಕ್ಕೆ ಮಾದಕ ವ್ಯಸನ ಮುಕ್ತ-ದುಶ್ಚಟಗಳ ನಿರ್ಮೂಲನಾ ಅಭಿಯಾನ ಜರಗುವುದು. ಮಾ.13ರಂದು ಬೆಳಗ್ಗೆ 8ರಿಂದ 10ರವರೆಗೆ ಚಿಕ್ಕಮಕ್ಕಳ ತಜ್ಞ ಡಾ.ಗೋಣೇಶ ಮೇವುಂಡಿ ಅವರಿಂದ ಉಚಿತ ಆರೋಗ್ಯ ತಪಾಷಣೆ ಮತ್ತು ಉಚಿತ ಔಷಧಿ ವಿತರಣೆ ಕಾರ್ಯಕ್ರಮ ನಡೆಯುವುದು.ನಂತರ ಮುಂಡರಗಿಯ ಎಸ್.ಬಿ.ಎಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ಸಹಕಾರದೊಂದಿಗೆ ಸಾರ್ವಜನಿಕರ ಆರೋಗ್ಯ ತಪಾಷಣಾ ಶಿಬಿರ ಜರಗುವುದು. ಮಾ.16 ಬೆಳಗ್ಗೆ 10 ಕ್ಕೆ ಶಿಬಿರದ ಮುಕ್ತಾಯ ಸಮಾರಂಭ ನಡೆಯುವುದು ಎಂದು ತಿಳಿಸಿದ್ದಾರೆ.

ಅಪಘಾತ: ವ್ಯಕ್ತಿ ಸಾವು

ಗಜೇಂದ್ರಗಡ: ಮೈಸೂರು ಜಿಲ್ಲೆಯ ಹುಣಸೂರು ಸಮೀಪ ಹಲಗೇರಿ ಎಂಬಲ್ಲಿ ಕಳ್ಳಬೆಟ್ಟಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಮಾ.6ರ ಸಂಜೆ 5.30 ಗಂಟೆಯ ಸಮಯದಲ್ಲಿ ಸರ್ಕಾರಿ ಕೆ ಎಸ್ ಆರ್ ಟಿ ಸಿ ಬಸ್ ಮತ್ತು ಹೋಂಡಾ ಶೈನ್ ಬೈಕ್ ನಡುವೆ ನಡೆದ ರಸ್ತೆ ಅಪಘಾತದಲ್ಲಿ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಗೌಡಗೇರಿ ಗ್ರಾಮದ ಆನಂದ ಪೂಜಾರ(40) ಎಂಬುವವರು ಮೃತಪಟ್ಟಿದ್ದಾರೆ. ಮೃತರಿಗೆ ತಾಯಿ, ಪತ್ನಿ,ಇಬ್ಬರೂ ಮಕ್ಕಳು ಇದ್ದಾರೆ. ಈ ಕುರಿತು ಹುಣಸೂರು ಆರಕ್ಷಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ವೀರಪ್ಪ ಯಾವಗಲ್ಲ

ನರೇಗಲ್ಲ: ಸಮೀಪದ ಜಕ್ಕಲಿ ಗ್ರಾಮದ ನಿವಾಸಿ ಅಪರೂಪದ ಹಿರಿಯ ಕಲಾವಿದ ವೀರಪ್ಪ ಅಂದಾನಪ್ಪ ಯಾವಗಲ್ಲ (65) ಅವರು ಸೋಮವಾರ ನಿಧನರಾದರು.



ಮೃತರು ಬೆಂಗಳೂರು ಹಾಗೂ ಗದಗ ಜಿಲ್ಲೆಯ ನಾನಾ ಭಾಗಗಳಲ್ಲಿ ಜಾತ್ರೆ, ಮದುವೆ, ಸಭೆ ಸಮಾರಂಭಗಳಲ್ಲಿ ವಿವಿಧ ವೇಷ ಭೂಷಣಗಳಿಂದಲೇ ಗುರುತಿಸಿಕೊಂಡು ಜನರನ್ನು ಸೂಜಿಗಲ್ಲಿನಂತೆ ತನ್ನೆಡೆ ಗಮನ ಸೆಳೆದಿದ್ದರು. ಸಹಜವಾಗಿಯೇ ನಗುತ್ತ, ನಗಿಸುತ್ತಾ ಎಲ್ಲರಿಗೂ ಪ್ರಿಯವಾದವರು.ಗ್ರಾಮದ ಯುವಕ ಮಂಡಲ, ನಾಟಕ, ಬಯಲಾಟ, ಭಜನೆ, ವೀರಗಾಸೆ ಹೀಗೆ ಹಲವು ರೀತಿಯಲ್ಲಿ ತನ್ನ ಕಲೆ ಅನಾವರಣ ಮಾಡಿ ಜನಮೆಚ್ಚುಗೆ ಪಡೆದಿದ್ದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗದವರು ಇದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	5169-9166
ಅಜವಾನ	7814-9469
ಅಲಸಂದಿಕಾಳು	5769-6171
ಕಡಲೆ	1377-5479
ಉದ್ದು	5312-5312
ಹೆಸರು	877-7950
ಹುರುಳಿ	2839-4455
ಜೋಳ	1325-4409
ಗೋವಿನಜೋಳ	1421-5169
ಸಾಸವಿ	4212-5169
ಕುಸುಬಿ	4169-5126
ಹವೀಜ	8214-8600
ತೊಗರಿ	3117-5919
ಗೋಧಿ	1817-5512
ಮಡಕಿ	10700-10800



ಮುಂಡರಗಿ: ಶ್ರೀ ಲಕ್ಷ್ಮೀ ಕನಕನರಸಿಂಹ ದೇವರ ಮಹಾರಥೋತ್ಸವವು ಭಾನುವಾರ ಸಂಜೆ ಸಕಲ ವೈಭವದೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಆಶ್ರಯ ಕಾಲೋನಿಗೆ ಮೂಲ ಸೌಲಭ್ಯ ಕಲ್ಪಿಸಿ

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ವತಿಯಿಂದ ತಮ್ಮಾತಿಮ್ಮಿ ಗುಡ್ಡದಲ್ಲಿ ನಿರ್ಮಿಸಿರುವ ಆಶ್ರಯ ಕಾಲೋನಿಯಲ್ಲಿ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಕಿಸಾನ್ ಜಾಗೃತಿ ವಿಕಾಸ ಸಂಘದ ಜಿಲ್ಲಾ ಘಟಕದ ವತಿಯಿಂದ ಸೋಮವಾರ ತಹಶೀಲ್ದಾರ್ ಎಂ.ಧನಂಜಯ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ನಿಂಗಪ್ಪ ಭಂಡಾರಿ ಮಾತನಾಡಿ, ಲಕ್ಷ್ಮೇಶ್ವರದ ತಮ್ಮಾತಿಮ್ಮಿ ಗುಡ್ಡದಲ್ಲಿ 14 ಎಕರೆ 16 ಗುಂಟೆ ಜಾಗೆಯಲ್ಲಿ 648 ನಿವೇಶನಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಆದರೆ ಇನ್ನೂ 210 ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಮೂಲಕ ರಾಜೀವ ಗಾಂಧಿ ನಿಗಮಕ್ಕೆ ಪುರಸಭೆ ಸಲ್ಲಿಸಬೇಕಾಗಿತ್ತು. ಆದರೆ ಈ ಕೆಲಸ ಇನ್ನೂ ಆಗಿಲ್ಲ, ಹೀಗಾಗಿ ಫಲಾನುಭವಿಗಳು ನಿವೇಶನಕ್ಕಾಗಿ ಕಾಯುತ್ತಿದ್ದಾರೆ, ಈಗಾಗಲೇ ನಿರ್ಮಾಣಗೊಂಡಿರುವ ಆಶ್ರಯ ಕಾಲೋನಿಯಲ್ಲಿ ಮೂಲ ಸೌಲಭ್ಯ ಒದಗಿಸಬೇಕು ಹಾಗೂ ಅದರಂತೆ ತಾಲ್ಲೂಕಿನ ಶಿಗ್ಲಿ ಗ್ರಾಮದಲ್ಲಿ ಆಶ್ರಯ ನಿವೇಶನಕ್ಕಾಗಿ ನಿರ್ಗತಿಕ ಬಡವರು ಕಾಯುತ್ತಿದ್ದಾರೆ. ಆದಷ್ಟು ಬೇಗನೇ ಮನೆ ಇಲ್ಲದವರಿಗೆ ನಿವೇಶನ ನೀಡಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಶಿವಾನಂದ ಲಿಂಗಶೆಟ್ಟಿ, ಕಿಸಾನ ಜಾಗೃತಿ ವಿಕಾಸ ಸಂಘದ ರಾಜ್ಯ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಬಡಿಗೇರ, ವಿ.ಎನ್.ಗೃಟ್ಟಿ, ಲಲಿತಾ ಕಲಕೇರಿ, ಗೀತಾ ಪೂಜಾರ, ಭಾರತಿ ಹರದಗಟ್ಟಿ, ಅನ್ನಪೂರ್ಣ ಗೌಳಿ, ರಾಧಿಕಾ ಪೂಜಾರ, ಯಲ್ಲಮ್ಮ ಪೂಜಾರ, ರೂಪಾ ಗೌಳಿ, ಮಧುಮತಿ ಹುಲ್ಲೂರ, ಮಾರೆಮ್ಮ ಗುತ್ತಲ ಇದ್ದರು.



ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ವತಿಯಿಂದ ತಮ್ಮಾತಿಮ್ಮಿ ಗುಡ್ಡದಲ್ಲಿ ನಿರ್ಮಿಸಿರುವ ಆಶ್ರಯ ಕಾಲೋನಿಯಲ್ಲಿ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಕಿಸಾನ್ ಜಾಗೃತಿ ವಿಕಾಸ ಸಂಘದ ಜಿಲ್ಲಾ ಘಟಕದ ವತಿಯಿಂದ ಸೋಮವಾರ ತಹಶೀಲ್ದಾರ್ ಎಂ.ಧನಂಜಯ ಅವರಿಗೆ ಮನವಿ ಸಲ್ಲಿಸಿದರು.

ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಲಹೆ
ವೀರಶೈವ ತರಬೇತಿ ಶಿಬಿರಕ್ಕೆ ಕೈ ಜೋಡಿಸಿ

ಮುಂಡರಗಿ: ಶ್ರೀ ಜಗದ್ಗುರು ಅನ್ನದಾನೀಶ್ವರ ಮಠ ಗುರು-ವಿರಕ್ತರನ್ನು ಒಗ್ಗೂಡಿಸಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿದೆ. ಸಮಾಜದಿಂದ ಏನಾದರೂ ಸಹಾಯ-ಸಹಕಾರ ಮಾಡುವುದಾದರೆ ಕೇವಲ ಜಂಗಮ ಸಮಾಜವನ್ನು ಪರಿಗಣಿಸದೆ ಸಮಗ್ರ ವೀರಶೈವ ಸಮಾಜವನ್ನು ಪರಿಗಣಿಸಿ ನೀಡುವ ಕೆಲಸ ಮಾಡಬೇಕು. ಸಿದ್ಧಾಂತ ಶಿಖಾಮಣಿ ನಮ್ಮ ಧರ್ಮಗ್ರಂಥ ಅದಕಿಂತಲೂ ಹೆಚ್ಚಾಗಿ ಅನುಭಾವ ಸಿದ್ಧಾಂತ ಮುಖ್ಯವಾಗುತ್ತದೆ ಎಂದು ಶ್ರೀ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳವರು ಹೇಳಿದರು.

ಅವರು ಶ್ರೀಮಠದ ಸಾಂಸ್ಕೃತಿಕ ವೇದಿಕೆಯಲ್ಲಿ ತಾಲೂಕಾ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘ ಹಮ್ಮಿಕೊಂಡಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮಗಳಲ್ಲಿ ಮೆರವಣಿಗೆಗಳನ್ನು ಅದ್ದೂರಿಯಾಗಿ ಮಾಡುವುದಕಿಂತ ಆ ಮಹನೀಯರ ತತ್ವ-ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ಕಾರ್ಯಗಳನ್ನು ಕೈಗೊಳ್ಳಬೇಕು. ಶ್ರೀಮಠದಲ್ಲಿ ವೀರಶೈವ ತರಬೇತಿ ಶಿಬಿರವನ್ನು ನಡೆಸುವ ಉದ್ದೇಶವಿದೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಕೈಜೋಡಿಸಬೇಕು.ಇದರಿಂದ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಕಲಿಸುವುದರೊಂದಿಗೆ ಅನುಭಾವದ ನುಡಿಗಳಿಂದ ಯುವಕರನ್ನು ಸರಿದಾರಿಗೆ ತರುವಂತಾಗುತ್ತದೆ ಎಂದರು.

ಮುಖ್ಯ ಅತಿಥಿ ಕೆಪಿಸಿಸಿ ಸದಸ್ಯರಾದ ಆನಂದಸ್ವಾಮಿ ಗಡ್ಡದೇವರಮಠ ಮಾತನಾಡಿ, ಜಗದ್ಗುರು ರೇಣುಕರು ಒಂದು ಸಮಾಜಕ್ಕೆ ಮೀಸಲಾದ ಪೂಜ್ಯರಲ್ಲ, ಒಗ್ಗಟ್ಟು, ಮಾನವೀಯತೆ, ಮತ್ತು ಧರ್ಮದ ಮೌಲ್ಯಗಳನ್ನು ಉಳಿಸುವ ಸಂಕಲ್ಪ ಈ ಜಯಂತಿಯನ್ನು ಆಚರಿಸುವುದರೊಂದಿಗೆ ಮಾಡೋಣ. ಜಂಗಮ ಸಮಾಜ ಸಂಸ್ಕಾರವನ್ನು ಹೇಳಿಕೊಡುವ ಸಮಾಜ. ಮುಂಡರಗಿ ತಾಲೂಕಿನಲ್ಲಿ ಬಹಳ ಸಂಘಟನೆಯಿಂದ ಇಂತಹ ಕಾರ್ಯಕ್ರಮ ಮಾಡುತ್ತಿರುವುದು ಸಂತೋಷ. ಮಕ್ಕಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಬೆಳೆಸುವ ಶಿಕ್ಷಣವನ್ನು ನೀಡುವ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕು. ಸಮಾಜದ ಕಾರ್ಯಚಟುವಿಕೆಗಳಿಗೆ ನಾನು ವಯಕ್ತಿಕವಾಗಿ ಅಥವಾ ಶಾಸಕರ ಮತ್ತು ಇನ್ನಿತರ ಅನುದಾನದಲ್ಲಿ 25 ಲಕ್ಷ ರೂ ನೀಡುವುದಾಗಿ ತಿಳಿಸಿದರು.



ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ

ಕಾರ್ಯಕ್ರದಲ್ಲಿ ಹಂಪಸಾಗರದ ಕಟ್ಟಿಮನಿ ಹಿರೇಮಠದ ರುದ್ರಮುನಿ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಇಂದಿನ ಕಾಲದಲ್ಲಿ ಸಮಾಜದಲ್ಲಿ ಶಾಂತಿ,ಸಹನೆ,ಮತ್ತು ಪರಸ್ಪರ ಗೌರವ ಅತ್ಯಂತ ಅವಶ್ಯವಾಗಿದೆ.ಇವುಗಳನ್ನೇ ಜಗದ್ಗುರು ರೇಣುಕರು ತಮ್ಮ ಜೀವನದ ಮೂಲಕ ಬೋಧಿಸಿದ್ದಾರೆ. ಆದ್ದರಿಂದ ಅವರ ಜಯಮತಿ ಕೇವಲ ಒಂದು ಆಚರನೆಯಾಗದೇ ಅವರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು ಎಂದರು.

ವೇದಿಕೆಯ ಮೇಲೆ ಡಾ.ಸುಜ್ಞಾನದೇವ ಶಿವಾಚಾರ್ಯರು, ಕಲಕೇರಿಯ ಮುದುಕೇಶ್ವರ ಶಿವಾಚಾರ್ಯರು, ಹಿರೇವಡ್ಡಟ್ಟಿಯ ವೀರೇಶ್ವರ ಶಿವಾಚಾರ್ಯರು ಮತ್ತುಅಭಿನವ ಮುದುಕೇಶ್ವರರು,ಡಾ.ಕುಮಾರಸ್ವಾಮಿ ಹಿರೇಮಠ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜಯಶರಣ ಸಲೂಸೆನ್ನನ ಅನ್ನದಾನಿ ಹಿರೇಮಠ, ರಾಜ್ಯ ಪ್ರಶಸ್ತಿ ಪುರಸ್ಕೃತ ಗವಿಸಿದ್ದಯ್ಯ ಹಳ್ಳಿಕೇರಿಮಠ ಇವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ದಿಸಂಘದ ತಾಲೂಕಾ ಅಧ್ಯಕ್ಷ ವಿ.ಜೆ.ಹಿರೇಮಠ ವಹಿಸಿದ್ದರು.

ಪ್ರಾರಂಭದಲ್ಲಿ ಮಹಿಳಾ ಘಟಕದವರಿಂದ ಪ್ರಾರ್ಥನೆ ನೆರವೇರಿತು. ಸರಸ್ವತಿ ನವಲಿಹಿರೇಮಠ ಇವರು ಸ್ವಾಗತಿಸಿದರು. ಯುವ ಘಟಕದ ಅಧ್ಯಕ್ಷ ವಿನಯಕುಮಾರ ಗಂಧದ ಪ್ರಾಸ್ತಾವಿಸಿದರು. ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಹಂಪಿಮಠ ಕಾರ್ಯಕ್ರಮ ನಿರೂಪಿಸಿದರು.

ತತ್ವಪದದಿಂದ ಜೀವನ ಮಾರ್ಗದರ್ಶಕ ಸಂದೇಶ

ಗದಗ: ತತ್ವಪದಗಳು ಕೇವಲ ಹಾಡುಗಳಲ್ಲ, ಅವು ಬದುಕಿನ ದರ್ಶನಗಳಾಗಿದ್ದು, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ ಮುಂತಾದ ಸಂತರ ತತ್ವಪದಗಳು ಜಾತಿ-ಧರ್ಮ ಭೇದವಿಲ್ಲದೆ ಮನುಕುಲದ ಏಕತೆಯನ್ನು ಸಾರುತ್ತವೆ ಎಂದು ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕ ಡಾ.ಧನಂಜಯ ಕುಮಾರ ಸುಳೇಕಲ್ ಹೇಳಿದರು.

ತಾಲೂಕಿನ ಹುಲಕೋಟಿಯ ಕೆ.ಎಚ್.ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಕನ್ನಡ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯದಲ್ಲಿ ತತ್ವಪದ ಪರಂಪರೆ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

18ನೇ ಶತಮಾನವನ್ನು ಸಾಹಿತ್ಯ ಚರಿತ್ರೆಕಾರರು ಬರಡುಕಾಲ ಎಂದು ಕರೆಯುವುದು ಸರಿಯಲ್ಲ, ಈ ಕಾಲಘಟ್ಟದಲ್ಲಿ 400ಕ್ಕೂ ಹೆಚ್ಚು ತತ್ವಪದಕಾರರು ಪದಗಳನ್ನು ರಚಿಸಿದ್ದು, ಈ ಯುಗವನ್ನು ತತ್ವಪದ ಕಾರರ ಸುವರ್ಣ ಯುಗವೆಂದು ಪರಿಗಣಿಸಬೇಕೆಂದು ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥ ಮತ್ತು ಸಾಂಸ್ಕೃತಿಕ ಘಟಕದ ಸಂಯೋಜಕ ರಮೇಶ ಹುಲಕುಂದ ಮಾತನಾಡಿ, ತತ್ವಪದಗಳು ಬದುಕಿನ ಕನ್ನಡಿಗಳಂತಿದ್ದು, ಮನುಷ್ಯನ ಅರಿವನ್ನು ಜಾಗೃತಗೊಳಿಸುವ ಶಕ್ತಿ ಹೊಂದಿವೆ. ಸರಳ ಭಾಷೆಯಲ್ಲಿ ಗಹನವಾದ ಸತ್ಯಗಳನ್ನು ಸಾರುವ ಈ ಪರಂಪರೆ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ತತ್ವಪದಕಾರರು ಪ್ರಮುಖ ಪಾತ್ರ ವಹಿಸಿದ್ದಾರೆಂದು ಅಭಿಪ್ರಾಯಪಟ್ಟರು.

ಐಕ್ಯುಎಸಿ ಸಹಸಂಯೋಜಕ ಡಾ. ಮಂಜುನಾಥ ತ್ಯಾಲಗಡಿ ಮಾತನಾಡಿ, ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ತತ್ವಪದಗಳು ಸಮಾಜ ಸುಧಾರಣೆಗೆ ದಾರಿ ತೋರಿದ್ದು, ಇವುಗಳ ಅಧ್ಯಯನದಿಂದ ಮಾನವೀಯ ಮೌಲ್ಯಗಳ ಅರಿವು ಹೆಚ್ಚುತ್ತದೆಂದು ತಿಳಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ ಮತ್ತು ಎನ್.ಎಸ್.ಎಸ್. ಘಟಕದ ಸಂಯೋಜಕ ಡಾ.ಅಪ್ಪಣ್ಣ ಹಂಜೆ ಮಾತನಾಡಿದರು. ಪ್ರಾಚಾರ್ಯ ಡಾ.ಸುಧಾ ಕೌಜಗೇರಿ, ಭೀಮೇಶ, ಮಹಿಳಾ ಘಟಕದ ಸಂಚಾಲಕಿ ಡಾ.ಸಾರಿಕಾ ಪಾಟೀಲ, ಸಾವಿತ್ರಿ ಟಿ., ಡಾ. ಬಸವರಾಜ ಗಟ್ಟೆಣ್ಣವರ ಇದ್ದರು.



ಮಹಿಳೆಯರು ಸಂಘಟಿತರಾಗಲಿ: ಅಂಗಡಿ

ಗಜೇಂದ್ರಗಡ: ಮಹಿಳೆಯರು ಸಂಘಟಿತರಾಗುವ ಮೂಲಕ ತಮ್ಮ ಹಕ್ಕನ್ನು ಪಡೆದುಕೊಳ್ಳಬೇಕು.ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಅರಿತು ಆ ನಿಟ್ಟಿನಲ್ಲಿ ಮಹಿಳೆಯರು ಮಾನಸಿಕವಾಗಿ ಸಿದ್ಧಗೊಳ್ಳಬೇಕು. ಮಹಿಳೆಯ ಮೇಲಿನ ಶೋಷಣೆಗೆ ಇತಿಹಾಸವೇ ಸಾಕ್ಷಿ ಒದಗಿಸುತ್ತದೆ ಎಂದು ಬೈಲಹೊಂಗಲದ ಪತ್ರಿ ಬಸವೇಶ್ವರ ಅನುಭವ ಮಂಟಪದ ಅಧ್ಯಕ್ಷೆ ಪ್ರೇಮಾ ಅಂಗಡಿ ಹೇಳಿದರು.

ನಗರದ ರೋಣ ರಸ್ತೆಯಲ್ಲಿರುವ ಅಕ್ಕನ ಬಳಗದ ಕಾರ್ಯಾಲಯದ ಆವರಣದಲ್ಲಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಅಕ್ಕನ ಬಳಗದ 8 ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

1908 ರಲ್ಲಿ ಅಮೇರಿಕಾದ ಸಿದ್ಧ ಉಡುಪು ತಯಾರಿಕಾ ಘಟಕದಲ್ಲಿ ಪುರುಷ ಮತ್ತು ಮಹಿಳೆಯರು ಸಮಾನವಾಗಿ ಕೆಲಸ ಮಾಡಿದರು. ಸಹಿತ ಮಹಿಳೆಯರಿಗೆ ಕಡಿಮೆ ವೇತನ ಕೊಡುತ್ತಿದ್ದರು.ಆ ತಾರತಮ್ಯ ನೀತಿಯನ್ನು ಖಂಡಿಸಿ ಮಹಿಳೆಯರು ಪ್ರತಿಭಟನೆ ಮಾಡಿದರು. ಅಂದಿನಿಂದ ವಿಶ್ವಸಂಸ್ಥೆ ಮಾ. 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಕರೆ ನೀಡಿತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕ್ಕನ ಬಳಗದ ಅಧ್ಯಕ್ಷರಾದ ಸಂಯುಕ್ತ ಬಂಡಿ ವಹಿಸಿಕೊಂಡಿದ್ದರು.

ಮಹಿಳಾ ಆರಕ್ಷಕರಾದ ಮಾಲತಿ ಶಿಗಿಹಳ್ಳಿ,ಮಂಜುಳಾ ಕೌಜಗೇರಿ,ಭಾಗ್ಯ ಆಲೂರ, ಲಕ್ಷ್ಮಿ ದೊಡ್ಡಮನಿ,ರಜಿಯಾ ಬನ್ನಿಗೋಳ ಅವರನ್ನು ಸನ್ಮಾನಿಸಿದ ಬಳಿಕ ಅರುಣೋದಯ ಕಲಾತಂಡದಿಂದ ಮನರಂಜನೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಸುವರ್ಣ ನಂದಿಹಾಳ, ಬಸಮ್ಮ ಸಾಲಿಮಠ, ರಾಜಮ್ಮ ಹುಲಿ, ಗೀತಾ ಕಂಬಳ್ಯಾಳ, ಲೀಲಾವತಿ ಸವಣೂರ,ಅನಸೂಯಾ ವಾಲಿ, ಇಂದಿರಾ ತೇಲಿ,ವಿಜಯಲಕ್ಷ್ಮಿ ಚಟ್ಟೇರ, ಸುಜಾತ ಮೇಣಸಗಿ,ರಾಜೇಶ್ವರಿ ಅರಹುಣಸಿ,ರೇಖಾ ವೀರಾಪೂರ, ಸುಕನ್ಯಾ ಹೊಗರಿ, ಸುಜಾತ ಅಪ್ಪಣ್ಣವರ, ವನಿತಾ ಗಾಟಗೆ,ರಶ್ಮಿ ಸಜ್ಜನರ, ಮಂಜುಳಾ ಕೋರಧಾನ್ಯಮಠ,ಸುಮಾ ಲಕ್ಕುಂಡಿಮಠ ಕೀರ್ತಿ ಕೊಟಗಿ,ಶಿವಲೀಲಾ ಸಿಂಹಾಸನ,ಸುಜಾತ ಮುದಗಲ್ಲ, ಸಂಗೀತ ಗಾಣಗೇರ ಶರಣಮ್ಮ ಅಂಗಡಿ ಸೇರಿದಂತೆ ಅನೇಕರು ಇದ್ದರು.



ನವ ಜೋಡಿಗೆ ಶ್ರೀಗಳಿಂದ ಆಶೀರ್ವಾದ



ಶಿರಹಟ್ಟಿ: ಇಂದಿನ ದಿನಗಳಲ್ಲಿ ಶ್ರೀಮಂತರು ತಮ್ಮ ಮಕ್ಕಳ ಮದುವೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಹಣ ವ್ಯಯಿಸಿ ವೈಭವದ ಮದುವೆ ಮಾಡುತ್ತಾರೆ. ಆದರೆ, ಖಾನಾಪುರ ಗ್ರಾಮದ ಶರಣಬಸವೇಶ್ವರ ಪುರಾಣದಲ್ಲಿ ಶ್ರೀಮಂತರ ಮದುವೆಗೆ ಸೆಡ್ಡು ಹೊಡೆಯುವಂತೆ ಬಡವರ ಮಕ್ಕಳ ಅದ್ದೂರಿ ಮದುವೆ ಮಾಡುತ್ತಿರುವುದು ಪುಣ್ಯದ ಕೆಲಸ ಎಂದು ಬನ್ನಿಕೊಪ್ಪ ಗ್ರಾಮದ ಜಪದಕಟ್ಟಿ ಮಠದ ಶ್ರೀ ಸುಜ್ಞಾನದೇವ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸ್ಥಳೀಯ ಖಾನಾಪೂರದಲ್ಲಿ ಶ್ರೀ ಶರಣ ಬಸವೇಶ್ವರ ಪುರಾಣ ಪ್ರವಚನದ 50ನೇ ಸುವರ್ಣ ಮಹೋತ್ಸವದ ಅಂಗವಾಗಿ ಬಸವೇಶ್ವರ ಶಿವಾನುಭವ ಮಂಟಪದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನವ ಜೋಡಿಗಳಿಗೆ ಆಶೀರ್ವಚನ ನೀಡಿ ಮಾತನಾಡಿದರು. ವಿವಾಹ ಎಂಬುದು ಎರಡು ಹೃದಯ ಬೆಸೆಯುವ ಪವಿತ್ರ ಬಂಧನವಾಗಿದ್ದು, ಸತಿ-ಪತಿಗಳು ತಮ್ಮ ಜೀವನದುದ್ದಕ್ಕೂ ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಸುಖ ಸಂತೋಷದಿಂದ ಜೀವನ ನಡೆಸಬೇಕು, ಅಂದಾಗ ಮಾತ್ರ ಸಮಾಜ ನಿಮ್ಮನ್ನು ಗೌರವದಿಂದ ಕಾಣುತ್ತದೆ. ಮತ್ತು ಜೀವನದಲ್ಲಿ ಕಷ್ಟ, ಸುಖ, ದುಃಖಗಳು ಸಾಮಾನ್ಯವಾಗಿ ಎಲ್ಲರಿಗೂ ಬರುತ್ತವೆ. ಆದ್ದರಿಂದ ಸತಿ-ಪತಿಗಳು ಕಷ್ಟ, ಸುಖ, ದುಃಖಗಳಲ್ಲಿ ಒಂದಾಗಿ ನಡೆಯುವುದರ ಮೂಲಕ ಆದರ್ಶ ದಂಪತಿಗಳಾಗಿ ಬಾಳಬೇಕು ಎಂದು ಹೇಳಿದರು.

ಈ ವೇಳೆ ಗ್ರಾಮದ ಮುಖಂಡರಾದ ಸುರೇಶ ಅಕ್ಕಿ, ಬಸವರಾಜ, ಹಲಸೂರ, ಪ್ರಕಾಶ ರೆಡ್ಡೇರ, ಚಂದ್ರಣ್ಣ ರೆಡ್ಡೇರ, ಬಸಯ್ಯಾ ಹಿರೇಮಠ, ರುದ್ರಪ್ಪ ಕರಮೂಡಿ, ಫಕ್ಕೀರೇಶ ಗಾಣಿಗೇರ, ರಾಮಣ್ಣ ಗಾಬರಿ, ಪಂಚಪ್ಪ ಹಲಸೂರು, ರಾಜಶೇಖರ ಹಿರೇಮಠ, ಪ್ರಕಾಶ ರಡ್ಡೇರ, ಮುತ್ತು ಕಲಾದಗಿ ಸೇರಿದಂತೆ ಗ್ರಾಮದ ಗುರು-ಹಿರಿಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಏ.9ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ನರಗುಂದ: ಪಟ್ಟಣದ ಸುಕ್ಷೇತ್ರ ವೀರಕ್ತಮಠದ ಕರ್ತೃ ಶ್ರೀ ಚನ್ನಬಸವ ಮಹಾ ಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವ ಹಾಗೂ ಜೀವನ ದರ್ಶನ ಪ್ರವಚನ, ಸಾಮೂಹಿಕ ವಿವಾಹ, ಮಹಾರಥೋತ್ಸವ ಮತ್ತು ಜಾನಪದೋತ್ಸವ ಕಾರ್ಯಕ್ರಮಗಳು ಏ.9ರಿಂದ ಏ.19 ರವರೆಗೆ ಪುರಾಣ ಪ್ರವಚನದೊಂದಿಗೆ ಜರುಗಲಿದೆ ಎಂದು ಶ್ರೀ ಶಿವಕುಮಾರ ಸ್ವಾಮೀಜಿ ಪೂರ್ವಭಾವಿ ಸಭೆಯಲ್ಲಿ ತಿಳಿಸಿದ್ದಾರೆ.



ಪ್ರತಿ ವರ್ಷದಂತೆ ಜಾತ್ರಾ ಮಹೋತ್ಸವದಲ್ಲಿ ಏ.16 ರಂದು ರಕ್ತದಾನ ಶಿಬಿರ, ಏ.17 ರಂದು ತಾಯಂದರಿಗೆ ಉಡಿ ತುಂಬುವ ಕಾರ್ಯಕ್ರಮ, ಏ.18 ರಂದು ಪ್ರವಚನ ಮಂಗಲೋತ್ಸವ. ಏ.19 ರಂದು ನಗರದಲ್ಲಿ ಫಲ್ಲಕ್ಕಿ ಉತ್ಸವ ಸಕಲ ವಾಧ್ಯ ಮೇಳದೊಂದಿಗೆ ಜರುಗಲಿದೆ. ನಂತರ ಸಾಮೂಹಿಕ ವಿವಾಹಗಳು, ಸಂಜೆ 5.00 ಗಂಟೆಗೆ ಮಹಾರಥೋತ್ಸವ ಜರುಗಿದ ನಂತರ ಜಾನಪದೋತ್ಸವ ಜರುಗಲಿದೆ ಎಂದು ಪ್ರಕಟನೆಯಲ್ಲಿ ತಿಳಿಸಿರುತ್ತಾರೆ. ಸಭೆಯಲ್ಲಿ ಮಂಜಣ್ಣ ಬೆಳಗಾವಿ, ಮಂಜು ಮೇಣಸಗಿ, ಅಶೋಕ ಗುಜಮಾಗಡಿ, ತಿಪ್ಪಣ್ಣ ಗಡೇಕಾರ, ಸಂಗಪ್ಪ ಪೂಜಾರ, ವಿಶ್ವನಾಥ ಗುಡಿಸಾಗರ, ತಿಪ್ಪಯ್ಯ ಗುರುವಿನ, ಸಂತೋಷ ಆನೇಗುಂದಿ, ಮಲ್ಲಿಕಾರ್ಜುನ ಗಡೇಕಾರ, ಸುನೀಲ ದೋಂಗಡಿ, ಚನ್ನಪ್ಪ ಕೋರಿ, ಈರಣ್ಣ ಗಡೇಕಾರ, ಪ್ರಕಾಶ ಪಟ್ಟಣಶೆಟ್ಟಿ ಸೇರಿದಂತೆ ಅನೇಕರಿದ್ದರು.



ಗದಗ ತಾಲೂಕು ಕಳಸಾಪೂರ ಗ್ರಾಮ ಬಸವಕೇಂದ್ರದಲ್ಲಿ 1602ನೇ ವಾರದ ಶಿವಾನುಭವ ಕಾರ್ಯಕ್ರಮದಲ್ಲಿ ಲಿಂ.ಡಾ.ಪಂಡಿತ ಪುಟ್ಟರಾಜ ಗವಾಯಿಗಳವರ 112ನೇ ಜನ್ಮದಿನ ಆಚರಿಸಲಾಯಿತು. ಶರದರಾವ ಹುಯಿಲಗೋಳ, ಸ್ಪಂದನಾ ಸಂಸ್ಥೆಯ ಅಧ್ಯಕ್ಷ ಚನ್ನವೀರಪ್ಪ ಪಲ್ಲೇದ, ಬಸಯ್ಯ ಸಾಸ್ವಿಹಳ್ಳಿಮಠ, ಬಸವರಾಜ ಕಣವಿ, ಮಲ್ಲಿಕಾರ್ಜುನ ಖಂಡಮ್ಮನವರ, ಬಸವರಾಜ ಕಣವಿ, ಮಂಜು ರಾಮನಗೌಡರ ಸೇರಿದಂತೆ ಇತರರು ಇದ್ದರು.

ಸುಸಂಸ್ಕೃತ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆ ಪಾತ್ರ ಅನನ್ಯ

ಲಕ್ಷ್ಮೇಶ್ವರ: ಮಹಿಳೆ ತನ್ನ ಕುಟುಂಬದ ಪ್ರಗತಿಯ ಜತೆಗೆ ಸುಭದ್ರ, ಸುಸಂಸ್ಕೃತ ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಕಾರಣೀಕರ್ತಳಾಗಿದ್ದಾಳೆ. ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುವಂತಹ ಸಾಮರ್ಥ್ಯವನ್ನು ಪಡೆದಿದ್ದಾಳೆ. ಅದಕ್ಕಾಗಿ ಮಹಿಳೆಗೆ ಭಾರತದಲ್ಲಿ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ ಎಂದು ಕುಂದಗೋಳ ಕಲ್ಯಾಣಪುರಮಠದ ಶ್ರೀ ಅಭಿನವ ಬಸವಣ್ಣಜ್ಜನವರು ಹೇಳಿದರು.

ಅವರು ಭಾನುವಾರ ಪಟ್ಟಣದ ಕೆಂಚಲಪೂರ ಓಣಿಯಲ್ಲಿ ಲಕ್ಷ್ಮೇಶ್ವರ ತಾಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ಸಮಾಜ ಮಹಿಳೆಯರನ್ನು ಸದಾ ಗೌರವಿಸುತ್ತಿದ್ದು, ಮಹಿಳೆ ದೇವತೆ ಸ್ವರೂಪ ಅವಳಲ್ಲಿರುವ ತಾಳ್ಮೆ, ಸ್ಮರಣ ಶಕ್ತಿ, ಎಲ್ಲವನ್ನು ನಿಭಾಯಿಸುವ ಶಕ್ತಿ ಹೊಂದಿರುವುದು ಹೆಣ್ಣು ಮಾತ್ರ, ಸಮುದಾಯದಲ್ಲಿ ತಾಳ್ಮೆ ಮತ್ತು ಸಹನೆಯ ಗುಣ ಇಲ್ಲದಿರುವುದೇ ಇಂದಿನ ಅಶಾಂತಿ ಅತೃಪ್ತಿಗಳಿಗೆ ಮೂಲ ಕಾರಣ. ಸಂಸ್ಕಾರ ಮತ್ತು ಸಂಸ್ಕೃತಿ ಎಂಬ ಬೀಜ ಬಿತ್ತಿ ಜೀವನದಲ್ಲಿ ಉತ್ತಮ ಫಲವನ್ನು ಪಡೆಯಬೇಕು ಎಂದು ನುಡಿದರು.



ಮಹಿಳಾ ದಿನಾಚರಣೆಯ ವಿಶೇಷ ಪ್ರಶಸ್ತಿ ಸ್ವೀಕರಿಸಿದ ಹಾವೇರಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಡಾ. ವೇದಾರಾಣಿ ದಾಸನೂರ ಮಾತನಾಡಿ, ಮಹಿಳೆ ಸಮಾಜದ ಬಹುಮುಖ್ಯ ಅಂಗವಾಗಿದ್ದು ಮಹಿಳೆ ಸುಶಿಕ್ಷಿತಳಾಗಬೇಕು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಮತ್ತು ಆ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ, ಇಂದು ಎಲ್ಲ ರಂಗಗಳಲ್ಲಿ ಅವಳ ಸಾಧನೆ ಸಮಾನತೆಯನ್ನು ತೋರಿಸಿಕೊಡುತ್ತಿದೆ, ಕೃಷಿ, ಶಿಕ್ಷಣ, ಸಾಮಾಜಿಕ, ರಾಜಕೀಯ ಹೀಗೆ ಎಲ್ಲ ಕಡೆಗಳಲ್ಲಿ ಮಹಿಳೆಯರ ಸ್ಥಾನಮಾನ ಹೆಚ್ಚುತ್ತಾ ಹೋಗುತ್ತಿದೆ ಎಂದು ನುಡಿದರು. ಸಮಾಜದ ಪರವಾಗಿ ಸುಕೃತಿಮಾ ಪ್ರಶಸ್ತಿಯನ್ನ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ವಸಂತಾ ಹುಲ್ಲತ್ತಿ ಅವರು ಪ್ರದಾನ ಮಾಡಿದರು.

ದಾವಣಗೆರೆಯ ಗಿರಿಜಾ ಉಮಾಪತಿ ಯವರು ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸುನೀತಾ ಮಂಜುನಾಥ ಮಾಗಡಿ ವಹಿಸಿದ್ದರು. ತಾಯಿ ಮಗಳ ಬಾಂಧವ್ಯದ ಸಂಕೇತವಾಗಿ ಏರ್ಪಡಿಸಲಾಗಿದ್ದ ನನ್ನ ಅಮ್ಮ ನನ್ನ ಪ್ರಪಂಚ ಸ್ಪರ್ಧೆಯನ್ನು ಜಯಲಕ್ಷ್ಮೀ ಗಡ್ಡದೇವರಮಠ ಉದ್ಘಾಟಿಸಿ ಶುಭಕೋರಿದರು. ವೇದಿಕೆಯಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತೆ ಲಲಿತಾ ಕೆರಿಮನಿ, ಸಂಘದ ತಾಲೂಕ ಅಧ್ಯಕ್ಷೆ ಶಾರದಾ ಮಹಾಂತಶೆಟ್ಟರ, ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಮಾಲಾದೇವಿ ದಂದರಗಿ, ರಶ್ಮಿ ಕುಂಕೋದ, ಜಯಲಕ್ಷ್ಮೀ ಮಹಾಂತಶೆಟ್ಟರ, ನಿರ್ಮಲಾ ಅರಳಿ, ಮಮತಾ ಪೂಜಾರ, ಪರಮೇಶ್ವರಿ ಪುರಾಣಿಕಮಠ, ಕೃತಿಕಾ ಮಾಗಡಿ, ಶೈಲಾ ಆದಿ, ರತ್ನಾ ಕರ್ಕಿ, ಜ್ಯೋತಿ ರಾಜೊಳ್ಳಿ, ಸಮಾಜದ ತಾಲೂಕ ಅಧ್ಯಕ್ಷ ಮಂಜುನಾಥ ಮಾಗಡಿ ಸೇರಿದಂತೆ ಅನೇಕರಿದ್ದರು. ರತ್ನಾ ಕುಂಬಾರ, ಎಚ್ .ಡಿ. ನಿಂಗರಡ್ಡಿ ನಿರೂಪಿಸಿದರು.

ಮೀಸಲಾತಿಯಿಂದ ಮಹಿಳೆ ಮುಖ್ಯವಾಹಿನಿಗೆ: ಎಚ್.ಕೆ.ಪಾಟೀಲ

ಗದಗ: 12ನೇ ಶತಮಾನದಲ್ಲಿ ಬಸವಣ್ಣ ಹಾಗೂ ಇತರ ಶರಣ, ಶರಣೆಯರು ಮಹಿಳಾ ಸಮಾನತೆ, ಮಹಿಳಾ ಸಬಲೀಕರಣ ಕುರಿತು ಸಮಾಜದಲ್ಲಿ ವೈಚಾರಿಕತೆ ಮೂಡಿಸಿದರು. ಭಾಷಣ, ಸಾಹಿತ್ಯಕ್ಕೆ ಸ್ಥಿಮಿತಗೊಂಡಿದ್ದ ಈ ವಿಷಯಕ್ಕೆ ಕಾನೂನಿನ ಮೂಲಕ ಸಾಮಾಜಿಕ ನ್ಯಾಯ, ಮಹಿಳಾ ಮೀಸಲಾತಿ ನೀಡಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಇಲ್ಲಿನ ಕಳಸಾಪೂರ ರಿಂಗ್ ರೋಡ್‌ನ ಪ್ರೈಮ್ ಸ್ಪೋರ್ಟ್ಸ್ ಪಾರ್ಕ್‌ದಲ್ಲಿ ರಡ್ಡಿ ಮಹಿಳಾ ಬಳಗ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನೀಡದ ಅಂದಿನ ದಿನಗಳಲ್ಲಿ ಕೇವಲ ಮಹಿಳಾ ಸಮಾನತೆ, ಮಹಿಳಾ ಸಬಲೀಕರಣ, ಮಹಿಳಾ ಹಕ್ಕುಗಳು ಎಂದೆಲ್ಲಾ ಭಾಷಣ ಮಾಡುವ, ಸಾಹಿತ್ಯ ರಚಿಸುವ ಕೆಲಸವಾಯಿತಷ್ಟೇ. ಆದರೆ, ನಿರೀಕ್ಷಿತ ಪ್ರಮಾಣದ ಫಲಿತಾಂಶ ಸಿಗಲಿಲ್ಲ ಮುಂದೆ ಈ ವಿಷಯವಾಗಿ ಮಹಿಳೆಯರಿಗೆ ರಾಜಕೀಯ ಸ್ಥಾನಮಾನ ನೀಡಲು ಕಾನೂನಿನ ಮೂಲಕ ಮೀಸಲಾತಿ ತಂದ ಪರಿಣಾಮವಾಗಿ ಆಕೆ ರಾಜಕೀಯವಾಗಿ ಅಧಿಕಾರಸ್ಥಳಾಗಿ ನಿಂತಿದ್ದಾಳೆ ಎಂದರು.



ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳೆಯರಿಗೆ ವಿಶೇಷ ಸೌಲಭ್ಯಗಳನ್ನು ನೀಡಲಾಗಿದೆ. ಆಡಳಿತದಲ್ಲಿ ಅಧಿಕಾರವನ್ನು ನೀಡಲಾಗಿದೆ. ಮಹಿಳೆಯರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಅಮೂಲಾಗ್ರ ಬದಲಾವಣೆ, ಕ್ರಾಂತಿ ಮಾಡಲಾಗಿದೆ ಎಂದರಲ್ಲದೆ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕವಾಗಿ ಮಹಿಳೆಗೆ ಸ್ವಾತಂತ್ರ್ಯವಿಲ್ಲದಾಗಿದೆ. ತಿಂಗಳದ ಕೆಲವು ದಿನಗಳವರೆಗೆ ಮಹಿಳೆಗೆ ನಿರ್ಬಂಧನೆಗಳನ್ನು ವಿಧಿಸಿ ಆಕೆಯನ್ನು ದೂರ ಇಡುವ ಸಾಮಾಜಿಕ ಇಂತಹ ಅನಿಷ್ಟ ಪದ್ಧತಿಯನ್ನು ದೂರೀಕರಿಸುವ ಪ್ರಯತ್ನ, ವೈಚಾರಿಕ ಮನೋಭಾವ ಮಹಿಳಾ ಸಂಘಟನೆಗಳಿಂದ ಆಗಬೇಕಿದೆ ಎಂದರು.

ಸ್ತ್ರೀರೋಗ ತಜ್ಞೆ ಡಾ.ಅನುಪಮಾ ಪಾಟೀಲ ಮಾತನಾಡಿ, ಮಹಿಳೆಯರು ಇಂದು ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿ ಹಲವಾರು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆರೋಗ್ಯದ ಬಗ್ಗೆ ಕಾಳಜಿ, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸದ ಕಾರಣಗಳಿಂದಾಗಿ ಇಂತಹ ಸಮಸ್ಯೆಗಳು ಉದ್ಭವಿಸುತ್ತಿವೆ ಎಂದರು.

ಸಿನೆಟ್ ಸದಸ್ಯ ಡಾ.ವೀರೇಶ ಹಂಚಿನಾಳ ಮಾತನಾಡಿದರು.

ಪ್ರೊ.ಸುಧಾ ಹುಚ್ಚಣ್ಣವರ, ಪ್ರೈಮ್ ಸ್ಪೋರ್ಟ್ಸ್ ಪಾರ್ಕ್ ಮಾಲೀಕಿ ಸುಮಾ ಶಿವನಗೌಡ್ರ ಮಾತನಾಡಿದರು. ಜಿಲ್ಲಾ ರಡ್ಡಿ ಸಮಾಜ ಸಂಘದ ಅಧ್ಯಕ್ಷ ರವೀಂದ್ರ ಮೂಲಿಮನಿ, ಲತಾ ಮುಂಬಾರಡ್ಡಿ, ಸುನೀತಾ ಕೋನರಡ್ಡಿ ಇದ್ದರು. ಸೌಮ್ಯ ಹುಚ್ಚಣ್ಣವರ ಪ್ರಾರ್ಥಿಸಿದರು. ಶೈಲಜಾ ಕವಲೂರ ಸ್ವಾಗತಿಸಿದರು. ಶೈಲಾ ಬೆಂತೂರ ಪರಿಚಯಿಸಿದರು. ಪ್ರೊ.ವೀಣಾ ತಿರ್ಲಾಪೂರ ನಿರೂಪಿಸಿ ವಂದಿಸಿದರು.

ಮೀಸಲಾತಿ ಜಾರಿಯಾಗದಿದ್ದರೆ ಅಹೋರಾತ್ರಿ ಧರಣಿ: ಉಗ್ರಪ್ಪ



ಕಲಬುರಗಿ: ಎಸ್ಸಿ ಎಸ್ಟಿ ಹಾಗೂ ಒಬಿಸಿಗಳ ಮೀಸಲಾತಿ ಪ್ರಮಾಣ ರಾಜ್ಯದಲ್ಲಿ ಶೇ.56ಕ್ಕೆ ಹೆಚ್ಚಿಸಿರುವುದನ್ನು ಮಾರ್ಚ್ ಅಂತ್ಯದೊಳಗೆ ಈ ಕುರಿತು ಕ್ರಮವಹಿಸದಿದ್ದರೆ ಏಪ್ರಿಲ್‌ನಲ್ಲಿ ಅಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ ಎಂದು ಮಾಜಿ ಸಂಸದ, ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಎಚ್ಚರಿಕೆ ನೀಡಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ಸಿ ಎಸ್ಟಿ ಹಾಗೂ ಒಬಿಸಿಗಳ ಮೀಸಲಾತಿ ಪ್ರಮಾಣ ರಾಜ್ಯದಲ್ಲಿ ಶೇ.56ಕ್ಕೆ ಹೆಚ್ಚಿಸಿ ಹಲವಾರು ವರ್ಷಗಳು ಕಳೆದರೂ ಸಹ ಜಾರಿಗೆ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಿದರೆ ಮಾತ್ರವೇ ಆ ಕಾಯ್ದೆ ಜಾರಿಯಾಗಲಿದೆ ಹಾಗಾಗಿ 9ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ತುರ್ತು ಕ್ರಮವಹಿಸಬೇಕು ಎಂದು ಒತ್ತಾಯಿಸಿದರು. ಎಸ್ಸಿಗಳ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ, ಎಸ್ಟಿಗಳ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಿಸಲು ಹಿಂದಿನ ಬಿಜೆಪಿ ಸರ್ಕಾರ ನಿರ್ಧರಿಸಿತ್ತು. ಈ ಕಾಯ್ದೆಯನ್ನು ವಿಧಾನಸಭೆ, ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಪಕ್ಷಾತೀತವಾಗಿ ಸರ್ವಾನುಮತದಿಂದ ಅಂಗೀಕರಿಸಿದ್ದರು. ಅದಕ್ಕೆ ರಾಜ್ಯಪಾಲರ ಅಂಕಿತವೂ ಬಿದ್ದಿದೆ. ಆದರೆ, ಇದು ಜಾರಿಯಾಗಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಿಲ್ಲ, ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಿರಾಸಕ್ತಿ ತೋರಿಸುತ್ತದೆ ಎಂದು ಹರಿಹಾಯ್ದರು.

ಮೀಸಲಾತಿ ಕುರಿತ ಹೈಕೋರ್ಟ್‌ನ ಆದೇಶ ತೆರವಿಗೆ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಇಲ್ಲವೇ ಎಸ್‌ಎಲ್‌ಪಿ ಹಾಕಬೇಕು. ಪರಿಷ್ಕೃತ ಮೀಸಲಾತಿ ಪ್ರಮಾಣ 9ನೇ ಪರಿಚ್ಛೇದಕ್ಕೆ ಸೇರಿಸುವ ಕುರಿತು ರಾಜ್ಯ ಸರ್ಕಾರ ಕೂಡಲೇ ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಬೇಕು. ಶೇ.56ರಷ್ಟು ಮೀಸಲಾತಿ ಪ್ರಮಾಣ ತಮಿಳುನಾಡು ಮಾದರಿಯಲ್ಲಿ ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಪ್ರಧಾನಿ ನರೇಂದ್ರ ಮೋದಿ ಬಳಿ ಸರ್ವಪಕ್ಷ ನಿಯೋಗ ಕರೆದೊಯ್ದು ಒತ್ತಡ ಹೇರಬೇಕು. ಪ್ರಧಾನಿ ಮೋದಿ ಸರ್ಕಾರವೂ ರಾಜ್ಯದ ಮನವಿ ಪುರಸ್ಕರಿಸಿ ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂದು ಆಗ್ರಹಿಸಿದರು.

ಬಳಿಕ ಮುಖಂಡರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸಲ್ಲಿಸಿದರು. ಮುಖಂಡರಾದ ನಂದಕುಮಾರ ಮಾಲೀಪಾಟೀಲ, ರಾಜಪ್ಪ, ಗುರು ಶ್ರೀರಾಮುಲು, ಹಣಮಂತ್ರಾಯಪ್ಪ, ಶರಣು ಸುಬೇದಾರ, ಮಾರುತಿ ಜಮಾದಾರ, ಮರಿಯಪ್ಪ ನಾಯಕ, ಶ್ರವಣಕುಮಾರ ನಾಯಕ, ಎಂ.ನರಸಿಂಹಯ್ಯ ಇತರರಿದ್ದರು.

ಪೊಲೀಸ್ ಕಮಿಷನರ್ ಭೂಷಣ್ ಬೋರಸೆ ಎಚ್ಚರಿಕೆ

2900ಕ್ಕೂ ಹೆಚ್ಚು ಮ್ಯೂಲ್ ಅಕೌಂಟ್‌ಗಳು ಪತ್ತೆ

ಬೆಳಗಾವಿ: ಸಾರ್ವಜನಿಕರ ಬ್ಯಾಂಕ್ ಅಕೌಂಟ್ ಮೇಲೆ ಸೈಬರ್ ಖದೀಮರ ಕಣ್ಣು ಬಿದ್ದಿದೆ. ಕೇವಲ ಕಮಿಷನ್ ಆಸೆಗೆ ಬಿದ್ದು ನಿಮ್ಮ ಅಕೌಂಟ್ ವಿವರ ನೀಡಿದರೆ ನೀವೂ ಅಪರಾಧಿಯಾಗಬಹುದು. ಬೆಳಗಾವಿ ನಗರದಲ್ಲಿ ಬರೋಬ್ಬರಿ 2900 ಮ್ಯೂಲ್ ಅಕೌಂಟ್‌ಗಳು ಸಕ್ರಿಯವಾಗಿರುವ ಸ್ಫೋಟಕ ಮಾಹಿತಿ ಈಗ ಹೊರಬಿದ್ದಿದೆ. ಇಂತಹ ಪ್ರಕರಣಗಳಲ್ಲಿ ಅಕೌಂಟ್ ನೀಡುವವರೂ ಸಹ ಸೈಬರ್ ಅಪರಾಧಿಗಳೇ ಆಗುತ್ತಾರೆ. ಅಪರಿಚಿತರಿಗೆ ಬ್ಯಾಂಕ್ ವಿವರ ನೀಡದಂತೆ ಪೊಲೀಸ್ ಕಮಿಷನರ್ ಭೂಷಣ್ ಬೋರಸೆ ಸಾರ್ವಜನಿಕರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.



ಬೆಳಗಾವಿ ನಗರದಲ್ಲಿ ಸೈಬರ್ ವಂಚನೆ ಜಾಲ ಬಲಿಷ್ಠವಾಗುತ್ತಿದ್ದು, ಅಮಾಯಕರನ್ನು ಬಳಸಿಕೊಂಡು ಮ್ಯೂಲ್ ಅಕೌಂಟ್‌ಗಳ ಮೂಲಕ ಕೋಟ್ಯಂತರ ರೂಪಾಯಿ ಹಣ ವರ್ಗಾವಣೆ ಮಾಡಲಾಗುತ್ತಿದೆ. ಸದ್ಯ ನಗರದಲ್ಲಿ ಸುಮಾರು 2900ಕ್ಕೂ ಹೆಚ್ಚು ಮ್ಯೂಲ್ ಅಕೌಂಟ್‌ಗಳು ಸಕ್ರಿಯವಾಗಿರುವುದು ಪತ್ತೆಯಾಗಿದ್ದು, ಸಿಇಎನ್ ಪೊಲೀಸ್ ಠಾಣೆಯಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಯುವಕನೊಬ್ಬನ ಹೆಸರಿನಲ್ಲಿ 9 ಅಕೌಂಟ್ ತೆರೆದು 80 ಲಕ್ಷ ರೂಪಾಯಿ ವಂಚನೆ ಹಣ ವರ್ಗಾಯಿಸಿದರೆ, ಮತ್ತೊಂದೆಡೆ ಸ್ವಂತ ತಾಯಿಯ ಮೂಲಕವೇ ಸ್ವಸಹಾಯ ಸಂಘದ ಹೆಸರಿನಲ್ಲಿ ಖಾತೆ ತೆರೆಸಿ ದೋಖಾ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ವರ್ಕ್ ಫ್ರಮ್ ಹೋಮ್ ಹೆಸರಿನಲ್ಲೂ ಜನರನ್ನು ವಂಚಿಸಿ ಅವರ ಖಾತೆಗಳನ್ನು ಅಕ್ರಮ ಹಣ ವರ್ಗಾವಣೆಗೆ ಬಳಸಲಾಗುತ್ತಿದೆ. ಈ ಮ್ಯೂಲ್ ಅಕೌಂಟ್‌ಗಳು ಎಂದರೆ ಸೈಬರ್ ಖದೀಮರು ತಾವು ದೋಚಿದ ಹಣವನ್ನು ನೇರವಾಗಿ ಪಡೆಯುವ ಬದಲು, ಅಮಾಯಕರಿಗೆ ಕಮಿಷನ್ ಆಸೆ ತೋರಿಸಿ ಅವರ ಖಾತೆಗಳಿಗೆ ವರ್ಗಾಯಿಸುತ್ತಾರೆ. ಅಲ್ಲಿಂದ ಹತ್ತಾರು ಖಾತೆಗಳಿಗೆ ಹಣ ಹಂಚಿ ಪತ್ತೆ ಹಚ್ಚದಂತೆ ಮಾಡುತ್ತಾರೆ. ಇಂತಹ ಪ್ರಕರಣಗಳಲ್ಲಿ ಅಕೌಂಟ್ ನೀಡುವವರೂ ಸಹ ಸೈಬರ್ ಅಪರಾಧಿಗಳೇ ಆಗುತ್ತಾರೆ. ಈ ಜಾಲದ ಮೂಲ ಪತ್ತೆಗೆ ಬೆಳಗಾವಿ ಸೈಬರ್ ಕ್ರೈಂ ಪೊಲೀಸರು ಬೆನ್ನು ಬಿದ್ದಿದ್ದು, ಅಪರಿಚಿತರಿಗೆ ಬ್ಯಾಂಕ್ ವಿವರ ನೀಡದಂತೆ ಪೊಲೀಸ್ ಕಮಿಷನರ್ ಭೂಷಣ್ ಬೋರಸೆ ಖಡಕ್ ಎಚ್ಚರಿಕೆ ನೀಡಿದರು.

ಕಿರುಸುದ್ದಿ

ಅರಸಹಳ್ಳಿಯಲ್ಲಿ ದೇವಗಿರಿ ಯಾದವರ

ಗಜಲಕ್ಷ್ಮೀಯ ಶಿಲ್ಪದ ಸೊಂಡಿಲು ಪತ್ತೆ



ವಿಜಯಪುರ: ಅರಸಹಳ್ಳಿಯಲ್ಲಿ ದೇವಗಿರಿ ಯಾದವರ ಕಾಲದ ಗಜಲಕ್ಷ್ಮೀಯ ಶಿಲ್ಪದ ಸೊಂಡಿಲು ಪತ್ತೆಯಾಗಿದ್ದು,ರಾಷ್ಟ್ರೀಯ ಸಂಶೋಧನಾ ವೇದಿಕೆಯಿಂದ ಹಮ್ಮಿಕೊಂಡಿದ್ದ ಕ್ಷೇತ್ರ ಕಾರ್ಯದಲ್ಲಿ ಸಂಶೋಧಿಸಲಾಗಿದೆ. ಇದನ್ನು ಇತಿಹಾಸ ಸಂಶೋಧಕ ಹಾಗೂ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಅಧ್ಯಕ್ಷ ಲಾಯಪ್ಪ ಇಂಗಳೆ ಅವರು ಗುರುತಿಸಿದ್ದಾರೆ.

ಗಜಲಕ್ಷ್ಮೀ ಸೊಂಡಿಲು ದೇವಗಿರಿ ಯಾದವರ ಕಾಲಕ್ಕೆ ಸೇರಿದ ದೇವಸ್ಥಾನದ ಮುಖ ಮಂಟಪದ ಭಾಗವಾಗಿದ್ದು, ರಾಯರಾಜ್ಯಧಾನಿ ಎಂದು ಹೆಸರುವಾಸಿಯಾದ ವಿಜಯಪುರದ ಸೇವುಣರ ಅರಸಹಳ್ಳಿಯಲ್ಲಿ ಇಂತಹ ಅಪರೂಪದ ಶಿಲ್ಪವು ದೊರೆತದ್ದು ದೇವಗಿರಿ ಯಾದವರ ದೇವಸ್ಥಾನಗಳ ಹಾಗೂ ಅರಸಹಳ್ಳಿಯ ಇತಿಹಾಸ ಅಧ್ಯಯನಕ್ಕೆ ಹೆಚ್ಚಿನ ಹಾಗೂ ಪೂರಕ ಮಾಹಿತಿ ದೊರೆಯಲಿದೆ.

ದೇವಗಿರಿ ಯಾದವರು ವಿಜಯಪುರ ಮೂಲದವರು ಎಂಬುದಕ್ಕೆ ಇಲ್ಲಿ ದೊರೆಯುತ್ತಿರುವ ಶಿಲ್ಪಗಳು ಸ್ಪಷ್ಟ ಸಂದೇಶ ನೀಡುತ್ತಿವೆ ಎಂದು ಇತಿಹಾಸಕಾರ ಲಾಯಪ್ಪ ಇಂಗಳೆ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್‌ನಿಂದ ಆರ್‌ಡಿಪಾ ಜಾಮೀನು ಅರ್ಜಿ ವಜಾ

ಕಲಬುರಗಿ: ಪೋಲಿಸ್ ಸಬ್ ಇನ್ಸಪೆಕ್ಟರ್ (ಪಿಎಸ್‌ಐ) ಪರೀಕ್ಷೆ ನೇಮಕಾತಿಯ ಹಗರಣದ ಪ್ರಮುಖ ಆರೋಪಿ ಕಿಂಗ್‌ಪಿನ್ ಆರ್.ಡಿ.ಪಾಟೀಲ್ ಜಾಮೀನು ಕೋರಿ ಸಲ್ಲಿಸಿದ ಅರ್ಜಿಯನ್ನು ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠ ಸೋಮವಾರ ವಜಾಗೊಳಿಸಿದೆ. ಸದ್ಯ ಮೈಸೂರಿನ ಕಾರಾಗೃಹದಲ್ಲಿ ಇರುವ ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ ಆರ್.ಡಿ.ಪಾಟೀಲ್ ಕಳೆದ ಎರಡು ವರ್ಷಗಳಿಂದ ಕಲಬುರಗಿ, ಮೈಸೂರು ಕಾರಾಗೃಹದಲ್ಲಿ ಬಂಧನದಲ್ಲಿದ್ದು, ಜಾಮೀನು ಕೋರಿ ಸಲ್ಲಿಸಿದ್ದರು. ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠದ ನ್ಯಾಯಮೂರ್ತಿ ರಾಜೇಶ್ ಕೆ ಪೀಠವು ಅರ್ಜಿಯನ್ನು ವಜಾಗೊಳಿಸಿದೆ.

ತಲ್ವಾರ್ ಪ್ರದರ್ಶನ: ವ್ಯಕ್ತಿ ಬಂಧನ

ಬೆಳಗಾವಿ : ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಮಾರಕಾಸ್ತ್ರ ಹಿಡಿದು ಓಡಾಡುತ್ತಿದ್ದ ವ್ಯಕ್ತಿಯನ್ನು ಮಾಳಮಾರುತಿ ಪೊಲೀಸರು ಬಂಧಿಸಿ, ತಲ್ವಾರ್ ವಶಪಡಿಸಿಕೊಂಡಿದ್ದಾರೆ.

ಬೆಳಗಾವಿಯ ಕಣಬರ್ಗಿಯ ಜ್ಯೋತಿರ್ಲಿಂಗ ಗಲ್ಲಿಯಲ್ಲಿ ಸಾರ್ವಜನಿಕರಿಗೆ ಭಯ ಹುಟ್ಟಿಸುವ ಉದ್ದೇಶದಿಂದ ಹರಿತವಾದ ತಲ್ವಾರ್ ಪ್ರದರ್ಶಿಸುತ್ತಿದ್ದ ಗಂಗಾರಾಮ ಲಕ್ಷ್ಮಣ ಕುಳ್ಳನ್ನವರ (35) ಎಂಬಾತನನ್ನು ಮಾಳಮಾರುತಿ ಠಾಣೆಯ ಪಿಎಸ್‌ಐ ಉದಯ ಪಾಟೀಲ ಮತ್ತು ತಂಡದವರು ವಶಕ್ಕೆ ಪಡೆದಿದ್ದಾರೆ.

ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅಪರಾಧ ಕೃತ್ಯಗಳ ಹಿನ್ನೆಲೆಯಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದಾಗ ಈ ಘಟನೆ ಬೆಳಕಿಗೆ ಬಂದಿದ್ದು, ಆರೋಪಿಯ ವಿರುದ್ಧ ಆಯುಧ ಕಾಯ್ದೆ ಮತ್ತು ಕೆ.ಪಿ.ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಪಟಾಕಿ ಹಚ್ಚುವ ವಿಚಾರಕ್ಕೆ ಗಲಾಟೆ ಪೊಲೀಸರಿಂದ ಲಘು ಲಾಠಿ ಪ್ರಹಾರ

ಬೆಳಗಾವಿ: ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ಸತತ ಮೂರನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸುತ್ತಿದ್ದಂತೆ ಕುಂದಾನಗರಿ ಬೆಳಗಾವಿಯಲ್ಲಿ ಸಂಭ್ರಮ ಮುಗಿಲು ಮುಟ್ಟಿತ್ತು. ಆದರೆ, ಸಂಭ್ರಮಾಚರಣೆ ಮಿತಿ ಮೀರಿದಾಗ ಪಟಾಕಿ ಹಚ್ಚುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಗಲಾಟೆಯಾದ ಪರಿಣಾಮ ಪೊಲೀಸರು ಲಾಠಿ ಬೀಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಭಾರತ ತಂಡ ಗೆಲುವಿನ ಹೊಸ್ತಿಲಲ್ಲಿದ್ದಾಗಲೇ ಬೆಳಗಾವಿಯ ಕ್ರಿಕೆಟ್ ಅಭಿಮಾನಿಗಳು ರಸ್ತೆಗಿಳಿದಿದ್ದರು. ನಗರದ ಪ್ರಮುಖ ರಸ್ತೆಗಳಲ್ಲಿ 'ಭಾರತ ಮಾತಾ ಕೀ ಜೈ' ಎಂಬ ಘೋಷಣೆಗಳು ಮೊಳಗಿದವು. ಆರ್.ಪಿ.ಡಿ ವೃತ್ತದಲ್ಲಿ ಜಮಾಯಿಸಿದ ನೂರಾರು ಯುವಕರು ಪಟಾಕಿ ಸಿಡಿಸಿ, ಕುಣಿದು ಕುಪ್ಪಳಿಸುವ ಮೂಲಕ ಟೀಮ್ ಇಂಡಿಯಾದ ಐತಿಹಾಸಿಕ ಸಾಧನೆ ಸಂಭ್ರಮಿಸಿದರು.

ಸಂಭ್ರಮಾಚರಣೆ ವೇಳೆ ಆರ್‌ಪಿಡಿ ವೃತ್ತದಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾದ ಹಿನ್ನೆಲೆಯಲ್ಲಿ ಪೊಲೀಸರು ಮತ್ತು ಅಭಿಮಾನಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಸ್ಥಳಕ್ಕೆ ಡಿಸಿಪಿ ನಾರಾಯಣ್ ಬರಮನಿ, ಖಡೇಬಜಾರ್ ಎಸಿಪಿ ಹಾಗೂ ಟಿಳಕವಾಡಿ ಸಿಪಿಐ ಭೇಟಿ ನೀಡಿದರು.

ಅತಿಯಾದ ಜನದಟ್ಟಣೆ ಮತ್ತು ಗದ್ದಲ ನಿಯಂತ್ರಿಸಲು ಪೊಲೀಸರು ಅನಿವಾರ್ಯವಾಗಿ ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಲು ಹರಸಾಹಸ ಪಡಬೇಕಾಯಿತು.

ಜನಸಾಗರ ನಿಯಂತ್ರಿಸಲು ಮತ್ತು ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಶ್ರಮಿಸುತ್ತಿರುವುದು ಕಂಡುಬಂದಿತು.

ಮಂಗಗಳ ಕಾಟಕ್ಕೆ ಬೇಸತ್ತ ಜಡ್ರಾಮಕುಂಟಿ ಗ್ರಾಮಸ್ಥರು



ಬಾಗಲಕೋಟೆ: ತಾಲೂಕಿನ ಜಡ್ರಾಮಕುಂಟಿ ಗ್ರಾಮದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿದ್ದು, ಗ್ರಾಮಸ್ಥರು ಜೀವ ಭಯದಲ್ಲಿ ದಿನ ಕಳೆಯುವಂತಾಗಿದೆ.

ಮನೆ ಅಂಗಳದಲ್ಲಿ, ಮಾಳಿಗೆ ಮೇಲೆ ತಂಡೋಪ ತಂಡವಾಗಿ ಬರುವ ಮಂಗಗಳು ಮನೆಯ ಚಾವಣಿ, ಕಬ್ಬಿಣದ ಶೀಟ್‌ಗಳ ಮೇಲೆ ತಮ್ಮ ಉಪಟಳ ಆರಂಭಿಸುತ್ತಿವೆ. ಮನೆ ಒಳಗಡೆಯೂ ನುಗ್ಗಿ ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು ಹೋಗುವ ಸಂದರ್ಭದಲ್ಲಿ ಅಡ್ಡಗಟ್ಟಲು ಮುಂದಾದರೆ ಮೈಮೇಲೆ ಎರಗುತ್ತಿವೆ. ಇದರಿಂದ ಮಹಿಳೆಯರು, ಮಕ್ಕಳು, ವೃದ್ಧರು ಹಾಗೂ ಸಾರ್ವಜನಿಕರು ಭಯಭೀತರಾಗಿದ್ದಾರೆ.

ಕಳೆದ ಎರಡ್ಮೂರು ದಿನಗಳಿಂದ ಮಂಗವೊಂದರ ಉಪಟಳ ಹೆಚ್ಚಾಗಿದ್ದು, ಈಗಾಗಲೇ ಎಂಟತ್ತು ಜನರ ಮೇಲೆ ಮಂಗ ದಾಳಿ ನಡೆಸಿರುವುದು ಈ ಆತಂಕಕ್ಕೆ ಕಾರಣವಾಗಿದೆ. ಚಿಕ್ಕ ಮಕ್ಕಳು, ವೃದ್ಧರು, ಮಹಿಳೆಯರ ಮೇಲೆ ಮಂಗವೊಂದು ದಾಳಿ ನಡೆಸಿದ್ದು, ಗಂಭೀರವಾಗಿ ಗಾಯಗೊಂಡವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಂದು ವಾರದ ಹಿಂದೆ 8 ವರ್ಷದ ಸಾನ್ವಿ ತಮ್ಮಣ್ಣ ಮಸೂತಿ, ಮುತ್ತಪ್ಪ ಸಿದ್ದಪ್ಪ ಮೇಟಿ(64), ಸೃಷ್ಟಿ ಪರಸಪ್ಪ ತೇಜಿ(11), ಭವಾನಿ ಬಸಪ್ಪ ಕಂಬಾರ(7), ಮಲ್ಲವ್ವ ಆಕಳವಾಡಿ(70), ಮಂಜುನಾಥ ಮಾದರ(12), ಶಾಂತಾ ಹನುಮಂತ ಬಿಂಗಿ(11), ಬೊಮ್ಮವ್ವ ತುಂಬರಮಟ್ಟಿ(11) ಸೇರಿದಂತೆ ಇನ್ನೂ ಹತ್ತು-ಹಲವು ಜನರ ಮೇಲೆ ದಾಳಿ ನಡೆಸಿದ ಮಂಗ, ಅವರ ಕಾಲಿಗೆ ಕಚ್ಚಿದ್ದರಿಂದ ವೃದ್ಧರ ಕಾಲಿನಿಂದ ತೀವ್ರ ರಕ್ತಸ್ರಾವವಾಗಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಕೂಡಲೇ ಅರಣ್ಯ ಇಲಾಖೆ ಸಿಬ್ಬಂದಿ, ಪಂಚಾಯತ್ ಇಲಾಖೆಯವರು ಹಾಗೂ ಚುನಾಯಿತ ಪ್ರತಿನಿಧಿಗಳು ಇತ್ತ ಗಮನ ಹರಿಸಿ ಮಂಗವನ್ನ ಹಿಡಿದು ಕಾಡಿಗೆ ಬಿಡಬೇಕು ಎಂದು ಜಡ್ರಾಮಕುಂಟಿ ಗ್ರಾಮದ ತಮ್ಮಣ್ಣ ಮಸೂತಿ, ಬೀರಪ್ಪ ಮೇಟಿ, ಯಲ್ಲಪ್ಪ ಮಾಗಿ, ಪರಸಪ್ಪ ತೇಜಿ, ಕುಮಾರ ಕೋಟಿ, ದಾವಲ್ ಸಾಬ್ ನದಾಫ್, ಪರಸುರಾಮ ನುಗ್ಗಲಿ ಸೇರಿದಂತೆ ಊರಿನ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಖಾಸಗಿ ಬಸ್ ಪಲ್ಟಿ: 20 ಜನರಿಗೆ ಗಾಯ



ಹೊನ್ನಾವರ: ತಾಲೂಕಿನ ರಾಷ್ಟ್ರೀಯ ಹೆದ್ದಾರಿ 69ರ ಅಳ್ಳಂಕಿಯ ಪ್ಯಾಕ್ಟರಿ ಸಮೀಪ ಶ್ರೀಕುಮಾರ ಸಂಸ್ಥೆಗೆ ಸೇರಿದ ಖಾಸಗಿ ಬಸ್ ಪಲ್ಟಿಯಾಗಿ 20 ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಡೆದಿದೆ.

ಭಟ್ಕಳದಿಂದ ಬೆಂಗಳೂರಿಗೆ ಹೋಗಲು ಹೊನ್ನಾವರ ಕಡೆಯಿಂದ ಸಾಗರ ಕಡೆಗೆ ರಾಷ್ಟ್ರೀಯ ಹೆದಾರಿ-69ರಲ್ಲಿ ಬಸ್ ಚಾಲಕನು ಅತಿವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ತಾಲೂಕಿನ ಅಳ್ಳಂಕಿ ಪ್ಯಾಕ್ಟರಿ ಕ್ರಾಸ್ ಹತ್ತಿರ, ರಸ್ತೆಯ ತಿರುವಿನಲ್ಲಿ, ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿ 20 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಬಸ್ಸಿನಲ್ಲಿದ್ದ ಗುಂಡಬಾಳದ ಸುರೇಶ ಕನ್ಯಾ ಗೌಡ, ಆಶಾ ಸುರೇಶ ಗೌಡ, ಭೂಮಿ ಸುರೇಶ ಗೌಡ, ಒಂದೇ ಕುಟುಂಬದವರಾಗಿದ್ದು, ಮೂವರಿಗೂ ಗಂಭೀರ ಗಾಯಗೊಂಡಿದ್ದಾರೆ. ಇನ್ನುಳಿದವರಿಗೆ ತಾಲೂಕಿನ ವಿವಿಧ ಆಸ್ಪತ್ರೆ ಚಿಕಿತ್ಸೆ ನೀಡಲಾಗುತ್ತಿದೆ. ಭಟ್ಕಳದಿಂದ ಬೆಂಗಳೂರಿಗೆ ಹೊರಟಿದ್ದ ಬಸ್ಸಿನಲ್ಲಿ ಒಟ್ಟು 29 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಅಪಘಾತಕ್ಕೆ ಕಾರಣವಾದ ಬಸ್ ಚಾಲಕ ಗಿರೀಶ್ ನಾಯ್ಕ ಮೇಲೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ಹತ್ಯೆ ಪ್ರಕರಣ: ಬಾಲಕ ಪೊಲೀಸ್ ವಶಕ್ಕೆ

ಬಳ್ಳಾರಿ: ನಗರದ ಗುರುಕುಲ ಶಾಲೆಯಲ್ಲಿ ಸಹಪಾಠಿಗಳು ಹಾಗೂ ಸಿಬ್ಬಂದಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ವಿದ್ಯಾರ್ಥಿಯೊಬ್ಬ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳದಿಂದ ಪರಾರಿಯಾಗಿದ್ದ ಬಾಲಕನನ್ನು ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ನಗರದ ರೂಪನಗುಡಿ ರಸ್ತೆಯ ಗಂಗಪ್ಪ ಜಿನ್ ಬಳಿ ಸೋಮವಾರ ಸಂಜೆ ಪೊಲೀಸರು ವಶಕ್ಕೆ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಗರದ ಗುರುಕುಲ ಖಾಸಗಿ ವಿದ್ಯಾ ಸಂಸ್ಥೆಯ ಹಾಸ್ಟೆಲ್‌ನಲ್ಲಿ ವಾಸವಾಗಿದ್ದ ಮಕ್ಕಳಲ್ಲಿ 15 ವರ್ಷದ ವಿದ್ಯಾರ್ಥಿಯೊಬ್ಬ 7 ವಿದ್ಯಾರ್ಥಿಗಳು ಸೇರಿದಂತೆ ಸಿಬ್ಬಂದಿಯೊಬ್ಬರ ಮೇಲೆ ಹಲ್ಲೆ ಪರಾರಿಯಾಗಿದ್ದನು. ಘಟನೆಯಲ್ಲಿ 15 ವರ್ಷದ ಬಾಲಕನೊಬ್ಬನು ಮೃತಪಟ್ಟಿದ್ದು, ಈ ಕುರಿತು ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಘಟನೆ ಬಳಿಕ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಪರಾರಿಯಾಗಿದ್ದನು.

ಈತನ ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ನಗರದ ರೂಪನಗುಡಿ ರಸ್ತೆಯ ಗಂಗಪ್ಪ ಜಿನ್ ಬಳಿ ಬಾಲಕನನ್ನು ವಶಕ್ಕೆ ಪಡೆಯುವಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ತಿಳಿಸಿದ್ದಾರೆ.

ಜೆಜೆ ಕಾಯ್ದೆ 2015ರ ಕಲಂ 2(33) ಅನ್ವಯ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಅಪರಾಧ ವ್ಯಸಗಿದ್ದಾನೆ. ಕಾನೂನಿನನ್ವಯ ಪ್ರಕರಣದ ನೈಜತೆಯನ್ನು ಅರಿಯಲು ಸಮಗ್ರವಾಗಿ ಎಲ್ಲ ಆಯಾಮಗಳಿಂದ ತನಿಖೆ ನಡೆಸಲು ತನಿಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಘಟನೆ ನಡೆದ ಶಾಲೆಯ ಆಡಳಿತ ಮಂಡಳಿಗೆ ಶಾಲೆ ಹಾಗೂ ಹಾಸ್ಟೆಲ್ ನಡೆಸಲು ಕಾನೂನಾತ್ಮಕವಾಗಿ ಪರವಾನಿಗೆ ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಈಗಾಗಲೇ ನೋಟಿಸ್ ನೀಡಲಾಗಿದೆ. ಶಾಲೆಯು ಕಾನೂನು ಬದ್ಧವಾಗಿ ಪರವಾನಿಗೆ ಪಡೆದಿದೆಯೇ ಎಂದು ಪರಿಶೀಲನೆ ನಡೆಸಲು ಜಿ.ಪಂ.ಸಿಇಒ ಅವರೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

ಬೋನಿಗೆ ಬಿದ್ದ ಚಿರತೆ



ಜಮಖಂಡಿ: ಕಳೆದ ವರ್ಷ 2025ರ ಏಪ್ರಿಲ್‌ದಿಂದ ಇಲ್ಲಿಯವರೆಗೆ ತಾಲೂಕಿನಾದ್ಯಂತ ರೈತರ ನಿದ್ದೆಗೆಡಸಿದ್ದ ಚಿರತೆ ಸೋಮವಾರ ಅರಣ್ಯ ಅಧಿಕಾರಿಗಳ ಬೋನಿಗೆ ಸೆರೆಯಾಗಿದೆ. ಇದರಿಂದ ರೈತರು ಮತ್ತು ಸಾರ್ವಜನಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ತಾಲೂಕಿನ ಜಂಬಗಿ ಕೆಡಿ ಸೇರಿ ಇನ್ನಿತರ ಸ್ಥಳಗಳಲ್ಲಿ ರಾತ್ರಿ ಹೊತ್ತು ತಿರುಗಾಡುವುದಕ್ಕೂ ಸಹ ಜನರು ಹೆದರುತ್ತಿದ್ದರು. ಅನೇಕ ಬಾರಿ ಅರಣ್ಯ ಇಲಾಖೆಗೆ ಮನವಿ ಮಾಡಿದ್ದರೂ ಸಹ ಚಿರತೆ ಮಾತ್ರ ನಾಪತ್ತೆಯಾಗುತ್ತಿತ್ತು. ಕಳೆದ ದಿನದಿಂದ ತಾಲೂಕಿನ ಅನೇಕ ಸ್ಥಳಗಳಲ್ಲಿ ಚಿರತೆಯ ಹೆಜ್ಜೆ ಗುರುತು ಹಿಡಿದ ಅರಣ್ಯ ಇಲಾಖೆ ಸಿಬ್ಬಂದಿ ಅದರ ಚಲನವಲನ ಗಮನಿಸಿ ಸಿಸಿ ಟಿವಿ ಕಣ್ಗಾವಲು ಮತ್ತು ಬೋನ್ ಬಳಸಿದ್ದರು. ಅದರ ಜೊತೆಗೆ ಜನತೆಗೆ ಎಚ್ಚರಿಕೆ ಸಹ ನೀಡಿದ್ದರು. ಮಾ.8ರಂದು ಕೆಡಿ ಜಂಬಗಿ ಗ್ರಾಮದ ಸುರೇಶ ಮಲಕನ್ನವರ ಅವರ ತೋಟದಲ್ಲಿ ಮತ್ತೆ ಚಿರತೆಯ ಚಲನವಲನಗಳು ಕಂಡು ಬಂದ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿತ್ತು.

ಸುದ್ದಿ ತಿಳಿದ ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬೋನ್ ಅಳವಡಿಸಿದ್ದರಿಂದ ಬೆಳಗಿನ ಜಾವ ಚಿರತೆ ಬೋನಿನಲ್ಲಿ ಬಿದ್ದಿರುವ ಅಧಿಕೃತ ಮಾಹಿತಿಯನ್ನು ಎಸಿಎಫ್ ಪ್ರದೀಪ ರಾಠೋಡ್ ನೀಡಿದ್ದಾರೆ. ಆರ್‌ಎಫ್‌ಒ ಕಿರಣ ದಾಸರೆಡ್ಡಿ, ಡಿವೈಆರ್‌ಎಫ್ ಒಗಳಾದ ಎ.ಬಿ.ಕುಂಬಾರ, ವಿನೋದ ಜೈನಾಪುರ, ಪ್ರವೀಣ ಆದಗೊಂಡ, ಬೀಟ್ ಫಾರೆಸ್ಟ್ ಗಾರ್ಡ್ ಪ್ರಕಾಶ ಕರವಾಳಿ ಹಾಗೂ ಸಿಬ್ಬಂದಿ ನಾಗವೇಣಿ ಹೊಸಮನಿ, ಶ್ರೀದೇವಿ ಪಡೆಪ್ಪಗೋಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪೋಕ್ಸೋ ಪ್ರಕರಣ: ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕಾರ

ಯಾದಗಿರಿ: ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ್ದ ಆರೋಪದ ಮೇಲೆ ಪೋಕ್ಸೋ ಪ್ರಕರಣದಡಿ ಆರೋಪಿಯಾಗಿರುವ ಮಹಲ್ ರೋಜಾದ ಪವಾ ಡ ಪುರುಷ ಖ್ಯಾತಿಯ ಮಲ್ಲಿಕಾರ್ಜುನ ಮುತ್ಯಾ ಜಾಮೀನು ಅರ್ಜಿಯನ್ನು ಇಲ್ಲಿನ ಜಿಲ್ಲಾ ನ್ಯಾಯಾಲಯ ವಜಾಗೊಳಿಸಿದೆ.



ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದ ಮುತ್ಯಾ ಪರ ವಕೀಲರ ಮತ್ತು ಸರ್ಕಾರಿ ವಕೀಲರ ವಾದ ಆಲಿಸಿದ ನ್ಯಾಯಾಲಯ ಅರ್ಜಿ ತಿರಸ್ಕರಿಸಿ ತೀರ್ಪು ನೀಡಿದೆ. ಇದು ಮುತ್ಯಾ ಮತ್ತು ಭಕ್ತರಿಗೆ ತೀವ್ರ ಶಾಕ್ ಹೊಡೆದಂತಾಗಿದೆ.ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತ ವರ್ತನೆಮಾಡಿದ್ದಕಾರಣ ಮುತ್ಯಾ ವಿರುದ್ಧಗೋಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕೇಸ್ ದಾಖಲಾಗಿತ್ತು. ಸೋಮವಾರ ಜಾಮೀನು ಸಿಗುವ ವಿಶ್ವಾಸದಲ್ಲಿ ಇದ್ದ ಮುತ್ಯಾಗೆ ಭಾರೀ ಆಘಾತವಾಗಿದೆ. ಮಾ.5ರಂದು ಮುತ್ಯಾಗೆ ಶಹಾಪುರದಲ್ಲಿ ವೈದ್ಯಕೀಯ ತಪಾಸಣೆ ನಡೆಸಿದ್ದ ಪೊಲೀಸರು ಸುದೀರ್ಘ ಗಂಟೆಗಳ ಕಾಲ ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ತನಿಖಾಧಿಕಾರಿ ಶರಣಗೌಡ ನ್ಯಾಮಣ್ಣನವರ ಮುತ್ಯಾನ ಮೊಬೈಲ್ ಜಪ್ತಿ ಮಾಡಿದ್ದರು.

ಅಪ್ರಾಪ್ತ ಬಾಲಕಿಯೊಂದು ಅಪೇಕ್ಷಾರ್ಹ ರೀತಿಯಲ್ಲಿ ಸ್ಪರ್ಶಿಸಿದ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು ಪರ, ವಿರೋಧ ಚರ್ಚೆಗೆ ಕಾರಣವಾಗಿತ್ತು. ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಹಾಗೂ ಮಹಿಳಾ ಆಯೋಗಗಳು ಮುತ್ಯಾನ ವಿರುದ್ಧ ಸ್ವಯಂ ಪ್ರಕರಣ ದಾಖಲಿಸಿಕೊಂಡಿವೆ.

ಹೈಕೋರ್ಟ್ ಮೊರೆ ಹೋಗಲು ಸಿದ್ಧತೆ?

ಯಾದಗಿರಿ ಜಿಲ್ಲಾ ನ್ಯಾಯಾಲಯ ಮುತ್ಯಾನ ಅರ್ಜಿ ತಿರಸ್ಕಾರ ಮಾಡಿದ್ದು, ಸದ್ಯ ಅವರಿಗೆ ಬಂಧನದ ಭೀತಿ ಎದುರಾಗಿದೆ. ಪೋಕ್ಸೋ ಪ್ರಕರಣ ದಾಖಲಾಗುತ್ತಿದ್ದಂತೆ ಮಠದಿಂದ ಅಜ್ಞಾತ ಸ್ಥಳದಲ್ಲಿದ್ದ ಮುತ್ಯಾ, ಪೊಲೀಸರು ನೀಡಿದ್ದ ಎರಡನೇ ನೋಟಿಸ್ ಗೆ ಹಾಜರಾಗಿ ವಿಚಾರಣೆ ಎದುರಿಸಿದ್ದರು. ಇದೀಗ ಮುತ್ಯಾ ಪರ ವಕೀಲರು ಜಿಲ್ಲಾ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಕಲಬುರಗಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೊರೆ ಹೋಗಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ರಾಜಕೀಯ ತಿರುವು ಪಡೆದ ಪ್ರಕರಣ

ಇನ್ನೂ ಮಲ್ಲಿಕಾರ್ಜುನ ಮುತ್ಯಾ ಮೇಲೆ ಕೇಸ್ ಹಾಕಿದ್ದು ರಾಜಕೀಯವಾಗಿ ಕೆಲವರು ಬಳಸಿಕೊಂಡಿದ್ದರು. ಮುತ್ಯಾನ ಪರವಾಗಿ ಆತನ ಭಕ್ತರು ಕಲಬುರಗಿ, ಯಾದಗಿರಿಯಲ್ಲಿ ಪ್ರತಿಭಟನೆ ನಡೆಸಿ, ಆಯೋಗಗಳ ವಿರುದ್ಧವೇ ಕಿಡಿಕಾರಿದ್ದರು. ಇದು ಸಹ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆದಿತ್ತು. ಅಜ್ಞಾತ ಸ್ಥಳದಿಂದಲೇ ವಿಡಿಯೋ ಹೇಳಿಕೆ ಕೊಟ್ಟಿದ್ದ ಮುತ್ಯಾ ಭಕ್ತರು ಆತಂಕ ಪಟ್ಟುಕೊಳ್ಳದಂತೆ ಮನವಿ ಮಾಡಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಹಳಿಯಾಳ: ತಾಲೂಕಿನ ವಿವಿಧೆಡೆ ತುರ್ತು ನಿರ್ವಹಣೆ ಇರುವುದರಿಂದ 110/11 ಕೆ.ವಿ. ವಿದ್ಯುತ್ ವಿತರಣಾ ಉಪಕೇಂದ್ರ ಕಾವಲವಾಡದಲ್ಲಿ ಮತ್ತು ಬೆಳವಟಗಿ, ಜನಗಾ, ಮುರ್ಕವಾಡ, ಮತ್ತು ತಟ್ಟಿಗೇರಾ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುಂತೆ ಹೆಸ್ಕಾಂನ ಎಇಇ ದೀಪಕ.ಎನ್.ನಾಯಕ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಾ.10ಕ್ಕೆ ಲಸಿಕಾ ಅಭಿಯಾನ

ಬನವಾಸಿ: 14 ವರ್ಷದ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ (ಗರ್ಭಕಂಠದ ಕ್ಯಾನ್ಸರ್ ತಡೆಯಲು) ನೀಡುವ ವಿಶೇಷ ಅಭಿಯಾನವನ್ನು ಮಾ.10ರಿಂದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೀಡಲಾಗುವುದು ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಜಯಶ್ರೀ ಹೆಗಡೆ ತಿಳಿಸಿದರು. ಈ ಕುರಿತು ಮಾಹಿತಿ ನೀಡಿದ ಅವರು, ಭಾರತೀಯ ಮಹಿಳೆಯರಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಎರಡನೆಯದಾಗಿದೆ. ಹೆಣ್ಣುಮಕ್ಕಳನ್ನು ಇದರಿಂದ ರಕ್ಷಿಸುವ ಉದ್ದೇಶದಿಂದ ವರ್ಷಗಟ್ಟಲೆ ಲಸಿಕೆಯ ಪರೀಕ್ಷೆ ನಡೆಸಿದ್ದ ಕೇಂದ್ರ ಸರ್ಕಾರ ಲಸಿಕೆ ಅಭಿಯಾನ ಆರಂಭಿಸಲು ಮುಂದಾಗಿದ್ದು, ಮಾ.10ರಂದು ಇಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬೆಳಗ್ಗೆ 10 ಗಂಟೆಯಿಂದ ಲಸಿಕೆ ಹಾಕುವ ಕಾರ್ಯಕ್ರಮ ಕೈಗೊಳ್ಳಲಾಗುವುದು. ಇದೊಂದು ವಿಶೇಷ ಲಸಿಕಾ ಅಭಿಯಾನವಾಗಿದ್ದು, 14ವರ್ಷದ ಹೆಣ್ಣುಮಕ್ಕಳ ಜನನ ಪ್ರಮಾಣಪತ್ರ, ಆಧಾರ್ ಅಥವಾ ಪಡಿತರ ಚೀಟಿಯಂತಹ ಸರ್ಕಾರಿ ಗುರುತಿನ ಚೀಟಿಯ ಮೇಲೆ ನಮೂದಾಗಿರುವ ಜನ್ಮ ದಿನಾಂಕದ ಆಧಾರದಲ್ಲಿ ವಯಸ್ಸನ್ನು ನಿರ್ಧರಿಸಿ ಈ ಲಸಿಕೆಯನ್ನು ವಿತರಿಸಲಾಗುತ್ತದೆ. ಸಾರ್ವಜನಿಕರು ಈ ಲಸಿಕಾ ಅಭಿಯಾನದ ಸದುಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಮಾ.11ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಶಿರಸಿ: ನಗರ ಹಾಗೂ ಗ್ರಾಮೀಣ ಭಾಗದ ಜನರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಮಾ.11ರಂದು ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಸ್ಕೊಡ್‌ವೆಸ್ ಸಂಸ್ಥೆ ಶಿರಸಿ, ರೋಟರಿ ಕ್ಲಬ್ ಶಿರಸಿ, ದೇಸಾಯಿ ಫೌಂಡೇಶನ್ ಟ್ರಸ್ಟ್ ಗುಜರಾತ್, ನಾರಾಯಣ ಹೆಲ್ತ್ ಶಿವಮೊಗ್ಗ ಹಾಗೂ ಐಎಂಎ, ಶಿರಸಿ ಇವರ ಸಂಯುಕ್ತ ಆಶ್ರಯದಲ್ಲಿ ಈ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಪ್ರಸಿದ್ಧ ತಜ್ಞ ವೈದ್ಯರು ಭಾಗವಹಿಸಲಿದ್ದು, ಸ್ತ್ರೀ ರೋಗ, ಹೃದಯರೋಗ, ಚರ್ಮರೋಗ, ಉದರ ರೋಗ, ಕ್ಯಾನ್ಸರ್ ರೋಗ, ಮಧುಮೇಹ, ರಕ್ತದೊತ್ತಡ, ಮನೋರೋಗ, ಎಲುಬು ತಪಾಸಣೆ, ದಂತ ತಪಾಸಣೆ, ಮಕ್ಕಳ ತಪಾಸಣೆ, ನೇತ್ರ ತಪಾಸಣೆ, ಸಾಮಾನ್ಯ ವೈದ್ಯಕೀಯ ತಪಾಸಣೆ ನಡೆಯಲಿದ್ದು, ಉಚಿತ ಔಷಧಗಳ ವಿತರಣೆ ಮಾಡಲಾಗುವುದು. ಅಲ್ಲದೇ ಆರೋಗ್ಯ ಸಲಹೆ, ಮಾರ್ಗದರ್ಶನ ನೀಡುವುದಲ್ಲದೇ ಹೆಚ್ಚಿನ ಚಿಕಿತ್ಸೆಯ ಅಗತ್ಯವಿರುವವರಿಗೆ ಮುಂದಿನ ಚಿಕಿತ್ಸೆಯ ಕುರಿತು ಮಾರ್ಗದರ್ಶನ ನೀಡಲಾಗುವುದು ಎಂದು ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ವೆಂಕಟೇಶ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62289	71719
ಬಿಳಿಗೋಟು	25699	39681
ಕೆಂಪುಗೋಟು	22118	38618
ಬೆಟ್ಟೆ	40005	51099
ರಾಶಿ	49210	53811
ಚಾಲಿ	43099	47599
ಬಿ.ಕಾಳುಮೆಣಸು	86500	86500

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60509	63599
ರಾಶಿ	40016	58799
ಬೆಟ್ಟೆ	36429	52119
ಕೆಂಪುಗೋಟು	16099	37415
ಬಿಳಿಗೋಟು	18012	41009
ಚಾಲಿ	39109	47599
ಚಾಲಿ ಹೊಸದು	49211	49878
ಕೋಕಾ	13000	32699
ಕಾಳುಮೆಣಸು	51199	68009



ಗೋಕರ್ಣ: ನಾಡುಮಾಸ್ಕೇರಿ ಗ್ರಾಪಂ ವ್ಯಾಪ್ತಿಯ ಗಂಗೆಕೊಳ್ಳದ ಕಡಲತೀರದಲ್ಲಿ ಸರ್ಕಾರಿ ಜಾಗದಲ್ಲಿ ಕಟ್ಟಿದ ಹೊಟೇಲ್, ರೆಸಾರ್ಟಗಳನ್ನ ಸ್ವತಃ ಮಾಲಕರೇ ಸೋಮವಾರ ತೆರವುಗೊಳಿಸುವ ಮೂಲಕ ಸರ್ಕಾರದ ಆದೇಶವನ್ನ ಗೌರವಿಸಿ ಮಾದರಿಯಾಗಿದ್ದಾರೆ.

ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ

ಹೊನ್ನಾವರ: ತಾಲೂಕಿನ ಮಂಕಿ ತಾಳಮಕ್ಕಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ನೇತೃತ್ವದಲ್ಲಿ ದುರ್ಗಾದೇವಿ ಮತ್ತು ದುರ್ಗಾ ಪರಮೇಶ್ವರಿ ಮಾತೃ ಮಂಡಳಿ ತಾಳಮಕ್ಕಿ ಇವರ ಸಹಕಾರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಅರಿವು ಕಾರ್ಯಕ್ರಮ ನಡೆಯಿತು.ಜಿಲ್ಲಾ ಯೋಜನಾ ಸಮಿತಿ ಸದಸ್ಯರು ಹಾಗೂ ಪಪಂ ಸದಸ್ಯ ಉಲ್ಲಾಸ .ಎ. ನಾಯ್ಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಿಕ್ಷಕ ಉಮೇಶ್ ನಾಯ್ಕ ಮಹಿಳಾ ಸಂಘಟನೆ ಮತ್ತು ಕಾರ್ಯಕ್ರಮದ ಮಹತ್ವದ ಕುರಿತು ಉಪನ್ಯಾಸ ನೀಡಿದರು. ಪಪಂ ಸದಸ್ಯೆ ಉಷಾ.ಕೆ.ನಾಯ್ಕ ಮಾತನಾಡಿ, ಮಹಿಳೆಯರು ಪರಿಣಾಮಕಾರಿಯಾಗಿ ಎಲ್ಲಾ ರಂಗದಲ್ಲಿಯೂ ಕೆಲಸ ನಿರ್ವಸಲು ಶಕ್ತಳು ಎಂದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪುಟ್ಟೇ ಗೌಡ, ತಾಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಣ್ಣಪ್ಪ.ಎಮ್.ನಾಯ್ಕ ಮಾತನಾಡಿದರು. ಗ್ಯಾರಂಟಿ ಸಮಿತಿ ಸದಸ್ಯರಾದ ಕೃಷ್ಣ ನಾಯ್ಕ ಮಾರಿಮನೆ, ಮಾರುತಿ ಮೊಗೇರ್, ಮಾತೃ ಮಂಡಳಿ ಅಧ್ಯಕ್ಷ ಮಂಗಲಾ.ಡಿ.ನಾಯ್ಕ, ವಸಂತಿ ಆರ್.ನಾಯ್ಕ, ಶಿಕ್ಷಕರಾದ ಅಣ್ಣಪ್ಪ ಜಿ ನಾಯ್ಕ, ಅಂಬಿಕಾ ಎ.ನಾಯ್ಕ, ಮಹಿಳಾ ಫಲಾನುಭವಿಗಳು, ಮಾತೃ ಮಂಡಳಿ ಹಾಗೂ ಸ್ವಸಹಾಯ ಗುಂಪಿನ ಸದಸ್ಯರು ಸಾರ್ವಜನಿಕರು ಇದ್ದರು.ಮಹಿಳೆಯರಿಗೆ ರಂಗೋಲಿ ಮತ್ತು ಸಂಗೀತ ಕುರ್ಚಿ ಸ್ಪರ್ಧೆ ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ವಿಜೇತ ಮಂಜುನಾಥ ಸ್ಪೋರ್ಟ್ಸ್ ಕ್ಲಬ್ ಮಹಿಳಾ ಸದಸ್ಯರನ್ನು ಸನ್ಮಾನಿಸಲಾಯಿತು.ಶಿಕ್ಷಕ ಅಣ್ಣಪ್ಪ ಜಿ ನಾಯ್ಕ ನಿರ್ವಸಿದರು.



ಹೊನ್ನಾವರ: ಮಾ.27ರಿಂದ ಒಂದು ವಾರ ಕಾಲ ತಾಲೂಕಿನ ಬಂಗಾರಮಕ್ಕಿ ಕ್ಷೇತ್ರದಲ್ಲಿ ನಡೆಯಲಿರುವ ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ 2026ರ ಲೋಗೋವನ್ನು ಕ್ಷೇತ್ರದ ಧರ್ಮದರ್ಶಿಗಳಾದ ಮಾರುತಿ ಗುರೂಜಿ ಬಿಡುಗಡೆ ಮಾಡಿದರು. ಎ.2ವರೆಗೆ ನಡೆಯಲಿರುವ ಈ ಉತ್ಸವದಲ್ಲಿ ಪ್ರತಿ ದಿನವೂ ಸಮಾವೇಶಗಳು, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದು ಶ್ರೀಗಳು ತಿಳಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಅಸಮರ್ಪಕ ವಿದ್ಯುತ್ ಪೂರೈಕೆ ಖಂಡಿಸಿ ರೈತರ ಪ್ರತಿಭಟನೆ

ಮುಂಡಗೋಡ: ತಾಲೂಕಿನ ಪಾಳಾ ಮಳಗಿ ಬೆಡಸಗಾಂವ ಗ್ರಾಪಂ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗದಿರುವುದ್ದರಿಂದ ರೈತರ ಬೆಳೆಗಳು ಒಣಗುತ್ತಿದ್ದು, 24ಗಂಟೆ ವಿದ್ಯುತ್ ನೀಡಬೇಕೆಂದು ಸೋಮವಾರ ಈ ಭಾಗದ ರೈತರು ಮಳಗಿ ಗ್ರಾಮದ ಶಿರಸಿ–ಹುಬ್ಬಳ್ಳಿಯ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮಳಗಿ, ಕೊಡಂಬಿ, ಪಾಳಾ ಮತ್ತು ಬೆಡಸಗಾಂವ ಪಂಚಾಯತವ್ಯಾಪ್ತಿಯ ಭಾಗದಲ್ಲಿಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ, ಕೃಷಿಯನ್ನೇ ನಂಬಿರುವ ರೈತ ಕುಟುಂಬಗಳು ಬೀದಿ ಪಾಲಾಗುವ ಸ್ಥಿತಿ ಬಂದೊದಗಿದೆ. ನಿತ್ಯವೂ ಹತ್ತಾರು ಬಾರಿ ವಿದ್ಯುತ್ ಕಡಿತವಾಗುತ್ತದೆ. ಈ ಬಗ್ಗೆ ಕೇಳಿದರೆ ಹಾವೇರಿಯಿಂದ ವಿದ್ಯುತ್ ಹೋಗಿದೆ ಎಂದು ಹೇಳುತ್ತಾರೆ. ಯಾವಾಗ ಬರುತ್ತದೆ ಎಂದರೆ ಸಮಯ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಇದರಿಂದಾಗಿ ಹಲವಾರು ಬಾರಿ ಮೋಟಾರಗಳು ಸುಟ್ಟು ಹೋಗುತ್ತಿವೆ. ಮೊದಲೇ ಬೆಳೆ ಇಲ್ಲ, ಕೈಯಲ್ಲಿ ಹಣ ಇಲ್ಲ, ಸಾಲ ಸೋಲ ಮಾಡಿ ಕೊಳವೆ ಬಾವಿ ಕೊರೆಸಿದ್ದೇವೆ. ಬೆಳೆ ಬೆಳೆಯಲು ಸರಿಯಾಗಿ ವಿದ್ಯುತ್ ಪೂರೈಕೆಯಾಗದೆ ಜೀವನ ನಡೆಸುವುದೇ ಕಷ್ಟಕರವಾಗಿದೆ. ಹೀಗಾಗಿ ಹಾವೇರಿಯಿಂದ ಪೂರೈಕೆಯಾಗುವ ವಿದ್ಯುತನ್ನು ತಪ್ಪಿಸಿ ಶಿರಸಿಯಿಂದ ವಿದ್ಯುತ್ ಪೂರೈಕೆ ಮಾಡಬೇಕು.

ದಿನದ 24 ತಾಸುಗಳು ತ್ರಿಫೇಸ ಕೊಡಬೇಕು. ಅಲ್ಲದೆ ಲೈನ್‌ಮ್ಯಾನ್ ಕೊರತೆ ನೀಗಿಸಬೇಕೆಂದು ರೈತರು ಪ್ರಮುಖ ಬೇಡಿಕೆಯಾಗಿದೆ.

ವಿಷಯ ತಿಳಿದು ಹೆಸ್ಕಾಂ ಅಧಿಕಾರಿಗಳು, ತಹಶೀಲ್ದಾರ್ ಶಂಕರ ಗೌಡಿ, ಸಿಪಿಐ ರಂಗನಾಥ ನೀಲಮ್ಮನವರ ಪ್ರತಿಭಟನಾಕಾರರನ್ನು ರಸ್ತೆ ತಡೆ ನಡೆಸದಂತೆ ಮನವೊಲಿಸಲು ಮುಂದಾದರು. ಆದರೆ ಹೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಬಂದು ಭರವಸೆ ನೀಡುವವರಿಗೂ ಪ್ರತಿಭಟನೆ ಕೈ ನೀಡುವುದಿಲ್ಲವೆಂದು ಪಟ್ಟು ಹಿಡಿದರು.

ಹೆಸ್ಕಾಂ ಶಿರಶಿ ವಿಭಾಗದ ಇಇ ಸ್ಥಳಕ್ಕೆ ಬಂದು ರೈತರ ಅಹವಾಲು ಕೇಳಿದರು.

ಇವತ್ತಿನಿಂದಲೇ ವಿದ್ಯುತ ಕಡಿತಗೊಳಿಸುವುದಿಲ್ಲ, ಅಲ್ಲದೆ ರೈತರ ಸಮ್ಮುಖದಲ್ಲಿ ಪ್ರತಿ ತಿಂಗಳಿನ ಮೂರನೇ ಶನಿವಾರದಂದು ಮಳಗಿ ಪಂಚಾಯಿತಿಯಲ್ಲಿ ಶಿರಶಿಯ ಇಇ ನೇತೃತ್ವದಲ್ಲಿ ಸಭೆ ನಡೆಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ ಮೇಲೆ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು ಎಂದು ರೈತ ಮುಖಂಡ ಸತೀಶ ನಾಯ್ಕ ಹೇಳಿದರು.ರೈತ ಮುಖಂಡರಾದ ಸತೀಶ ನಾಯ್ಕ ಮುಖಂದ ನಾಯ್ಕ, ಮಾರುತಿ ಕಲ್ಲಹಕ್ಲ, ಗಣಪತಿ, ಪ್ರದೀಪ ಕಟ್ಲೇರ್, ನಿರಂಜನ ಪಾಟೀಲ, ವಿನಯ ಪಾಟೀಲ, ಚಂದ್ರುಗೌಡ ಪಾಟೀಲ, ಪ್ರವೀಳ ದವಳೆ, ಗುರುಮೂರ್ತಿ ನಾಯ್ಕ, ಶಂಕ್ರಪ್ಪ ಗಾಣಿಗೇರ ಸೇರಿದಂತೆ ರೈತರು ಇದ್ದರು.



ಅಧಿಕಾರಿಗಳ ಭರವಸೆ

24 ಗಂಟೆ ವಿದ್ಯುತ್ ಪೂರೈಕೆ ಮಾಡುತ್ತೇವೆ. ಜೊತೆಗೆ ಒಂದು ವರ್ಷದ ಒಳಗೆ ಮಳಗಿಯಲ್ಲಿಯೇ ಗ್ರಿಡ್ ನಿರ್ಮಿಸಿ ಶಿರಶಿಯಿಂದಲೇ ವಿದ್ಯುತ್ ಪೂರೈಕೆ ಮಾಡುವ ವ್ಯವಸ್ಥೆ ಮಾಡಲಾಗುವುದು. ಒಂದು ತಿಂಗಳಲ್ಲಿಯೇ ತಹಶೀಲ್ದಾರ್ ಮೂಲಕ ಒಂದು ಎಕರೆ ಜಮೀನಿ ಮಂಜೂರು ಮಾಡಿಸುವ ಪ್ರಯತ್ನ ಮಾಡುತ್ತೇವೆ.

ವಾಹನ ಸವಾರರ ಪರದಾಟ

ರೈತರು, ರಾಜ್ಯ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿರುವುದ್ದರಿಂದ ಶಿರಶಿ ಹುಬ್ಬಳ್ಳಿ ಮಾರ್ಗದ ಎರಡು ಬದಿ ಸಾಲುಗಟ್ಟಿ ವಾಹನುಗಳು ನಿಂತಿದ್ದವು.ಇದರಿಂದ ಪ್ರಯಾಣಿಕರು, ಚಾಲಕರು ಈ ಉರಿ ಬಿಸಿಲಿನಲ್ಲಿ ರಸ್ತೆ ಮಧ್ಯ ವಾಹನಗಳು ನಿಂತಿರುವುದ್ದರಿಂದ ಪ್ರಯಾಣಿಕರು ಪರದಾಡುವಂತಾಯಿತು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಾಳೆ ಪ್ರತಿಭಟನೆ

ದಾಂಡೇಲಿ: ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳ ಸಹಯೋಗದೊಂದಿಗೆ ಮಾ.11ರಿಂದ ಮಾ.15 ರವರೆಗೆ ಕಪ್ಪುಪಟ್ಟಿ ಧರಿಸಿ ಹೊರ ರೋಗಿ ಸೇವೆ ನೀಡದೇ, ಕೇವಲ ತುರ್ತು ಸೇವೆ ಮಾತ್ರ ಒದಗಿಸುವುದು ಹಾಗೂ ಮಾ.16ರಿಂದ ಅನಿರ್ದಿಷ್ಟಾವಧಿವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ವಿವಿಧ ಬೇಡಿಕೆಗಳ ಈಡೇರಿಕೆಗೆ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಅನಿಲ್ ಕುಮಾರ್ ನಾಯ್ಕ ಅವರ ನೇತೃತ್ವದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಸೋಮವಾರ ತಾಲೂಕು ಆಡಳಿತ ಸೌಧದಲ್ಲಿ ತಹಶೀಲ್ದಾರ್ ಶೈಲೇಶ್ ಪರಮಾನಂದ ಅವರಿಗೆ ಮತ್ತು ನಗರ ಠಾಣೆಯ ಪಿಎಸ್‌ಐ ಕಿರಣ್ ಪಾಟೀಲ್ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಮನವಿಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವಿವಿಧ ಬೇಡಿಕೆಗಳಾದ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಇಲಾಖೆಯಿಂದ ಔಷಧಿಗಳನ್ನು ಸರಬರಾಜು ಮಾಡದೆ ಇರುವುದು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಸರ್ಕಾರಿ ಆದೇಶವಿದ್ದರೂ, 1973ರಿಂದ ಈವರೆಗೆ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡದೇ ಇರುವುದು, ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಈವರೆಗೆ ಪ್ರಕಟಿಸದೇ ಇರುವುದು, ಇಲಾಖೆಯ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ಕಳೆದ ಐದು ವರ್ಷಗಳಿಂದ ಮುಂಬಡ್ತಿಗಳನ್ನು ನೀಡದೇ ಇರುವುದು, ಸ್ನಾತಕೋತ್ತರ ವ್ಯಾಸಂಗಕ್ಕೆ ಅವಕಾಶ ನೀಡದೇ ಇರುವುದು, ವರ್ಗಾವಣೆ ಕಾಯ್ದೆಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸದೆ ಅವೈಜ್ಞಾನಿಕವಾಗಿ ಕೌನ್ಸಿಲಿಂಗ್ ವರ್ಗಾವಣೆ ಮಾಡುತ್ತಿರುವುದು, ಅರೆ ವೈದ್ಯಕೀಯ ಹಾಗೂ ಇತರೆ ವೃಂದದ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ಮತ್ತು ಎನ್.ಹೆಚ್.ಎಂ ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಹಾಗೂ ಕಾಲಕಾಲಕ್ಕೆ ಸೂಕ್ತ ವೇತನ ಹೆಚ್ಚಳ ಮಾಡದೇ ಇರುವುದು ಹೀಗೆ ಮೊದಲಾದ ಸಮಸ್ಯೆಗಳಿದ್ದು, ಈ ಎಲ್ಲ ಸಮಸ್ಯೆಗಳನ್ನು ತ್ವರಿತವಾಗಿ ಸರಿಪಡಿಸಿ ವಿವಿಧ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿ ಈ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ. ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಅನಿಲ್ ಕುಮಾರ್ ನಾಯ್ಕ, ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಅಖಿಲ್ ಕಿತ್ತೂರು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ರೂಪಾ ತುರುಮರಿ, ಆರೋಗ್ಯ ಇಲಾಖೆಯ ಸವಿತಾ ಹೊನಗೇಕರ, ರಶೀದ್ ಸೈಯದ್ ಮತ್ತು ರಮೇಶ ಉಪಸ್ಥಿತರಿದ್ದರು.



ನೂತನ ಪಲ್ಲಕ್ಕಿ ಬಸ್‌ಗಳಿಗೆ ಚಾಲನೆ

ಕಾರವಾರ: ಕಾರವಾರದಿಂದ ಬೆಂಗಳೂರುಗೆ ತೆರಳುವ ನೂತನ ಪಲ್ಲಕ್ಕಿ ಬಸ್‌ಗಳಿಗೆ ಕಾರವಾರ ಬಸ್ ನಿಲ್ದಾಣದಲ್ಲಿ ಒಆಂ ಅಧ್ಯಕ್ಷರು ಹಾಗೂ ಶಾಸಕ ಸತೀಶ್ ಸೈಲ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಕಾರವಾರ ಜನತೆಯ ಬಹು ನಿರೀಕ್ಷಿತವಾಗಿದ್ದ ಬೆಂಗಳೂರುಗೆ ಸುಸಜ್ಜಿತ ಸರ್ಕಾರಿ ಬಸ್ ಸೌಲಭ್ಯವನ್ನು ಒದಗಿಸಲಾಗಿದ್ದು, ಇನ್ನು 2 ಹೆಚ್ಚುವರಿ ಪಲ್ಲಕ್ಕಿ ಬಸ್‌ಗಳನ್ನು ಮತ್ತು ಮಲ್ಟಿ ಆಕ್ಸೆಲ್ ವೋಲ್ವೋ ಬಸ್ ಸೌಲಭ್ಯವನ್ನು ಒದಗಿಸಲಾಗುವುದು ಎಂದರು.

ಶಕ್ತಿ ಯೋಜನೆಯು ಸಾರಿಗೆ ಸಂಸ್ಥಗೆ ಆರ್ಥಿಕ ಶಕ್ತಿ ಒದಗಿಸಿದ್ದು,

ಈ ವರ್ಷ ವಾಯುವ್ಯ ಕರ್ನಾಟಕ ಸಾರಿಗೆ ಉತ್ತರ ಕನ್ನಡ ವಿಭಾಗ 13 ಕೋಟಿ ಲಾಭವಾಗಿದೆ. ಇದಕ್ಕೆ ಮುಖ್ಯ ಕಾರಣ ಸಂಸ್ಥೆಯ ಚಾಲಕ ನಿರ್ವಾಹಕರು ಮತ್ತು ಕಾರವಾರಕ್ಕೆ 15 ಹೊಸ ಬಸ್ ಬಂದಿವೆ ಎಂದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ, ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ 'ಶಕ್ತಿ ಯೋಜನೆ'ಯ ಕುರಿತು ಮಾತನಾಡಿದ ಅವರು, ಸಾರಿಗೆ ಸಂಸ್ಥೆಗಳು ನಷ್ಟದಲ್ಲಿವೆ ಎಂಬ ಆರೋಪಗಳನ್ನು ಸಾರಾಸಗಟಾಗಿ ತಳ್ಳಿಹಾಕಿದರು. ನಮ್ಮ ಜಿಲ್ಲಾ ವಿಭಾಗವು ಈ ವರ್ಷ ಬರೋಬ್ಬರಿ 13 ಕೋಟಿ ರೂಪಾಯಿಗಳ ಲಾಭ ಗಳಿಸಿದೆ. ಈ ಸಾಧನೆಗೆ ಶ್ರಮವಹಿಸಿ ಕೆಲಸ ಮಾಡಿದ ವಿಭಾಗೀಯ ಅಧಿಕಾರಿಗಳು (ಡಿಸಿ), ಮ್ಯಾನೇಜರ್ ಹಾಗೂ ವಿಶೇಷವಾಗಿ ಚಾಲಕರು ಮತ್ತು ನಿರ್ವಾಹಕರು (ಕಂಡಕ್ಟರ್) ಕಾರಣೀಕರ್ತರು ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸರ್ಕಾರವು ಬಡಜನರಿಗಾಗಿ ಉಚಿತ ಯೋಜನೆಗಳನ್ನು ನೀಡಿದ್ದು, ನುಡಿದಂತೆ ನಡೆದಿದೆ ಮತ್ತು ಕೊಟ್ಟ ಆಶ್ವಾಸನೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಉಚಿತಪ್ರಯಾಣದಕುರಿತುಮಾತನಾಡಿದ ಅವರು, ಮಹಿಳಾ ಅಧಿಕಾರಿಗಳು ಅಥವಾ ಆರ್ಥಿಕವಾಗಿಸಬಲರಾಗಿರುವ ಮಹಿಳೆಯರು ಇಚ್ಛಿಸಿದರೆ ಸ್ವಯಂಪ್ರೇರಿತರಾಗಿ ಟಿಕೆಟ್ ಖರೀದಿಸಿ ಪ್ರಯಾಣಿಸಬಹುದು ಎಂದು ಸಲಹೆ ನೀಡಿದರು.

ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ರಾಜೇಂದ್ರ ರಾಣೆ, ಡಿಪೋ ಮೆನೇಜರ್ ಸೌಮ್ಯ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.



ಮಹಿಳೆಯರು ಆರೋಗ್ಯದ ಬಗ್ಗೆ ಗಮನಹರಿಸಲಿ

ಯಲ್ಲಾಪುರ: ಇಂದಿನ ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಂಚೂಣಿಯಲ್ಲಿದ್ದಾಳೆ. ಆದರೇ ಹೆಚ್ಚಿನ ಮಹಿಳೆಯರು ಮಾನಸಿಕ, ದೈಹಿಕ ಆರೋಗ್ಯದ ಕಾಳಜಿವಹಿಸದೆ ನಮ್ಮ ಶೋಷಣೆ ನಾವೇ ಮಾಡಿಕೊಳ್ಳುತ್ತಿದ್ದೇವೆ. ಹಾಗಾಗದಂತೆನಮಗೆ ನಾವೇ ಉತ್ತಮ ಕೊಡುಗೆಕೊಡುವದು ಎಂದರೆ ಆರೋಗ್ಯವೇ ಆಗಿದೆ ಎಂದು ತಾಲೂಕಸ್ಪತ್ರೆಯ ವೈದ್ಯೆ ಡಾ.ಸೌಮ್ಯ ಕೆ.ವಿ ಹೇಳಿದರು.

ಅವರು ಪಟ್ಟಣದ ಮಹಿಳಾ ಮಂಡಲ ಸಭಾಭವನದಲ್ಲಿ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರದಿಂದ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರಲ್ಲಿ ಖಿನ್ನತೆ ಎಂಬದು ಸಾಮಾನ್ಯವೆಂಬತೆ ಆಗಿದೆ. ಅದನ್ನು ಹೋಗಲಾಡಿಸಲು ಇಂತಹ ಕಾರ್ಯಕ್ರಮ ಮೂಲಕ ಭಾವನೆಗಳನ್ನು ಹಂಚಿಕೊಳ್ಳಿ. ಮೊಬೈಲ್, ಜಾಲತಾಣಗಳ ಗುಲಾಮರಾಗಬೇಡಿ. ಅವುಗಳನ್ನು ಜ್ಞಾನಾರ್ಜನೆಗೆ ಬಳಸಿಕೊಂಡು ಕೌಶಲ್ಯ ವೃದ್ಧಿಸಿಕೊಳ್ಳಿ ಎಂದರು.

ಕಾನಿಪ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿ ಪ್ರಭಾವತಿ ಗೋವಿ ಮಾತನಾಡಿ, ಹೆಣ್ಣು ಜಾಗೃತಳಾದರೆ ಸಮಾಜ ಜಾಗೃತವಾಗುತ್ತದೆ. ಮಹಿಳೆಯರು ಹೆಚ್ಚಿನಶಿಕ್ಷಣಪಡೆದು, ಸ್ವಾವಲಂಬಿ ಆಗುವದರೊಂದಿಗೆ ಕೌಟುಂಬಿಕವಾಗಿ ಸಾಮರಸ್ಯ ಕಾಪಾಡಿಕೊಳ್ಳಬೇಕು. ಇತ್ತೀಚೆಗೆ ಒಬ್ಬಂಟಿ ಮಹಿಳೆಯರ ಹತ್ಯೆಯಂಥ ಘಟನೆಗಳು ಹೆಚ್ಚುತ್ತಿರುವದು ಆತಂಕಕಾರಿಯಾಗಿದ್ದು, ಮಹಿಳೆಯರು ಸಂಸ್ಕಾರದೊಂದಿಗೆ ಸ್ವರಕ್ಷಣೆಯ ಪಟ್ಟುಗಳನ್ನು ಕಲಿಯುವದು ಇಂದು ಅನಿವಾರ್ಯವಾಗಿದೆ ಆತ್ಮೀಯರ ಸಹಕಾರ ಪಡೆದುಕೊಂಡು ಬಂದಂಥ ಸಂದೀಗ್ದತೆಯನ್ನು ಗಟ್ಟಿಯಾಗಿ ಎದುರಿಸುವ ಗಟ್ಟಿತನ ಬೆಳೆಸಿಕೊಳ್ಳಿ ಎಂದರು. ಒಕ್ಕೂಟದ ಅಧ್ಯಕ್ಷೆ ಚಂದನ ಗುಡಿಗಾರ್ ಉಪಸ್ಥಿತರಿದ್ದರು. ಸಮನ್ವಯ ಅಧಿಕಾರಿ ನಿರ್ಮಲಾ ಪ್ರಾಸ್ತವಿಕ ಮಾತನಾಡಿದರು. ಸೇವಾ ಪ್ರತಿನಿಧಿ ಅನಿತಾ ದೇಸಾಯಿ ಸ್ವಾಗತಿಸಿ ನಿರ್ವಹಿಸಿದರು. ಸದಸ್ಯೆ ವೀಣಾ ಭಟ್ ವಂದಿಸಿದರು.



ವಿಡಿಐಟಿಯಲ್ಲಿ ಮಹಿಳಾ ದಿನಾಚರಣೆ

ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಅಂಗವಾಗಿ ಸೋಮವಾರ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.ಬೆಳಗ್ಗೆ ಮಹಾವಿದ್ಯಾಲಯದ ಮಹಿಳಾ ಸಿಬ್ಬಂದಿ ಹಳಿಯಾಳ ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಪಿಎಸ್‌ಐ ಬಸವರಾಜ ಮಬನೂರ್ ಮಹಿಳಾ ಸಿಬ್ಬಂದಿಗಳಿಗೆ ಮಹಿಳೆಯರಿಗಾಗಿಯೇ ಇರುವ ಕಾನೂನು ನಿಯಮಗಳ ಕುರಿತಾಗಿ ತಿಳಿಸಿದರು. ಮಹಿಳಾ ಕಾನ್ಸ್ಟೇಬಲ್‌ಗಳಾದ ಯಶೋಧಾ ಮುನವಳ್ಳಿ, ಶೈಲಾ ಮಂಟೂರ್ ಹಾಗೂ ಚಿನ್ನಮ್ಮ ಮೆಣಸಿನಕಾಯಿ ಇವರುಗಳಿಗೆ ಮಹಾವಿದ್ಯಾಲಯದ ವತಿಯಿಂದ ಸನ್ಮಾನಿಸಲಾಯಿತು. ಮಧ್ಯಾಹ್ನ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹುಬ್ಬಳ್ಳಿಯ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕಿ, ಗಾಯಕಿ ಹಾಗೂ ಸ್ವರ ಸಂಯೋಜಕಿ ಡಾ.ರಂಜನಾ ಮಯ್ಯ ಆಗಮಿಸಿದ್ದರು. ವಿದ್ಯಾರ್ಥಿನಿಯರು ಭಾರತೀಯ ಸಂಸ್ಕೃತಿಯನ್ನು ಪಾಲಿಸಿ ಉತ್ತಮ ಚಾರಿತ್ರ್ಯ ಹೊಂದಬೇಕು. ಪ್ರತಿಯೊಬ್ಬರಲ್ಲೂ ಧನಾತ್ಮಕತೆ ನೋಡುವ ಮನೋಭಾವ ರೂಢಿಸಿಕೊಂಡಲ್ಲಿ ಮಾನಸಿಕ ಒತ್ತಡ ನಿರ್ವಹಣೆಗೆ ಸಹಕಾರಿ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ ಪ್ರಾ. ಡಾ.ವಿ.ಎ ಕುಲಕರ್ಣಿ ಪುರುಷರಿಗೆ ಸಮಾನವಾಗಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಕಾರ್ಯನಿವಹಿಸಿ ಯಶಸ್ಸುಗಳಿಸುತ್ತಿರುವುದು ಮಹಿಳಾ ಸಬಲೀಕರಣಕ್ಕೆ ಹಿಡಿದ ಕೈಗನ್ನಡಿ ಎಂದರು. ಕೇಕ್ ಕತ್ತರಿಸಿ ಮಹಿಳಾ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಸಂಭ್ರಮಿಸಿದರು.ಮಹಿಳಾ ದಿನ ಅಂಗವಾಗಿ ವಿದ್ಯಾರ್ಥಿನಿಯರಿಗೆ ಹಾಗೂ ಮಹಿಳಾ ಸಿಬ್ಬಂದಿಗೆ ವಿವಿಧ ಸ್ಪರ್ಧೆ ಹಾಗೂ ಮನೋರಂಜನಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಹಾವಿದ್ಯಾಲಯದ ಮಹಿಳಾ ವಿಭಾಗದ ಸಂಚಾಲಕಿ ಡಾ.ಮೀನಲ್ ಕಲಿವಾಲ್ ಸ್ವಾಗತಿಸಿದರು. ವಿದ್ಯಾರ್ಥಿನಿಯರಾದ ರಕ್ಷಿತಾ ವೈದ್ಯ ಮತ್ತು ಸಂಜನಾ ನಿರ್ವಹಿಸಿದರು. ಪ್ರೊ ಶ್ರೀಗೌರಿ ವಂದಿಸಿದರು. ಮಹಿಳಾ ವಿಭಾಗವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿನಿಯರು ಮತ್ತು ಮಹಿಳಾ ಸಿಬ್ಬಂದಿ ಪಾಲ್ಗೊಂಡಿದ್ದರು.



ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ



ಅಂಕೋಲಾ: ಇಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ಪುರುಷರಿಗೆ ಸಮಾನವಾಗಿ ಗುರುತಿಸಿಕೊಂಡರೂ ತಮ್ಮ ಸ್ಥಾನಮಾನಗಳಿಗೆ ಹೋರಾಟ ನಡೆಸುವಂತ ಸ್ಥಿತಿ ಇರುವುದು ಬೇಸರದ ಸಂಗತಿಯಾಗಿದೆ. ಮಹಿಳೆಯರು ತಮ್ಮ ಹಕ್ಕುಗಳಿಗೆ ಹೋರಾಟ ನಡೆಸುವಂತಾಗದೆ ಅವುಗಳನ್ನು ಸುಲಭವಾಗಿ ಪಡೆಯುವಂತಾಗಬೇಕು ಎಂದು ಕೇಣಿ ಸರ್ಕಾರಿ ಪ್ರೌಢ ಶಾಲೆಯ ಮುಖ್ಯಾಧ್ಯಾಪಕಿ ಹರ್ಷಿತಾ ನಾಯಕ ಹೇಳಿದರು.ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯ ಹಾಗೂ ಲಯನ್ಸ್ ಕ್ಲಬ್ ಅಂಕೋಲಾ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಪ್ರಾಚೀನ ಕಾಲದಿಂದ ದೈವಿಕ ಸ್ಥಾನಮಾನ ಹೊಂದಿರುವ ಮಹಿಳೆಯರು ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕಿದೆ ಎಂದರು.ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕಿ ಪುಷ್ಪಾ ನಾಯ್ಕ ಮಾತನಾಡಿ, ಪ್ರಾಚೀನ ಕಟ್ಟುಪಾಡುಗಳು ಮಹಿಳೆಯರ ಸ್ಥಾನಮಾನ ಕುಗ್ಗಿಸುತ್ತಿದ್ದ ಸಂದರ್ಭದಲ್ಲಿ ನಾರಾಯಣ ಗುರುಗಳಂತ ಮಹಾಪುರುಷರು ಮಹಿಳೆಯರ ಪರ ಹೋರಾಟ ನಡೆಸಿ ಮಹಿಳೆಯರಿಗೆ ಗೌರವ ನೀಡುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕಿದೆ ಎಂದರು.ಲಯನ್ಸ್ ಸದಸ್ಯ ನಿವೃತ್ತ ಮುಖ್ಯಾಧ್ಯಾಪಕ ದುರ್ಗಾನಂದ ದೇಸಾಯಿ ಕಾಲೇಜಿಗೆ ಸ್ಪೀಕರ್ ಕೊಡುಗೆ ನೀಡಿದರು.ಲಯನ್ಸ್ ಕರಾವಳಿ ಅಧ್ಯಕ್ಷ ರಮೇಶ ಪರಮಾರ ಕಾರ್ಯದರ್ಶಿ ಕೆ.ಎನ್. ಗೌಡಮಾತನಾಡಿದರು. ಪ್ರಮುಖರುಗಳಾದ ಮಹಾಂತೇಶ ರೇವಡಿ, ಸದಾನಂದ ಶೆಟ್ಟಿ ಉಪಸ್ಥಿತರಿದ್ದರು.ಕವನಾ ನಾಯಕ ಸ್ವಾಗತಿಸಿದರು. ಸಂಗೀತಾ ಗೌಡ ಪರಿಚಯಿಸಿದರು. ಹೊನಲು ನಾಯಕ ವಂದಿಸಿದರು.

ಮಹಿಳಾ ದಿನಾಚರಣೆ: ಲಕ್ಷ್ಮೀ ಗೌಡಗೆ ಸನ್ಮಾನ

ಅಂಕೋಲಾ: ತಾಲೂಕಿನ ಸಮಾನ ಮನಸ್ಕ ಸಮಾಜ ಸೇವಾ ಸಂಘಟನೆಗಳ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಬೆಳಂಬಾರದ ವೈದ್ಯ ಬೊಮ್ಮು ಶಿವು ಗೌಡ ಅವರ ಮನೆಯಂಗಳದಲ್ಲಿ ಜಾನಪದ ಹಾಡುಗಾರ್ತಿ ಲಕ್ಷ್ಮೀ ಗೌಡ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿಪಾಲ್ಗೊಂಡಿದ್ದ ನಾಟಿ ವೈದ್ಯ ಹನುಮಂತ ಗೌಡ ಅವರು ಮಾತನಾಡಿ, ಸಮಾಜದ ಏಳ್ಗೆಯಲ್ಲಿ ಮಹಿಳೆಯರ ಪಾತ್ರ ಮಹತ್ವದಾಗಿದ್ದು, ಹಾಲಕ್ಕಿಸಮಾಜದ ಮಹಿಳೆಯರು ತಮ್ಮ ಜಾನಪದೀಯ ಮತ್ತು ಪ್ರಕೃತಿಯ ಜ್ಞಾನದ ಮೂಲಕ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಪ್ರತಿ ವರ್ಷ ಮಹಿಳಾ ದಿನಾಚರಣೆಯ ಪ್ರಯುಕ್ತ ಹಾಲಕ್ಕಿ ಸಮಾಜದ ಮಹಿಳೆಯರನ್ನು ಗೌರವಿಸುತ್ತ ಬಂದಿರುವುದು ಸಂತಸ ತಂದಿದೆ ಸಮಾಜದ ಹೆಮ್ಮೆ ಆಗಿದ್ದ ಪದ್ಮಶ್ರೀ ಸುಕ್ರಜ್ಜಿ ಮತ್ತು ತುಳಸಜ್ಜಿಯವರು

ಬೆಳಂಬಾರದ ಮನೆಯಂಗಳದಲ್ಲಿ ಮಹಿಳಾ ದಿನಾಚರಣೆಯ ಗೌರವ ಪಡೆದ ನೆನಪು ಸದಾ ಹಸಿರಾಗಿರಲಿದೆ ಎಂದರು.

ವಕೀಲ ಉಮೇಶ ನಾಯ್ಕ ಮಾತನಾಡಿ, ಸರಾಯಿ ವಿರೋಧಿ ಆದೋಲನದಂತ ಸಾಮಾಜಿಕ ಅಭಿಯಾನದಲ್ಲಿ ಬೆಳಂಬಾರ ಸುತ್ತ ಮುತ್ತಲಿನ ಹಾಲಕ್ಕಿ ಮಹಿಳೆಯರ ತೊಡಗಿಕೊಳ್ಳುವಿಕೆ ಸಮಾಜಕ್ಕೆ ಮಾದರಿಯಾದುದು ಜಾನಪದ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಲಕ್ಷ್ಮೀ ಗೌಡ ಅವರನ್ನು ಮಹಿಳಾ ದಿನಾಚರಣೆಯ ಪ್ರಯುಕ್ತ ಗೌರವಿಸಲು ಹೆಮ್ಮೆ ಎನಿಸುತ್ತಿದೆ ಎಂದರು.

ಕಸಾಪ ಅಧ್ಯಕ್ಷ ಗೋಪಾಲ ಕೃಷ್ಣ ನಾಯಕ ಮಾತನಾಡಿ, ಶ್ರಮ ಜೀವಿಗಳಾದ ಹಾಲಕ್ಕಿ ಸಮಾಜದ ಮಹಿಳೆಯರು ಆರ್ಥಿಕವಾಗಿ ದುರ್ಬಲರಾಗಿರುದ್ದರೂ ಜಾನಪದ, ಸಾಂಸ್ಕೃತಿಕ ಶ್ರೀಮಂತಿಕೆಯಿಂದ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರು.

ಹನುಮಂತ ಗೌಡ ಅವರ ತಾಯಿ ಸಣ್ಣು ಬೊಮ್ಮ ಗೌಡ, ಹಾಲಕ್ಕಿ ಜಾನಪದ ಕಲಾವಿದೆಯರು ಉಪಸ್ಥಿತರಿದ್ದರು.



ಭಟ್ಕಳದಲ್ಲಿ ಮರ್ಗೋಸ್ ಮಹಲ್ ಚಿತ್ರೀಕರಣ

ಭಟ್ಕಳ: ಸ್ಯಾಂಡಲ್‌ವುಡ್‌ನ ನಿರ್ದೇಶಕ ಹಾಗೂ ನಟ ಬಿ.ಎಂ.ಗಿರಿರಾಜ್ ಅವರ ಹೊಸ ಕನ್ನಡ ಸಿನಿಮಾ ಮರ್ಗೋಸ ಮಹಲ್ ಚಿತ್ರದ ಚಿತ್ರೀಕರಣ ತಾಲೂಕಿನ ವಿವಿಧ ಸ್ಥಳಗಳಲ್ಲಿ ನಡೆಯಿತು.

ಕಳೆದ ಎರಡು ಮೂರು ದಿನಗಳಿಂದ ಸಿರ್ಸಿ, ಹೊನ್ನಾವರ, ಸಿದ್ದಾಪುರ ಹಾಗೂ ಗೇರುಸೊಪ್ಪ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಿದ ಚಿತ್ರತಂಡವು ಭಟ್ಕಳಕ್ಕೆ ಆಗಮಿಸಿತು. ಮುರ್ಡೇಶ್ವರದ ಮಠದ ಹಿತ್ತಲು, ಬಸ್ತಿ ಪ್ರದೇಶ, ಭಟ್ಕಳ ನಗರದ ಹೈವೇ, ಬಂದರ್ ಹಾಗೂ ಸೋಡಿಗದ್ದೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ತಡರಾತ್ರಿವರೆಗೆ ಶೂಟಿಂಗ್ ನಡೆಸಲಾಯಿತು.

ತಾಲೂಕಿನ ಬೆಳ್ಕೆ ಗ್ರಾಮದ ಮಹದೇವ ಮೊಗೇರ್ ಅವರ ಪುತ್ರರಾಗಿರುವ ಬಿ.ಎಂ. ಗಿರಿರಾಜ್ ಅವರು ಈ ಹಿಂದೆ ಮೈತ್ರಿ, ಕನ್ನಡಿಗ, ಜಟ್ಟ, ರಾಮರಸದ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶಿಸಿದ್ದು, ಮಾರ್ಕ್, ಲ್ಯಾಂಡ್ ಲಾರ್ಡ್, ಲವ್ ಮಾಕ್ಟೇಲ್, ಅಲ್ಪಾ, ಬ್ಯಾಟ್ ಸೇರಿದಂತೆ ಹಲವು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರದ ಸಹ ನಿರ್ದೇಶಕರಾಗಿ ಕಳೆದ ವರ್ಷದ ಸೂಪರ್ ಹಿಟ್ ಬ್ಯಾಟ್ ಸಿನಿಮಾದಲ್ಲಿ ಅಸೋಸಿಯೇಟ್ ಆಗಿ ಕೆಲಸ ಮಾಡಿದ್ದ ಭಟ್ಕಳದ ಜಯ್.ಡಿ.ಭಟ್ಕಳ್ ಕಾರ್ಯನಿರ್ವಹಿಸುತ್ತಿದ್ದಾರೆ.





ಕುಮಟಾ : ಲಯನ್ಸ್ ಕ್ಲಬ್ ಕುಮಟಾ ಹಾಗೂ ಆರ್.ಸಿ ಲಯನ್ ರಾಜೇಶ್ ಸಾಲೆಹಿತ್ತಲ ಅವರ ಸಹಯೋಗದಲ್ಲಿ ಹೆಣ್ಣುಮಕ್ಕಳ ಆರೋಗ್ಯ ಹಾಗೂ ಋತುಚಕ್ರ ಸಮಯದಲ್ಲಿನ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಸಲುವಗಿ ತಾಲೂಕಿನ ಸರ್ಕಾರಿ ಪ್ರೌಢಶಾಲೆ ನೆಲ್ಲಿಕೇರಿಯಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಯಿತು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
00

ಕಿರುಸುದ್ದಿ

ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ಪ್ರತಿಭಟನೆ



ರಾಣೇಬೆನ್ನೂರ: ರೈತರ ಜಮೀನುಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ಗುತ್ತಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು ಪಟ್ಟಣದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ರೈತರ ವಿವಿಧ ಬೆಳೆಗಳು ಉತ್ತಮವಾಗಿ ಬೆಳೆದಿದ್ದು, ಅವುಗಳ ಪೂರೈಕೆಗಾಗಿ ನೀರಿನ ಅವಶ್ಯಕತೆ ಇದೆ ಆದರೆ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಬೆಳೆಗಳು ಇದೀಗ ಬಿಸಿಲಿನ ಧಗೆಗೆ ಸಂಪೂರ್ಣವಾಗಿ ಒಣಗುತ್ತಿವೆ ಇದರಿಂದಾಗಿ ಸಾಲ ಸೋಲ ಮಾಡಿದ ರೈತರು ಮುಂದೇನು ಮಾಡಬೇಕು. ಕೂಡಲೇ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.ರೈತರು ಜಮೀನುಗಳಿಗೆ ನೀರು ಹಾಯಿಸಲು ಹೋದಾಗ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದೆ ರೈತರನ್ನು ಸತಾಯಿಸುವ ಕೆಲಸ ಈ ಕೇಂದ್ರವು ಮಾಡುತ್ತಿದೆ. ಇದರಿಂದಾಗಿ ರೈತರು ಬೇಸತ್ತು ಕೆಲಕಾಲ ವಿದ್ಯುತ್ ಪ್ರಸರಣಾ ಕೇಂದ್ರವನ್ನು ಸ್ಥಗಿತಗೊಳಿಸಿ ಸಮರ್ಪಕ ವಿದ್ಯುತ್ ಪೂರೈಸಿ, ಇಲ್ಲವಾದಲ್ಲಿ ರೈತರು ಜಮಾವಣೆಗೊಂದು ವಿದ್ಯುತ್ ಪ್ರಸರಣಾ ಕೇಂದ್ರಕ್ಕೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ರೈತರಾದ ಗುಡ್ಡಪ್ಪ ಗೊರವರ, ಮಲ್ಲಪ್ಪ ಕಂಬಳಿ, ಹಾಲಪ್ಪ ಅಳಲಗೇರಿ, ದ್ಯಾಮಜ್ಜ ಮರಡಿ, ಬಸವರಾಜ ಜಗಳಿ, ಕರಿಯಪ್ಪ ಇಟಗಿ, ಮಂಜಪ್ಪ ಬಸಾಪುರ, ಕಿರಣ ಗೊರವರ,ದ್ಯಾಮಪ್ಪ ಕೆ, ಸಿದ್ದಪ್ಪ ಬಸಾಪುರ, ಮಂಜಪ್ಪ ಮರಡಿ ಮತ್ತಿತರರು ಪಾಲ್ಗೊಂಡಿದ್ದರು.

ದ್ವಿತೀಯ ಪಿಯು ಪರೀಕ್ಷೆ: ಶೇ.97.24ರಷ್ಟು ವಿದ್ಯಾರ್ಥಿಗಳು ಹಾಜರು

ಹಾವೇರಿ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಎಂಟನೇ ದಿನ ಸೋಮವಾರ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ರಸಾಯನಶಾಸ್ತ್ರ, ಶಿಕ್ಷಣಶಾಸ್ತ್ರ ಹಾಗೂ ಮೂಲಗಣಿತ ವಿಷಯದ ಪರೀಕ್ಷೆಗಳು ಬಹುತೇಕ ಶಾಂತಿಯುತವಾಗಿ ನಡೆದವು. ರಸಾಯನಶಾಸ್ತ್ರ ವಿಷಯದ ಪರೀಕ್ಷೆಗೆ ಒಟ್ಟು 4,265 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಈ ಪೈಕಿ 4,215 ವಿದ್ಯಾರ್ಥಿಗಳು ಹಾಜರಾಗಿದ್ದರು. 50 ವಿದ್ಯಾರ್ಥಿಗಳು ಗೈರಾಗಿದ್ದರು. ಅದೇರಿತಿ ಶಿಕ್ಷಣ ಶಾಸ್ತ್ರ ವಿಷಯದ ಪರೀಕ್ಷೆಗೆ 1,385 ವಿದ್ಯಾರ್ಥಿಗಳು ನೊಂದಾಯಿಸಿಕೊಂಡರೆ, 1,279 ವಿದ್ಯಾರ್ಥಿಗಳು ಹಾಜರಾಗಿದ್ದು, 106 ವಿದ್ಯಾರ್ಥಿಗಳು ಗೈರಾಗಿದ್ದರು. ಮೂಲ ಗಣಿತ ವಿಷಯದ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದ 4 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ರಸಾಯನಶಾಸ್ತ್ರ, ಶಿಕ್ಷಣಶಾಸ್ತ್ರ ಹಾಗೂ ಮೂಲಗಣಿತ ವಿಷಯದ ಮೂರು ಪರೀಕ್ಷೆಗಳಿಗೆ ಒಟ್ಟಾರೆ ಶೇ.97.24ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಜಾ ದಿನಗಳಲ್ಲಿ ಬಿಎಸ್ ಎನ್ಎಲ್ ಸೇವೆ

ಹಾವೇರಿ : ಮಾರ್ಚ್ ತಿಂಗಳಲ್ಲಿ ಬಿಎಸ್ ಎನ್ ಎಲ್.ದೂರವಾಣಿ ಬಿಲ್ ಪಾವತಿಸಲು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಹಿನ್ನಲೆಯಲ್ಲಿ ಮಾರ್ಚ್-2026ರ ಮಾಹೆಯ ಎಲ್ಲ ಭಾನುವಾರ ಹಾಗೂ ರಜಾದಿನಗಳಲ್ಲಿ ಬಿಎಸ್ಎನ್ಎಲ್ ಗ್ರಾಹಕ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸಲಿವೆ ಎಂದು ಹಾವೇರಿ ಬಿಎಸ್ಎನ್ಎಲ್ ಕಚೇರಿಯ ಕಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ ಸೇವೆ ಪಡೆಯಲು ಸಾರ್ವಜನಿಕರು ತಮ್ಮ ಹತ್ತಿರದ ಸೇವಾ ಕೇಂದ್ರಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಬಸಮ್ಮ ನೇಕಾರ ನಿಧನ



ರಾಣೇಬೆನ್ನೂರ: ತಾಲೂಕಿನ ಕುಪ್ಪೇಲೂರು ಗ್ರಾಮದ ನಿವಾಸಿ ಬಸಮ್ಮ ನೇಕಾರ(92) ಇವರು ನಿಧನರಾದರು. ಮೃತರು ಓರ್ವ ಪುತ್ರಿ, ಇಬ್ಬರು ಪುತ್ರರು ಮತ್ತು ಮೊಮ್ಮಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.



ಹಾವೇರಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ವಿವಿಧ ಕ್ರೀಡೆಗಳಿಗೆ ಡಿಸಿ ವಿಜಯಮಹಾಂತೇಶ ದಾನಮ್ಮನವರ ಚಾಲನೆ ನೀಡಿದರು.

ಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಹಾವೇರಿ : ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ 2026-27ನೇ ಸಾಲಿನ ಪ್ರಶಸ್ತಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳು 2026-27ನೇ ಸಾಲಿನ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸಲಾಗಿದೆ. ಅಭ್ಯರ್ಥಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೇ ಸಮುದಾಯಗಳಿಗೆ ಸೇರಿದವರಾಗಿರಬೇಕು. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಅವರ ತತ್ವಗಳನ್ನು ಪಾಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಏಳಿಗೆಗಾಗಿ ದೀರ್ಘ ಕಾಲ ಶ್ರಮಿಸಿದವರಾಗಿರಬೇಕು. ದೇಶ ಪ್ರೇಮಿಯಾಗಿರಬೇಕು, ಸಾರ್ವಜನಿಕ ಸೇವೆಯಲ್ಲಿ ಸತತವಾಗಿ ತೊಡಗಿರಬೇಕು ಹಾಗೂ ಕನಿಷ್ಠ 35 ವರ್ಷದವರಾಗಿರಬೇಕು. ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರತಕ್ಕದ್ದಲ್ಲ ಹಾಗೂ ಯಾವುದೇ ವ್ಯಕ್ತಿ ಒಂದು ಪ್ರಶಸ್ತಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಹ ವ್ಯಕ್ತಿಗಳು ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯದಲ್ಲಿ ಅರ್ಜಿ ನಮೂನೆ ಪಡೆದು, ತಮ್ಮ ಸ್ವ ವಿವರ ಮತ್ತು ಅಗತ್ಯ ದಾಖಲೆಗಳೊಂದಿಗೆ ಮಾ.15ರೊಳಗಾಗಿ ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ಹಾವೇರಿ, 'ಬಿ' ಬ್ಲಾಕ್, ಮೊದಲನೇ ಮಹಡಿ, ರೂಂ ನಂ.25, ಜಿಲ್ಲಾಡಳಿತ ಭವನ ಹಾವೇರಿ (ದೇವಗಿರಿ) ಈ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂ 08375-249292 ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬ್ಯಾಡಗಿ: ಪಟ್ಟಣದ ಮಹಾಶಯ ಧರ್ಮ ಪಾಲ ವಿದ್ಯಾ ಮಂದಿರದಲ್ಲಿ ಇಂದು ಶಾಲೆಯ ಗುರು ಮಾತೆಯರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಸಾಮಾಜಿಕ ಕಾರ್ಯಕರ್ತ ಸುಧಾಕರ ಶೆಟ್ಟಿ ಅಭಿಮತ

ಹಿಂದುಗಳೆಲ್ಲ ಒಗ್ಗೂಡುವುದು ಅಗತ್ಯ

ರಾಣೇಬೆನ್ನೂರ: ಹಿಂದುಗಳು ನಾವೆಲ್ಲ ಒಂದು ಎನ್ನುವ ಸೂತ್ರ ಇಟ್ಟುಕೊಂಡು ಕೆಲಸ ಮಾಡಬೇಕು. ಅಡ್ಡ ನಾಮ, ಉದ್ದ ನಾಮ, ವಿಭೂತಿ ಹೆಚ್ಚಿದರೆ ಒಂದು ಜಾತಿ, ಕುಂಕಮ ಇಟ್ಟರೆ ಮತ್ತೊಂದು ಜಾತಿ ಎಂಬುದನ್ನು ಬಿಡಬೇಕು. ಹಿಂದೂಗಳನ್ನು ತುಂಡು ಮಾಡುವವರಿಗೆ ಯಾವ ಕಾರಣಕ್ಕೂ ಅವಕಾಶ ಮಾಡಿಕೊಡಬಾರದು. ಅಂದಾಗ ಭಾರತ ಸದೃಢ ಹಿಂದು ರಾಷ್ಟವಾಗಲು ಸಾಧ್ಯ ಎಂದು ಸಾಮಾಜಿಕ ಕಾರ್ಯಕರ್ತ ಸುಧಾಕರ ಶೆಟ್ಟಿ ಹೇಳಿದರು.

ಹಿಂದು ಸಮ್ಮೇಳನ ಸಮಿತಿ (ದಣ) ವತಿಯಿಂದ ನಗರದ ಹವಾಲ್ದಾರ್ ಹೊಂಡದ ಎದುರಿನ ವಾಲಿಯವರ ಜಾಗದಲ್ಲಿ ಭಾನುವಾರ ಸಂಜೆ ಏರ್ಪಡಿಸಿದ್ದ ಬೃಹತ್ ಹಿಂದೂ ಸಮ್ಮೇಳನದಲ್ಲಿ ಮಾತನಾಡಿ, ನಮ್ಮಲ್ಲಿ ಜಾತಿ, ಜಾತಿಗಳ ನಡುವೆ ಹೊಡೆದಾಟ ಹಚ್ಚಿ ಹಿಂದೂಗಳನ್ನು ತುಂಡು ಮಾಡುವ ದುಷ್ಟ ಶಕ್ತಿಗಳು ಕೆಲಸ ಮಾಡುತ್ತಿವೆ. ಇದನ್ನು ನಾವು ಅರ್ಥೈಯಿಸಿಕೊಂಡು ಹಿಂದೂಗಳೆಲ್ಲ ಒಂದು ಎಂಬ ಭಾವನೆಯೊಂದಿಗೆ ಮುನ್ನಡೆಯಬೇಕು. ನಮ್ಮ ಮಕ್ಕಳನ್ನು ರಾಷ್ಟ ಭಕ್ತಿಯ ಕೇಂದ್ರದಲ್ಲಿ ಬೆಳೆಸುವ ಸಂಕಲ್ಪ ಮಾಡೋಣ. ಮುಂದಿನ ಪೀಳಿಗೆ ಗಟ್ಟಿಯಾಗಿ ಬದುಕಬೇಕು ಎಂದರೆ ಜಾತಿಗಳನ್ನು ಬಿಟ್ಟು ಒಂದಾಗಿ ಬಾಳಬೇಕು. ಜಾತಿ ಮನೆ, ಮದುವೆಯೊಳಗೆ ಮಾತ್ರ ಇಟ್ಟುಕೊಳ್ಳಬೇಕು. ಮನೆಯಿಂದ ಹೊರ ಬಂದ ಮೇಲೆ ನಾವೆಲ್ಲ ಹಿಂದುಗಳು ಎಂಬ ಸಂಕಲ್ಪದೊಂದಿಗೆ ಬರಬೇಕು ಎಂದರು.

ಭಾರತ ಯಾವತ್ತಿದ್ದರೂ ಹಿಂದು ರಾಷ್ಟವಾಗಿದೆ. ಇದರ ಬಗ್ಗೆ ಯಾರಿಗೂ ಸಂದೇಹ ಬೇಡ. ಸಾವಿರಾರು ವರ್ಷದ ಹಿಂದಿನ ಆಕ್ರಮಣ ಎದುರಿಸಿ ನಿಂತಿರುವುದು ಹಿಂದೂ ರಾಷ್ಟ ಮಾತ್ರ. ಹಿಂದೂ ಸಮಾಜ ಎಂಬುದು ಪ್ರತಿಯೊಬ್ಬರ ಮನಸ್ಸಿನಲ್ಲೂ ಮೂಡಬೇಕು. ಹಿಂದೂತ್ವ ಘೋಷಣೆ ಅಲ್ಲ, ಜೀವನದ ಆದರ್ಶವಾಗಿದೆ. ಅದನ್ನು ಜೀವನದಲ್ಲಿ ಆಚರಣೆಗೆ ತರುವ ಪ್ರಯತ್ನ ಮಾಡಿದಾಗ ಮಾತ್ರ ಹಿಂದೂ ಸಮ್ಮೇಳನ ಯಶಸ್ವಿಯಾದಂತೆ ಎಂದರು.

ಆರ್ಎಸ್ಎಸ್ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಹಿಂದು ಧರ್ಮದ ಪುನಃಚ್ಛೇತನಕ್ಕೆ ಮತ್ತೇನು ಮಾಡಬೇಕು ಎಂಬ ಉದ್ದೇಶದಿಂದ ದೇಶದೆಲ್ಲೆಡೆ ಹಿಂದೂ ಸಮ್ಮೇಳನ ನಡೆಯುತ್ತಿದೆ ಹೊರತು ಯಾರ ವಿರುದ್ಧವೂ ಈ ಸಮ್ಮೇಳನ ನಡೆಯುತ್ತಿಲ್ಲ. ಗ್ರಾಮ ಗ್ರಾಮದಿಂದಲೂ ನಾವೆಲ್ಲರೂ ಹಿಂದು ಒಂದು ಎಂಬ ಸಂದೇಶ ಸಾರುವ ನಿಮಿತ್ತ ಸಮ್ಮೇಳನ ನಡೆಯುತ್ತಿದೆ ಎಂದರು.ಇದೀಗ ಕಾಲ ಮೀರಿ ಹೋಗಿದೆ. ಸಹನೆಯ ಕಟ್ಟೆ ಒಡೆದು ಹೋಗಿದೆ. ಇನ್ನುಂದೆ ಸುಧಾರಣೆ ಸಾಧ್ಯವಿಲ್ಲ. ಬಣ್ಣ ಹಾಕಿದ ಎನ್ನುವ ಕಾರಣಕ್ಕೆ ಬಾಲಕನ ಹತ್ಯೆ ಮಾಡುವ ನಿಮ್ನಂತ ಮನಸ್ಥಿತಿಯವರಿಂದ ಏನು ಒಳ್ಳೆಯದನ್ನು ನಿರೀಕ್ಷೆ ಮಾಡಬೇಕು. ಆದ್ದರಿಂದ ಅವಶ್ಯಕತೆ ಬಿದ್ದರೆ ನಾವು ಉತ್ತರ ಕೊಡಲು ಸಿದ್ಧರಿದ್ದೇವೆ ಎಂದರು.

ಸಮಾಜದಲ್ಲಿ ಮಠ, ಮಂದಿರಗಳು ಉಳಿಯಬೇಕು. ಅಂದಾಗ ನಾವೆಲ್ಲ ಹಿಂದೂ ಒಂದು ಎಂಬ ಚಿಂತನೆ ಸಾಧ್ಯವಿದೆ. ಇದರಿಂದ ದೇಶ ಸುಭದ್ರವಾಗಲಿದೆ. ಆದ್ದರಿಂದ ಎಲ್ಲ ಹಿಂದುಗಳು ಈ ಬಗ್ಗೆ ಚಿಂತನೆ ಮಾಡಬೇಕು. ನಾವೆಲ್ಲರೂ ಒಂದು ಎಂಬ ಸಂದೇಶ ಸಾರಬೇಕು ಎಂದರು.

ಸಮಿತಿಯ ಅಧ್ಯಕ್ಷ ಮಂಜುನಾಥಸ್ವಾಮಿ ಮಣೇಗಾರ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಪದಾಧಿಕಾರಿಗಳು, ಕಾರ್ಯಕರ್ತರು ಸೇರಿದಂತೆ ಸಾವಿರಾರು ಜನ ಪಾಲ್ಗೊಂಡಿದ್ದರು.



ಗಮನ ಸೆಳೆದ ಅದ್ದೂರಿ ಮೆರವಣಿಗೆ
ಸಮ್ಮೇಳನದ ನಿಮಿತ್ತ ನಗರದ ಕೆಇಬಿ ಗಣೇಶ ದೇವಸ್ಥಾನದಿಂದ ಸಮಾರಂಭದ ವೇದಿಕೆವರೆಗೆ ಭಾರತ ಮಾತೆ ಭಾವಚಿತ್ರದ ಹಾಗೂ ಮಹನೀಯರ ಭಾವಚಿತ್ರದ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯುದ್ದಕ್ಕೂ ಹಿಂದೂತ್ವ ಪರ ಘೋಷಣೆ ಕೂಗಲಾಯಿತು. ಹಿಂದೂ ಹುಲಿ ಎಂದು ಪ್ರಸಿದ್ಧಿ ಪಡೆದ ರಾಣೆಬೆನ್ನೂರ ಕಾ ರಾಜಾ ಹೋರಿಗಳನ್ನು ಸಿಂಗರಿಸಿ ಮೆರವಣಿಗೆ ಮಾಡಲಾಯಿತು.

ಪ್ರತಿಯೊಬ್ಬರೂ ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ

ಬ್ಯಾಡಗಿ: ಸಂವಿಧಾನ ಬದ್ಧವಾಗಿ ನೀಡಿರುವ ಮಹಿಳಾ ಮೀಸಲು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿ ಮಹಿಳೆಯರು ಸಬಲರಾಗಬೇಕು ಎಂದು ತಾಲೂಕು ಕಾರ್ಯನಿರ್ವಹಿತ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಗ್ರಾಪಂ ಸಭಾಂಗಣದಲ್ಲಿ ತಾಲೂಕು ಮಟ್ಟದ ಸಂಜೀವಿನಿ ಮಹಿಳಾ ಒಕ್ಕೂಟ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಸಮಿತಿಸಹಯೋಗದಲ್ಲಿನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಗುರುತಿಸಿಕೊಂಡಿರುವುದು ಉತ್ತಮ ಬೆಳವಣಿಗೆ. ಪ್ರತಿ ಹೆಣ್ಣು ಮಗುವಿಗೆ ಶಿಕ್ಷಣ ನೀಡಬೇಕು. ಸ್ವಾವಲಂಬಿಯಾಗಿ ಜೀವಿಸುವ ಆತ್ಮಸ್ಥೈರ್ಯ ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು ಎಂದು ಸಲಹೆ ನೀಡಿದರು.

ರಾಜ್ಯ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಎಸ್.ಆರ್. ಪಾಟೀಲ್ ಮಾತನಾಡಿ, ಮಹಿಳೆಯರು ನಮ್ಮ ದೇಶದ ಸಂಸ್ಕೃತಿಯನ್ನು ಅನಾದಿಕಾಲದಿಂದಲೂ ಮಹಿಳೆಯರಿಗೆ ಉನ್ನತ ಸ್ಥಾನಮಾನ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗ್ಯಾರಂಟಿ ಅನುಷ್ಠಾನದಿಂದ ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ. ಮಹಿಳೆಯರಿಗಾಗಿ ಮುಖ್ಯಮಂತ್ರಿಗಳ ದಿಟ್ಟ ಹೆಜ್ಜೆಯು ಇಂದು ರಾಜ್ಯದ ಮಹಿಳೆಯರು ಸಾಕಷ್ಟು ಮಹಿಳೆಯರ ಸಾಕಷ್ಟು ಸಹಕಾರಿಯಾಗಿದೆ ಎಂದರು.

ಸಂಜೀವಿನಿ ಒಕ್ಕೂಟದ ತಾಲೂಕ ಅಧ್ಯಕ್ಷೆ ಪುಷ್ಪ ಸಿಂಗ್ರಿ, ಮಾತನಾಡಿದರು.

ತಾಲೂಕು ಗ್ಯಾರಂಟಿ ಅಧ್ಯಕ್ಷ ಶಂಭನಗೌಡ ಪಾಟೀಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಚಂದ್ರಶೇಖರ್, ಅಕ್ಷರ ದಾಸೋಹ ಅಧಿಕಾರಿ ವಸಂತ ಬೀರಣ್ಣನವರ್, ಸಾರಿಗೆ ವ್ಯವಸ್ಥಾಪಕ ಅಡ್ರಗಟ್ಟಿ, ಬನ್ನಿಹಟ್ಟಿ ಟಿಡಿಜಿ ವಿದ್ಯಾವತಿ, ಗ್ಯಾರಂಟಿ ಸಮಿತಿಯ ಸದಸ್ಯರಾದ ರಮೇಶ್ ಕೋಟಿ, ಪಿರಾಂಬಿ ವರದಿ, ಸುಶೀಲಾ ಲಮಾಣಿ, ಹೈದರಾಲಿ ಬೆಂಗಳೂರಿನ ಹಾಗೂ ಎಲ್ಲಾ ಪಂಚಾಯತಿ ವ್ಯಾಪ್ತಿಗೆ ಸಂಜೀವಿನಿ ಒಕ್ಕೂಟದ ಮಹಿಳೆಯರು, ಮಹಿಳಾ ಮತ್ತು ಮಕ್ಕಳ ಇಲಾಖೆ ಸಿಬ್ಬಂದಿ, ತಾಪಂ, ಗ್ರಾಪಂ ಸಿಬ್ಬಂದಿ ಇದ್ದರು.



ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ

ಹಾವೇರಿ: ನಾರಿ ಇಲ್ಲದ ಮನೆಯನ್ನು ಊಹಿಸಲು ಅಸಾಧ್ಯ. ಕುಟುಂಬದ ಉಳಿವು ಮಾನವ ಕುಲದ ಭವಿತವ್ಯ ಸ್ತ್ರೀಯರ ಕೈಯಲ್ಲಿದೆ ಎಂದು ವಾರ್ಡನ್ ಬಿ. ಭಾಗ್ಯಜ್ಯೋತಿ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿನಿಲಯದಸಭಾಭವನದಲ್ಲಿಭಾನುವಾರ ತಾಯಿ ಸೇವಾ ಫೌಂಡೇಶನ್ ಆಶ್ರಯದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ತ್ಯಾಗ, ನಿಸ್ವಾರ್ಥ, ಸಹನೆ, ಕಷ್ಟ ಸಹಿಷ್ಣತೆಯ ಅಪರಾವತಾರವೇ ಸ್ತ್ರೀ. ಮಹಿಳೆಯರು ಕೆಲಸ ಮಾಡುವ ಸ್ಥಳ, ಕ್ಷೇತ್ರಗಳು ಸುರಕ್ಷಿತವಾಗಿರಬೇಕು, ಎಲ್ಲ ಕಡೆ ವ್ಯಾಪಕವಾಗುತ್ತಿರುವ ಲೈಂಗಿಕ ಶೋಷಣೆ ಮಹಿಳೆಯರ ಅಭಿವೃದ್ಧಿಗೆ ತೀವ್ರ ಕಂಟಕವಾಗಿದೆ. ಹೆಣ್ಣಿಲ್ಲದ ಮನೆ ಎಂದರೆ ನೀರಿಲ್ಲದ ಬಾವಿಯಂತೆ, ನೀರು ಹೇಗೆ ಜೀವನದಾರವೋ ಹೆಣ್ಣು ಸುಖೀ ಕುಟುಂಬದ ಆಧಾರ, ಸುಖ-ಶಾಂತಿ, ಸಮಾಧಾನ ಇದು ಮನೆಯಲ್ಲಿ ಎಲ್ಲ ಕಾರ್ಯಗಳು ಸುಲಲಿತವಾಗಿ. ಸುವ್ಯವಸ್ಥಿತವಾಗಿ ಸಾಗುತ್ತಿದೆ ಅಂದರೆ ಆ ಮನೆಯಲ್ಲಿ ಚಂದವಾದ ಮನಸ್ಸಿನ ಭಾವನೆಗೆ ಸ್ಪಂದಿಸುವ ಹೆಣ್ಣು ಇದ್ದೇ ಇದ್ದಾಳೆ ಅಂತಲೇ ಅರ್ಥ ಎಂದರು.

ಸಾಹಿತಿ ಹನುಮಂತಗೌಡ ಗೊಲ್ಲರ ಮಾತನಾಡಿ, ಹೆಣ್ಣು ಒಲಿದರೆ ತಾಯಿಯಾಗಿ ಅನಿವಾರ್ಯ ಸ್ಥಿತಿ ಬಂದರೆ ಕಾಳಿ ಮಾತೆಯಾಗಿ ಆಪತ್ತು ಎದುರಿಸುವ ಶಕ್ತಿಯನ್ನು ಹೊಂದಿದ್ದಾಳೆ. ಅವಳ ಹಕ್ಕುಗಳಿಗೆ ಹಾಗೂ ಕನಸುಗಳಿಗೆ ನಿರಂತರ ಬೆಂಬಲ ನೀಡಿದರೆ ಮಾತ್ರ ಆಧುನಿಕ ಮಹಿಳೆ ಸವಾಲುಗಳನ್ನು ಎದುರಿಸಬಲ್ಲ ಸಬಲೆಯಾಗಲು ಸಾಧ್ಯ ಎಂದರು.ಫೌಂಡೇಶನ್ ಉಪಾಧ್ಯಕ್ಷೆ ಸುವೇದ ಲಕ್ಷ್ಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಹಿಳೆ ಅಂದು-ಇಂದು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಕಲ್ಪನಾ ಪೂಜಾರ, ಪೂಜಾ ಏರಿಮನಿ, ಶ್ರುತಿ ಲಮಾಣಿ ಹಾಗೂ ನಂದಿನಿ ಎಸ್, ಎಚ್. ವಿದ್ಯಾರ್ಥಿನಿಯರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಶಿವಲೀಲಾ ಸೋಮಕ್ಕನವರ, ಚಿನ್ನಮ್ಮ ಅರ್ಚಕ, ಮಂಜುಳಾ ಭಜಂತ್ರಿ, ಸುಜಾತ ಮಾಗಳ, ನೀಲಮ್ಮ ಅರ್ಚಕ, ಲೋಕ್ಷ ಹಾಗೂ ಸಾತ್ವಿಕ್ ರಾಕೇಶ ಇದ್ದರು. ಶ್ವೇತಾ ಹರಿಜನ್, ಧನ್ಯ ಕುಮಾರಿ ಮಾಯಪ್ಪನವರ್ ಪ್ರಾರ್ಥಿಸಿದರು, ವಿಶ್ರುತ್ ಎಲ್.ಜಿ, ನಿರೂಪಿಸಿದರು. ಪೂಜಾ ವಂದಿಸಿದರು.



ಎಲ್ಲಾ ಜಿಲ್ಲೆಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಕೆ ಇಂದು

ರಾಣೇಬೆನ್ನೂರ: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಒಳ ಮೀಸಲಾತಿಯನ್ನು ಹಿಂಪಡೆದು ಹಳೇ ಮೀಸಲಾತಿ ಪ್ರಕಾರ ಸರ್ಕಾರಿ ಉದ್ಯೋಗ ನೇಮಕಾತಿ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿ ಮಾ. 10ರಂದು ರಾಜ್ಯದ 31 ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕೊಲಂಬೊ (ಕೊರಚ, ಲಂಬಾಣಿ, ಭೋವಿ, ಕೊರಮ) ಸಮುದಾಯದ ರಾಜ್ಯಾಧ್ಯಕ್ಷ ಸುಭಾಸಚಂದ್ರ ರಾಠೋಡ ತಿಳಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಜಾರಿಗೆ ತಂದಿರುವ ಒಳ ಮೀಸಲಾತಿಯಿಂದ ಕೊರಚ, ಕೊರಮ, ಲಂಬಾಣಿ ಹಾಗೂ ಭೋವಿ ಸಮುದಾಯಕ್ಕೆ ಅನ್ಯಾಯವಾಗಿದೆ. ಇದರಿಂದ ಸರ್ಕಾರ ನಮ್ಮ ಸಮಾಜವನ್ನು ಇನ್ನೂ ಹಿಂದಕ್ಕೆ ಸರಿಸುವ ಕೆಲಸ ಮಾಡುತ್ತಿದೆ. ರಾಜ್ಯ ಸರ್ಕಾರ ನ್ಯಾಯಮೂರ್ತಿ ನಾಗಮೋಹನ ದಾಸ ಅವರ ವರದಿಯಂತೆ ಒಳ ಮೀಸಲಾತಿ ಜಾರಿಗೊಳಿಸಬೇಕು. ಅದನ್ನು ಬಿಟ್ಟು ಸದ್ಯ ಜಾರಿಗೆ ತಂದಿರುವ ಮೀಸಲಾತಿಯಿಂದ ಎಲ್ಲ ಸಮುದಾಯದವರಿಗೆ ತೊಂದರೆ ಉಂಟಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಕೂಡಲೇ ಈ ಹಿಂದಿನ ಮೀಸಲಾತಿಯಂತೆ ಸರ್ಕಾರಿ ಉದ್ಯೋಗ ಸೇರಿ ಎಲ್ಲ ಕ್ಷೇತ್ರದಲ್ಲಿ ಅನ್ವಯವಾಗುವಂತೆ ಮಾಡಬೇಕು ಎಂದು ಆಗ್ರಹಿಸಿದರು. ಇಲ್ಲವಾದರೆ ಮುಂದಿನ ದಿನದಲ್ಲಿ ತೀವ್ರತರನಾದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರಮುಖರಾದ ರಾಮಣ್ಣ ನಾಯಕ, ಬೀರಪ್ಪ ಲಮಾಣಿ, ಚಿಕ್ಕಪ್ಪ ಲಮಾಣಿ, ಶಿವು ಚವ್ಹಾಣ, ಕುಮಾರ ಲಮಾಣಿ, ಕೆ.ಎಚ್. ಭಜಂತ್ರಿ, ದುರಗಪ್ಪ ಕೊರವರ, ಅರುಣಕುಮಾರ ಕೊರವರ, ರಮೇಶ ಹೂಳಿಹಳ್ಳಿ ಮತ್ತಿತರರು ಇದ್ದರು.

ಶಾಂತಿ, ಸಂತೋಷದ ಪ್ರತೀಕ ಹೋಳಿ: ಶಾಸಕ ಮಾನೆ

ಹಾನಗಲ್ಲ: ನಮ್ಮ ಬದುಕು ಬಣ್ಣದಾಗಬೇಕು, ಆದರೆ ಮಾತುಗಳು ಬಣ್ಣದಾಗಿರಬಾರದು. ಇತಿಹಾಸದಲ್ಲಿ ತನ್ನದೇ ಆದ ವೈಶಿಷ್ಟ್ಯ ಹೊಂದಿರುವ ಹೋಳಿ ಹಬ್ಬ ಸತ್ಯದ ಜಯ ಮತ್ತು ದುಷ್ಟತನದ ನಾಶದ ಪ್ರತೀಕವಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಇಲ್ಲಿನ ತಾರಕೇಶ್ವರ ದೇವಸ್ಥಾನದ ಎದುರು ಹೋಳಿಹುಣ್ಣಿಮೆ ಅಂಗವಾಗಿ ಕದಂಬ ಯುವಶಕ್ತಿ ಆಯೋಜಿಸಿದ್ದ ರಂಗಿನ 'ರಾತ್ರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸುದೀರ್ಘ ಕಾಲ ಕದಂಬರು ಆಡಳಿತ ನಡೆಸಿದ ಹಾನಗಲ್ಲಗೆ ತನ್ನದೇ ಆದ ಪವಿತ್ರ ಇತಿಹಾಸವಿದೆ. ಹೋಳಿ ಸಮುದಾಯದಲ್ಲಿ ಸಂತೋಷ, ಸ್ನೇಹ ಮತ್ತು ಐಕ್ಯತೆಯನ್ನು ಮೂಡಿಸುವ ಪ್ರಮುಖ ಹಬ್ಬವಾಗಿದೆ. ದ್ವೇಷ, ಅಸೂಯೆ ಮರೆತು ಪ್ರೀತಿ, ವಿಶ್ವಾಸದಿಂದ ನಾವೆಲ್ಲರೂ ಒಂದಾಗಿ ಬದುಕುವ ಸಂಕಲ್ಪ ತೊಡಬೇಕಿದೆ ಎಂದರು.



ಕದಂಬ ಯುವಶಕ್ತಿಯ ಅಧ್ಯಕ್ಷ ಗುರುರಾಜ್ ನಿಂಗೋಜಿ ಮಾತನಾಡಿ, ಆಧುನಿಕತೆಯ ಆಕರ್ಷಣೆಗೆ ಒಳಗಾಗಿ ಹಬ್ಬ, ಹರಿದಿನಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಪುರಾತನ ಸಂಪ್ರದಾಯ, ಆಚರಣೆಗಳ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ. ರಂಗಿನರಾತ್ರಿಯ ನೆಪದಲ್ಲಿ ವೇದಿಕೆ ಕಲ್ಪಿಸಿ ಪ್ರತಿಭೆಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಮುಖಂಡರಾದ ಆದರ್ಶ ಶೆಟ್ಟಿ, ರವೀಂದ್ರ ದೇಶಪಾಂಡೆ, ಶಿವು ಭದ್ರಾವತಿ, ಉದ್ಯಮಿ ಇಷ್ಟಲಿಂಗ ಸಾಲವಟಗಿ, ನಾಗರಾಜ ಚಂದಾಪೂರ, ಸಂತೋಷ ಸುಣಗಾರ ಸೇರಿದಂತೆ ಇನ್ನಿತರರು ಇದ್ದರು. ಅಹೋರಾತ್ರಿ ನಡೆದ ವಿವಿಧ ಮನರಂಜನಾ ಕಾರ್ಯಕ್ರಮಗಳು ಜನಮನ ಸೆಳೆದವು. ಹತ್ತಾರು ಕಲಾತಂಡಗಳು ಕಲಾ ಪ್ರದರ್ಶನ ನೀಡಿ ಸೈ ಎನಿಸಿಕೊಂಡವು.

ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ಕಲರವ

ಹಾವೇರಿ: ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಮಹಿಳಾದಿನಾಚರಣೆಅಂಗವಾಗಿಮಹಿಳೆಯರಿಗಾಗಿಯೇ ವಿವಿಧ ಮನೋರಂಜನಾ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು. ಈ ಹಿನ್ನೆಲೆಯಲ್ಲಿ ಇಡೀ ದಿನ ಜಿಲ್ಲಾ ಕ್ರೀಡಾಂಗಣ ಮಹಿಳೆಯರ ಕಲರವಕ್ಕೆ ಸಾಕ್ಷಿಯಾಯಿತು.

ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆಗಳ ಸಹಯೋಗದೊಂದಿಗೆ 12 ವರ್ಷ ಮೇಲ್ಪಟ್ಟ ಮಹಿಳೆಯರಿಗಾಗಿ ಮುಕ್ತ ರಸ್ತೆ ಓಟ (ಮ್ಯಾರಾಥಾನ್), ವಿವಿಧ ಮನೋರಂಜನಾ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು. ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಚಾಲನೆ ನೀಡಿದರು. ಜಿಪಂ ಸಿಇಒ ರುಚಿ ಬಿಂದಲ್, ಎಸ್ಪಿ ಯಶೋಧಾ ವಂಟಗೋಡಿ, ಜಿಪಂ ಉಪಕಾರ್ಯದರ್ಶಿ ಪುನೀತ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಲತಾ ಬಿ.ಎಚ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಓಟದ ಸ್ಪರ್ಧೆ: 5ಕಿಮೀ ರಸ್ತೆ ಓಟದ ಸ್ಪರ್ಧೆಯಲ್ಲಿ ಧಾರವಾಡದ ಶಿಲ್ಪಾ ಹೊಸಮನಿ, ಸುಪ್ರಿತಾ ಸಿದ್ದಿ, ಕಾರವಾರದ ಸುಪ್ರಿತಾ ಚನ್ನಯ್ಯ, ಹಾವೇರಿಯ ಸಾಕ್ಷಿ ಗುಡಿಹಿಂದ್ಲರ, ಬ್ಯಾಡಗಿಯ ಅರ್ಪಿತಾ ಮಡಿವಾಳರ, ಸೃಷ್ಟಿ ತಿಳವಳ್ಳಿ, ಐಶ್ವರ್ಯ ಬೆನ್ನೂರ, ಅರ್ಚನಾ ಲಮಾಣಿ, ಸಂಜನಾ ರೊಟ್ಟಿ, ಈರಮ್ಮ ಗೌರಕ್ಕನವರ ಕ್ರಮವಾಗಿ ಬಹುಮಾನಗಳನ್ನು ಪಡೆದುಕೊಂಡರು. ಅದೇ ರೀತಿ 3ಕಿಮೀ ಓಟದ ಸ್ಪರ್ಧೆಯಲ್ಲಿ ಧಾರವಾಡದ ಶ್ರೇಯಾ ಘಂಟಿ, ರಾಜಶ್ರೀ ಮರೇದ, ಸವಣೂರಿನ ಲಕ್ಷ್ಮೀ ಹಡಪದ, ಸಾವಿತ್ರಿ ಮಿರಾಶಿ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಹೀಗೆ ಬಹುಮಾನ ಪಡೆದುಕೊಂಡರು.



ಮನೋರಂಜನಾ ಸ್ಪರ್ಧೆ: 18 ವರ್ಷ ಮೇಲ್ಪಟ್ಟ ಮಹಿಳೆಯರ ಮನೋರಂಜನಾ ಸ್ಪರ್ಧೆಯ ಬಾಂಬ್ ಇನ್ ದ ಸಿಟಿ ಆಟದಲ್ಲಿ ಲಕ್ಷ್ಮೀ ಜಾಡರ, ನೀಲಮ್ಮ, ಭಾಗ್ಯಾ ಜನ್ನು, ಹಗ್ಗ ಜಗ್ಗಾಟ - ಮಂಜುಳಾ ಬಿ., ಅರ್ಪಿತಾ ಪಿ.ಎಂ., ಶೋಭಾ ಲಮಾಣಿ, ಅಶ್ವಿನಿ ಎಂ.ಕೆ., ಶೋಭಾ ಸಿ., ರೇಖಾ ಎಂ.ಜೆ, ನೀಲಮ್ಮ, ಸಂಜನಾ ಎಂ.ಹೆಚ್, ರತ್ನಾ ಟಿ., ರಕ್ಷಾ ಬಿ. ನೇತೃತ್ವದ ತಂಡ ಪ್ರಥಮ ಸ್ಥಾನ ಪಡೆದಿದೆ. ಅದೇರಿತಿ ಅನುರಾಧಾ ಪೂಜಾರ, ಕಮಲಮ್ಮ ಕೆ.ಎನ್., ಗಾನವಿ ಪಾಟೀಲ, ಪ್ರತಿಭಾ ಬೆಂಡಿಗೇರಿ, ಸಂಗೀತಾ ಪೂಜಾರ, ಪಲ್ಲವಿ ಪಾಟೀಲ, ಲಕ್ಷ್ಮೀ ಎಂ., ಎಸ್.ಎಚ್. ಸೊರಟೂರ, ಸೌಜನ್ಯ, ಚೈತ್ರಾ ಬಾಯಿ ನೇತೃತ್ವದ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು.

ಸಾಂಸ್ಕೃತಿಕ ಸ್ಪರ್ಧೆ: 18 ವರ್ಷ ಮೇಲ್ಪಟ್ಟ ಸಾಂಸ್ಕೃತಿಕ ವಿಭಾಗದ ಗುಂಪು ನೃತ್ಯ ಸ್ಪರ್ಧೆಯಲ್ಲಿ ರಾಣೇಬೆನ್ನೂರಿನ ವರ್ಷಿತಾ ತಂಡ ರೈತ ಗೀತೆ ಹಾಡಿ ಪ್ರಥಮ ಸ್ಥಾನ ಪಡೆದುಕೊಂಡರೆ, ಪೂರ್ವಿಕಾ ನೇತೃತ್ವದ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು.

ಗೋಣಿ ಚೀಲ ಸ್ಪರ್ಧೆ

30 ವರ್ಷದೊಳಗಿನ ಮಹಿಳೆಯರ 100 ಮೀ ಓಟದ ಸ್ಪರ್ಧೆಯಲ್ಲಿ ಚಂದ್ರಕಲಾ ಹೊಸಮನಿ, ನೀಲಮ್ಮ, ರೇಖಾ ಜಾಡರ, ಗೋಣಿಚೀಲ ಓಟದಲ್ಲಿ ಲಕ್ಷ್ಮೀ ಜಾಡರ, ಶ್ರೇಯಾ ಪಿ.ಜೆ., ನೀಲಮ್ಮ, 30 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ 100 ಮೀ ಓಟದ ಸ್ಪರ್ಧೆಯಲ್ಲಿ ಶೋಭಾ ಲಮಾಣಿ, ಚೇತನಾ ಕಾರಗಿ, ರೇಣುಕಾ ನಾಯಕ, ಗೋಣಿಚೀಲ ಓಟದಲ್ಲಿ ಶಾರದಾ ಲಮಾಣಿ, ವಿಶಾಲಾಕ್ಷಿ ಕಮತದ, ಭಾರತಿ ಕುರುವತ್ತಿಮಠ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರೋಟರಿ ಸಂಸ್ಥೆ ಕಾರ್ಯ ಶ್ಲಾಘನೀಯ: ಕಾಶಿನಾಥ ಅರಾವತ್

ಹಾವೇರಿ: ಜಿಲ್ಲೆಯ ಜನರಿಗೆ ಉಪಯುಕ್ತವಾಗುವ ಸಮಾಜಮುಖಿ ಕೆಲಸವನ್ನು ರೋಟರಿ ಸಂಸ್ಥೆ ನಿರಂತರವಾಗಿ ಶ್ರಮಿಸುತ್ತಿದ್ದು, ಅನೇಕ ಸಂಸ್ಥೆಗಳು ನಮ್ಮೊಂದಿಗೆ ಸಹಕಾರ ನೀಡುತ್ತಿವೆ ಎಂದು ರೋಟರಿ ಸಂಸ್ಥೆಯ ಅಧ್ಯಕ್ಷ ಕಾಶಿನಾಥ ಅರಾವತ್ ಹೇಳಿದರು.

ಇಲ್ಲಿನ ರಾಜೇಂದ್ರ ನಗರದ ರೋಟರಿ ಭವನದಲ್ಲಿ ಭಾನುವಾರ ಎ.ಡಿ.ಡಿ ಫೌಂಡೇಶನ್, ರೋಟರಿ ಕ್ಲಬ್, ಇನ್ನರ್ ವ್ಹೀಲ್ ಕ್ಲಬ್, ರೊಟ್ರಾಕ್ಟ್ ಹಾವೇರಿ, ಕರ್ನಾಟಕ ಜೈನ್ ಅಸೋಸಿಯೇಶನ್, ಕರ್ನಾಟಕ ಮಾರ್ವಾಡಿ ಯೂತ್, ಫೆಡರೇಶನ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ವಿಶಿಷ್ಟಚೇತನರ ಪುನರ್ವಸತಿ ಕೇಂದ್ರ ಹಾವೇರಿ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಮೂರು ದಿನಗಳ ಬೃಹತ್ ಉಚಿತ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಜೈನ್ ಅಸೋಸಿಯೇಶನ್ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಎಸ್.ಎ. ವಜ್ರಕುಮಾರ ಮಾತನಾಡಿ, ಸೇವೆ ಮಾಡುವ ಉದ್ದೇಶದಿಂದ ನಾವು ನಿರಂಜನವಾಗಿ ಉಚಿತ ಶಿಬಿರಗಳನ್ನು ಆಯೋಜಿಸುತ್ತಿದ್ದೇವೆ ಎಂದರು.



ಬೆಂಗಳೂರಿನಿಂದ ಆಗಮಿಸಿದ ಎಡಿಡಿ ಫೌಂಡೇಶನ್ ಮುಖ್ಯಸ್ಥ ದೇವ ಶೆಠಿ ಹಾಗೂ ತಾಯಿ ವನಿತಾ ಶೆಠಿ ಅವರು ವಿಶಿಷ್ಟಚೇತನರಿಗೆ ತಾವೇ ಕೃತಕ ಕೈ ಕಾಲು ಜೋಡಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜೈನ್ ಅಸೋಸಿಯೇಶನ್ ಕಾರ್ಯದರ್ಶಿ ಆಶಾ ಪ್ರಭು ಅವರು ಮಾತನಾಡಿದರು. ರೋಟರಿ ಸಂಸ್ಥೆಯ ವತಿಯಿಂದ ಎಡಿಡಿ ಫೌಂಡೇಶನ್ ಮುಖ್ಯಸ್ಥರಿಗೆ, ಕೃತಕ ಕೈ-ಕಾಲು ಜೋಡಣಾ ಅನುಭವಿ ತಂಡದ ಮುರಳಿ ಹಾಗೂ ತಂಡದವರಿಗೆ, ಶಿಬಿರಕ್ಕೆ ಸಹಕಾರ ನೀಡಿದ ಗಣ್ಯರಿಗೆ ಗೌರವಿಸಿ ಸನ್ಮಾನಿಸಲಾಯಿತು. ಇದೇ ವೇಳೆ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರು ವಿಶಿಷ್ಟಚೇತನರಿಗೆ ಸಿಹಿ ವಿತರಿಸಿದರು.

ಈ ಸಂದರ್ಭದಲ್ಲಿ ರೋಟರಿ ಅಸಿಸ್ಟೆಂಟ್ ಗವರ್ನರ ದಯಾನಂದ ಯಡ್ರಾಮಿ, ಕಾರ್ಯದರ್ಶಿ ಡಾ.ಪ್ರದೀಪ ದೊಡ್ಡಗೌಡ್ರ, ರೆಡ್ ಕ್ರಾಸ್ ರಾಜ್ಯ ಸಮಿತಿ ಸದಸ್ಯ ರವಿ ಮೆಣಸಿನಕಾಯಿ, ಜಿಲ್ಲಾ ಗೌರವ ಕಾರ್ಯದರ್ಶಿ ನಿಂಗಪ್ಪ ಆರೇರ, ಜೈನ ಸಮಾಜದ ಅಧ್ಯಕ್ಷ ವಿಜಯ ಜೈನ, ಡಿಡಿಆರ್ಸಿ ನೋಡಲ್ ಆಕಾರಿ ಪೂರ್ಣಿಮಾ ಮಠದ, ರೋಟರಿ ಕ್ಲಬ್ ಪದಾಕಾರಿಗಳಾದ ಎಸ್.ಸಿ.ಹಿರೇಮಠ, ಮಲ್ಲಿಕಾರ್ಜುನ ಹಂದ್ರಾಳ, ವಿರೇಶ ಪಾಟೀಲ, ಬಸವರಾಜ ಮಾಸೂರ, ಜಿ.ವ್ಹಿ ಹಿರೇಗೌಡ್ರ, ರವಿ ಹಿಂಚಿಗೇರಿ, ಆರ್.ಬಿ ದಿಡಗೂರ, ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ವನಿತಾ ಮಾಗನೂರ, ಕಾರ್ಯದರ್ಶಿ ಶೋಭಾ ತಾಂಡೂರ, ಶಿವನಗೌಡ, ಉಜ್ವಲ್ ಹಿರೇಗೌಡ್ರ, ಸೇರಿದಂತೆ ರೋಟರಿ, ರೆಡ್ ಕ್ರಾಸ್, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಿರುಸುದ್ದಿ

ಮಾ.19ರಂದು ಜಾತ್ರಾ ಮಹೋತ್ಸವ

• **ಚನ್ನಮ್ಮನ ಕಿತ್ತೂರು:** ವೀರಭದ್ರೇಶ್ವರ ದೇವಸ್ಥಾನದಲ್ಲಿ ಐದನೇ ವರ್ಷದ ಸಾಮೂಹಿಕ ಗುಗ್ಗಳೋತ್ಸವ, ಶಸ್ತ್ರ ಹಾಗೂ ಜಾತ್ರಾ ಮಹೋತ್ಸವ ಮಾ.19ರಂದು ನಡೆಯಲಿದೆ. ತಾಲೂಕಿನ ಶಿವನೂರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆಯುವ ಕಾರ್ಯಕ್ರಮಗಳ ಸಾನ್ನಿಧ್ಯವನ್ನು ಕಿತ್ತೂರಿನ ರಾಜ ಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ನಿಚ್ಚಣಿಕಿಯ ಮಡಿವಾಳೇಶ್ವರಮಠದ ಪಂಚಾಕ್ಷರಿ ಸ್ವಾಮೀಜಿ ವಹಿಸಿಕೊಳ್ಳುವರು. ಅಂದು ಬೆಳಿಗ್ಗೆ 5 ಗಂಟೆಗೆ ವೀರಭದ್ರೇಶ್ವರ ಸ್ವಾಮಿಗೆ ವಿನಯ ಹಿರೇಮಠ ಹಾಗೂ ಸಂಗಡಿಗರಿಂದ ರುದ್ರಾಭಿಷೇಕ, ಮಂಗಳಾರತಿ ಕಾರ್ಯಕ್ರಮ ನೆರವೇರಲಿದೆ. ನಂತರ ಕಲ್ಮೇಶ್ವರ ದೇವಸ್ಥಾನದಿಂದ ಗುಗ್ಗಳ ಹಾಗೂ ಶಸ್ತ್ರ ಕಾರ್ಯಕ್ರಮ ನರೇಂದ್ರದ ಕರಿವೀರಯ್ಯ ಮಠಪತಿ ಇವರ ಪುರವಂತರ ಸೇವೆಯ ಮೂಲಕ ನೆರವೇರಲಿದೆ. ಈ ಜಾತ್ರಾ ಮಹೋತ್ಸವದಲ್ಲಿ ವಿವಾಹ ಮಾಡಿಕೊಳ್ಳಲು ಅವಕಾಶವಿದ್ದು ವರನಿಗೆ 21 ವರ್ಷ ವಧುವಿಗೆ 18 ವರ್ಷ ಪೂರ್ಣಗೊಂಡಿರುವ ಬಗ್ಗೆ ಶಾಲಾ ದಾಖಲಾತಿ ಒದಗಿಸಬೇಕು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಹೆಸರನ್ನು ನೋಂದಾಯಿಸಲು ಮಾ.18ರೊಳಗಾಗಿ ಕಮೀಟಿಯವರನ್ನು ಮಾಹಿತಿಗಾಗಿ 8150014385 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಯಬಾಗ: ತಾಲೂಕಿನ ನಿಡಗುಂದಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಹೆಚ್ಚುವರಿ ದಿವಾಣಿ ನ್ಯಾಯಾಧೀಶ ದಾನಪ್ಪ ಮಾತನಾಡಿದರು. ವಕೀಲ ಡಿ.ಎಚ್.ಯಲ್ಲಟ್ಟಿ ಹಾಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.

ಅತ್ಯಾಚಾರಿ ಆರೋಪಿಗೆ 37 ವರ್ಷ ಕಠಿಣ ಶಿಕ್ಷೆ

• **ಬೆಳಗಾವಿ :** ತಾಲೂಕಿನ ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಅಮಾನವೀಯ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯ ಮಹತ್ವದ ತೀರ್ಪು ನೀಡಿ ಆದೇಶವನ್ನು ಹೊರಡಿಸಿದೆ. ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದ ಆರೋಪಿಗೆ 37 ವರ್ಷಗಳ ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ. 2025ರಲ್ಲಿ ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ, ಪೋಕ್ಸೋ ಪ್ರಕರಣದ ಆರೋಪಿ ರುತೇಶ ಅನಿಲ್ ಭೋಸಲೆ (22) ಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಎಫ್.ಟಿ.ಎಸ್.ಸಿ-01 ನ್ಯಾಯಾಧೀಶರಾದ ಸಿ.ಎಂ. ಪುಷ್ಪಲತಾ ಅವರು 37 ವರ್ಷಗಳ ಕಾರಾಗೃಹ ವಾಸ ಮತ್ತು 1,25,000 ರೂಪಾಯಿ ದಂಡ ವಿಧಿಸಿ ಐತಿಹಾಸಿಕ ತೀರ್ಪು ನೀಡಿದ್ದಾರೆ. ಆರೋಪಿಯು ಲಡ್ಡು ಕೊಡುವುದಾಗಿ ನಂಬಿಸಿ ಅಪ್ರಾಪ್ತ ಬಾಲಕಿಯನ್ನು ತನ್ನ ಮನೆಗೆ ಕರೆದೊಯ್ದು ಬಲಾತ್ಕಾರ ಮಾಡಿದ್ದಲ್ಲದೆ, ಯಾರಿಗಾದರೂ ಹೇಳಿದರೆ ಜೀವ ಬೆದರಿಕೆ ಹಾಕಿದ್ದನು. ನಂತರವೂ ಬಾಲಕಿಯ ಶಾಲಾ ರಜೆಯ ಸಮಯವನ್ನು ಬಳಸಿಕೊಂಡು ಮರುಬಾರಿಯೂ ಕೃತ್ಯ ಎಸಗಿದ್ದನು.

ನಿಧನ ಸುದ್ದಿ

ಶಿಕ್ಷಕ ಶ್ರೀಶೈಲ ಸುತಾರ



• **ಮುಗಳಖೋಡ:** ಸಮೀಪದ ಖಿಣದಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಶ್ರೀಶೈಲ ಸಲಬಣ್ಣ ಸುತಾರ (ಬಡಿಗೇರ) (56) ಭಾನುವಾರ ನಿಧನರಾಗಿದ್ದಾರೆ. ಮೃತ ಶಿಕ್ಷಕ ಪತ್ನಿ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮೊಮ್ಮಕ್ಕಳು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ : ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸಮಾಜ ಸೇವಕ ಹಾಗೂ ಸಮಾಜ ಚಿಂತಕರಾದ ಎ.ಆರ್. ಹಲಗೇಕರ್ ಅವರು ಮಹಿಳಾ ಪೌರಕಾರ್ಮಿಕರಿಗೆ ಗೌರವ ಸಲ್ಲಿಸುವ ಮೂಲಕ ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸುವುದರ ಮೂಲಕ ಮಹಿಳಾ ಪೌರಕಾರ್ಮಿಕರಿಗೆ ಹೂವಿನ ಗಿಡಗಳನ್ನು ನೀಡುವ ಮೂಲಕ ಸನ್ಮಾನಿಸಿ, ಅವರ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಸಾದಿಕ್ ಧಾರವಾಡ್ಕರ್, ಶೀತಲ್ ರಾಮತೀರ್ಥ, ರಾಯಪ್ಪಾ ಕಳಸಣ್ಣವರ್, ಬಾಬು ಕೋಲಕಾರ,ಭಾವಕನ್ನಾ ಪಿರಗಾನೆ, ಸ್ವೇತಾ ಕೋಟ್ಯಾನ್, ಮಹಾನಗರ ಪಾಲಿಕೆ ಸಿಬ್ಬಂದಿಗಳು ಸೇರಿದಂತೆ ಪೌರ ಕಾರ್ಮಿಕರು ಇದ್ದರು.

ಸುಗಂಧಾ ದೇವಿಯ ಭವ್ಯ ಪಲ್ಲಕ್ಕಿ ಉತ್ಸವ

• **ರಾಯಬಾಗ :** ಗಡಿ ಪ್ರದೇಶದ ಪ್ರಸಿದ್ಧ ಜಾತ್ರೆಯಾದ ತಾಲೂಕಿನ ಬಾವನಸೌಂದತ್ತಿ ಗ್ರಾಮದೇವತೆ ಸುಗಂಧಾದೇವಿಯ 71ನೇ ವರ್ಷದ ಜಾತ್ರೆಯು, ಭವ್ಯ ಪಲ್ಲಕ್ಕಿ ಉತ್ಸವ, ಮಹಾನೈವೇದ್ಯ, ಹಾಗೂ ದೀರ್ಘ ದಂಡ ನಮಸ್ಕಾರದ ಭಕ್ತಿ ಸೇವೆಯೊಂದಿಗೆ ಸಾವಿರಾರು ಭಕ್ತರ ನಡುವೆ ವೈಭವದಿಂದ ಜರುಗಿತು.

ಸುಮಾರು ಅರ್ಧ ಶತಮಾನಕ್ಕಿಂತ ಹೆಚ್ಚು ಇತಿಹಾಸ ಹೊಂದಿರುವ ದೇವಸ್ಥಾನದ ಸುಗಂಧಾ ದೇವಿಯ ಪಲ್ಲಕ್ಕಿ ಉತ್ಸವ ಹಾಗೂ ಮಹಾನೈವೇದ್ಯ ಪ್ರತಿವರ್ಷ ರಂಗಪಂಚಮಿ ದಿನದಂದು ನಡೆದುಕೊಂಡು ಬಂದಿದೆ. ಅಂದು ಭಕ್ತರು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಣ್ಣದ ಆಟವಾಡಿದ ಬಳಿಕ ಕೃಷ್ಣಾನದಿಯಲ್ಲಿ ಪವಿತ್ರ ಸ್ನಾನ ಮಾಡಿ ದೇವಸ್ಥಾನದವರೆಗೆ ಮಡಿ ಬಟ್ಟೆಯಲ್ಲಿ ತೆರಳಿ ದೇವಿಗೆ ಪೂಜಿಸುವುದು ವಾಡಿಕೆ.

ಹರಕೆ ಹೊತ್ತವರು ಬೆಳಗಿನ 1 ಗಂಟೆಯಿಂದಲೇ ಕೃಷ್ಣಾನದಿಯಲ್ಲಿ ಮಿಂದು ನದಿಯಿಂದ ಮಡಿ ಬಟ್ಟೆಯಲ್ಲಿ ದೇವಸ್ಥಾನದ ಸುತ್ತ ದೀರ್ಘ ದಂಡ ನಮಸ್ಕಾರದೊಂದಿಗೆ ಭಕ್ತಿ ಸೇವೆ ಸಲ್ಲಿಸಿದರು. ಬೆಳಿಗ್ಗೆ ದೇವಿಗೆ ವಿಶೇಶ ಪೂಜೆ, ಅಭಿಷೇಕ, ವಾದ್ಯ ಮೇಳದೊಂದಿಗೆ ಪಲ್ಲಕ್ಕಿ ಉತ್ಸವ, ಕುಂಭ ಮೇಳ, ದೇವಿಯ ಉಡಿ ತುಂಬುವುದು, ಮಹಾನ್ವೇದ್ಯ, ಮೊದಲಾದ ಧಾರ್ಮಿಕ ಆಚರಣೆಗಳು ನಡೆದವು. ಮಿಠಾಯಿ ಅಂಗಡಿ, ಕೃಷಿ ಉಪಕರಣ ಮಳಿಗೆ, ಗ್ರಹ ಬಳಕೆ ವಸ್ತುಗಲು ನಾಟಕ ಠಿಕಾಣಿ ಹೂಡಿವೆ.



ರಾಯಬಾಗ : ಗಡಿ ಪ್ರದೇಶದ ಪ್ರಸಿದ್ಧ ಜಾತ್ರೆಯಾದ ತಾಲೂಕಿನ ಬಾವನಸೌಂದತ್ತಿ ಗ್ರಾಮದೇವತೆ ಸುಗಂಧಾದೇವಿಯ 71ನೇ ವರ್ಷದ ಜಾತ್ರೆಯು, ಭವ್ಯ ಪಲ್ಲಕ್ಕಿ ಉತ್ಸವ, ಮಹಾನೈವೇದ್ಯ, ಹಾಗೂ ದೀರ್ಘ ದಂಡ ನಮಸ್ಕಾರದ ಭಕ್ತಿ ಸೇವೆಯೊಂದಿಗೆ ಸಾವಿರಾರು ಭಕ್ತರ ನಡುವೆ ವೈಭವದಿಂದ ಜರುಗಿತು.

ಬೆಳಗಾವಿ ಪಾಲಿಕೆ ಸಾಮಾನ್ಯ ಸಭೆ | ಶಾಸಕ ಅಭಯ ಪಾಟೀಲ ಆಕ್ರೋಶ

ಮತದಾರರ ಪಟ್ಟಿ ಗೊಂದಲ !

• **ಬೆಳಗಾವಿ:** ಮಹಾನಗರ ಪಾಲಿಕೆಯ ಸಾಮಾನ್ಯ ಸಭೆ ಮಹಾಪೌರ ಮಂಗೇಶ್ ಪವಾರ, ಉಪ ಮಹಾಪೌರ ವಾಣಿ ವಿಲಾಸ್ ಜೋಶಿ ನೇತೃತ್ವದಲ್ಲಿ ನಡೆಯಿತು.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮತದಾರ ಪಟ್ಟಿಯಲ್ಲಿ ಸಾಕಷ್ಟು ತೊಂದರೆಗಳಾಗಿದ್ದು, ಯಾರದ್ದೋ ಹೆಸರು ಬೇರೆ ಯಾವುದೇ ವಾರ್ಡ್‌ನಲ್ಲಿ ಮ್ಯಾಪಿಂಗ್ ತೋರಿಸುತ್ತಿರುವುದರ ವಿರುದ್ಧ ದಕ್ಷಿಣ ಶಾಸಕ ಅಭಯ ಪಾಟೀಲ ಆರೋಪಿಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

1 ಲಕ್ಷ ಜನರು ಇನ್ನೂ ಬಾಕಿ ಇದ್ದಾರೆ. ಕೂಡಲೇ ಪ್ರಕ್ರಿಯೆಗೊಳಪಡಿಸಬೇಕು. ಯಾರು ವಂಚಿತರಾಗಬೇಡಿ ಎಂದು ಮತದಾರರಿಗೆ ಮನವಿ ಮಾಡಿಕೊಂಡರು. ಮತದಾನದ ಗುರುತಿನ ಚೀಟಿ ಹಾಗೂ ಮ್ಯಾಪಿಂಗ್ ಮಾಡುವ ಕುರಿತು ಪಾಲಿಕೆಯಿಂದ ಜಾಗೃತಿ ಮೂಡಿಸಿಲ್ಲ. ಇದರಿಂದ ನಗರದ ಜನತೆಗೆ ಸಮಸ್ಯೆಯಾಗುತ್ತಿದೆ ಎಂದರು.

ಪಾಲಿಕೆಯ ಸದಸ್ಯರೊಬ್ಬ ಮಾತನಾಡಿ, ಪಾಲಿಕೆಯಿಂದ ನಡೆಸಲಾಗುತ್ತಿರುವ ಮ್ಯಾಪಿಂಗ್ ಸರಿಯಾಗಿ ಆಗುತ್ತಿಲ್ಲ. ನಂಬರ್ ಹಾಗೂ ಹೆಸರು ಬೇರೆ ಬೇರೆ ಬರುತ್ತಿವೆ. ಅಧಿಕಾರಿಗಳು ನಿಮ್ಮ ಮ್ಯಾಪಿಂಗ್ ಆಗಿದೆ ಎಂದು ಹೇಳುತ್ತಿದ್ದಾರೆ ಆರೋಪಿಸಿದರು. ಆರೋಪಕ್ಕೆ ಉತ್ತರಿಸಿದ ಪಾಲಿಕೆಯ ಕಂದಾಯ ಅಧಿಕಾರಿ ಸಿದ್ದು ಹುಲ್ಲೋಳ್ಳಿ ಮಾತನಾಡಿ, ಮ್ಯಾಪಿಂಗ್ ಆಗಿಲ್ಲ ಎಂದು ಮತದಾನ ಪಟ್ಟಿಯಿಂದ ವಂಚಿತರಾಗುವುದಿಲ್ಲ. ಮ್ಯಾಪಿಂಗ್ ಆಗದಿದ್ದರೆ ಆನ್‌ಲೈನ್ ಮೂಲಕ ಮಾಡಬಹುದು.



ಸೂಕ್ತ ತರಬೇತಿ ಅವಶ್ಯ

ಮತದಾನದ ಪಟ್ಟಿಯಿಂದ ಯಾರೂ ವಂಚಿತರಾಗಬಾರದು.ಪಾಲಿಕೆಯ ಅಧಿಕಾರಿಗಳಿಂದ ಸರಿಯಾಗಿ ಮ್ಯಾಪಿಂಗ್ ಆಗುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರ ಜೊತೆಗೆ ಶಿಕ್ಷಕರಿಂದಲೂ ಮ್ಯಾಪಿಂಗ್ ಮಾಡಲು ಸೂಕ್ತ ತರಬೇತಿ ನೀಡಬೇಕು ಎಂದು ಎಂದು ಮಹಾಪೌರ ಮಂಗೇಶ್ ಪವಾರ್ ಅಧಿಕಾರಿಗಳಿಗೆ ಖಡಕ್ಕಾಗಿ ಸೂಚಿಸಿದರು.

ಮನೆಯಲ್ಲಿ ಯಾರೂ ಇಲ್ಲದ ವೇಳೆ ಮತ್ತೇ ಮ್ಯಾಪಿಂಗ್ ಮಾಡಿಕೊಳ್ಳಬಹುದಾಗಿದೆ ಎಂದು ಉತ್ತರಿಸಿದರು.

ಬಳಿಕ ದಕ್ಷಿಣ ಕ್ಷೇತ್ರದ ಶಾಸಕ ಅಭಯ್ ಪಾಟೀಲ್ ಮಾತನಾಡಿ, ಮತದಾರ ಪಟ್ಟಿಯ ಮ್ಯಾಪಿಂಗ್ ಪ್ರಕ್ರಿಯೆ ಪ್ರಗತಿ ಪರಿಶೀಲಿಸಿದಾಗ ಉಭಯ ಮತಕ್ಷೇತ್ರಗಳ ಪ್ರಕ್ರಿಯೆ ಅತ್ಯಂತ ಕಡಿಮೆಯಾಗಿದೆ. 16 ಮತಕ್ಷೇತ್ರದಲ್ಲಿ ಶೇಕಡಾ 90ರಷ್ಟು ಪ್ರಕ್ರಿಯೆ ನಡೆದಿದ್ದು, ನಗರ ಪ್ರದೇಶದಲ್ಲಿ ಶೇಕಡಾ 30 ರಷ್ಟು ಕಡಿಮೆಯಾಗಿದೆ. ಸಾರ್ವಜನಿಕರು ಒಂದು ವೇಳೆ ಈ ಪ್ರಕ್ರಿಯೆಯಿಂದ ಹೊರಗುಳಿದಿದ್ದರೇ, ಸಂಬಂಧಿಸಿದ ನಗರಸೇವಕರನ್ನು ಸಂಪರ್ಕಿಸಬೇಕು. ಇನ್ನು 1 ಲಕ್ಷ ಜನರು ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಇನ್ನು 1 ಲಕ್ಷ ಜನರು ಪ್ರಕ್ರಿಯೆಯಿಂದ ಹೊರಗುಳಿದಿದ್ದೀರಾ. ಪ್ರತಿಯೊಬ್ಬರೂ ಸ್ವತಃ ತಮ್ಮ ಮತಕ್ಷೇತ್ರಗಳಿಗೆ ಹೋಗಿ ನೋಂದಣಿಯನ್ನು ಮಾಡಿಸಿಕೊಳ್ಳಬೇಕೆಂದು ಹೇಳಿದರು. ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಮಹಾಪೌರ ಮಂಗೇಶ್ ಪವಾರ, ಉಪ ಮೇಯರ್ ವಾಣಿ ವಿಲಾಸ್ ಜೋಶಿ, ಆಡಳಿತ ಪಕ್ಷದ ನಾಯಕ ಹನುಮಂತ ಕೊಂಗಾಲಿ, ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಸೇರಿದಂತೆ ಹಲವಾರು ಕಾರ್ಪೋರೇಟರ್ ಗಳು, ಅಧಿಕಾರಿಗಳು ಇದ್ದರು.

ವನ್ಯಜೀವಿಗಳ ರಕ್ಷಣೆ ನಮ್ಮೆಲ್ಲರ ಹೊಣೆ

• **ಯರಗಟ್ಟಿ:** ಸಮೀಪದ ಸತ್ತಿಗೇರಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಪ್ರಾದೇಶಿಕ ಅರಣ್ಯ ಇಲಾಖೆ ಸವದತ್ತಿ ವಲಯ ಇವರು ಆಯೋಜಿಸಿದ್ದ ವಿಶ್ವ ವನ್ಯಜೀವ ದಿನಾಚರಣೆ ಆಚರಿಸಲಾಯಿತು.

ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ವನ್ಯ ಜೀವಿಗಳ ಸುರಕ್ಷಣಾ ಮಹತ್ವದ ಜಾಗೃತಿ ಜಾಥಾ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಕಾರ್ಯಕ್ರಮ ಉದ್ದೇಶಿಸಿ ಆರ್.ಎಫ್.ಓ ಸಂಜೀವ ಸಂಸುದ್ದಿ ಮಾತನಾಡಿದ ಅವರು ಅಳಿಯುತ್ತಿರುವ ವನ್ಯಜೀವಿಗಳು ಮತ್ತು ಅರಣ್ಯ ಸಂಪತ್ತನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ. ಪ್ರಕೃತಿಯ ಸಮತೋಲನ, ಜೀವವೈವಿಧ್ಯದ ಉಳಿವಿಗೆ ಮತ್ತು ಮುಂದಿನ ಪೀಳಿಗೆಯ ಸುಸ್ಥಿರ ಭವಿಷ್ಯಕ್ಕಾಗಿ ವನ್ಯಜೀವಿ ಸಂರಕ್ಷಣೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಿ, ಅಳಿವಿನಂಚಿನಲ್ಲಿರುವ ಪ್ರಾಣಿ-ಸಸ್ಯಗಳನ್ನು ರಕ್ಷಿಸುವ ಸಂಕಲ್ಪ ಮಾಡೋಣ.

ಜೀವವೈವಿಧ್ಯದ ರಕ್ಷಣೆ ವನ್ಯಜೀವಿಗಳು ಮತ್ತು ಅರಣ್ಯಗಳು ನಮ್ಮ ಭೂಮಿಯ ಅಮೂಲ್ಯ ಆಸ್ತಿಯಾಗಿದ್ದು, ಪರಿಸರ ವ್ಯವಸ್ಥೆಯ ಸಮತೋಲನಕ್ಕೆ ಅಗತ್ಯ. ಹವಾಮಾನ ಬದಲಾವಣೆತಡೆ ವನ್ಯಜೀವಿಗಳ ಸಂರಕ್ಷಣೆಯು ಹವಾಮಾನ ಬದಲಾವಣೆಯನ್ನು ಎದುರಿಸಲು ಪರಿಸರವನ್ನು ನಿಯಂತ್ರಿಸಲು ನೇರವಾಗಿ ಸಹಾಯ ಮಾಡುತ್ತದೆ ಎಂದು ಹೇಳಿದರು.

ನಂತರ ಸಂಪನ್ಮೂಲ ವ್ಯಕ್ತಿಯಾದ ವಾಯ್. ಆರ್. ನದಾಫ ಮಾತನಾಡಿ ಮನುಷ್ಯನ ಚಟುವಟಿಕೆಗಳಿಂದಾಗಿ ಅನೇಕ ಪ್ರಾಣಿ ಸಂಕುಲಗಳು ಅಳಿವಿನ ಅಂಚಿನಲ್ಲಿವೆ, ಇವುಗಳನ್ನು ಉಳಿಸುವುದು ನಮ್ಮ ಆದ್ಯತೆ. ಇದು ಕೇವಲ ಸರ್ಕಾರದ ಕೆಲಸವಲ್ಲ, ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯಾಗಿದೆ. ಸಸ್ಯ ಮತ್ತು ಪ್ರಾಣಿ ಸಂಕುಲದ ಮೇಲೆ ಪ್ರೀತಿ ಹಾಗೂ ಕಾಳಜಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಶಾಲಾ ಪ್ರಾಂಶುಪಾಲರಾದ ವಿ. ವೈ. ಕಲ್ಯಾಣಿ, ಮಾಜಿ ಗ್ರಾ. ಪಂ. ಉಪಾಧ್ಯಕ್ಷ ಗುರು ವಾಲಿ, ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಬಸಯ್ಯ ಸಾಲಿಮಠ, ಉಪ ವಲಯ ಅರಣ್ಯಾಧಿಕಾರಿ ಸೋಮಶೇಖರ ಪಾವಟೆ, ಡಿಆರ್.ಎಫ್.ಓ. ಎಂ. ಬಿ. ಬಾಗವಾನ, ಸಾಮಾಜಿಕ ಉಪ ವಲಯ ಅರಣ್ಯಾಧಿಕಾರಿ ಬಿ. ಎಮ್. ಉಪ್ಪಾರ, ಗ್ರಾ. ಪಂ. ಕಾರ್ಯದರ್ಶಿ ಸುರೇಶ ತೋಟದ, ಉಮೇಶ ಮಾಗುಂಡನವರ, ವಿಠ್ಠಲ ಭಾಂಗಿ, ಶಿಕ್ಷಕರಾದ ಎ. ಎಂ. ಸಿಂಗಾಡೆ, ವಾಯ್. ಆರ್. ಕೋಟಗಿ, ಎಸ್. ಸಿ. ಹೊಸಟ್ಟಿ, ಎಚ್. ಎಸ್. ಶೆಟ್ಟಪ್ಪನವರ, ಗಸ್ತು ಅರಣ್ಯಪಾಲಕರಾದ ದುರುಗಪ್ಪ ಅರಟಗಲ್, ಮಹಾಂತೇಶ ಡೊಂಬರ, ಆನಂದ ಹನಸಿ, ಮಹಾಂತೇಶ ತೇಲಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



ಕೊಕಟನೂರನಲ್ಲಿ ನಾಟಕಕ್ಕೆ ಚಾಲನೆ



• **ಕೊಕಟನೂರ:** ಗ್ರಾಮದಲ್ಲಿ ಶ್ರೀ ಯಮನೂರಪ್ಪ ಉರುಸ್ ಜಾತ್ರಾ ಮಹೋತ್ಸವ ನಿಮಿತ್ತ ಭಾನುವಾರ ರಾತ್ರಿ ಸೊಕ್ಕಿನ ಸೊಸೆ ಅರ್ಥ ತಾಯಿಯ ಕರಳು ಎಂಬ ಸುಂದರ ಸಾಮಾಜಿಕ ನಾಟಕವನ್ನು ಗಣ್ಯರು ಉದ್ಘಾಟಿಸಿದರು.

ಕೆಪಿಸಿಸಿ ಸದಸ್ಯ ಶ್ಯಾಮರಾವ್ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಸಿದ್ದಪ್ಪ ಮುದುಕಣ್ಣವರ, ಡಾ.ಮಲ್ಲಿಕಾರ್ಜುನ ಹಿರೇಮಠ, ಅಣ್ಣಪ್ಪ ಖೋತ, ಅನಿಲ್ ಮುಳಿಕ, ಅರ್ಜುನ್ ಪೂಜಾರಿ, ಮಲ್ಲಿಕಾರ್ಜುನ್ ಪರಾಂಡೆ, ಕಾಂತು ಮಾದರ, ಬೀರಪ್ಪ ಸನದಿ ನಾನಪ್ಪ ವೀರಗೌಡ, ನಾಗೇಶ್ ದಡಕೆ, ಗೈಬುಸಾಬ ಪಶ್ಚಾಪುರ, ಅಣ್ಣಪ್ಪ ಶೆಟ್ಟರ, ಪ್ರಶಾಂತ ಕಾಂಬಳೆ, ಅಬ್ದುಲ್ ತಾವರೆ, ಮಹಾವೀರ ಹಳಕಿ, ಬಂಡೂ ಜಾಧವ, ಸುರೇಶ ಈರಗೌಡರ, ಸಂಜು ಕಟ್ಟಿ ಸೇರಿದಂತೆ ಮತ್ತಿತರರು ಇದ್ದರು. ಕುಮಾರ ನಾವಿ ನಿರೂಪಿಸಿದರು.

ಮಹಿಳಾ ಪೊಲೀಸ್ ಸಿಬ್ಬಂದಿಗೆ ಸನ್ಮಾನ

• **ಚನ್ನಮ್ಮನ ಕಿತ್ತೂರು:** ಕರ್ನಾಟಕ ಯುವ ರಕ್ಷಣಾ ವೇದಿಕೆಯಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಪೊಲೀಸ್ ಸಿಬ್ಬಂದಿ ಸನ್ಮಾನಿಸಿ ಗೌರವಿಸಲಾಯಿತು.

ಮಹಿಳಾ ಪೋಲಿಸ್ ಸಿಬ್ಬಂದಿಗಳಾದ ಗೌರಮ್ಮ ಸಾಲಿಮಠ, ಜಯಶ್ರೀ ಪಾಟೀಲ, ಗೌರಮ್ಮ ಪಾರಿಶ್ವಾಡ, ಲಕ್ಷ್ಮೀ ಕುಂಬಾರರನ್ನು ಸನ್ಮಾನಿಸಲಾಯಿತು.

ಪಿಎಸ್ಐ ಪ್ರವೀಣ ಗಂಗೋಳ, ಕರ್ನಾಟಕ ಯುವ ರಕ್ಷಣಾ ವೇದಿಕೆಯ ತಾಲೂಕು ಘಟಕದ ಅಧ್ಯಕ್ಷ ಕಿರಣ ವಾಳದ, ಮುತ್ತು ಪೂಜೇರ, ಶಂಕರ ಗಂಗಪ್ಪನವರ, ಬಸು ಸಂಪಗಾವಿ, ಮಹೇಶ ಪೂಜೇರ, ಜಗದೀಶ ಧರೆಣ್ಣವರ, ಟೋಪನಗೌಡ ಪಾಟೀಲ, ಚೇತನ್ ಕೋಟಗಿ, ಪ್ರವೀಣ ಬಡಿಗೇರ, ಪೋಲಿಸ್ ಸಿಬ್ಬಂದಿಗಳಾದ ನಿಂಗರಾಜ ಗಳಗಿ, ಶಿವಶಂಕರ ಪೇಂಟೆದ ಸಿಬ್ಬಂದಿ ಇದ್ದರು.



ವಿದ್ಯಾರ್ಥಿಗಳಿಗೆ ಕಾನೂನು ಅರಿವು



• **ಯಮಕನಮರಡಿ:** ಗ್ರಾಮದ ವಿದ್ಯಾವರ್ಧಕ ಸಂಘದ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ ವತಿಯಿಂದ ವಿದ್ಯಾಥಿಗಳಿಗೆ ಕಾನೂನು ಅರಿವು ಕಾರ್ಯಕ್ರಮ ನಡೆಯಿತು. ಮಕ್ಕಳು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯದ ವಿರುದ್ಧ ಜಾಗೃತಿ ವಹಿಸಬೇಕು ಎಂದು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಪಿ.ವೈ.ಘಸ್ತಿ ಹೇಳಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹುಕ್ಕೇರಿಯ ಎಸಿಡಿಪಿಓ ಮಹದೇವ್ ಕೋಳಿ ಮಾತನಾಡಿ, ಬಾಲ್ಯ ವಿವಾಹ ತಡೆಗಟ್ಟಲು ಮುಂದಾಗಬೇಕು ಎಂದರು.

ಪ್ರಧಾನ ಗುರುಗಳಾದ ಎಸ್.ಜಿ. ಹುನ್ನರಗಿ, ಮುಖ್ಯೋಪಾಧ್ಯಾರಾದ ಎ. ಬಿ. ಮುಗಳಿ, ಸಂಘದ ಕಾರ್ಯದರ್ಶಿಗಳಾದ ಜೆ. ಎನ್. ಅವಾಡೆ, ಅಂಗನವಾಡಿ ಕಾರ್ಯಕರ್ತರಾದ ಪ್ರೇಮಾ ತುಪ್ಪದ, ಲಕ್ಷ್ಮಿ ವಾಘ ಇನ್ನಿತರ ಪ್ರೌಢಶಾಲೆಯ ಎಲ್ಲ ಶಿಕ್ಷಕರ ಉಪಸ್ಥಿತರಿದ್ದರು. ಎಸ್. ಬಿ. ಘಸ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ.ಬಿ. ಪೀಸೆ ನಿರೂಪಿಸಿದರು.

ಸಾಯಿ ಸ್ಪೋರ್ಟ್ಸ್ ತಂಡಕ್ಕೆ ಸುಳೇಭಾವಿ ಚಾಂಪಿಯನ್ಸ್ ಟ್ರೋಫಿ

• **ಬೆಳಗಾವಿ:** ಗ್ರಾಮೀಣ ವಿಧಾನಸಭಾ ಕ್ಷೇತ್ರದ ಸುಳೇಭಾವಿ ಗ್ರಾಮದಲ್ಲಿ ಲಕ್ಷ್ಮೀ ತಾಯಿ ಫೌಂಡೇಷನ್ ವತಿಯಿಂದ ಆಯೋಜಿಸಲಾಗಿದ್ದ ಸುಳೇಭಾವಿ ಚಾಂಪಿಯನ್ಸ್ ಟ್ರೋಫಿಹಾಫ್ ಪಿಚ್ ಕ್ರಿಕೆಟ್ ಪಂದ್ಯಾವಳಿಯು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಪಂದ್ಯಾವಳಿಯ ಉದ್ದಕ್ಕೂ ಅದ್ಭುತ ಪ್ರದರ್ಶನ ನೀಡಿ, ಫೈನಲ್ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿದ ಶ್ರೀ ಸಾಯಿ ಸ್ಪೋರ್ಟ್ಸ್, ಸುಳೇಭಾವಿ ತಂಡಕ್ಕೆ ಯುವ ಮುಖಂಡ ಮೃಣಾಲ ಹೆಬ್ಬಾಳ್ಕರ್ ಪ್ರಶಸ್ತಿ ವಿತರಿಸಿದರು.

ದ್ವಿತೀಯ ಸ್ಥಾನ ಪಡೆದ ಸುಳೇಭಾವಿ ಈಗಲ್ಸ್ ಹಾಗೂ ತೃತೀಯ ಸ್ಥಾನ ಪಡೆದ ಚಂದನ್ ಸ್ಪೋರ್ಟ್ಸ್, ಮಾರಿಹಾಳ ತಂಡದವರಿಗೂ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.



ಹಿಡಕಲ್ ಡ್ಯಾಮ್‌ನಲ್ಲಿ ಪೌರತ್ವ ಶಿಬಿರ

• **ಯಮಕನಮರಡಿ:** ಶ್ರೀ ಸಿದ್ದರಾಮೇಶ್ವರ ಶಿಕ್ಷಣ ಸಂಸ್ಥೆಯ ಚಂದ್ರಗಿರಿ ಶಿಕ್ಷಣ ಮಹಾವಿದ್ಯಾಲಯದ 202526ನೇ ಸಾಲಿನ ಪೌರತ್ವ ಶಿಬಿರವು ಮಾ.11ರಿಂದ ಮೂರು ದಿನಗಳ ಕಾಲ ಹಿಡಕಲ್ ಡ್ಯಾಮ್‌ನ ಶಕ್ತಿ ಸದನ ಮಹಿಳಾ ಪುನರ್ವಸತಿ ವಸತಿ ಕೇಂದ್ರದಲ್ಲಿ ನಡೆಯಲಿದೆ. ಶಿಬಿರವನ್ನು ಹತ್ತರಗಿ ಹರಿಮಂದಿರದ ಡಾ. ಆನಂದ್ ಮಹಾರಾಜ್ ಗೋಸಾವಿ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಎಸ್ಸಿಎಸ್ಟಿ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ರಾಜು ತಳವಾರ್ ಭಾಗವಹಿಸಲಿದ್ದಾರೆ. ಯಮಕನಮರಡಿಯ ಕಿರಣ್ ಸಿಂಗ್ ರಜಪೂತ್ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗುಲ ಅವರು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಿಬಿರದ ನೇತೃತ್ವವನ್ನು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮ ಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಮೂರು ದಿನಗಳ ಕಾಲ ನಡೆಯುವ ಈ ಶಿಬಿರದಲ್ಲಿ ವಿವಿಧ ಜಾಗೃತಿ ವಿಷಯಗಳ ಕುರಿತು ಉಪನ್ಯಾಸಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಶ್ರಮದಾನ ಹಾಗೂ ಯೋಗ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕುರಿತು ಶಿಬಿರದ ಅಧ್ಯಕ್ಷರಾದ ಡಾ. ಎ.ಎಲ್. ಪಾಟೀಲ್ ಹಾಗೂ ಶಿಬಿರದ ಸಂಯೋಜಕರಾದ ಜಯಶ್ರೀ ಕೆಂಗೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ



• **ಮೂಡಲಗಿ:** ತಾಲೂಕಿನ ಹಳ್ಳೂರ ಗುಬ್ಬಿ ಬಸ್ಟ್ಯಾಂಡ್ ಹತ್ತಿರ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ವಿದ್ಯಾರ್ಥಿಗಳಿಗೆ ಶುಭೋದಯ ಸ್ವಾಭಿಮಾನ ಕನ್ನಡ ಸಂರಕ್ಷಣಾ ವೇದಿಕೆಯವತಿಯಿಂದ ಸಾಮಾನ್ಯ ಜ್ಞಾನ ಪುಸ್ತಕಗಳನ್ನು ಉಚಿತವಾಗಿ ವಿತರಿಸಿದರು.

ಪ್ರಧಾನ ಗುರು ಬಿಪಿ ಪಾಟೀಲ್ ಮಾತನಾಡಿ, ಸ್ವಾಭಿಮಾನಿ ಕನ್ನಡ ವೇದಿಕೆಯವರು ಸಮಾಜ ಮುಖಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ಅವರು ಶಿಕ್ಷಣ ವಲಯಕ್ಕೆ ವಿಶೇಷ ಸಹಕಾರ ಸಹ ನೀಡುತ್ತಾರೆ ಎಂದು ಶ್ಲಾಘಿಸಿದರು.

ವೇದಿಕೆಯ ಅಧ್ಯಕ್ಷ ಸುಭಾಸ ಕಡಾಡಿ ಮಾತನಾಡಿ, ಕನ್ನಡನಾಡಿನಲ್ಲಿ ಕನ್ನಡಿಗರೆ ಸಾರ್ವಭೌಮರು, ಕನ್ನಡ ಭಾಷೆ ಹಾಗೂ ಸರ್ಕಾರಿ ಕನ್ನಡ ಶಾಲೆಗಳು ಉಳಿಯಬೇಕು. ಕನ್ನಡ ಭಾಷೆ ನಾಶವಾಗಲು ಕೆಲ ಕನ್ನಡಿಗರು ಕಾರಣ. ನವೆಂಬರ್ ಒಂದರ ಮಾತ್ರ ಕನ್ನಡಿಗನಾಗಬಾರದು ಪ್ರತಿನಿತ್ಯ ಸ್ವಾಭಿಮಾನಿ ಕನ್ನಡಿಗನಾಗಬೇಕೆಂದು ಹೇಳಿದರು.

ಎಸ್‌ಡಿಎಂಸಿ ಸದಸ್ಯರಾದ ಎಂ.ಐ. ಮಠಪತಿ, ಭೀಮಪ್ಪ ನಿಡೋಣಿ, ಭುಜಪ್ಪ ಸಪ್ತಸಾಗರ, ವಾದಿರಾಜ ದೇಸಾಯಿ. ಎಮ್.ವಾಯ್. ಮರೆಕ್ಕನವರ, ಎಂ.ಬಿ.ತಳವಾರ ಗುರುಮಾತೆಯರು ಮತ್ತು ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಮಹಿಳೆ ಅಬಲೆಯಲ್ಲ ಸಬಲೆ

• **ಗೋಕಾಕ:** ಮಹಿಳೆ ವಿವಿಧ ಕ್ಷೇತ್ರಗಳಲ್ಲಿ ಇಂದು ಮಾದರಿಯಾಗಿ ಕಾರ್ಯನಿರ್ವಹಿಸುತ್ತಾ ಅಬಲೆಯಲ್ಲ ಸಬಲೆ ಎಂದು ನಿರೂಪಿಸುತ್ತಿದ್ದಾರೆ ಎಂದು ನಿವೃತ್ತ ಪ್ರಾಚಾರ್ಯೆ ಅನುಪಾ ಕೌಶಿಕ ಹೇಳಿದರು.

ರವಿವಾರ ನಗರದ ಬಸವ ಮಂದಿರದಲ್ಲಿ ಭಾವಯಾನ ಮಹಿಳಾ ಸಾಹಿತ್ಯ, ಸಾಂಸ್ಕೃತಿಕ ವೇದಿಕೆಯವರು ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಅತಿಥಿಗಳಾಗಿಪಾಲ್ಗೊಂಡುಮಾತನಾಡುತ್ತಿದ್ದರು. ಆರೋಗ್ಯವಂತನಿರ್ಮಿಸುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರನ್ನು ಉತ್ತಮ ನಾಗರಿಕರನ್ನಾಗಿ ತಾಯಂದಿರು ಮಾಡಬೇಕಾಗಿದೆ. ಧನಾತ್ಮಕ ಚಿಂತನೆಯೊಂದಿಗೆ ಪುರುಷರೊಂದಿಗೆ ಹೋಲಿಸಿಕೊಳ್ಳದೆ ತಾವು ಕಾರ್ಯನಿರ್ವಹಿಸಿ. ಎಲ್ಲರೂ ಸಂಘಟಿತರಾಗಿ ಸಮಸ್ಯೆಗಳನ್ನು ಎದುರಿಸುವಂತೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಡಾಕ್ಟರೇಟ ಪಡೆದ ಡಾ.ಸುನೇನಾ ಕಲಗುಡಿ, ಡಾ.ಕಲ್ಪನಾ ತೇರದಾಳ ಹಾಗೂ ಪ್ರಾಚಾರ್ಯರಾಗಿ ಭಡ್ತಿ ಹೊಂದಿದ ಅನ್ನಪೂರ್ಣ ಕುರಬೇಟ, ಮಹಾನಂದಾ ಪಾಟೀಲ ಅವರನ್ನು ಸತ್ಕರಿಸಲಾಯಿತು. ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ವೇದಿಕೆಯ ಮೇಲೆ ಭಾರತಿ ಮದಭಾಂವಿ, ಪುಷ್ಪಾ ಮುರಗೋಡ, ಮಹಾನಂದಾ ಪಾಟೀಲ, ಆರತಿ ಗುಗವಾಡ, ಶಾಂತಾ ಹುರಕಡ್ಲಿ, ಶಿವಲೀಲಾ ಪಾಟೀಲ ಇದ್ದರು.



ಗಮನ ಸೆಳೆದ ಶೋಭಾಯಾತ್ರೆ



• **ಸುರೇಬಾನ:** ವಿರಾಟ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಅಂಗವಾಗಿ ಸೋಮವಾರ ಸಂಜೆ ಬೃಹತ್ ಶೋಭಾಯಾತ್ರೆಯು ಸುರೇಬಾನ-ಮನಿಹಾಳ ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ರಾಮನ ಪ್ರತಿಮೆ, ಶಿವಾಜಿ ಮಹಾರಾಜರ ಪ್ರತಿಮೆ ಹಾಗೂ ಬೃಹತ್ ಹನುಮಾನ ಕಟೌಟ್ ಗಳು ಮೆರವಣಿಗೆಯುದ್ದಕ್ಕೂ ರಂಜಿಸಿದವು.

ಜಗ್ಗಲಗಿ, ಜಾಂಜ್, ಡೊಳ್ಳು ಕುಣಿತ, ಗೊಂಬೆ ವೇಷದಾರಿಗಳ ಕುಣಿತ ರಸ್ತೆಯುದ್ದಕ್ಕೂ ನೋಡುಗರ ಮನ ಸೂರೆಗೊಳಿಸಿದವು.

ನೂರಾರು ಹಿಂದು ಕಾರ್ಯಕರ್ತರು ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. ಕೊನೆಗೆ ಮಾರುತೇಶ್ವರ ತೇರಿನಮೈದಾನಕ್ಕೆ ಬಂದು ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾದರು.

ಪರೀಕ್ಷಾ ಸಾಮಗ್ರಿ ವಿತರಣೆ

• **ಅಥಣಿ:** ವಿದ್ಯಾರ್ಥಿಗಳು ಆತ್ಮವಿಶ್ವಾಸ ಮತ್ತು ಸಾಧಿಸುವ ಗುರಿ ಇಟ್ಟು ಕೊಂಡಲ್ಲಿ ಸಾಧನೆ ನಿಮಗೆ ಸುಲಭವಾಗಲಿದೆ ಎಂದು ಯುವ ನಾಯಕ ಚಿದಾನಂದ ಸವದಿ ಹೇಳಿದರು.

ಅವರು ಸ್ಥಳೀಯ ರಾಯಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಪರೀಕ್ಷಾ ಪ್ಯಾಡಗಳನ್ನು ವಿತರಿಸಿ ಮಾತನಾಡಿ, ಹೆತ್ತ ತಂದೆ ತಾಯಿಗಳ ಋಣ ತೀರಿಸಲು ಮಕ್ಕಳು ಒಳ್ಳೆಯ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಈ ವೇಳೆ ರಾಯಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್ .ಎಮ್.ಡಾಂಗೆ , ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಸುರೇಶ ಬುರ್ಲಿ, ಪ್ರಾಥಮಿಕ ಶಾಲಾ ಪ್ರಧಾನ ಗುರುಮಾತೆ ಆಸಿಯಾ ಪಟೇಲ್, ಆಡಳಿತಾಧಿಕಾರಿ ಎ.ಎಚ್.ಮುಲ್ಲಾ, ಪ್ರಾಥಮಿಕ ,ಪ್ರೌಢ ಶಾಲಾ ವಿಭಾಗದ ಗುರುಗಳು, ಗುರುಮಾತೆಯರು,ಸಿಬ್ಬಂದಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ಕಿರುಸುದ್ದಿ

ಮಾ.10ರಿಂದ ಸಮೂಹ ಗಾಯನ ತರಬೇತಿ

ಬೆಳಗಾವಿ : ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಮೈಸೂರು ಮಲ್ಲಿಗೆ ಕವಿ ಕೆ ಎಸ್ ನರಸಿಂಹ ಸ್ವಾಮಿ ಟ್ರಸ್ಟ್ ವತಿಯಿಂದ ಮಾ.10-11ರಂದು ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಕೆ ಎಸ್ ನರಸಿಂಹ ಸ್ವಾಮಿ ಅವರ ಗೀತೆಗಳ ಸಮೂಹ ಗಾಯನ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ತರಬೇತಿ ಪಡೆದ ಶಿಬಿರಾರ್ಥಿಗಳಿಂದ ಮಾ.11ರ ಸಂಜೆ 4ಗಂಟೆಗೆ ಗಾಯನ, ಸ್ಥಳಿಯ ಕಲಾವಿದರಿಂದ ಕೆ.ಎಸ್ ನರಸಿಂಹ ಸ್ವಾಮಿ ಅವರ ಗೀತೆಗಳಿಗೆ ನೃತ್ಯ ಹಾಗೂ ಖ್ಯಾತ ಕಲಾವಿದರಿಂದ ಗಾಯನ ಮತ್ತು ಕೆ ಎಸ್ ನರಸಿಂಹ ಸ್ವಾಮಿ ಅವರ ಕುರಿತು ನಾಡಿನ ಖ್ಯಾತ ಸಾಹಿತಿ ಹಿರಿಯ ಪತ್ರಕರ್ತರಾದ ಸರಜೂ ಕಾಟ್ಕರ್ ಅವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ.

ತರಬೇತಿ ಉಚಿತವಾಗಿದ್ದು, ಆಸಕ್ತರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಸಮಾರೋಪ ಸಮಾರಂಭವನ್ನು ಮಾ.11 ರ ಸಂಜೆ 4.ಗಂಟೆಗೆ ಪ್ರಾದೇಶಿಕ ಆಯುಕ್ತರು ಕೆ.ಎಂ.ಜಾನಕಿ ಅವರು ಉದ್ಘಾಟಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಕನ್ನಡ ಮತ್ತು ಸಂಸ್ಕಂತಿ ಇಲಾಖೆಯ ಜಂಟಿ ನಿರ್ದೇಕರಾದ ವಿ,ಎನ್,ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕಂತಿ ಇಲಾಖೆಯ ಉಪನಿರ್ದೇಶಕರಾದ ವಿದ್ಯಾವತಿ ಭಜಂತ್ರಿ, ಡಿಡಿಪಿಐ ಲೀಲಾವತಿ ಹಿರೇಮಠ್, ಡಿಡಿಪಿಯು ಎಂ,ಎಂ,ಕಾಂಬ್ಳೆ, ಬಿಇಓ ರವಿ ಭಜಂತ್ರಿ, ರಾಣಿ ಚನ್ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಎಸ್,ಸಿ.ಪಾಟೀಲ, ಬಿಎಡ್ ಕಾಲೇಜಿನ ಪ್ರಾಂಶುಪಾಲರಾದ ನಿರ್ಮಲ ಬಟ್ಟಲ ಅವರುಗಳು ಆಗಮಿಸಲಿದ್ದಾರೆ.

ಅವಧಿ ವಿಸ್ತರಣೆ

ಬೆಳಗಾವಿ : 2025-26ನೇ ಸಾಲಿನಲ್ಲಿ ಆಹಾರ ವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯ ಸಹಾಯಧನ ಸೌಲಭ್ಯ ಒದಗಿಸಲು ಆನ್ ಲೈನ್ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಜನರ ಅಭಿವೃದ್ಧಿಗಾಗಿ 2025-26ನೇ ಸಾಲಿನಲ್ಲಿಅನುಷ್ಠಾನಗೊಳಿಸುತ್ತಿರುವ ಆಹಾರ ವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಲ್ಲಿ ಸೌಲಭ್ಯ ಪಡೆಯಬಯಸುವವರಿಂದ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ ರೂ.3.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. ಉಳಿಕೆ ಮೊತ್ತವನ್ನು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿರುತ್ತದೆ. ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರ ಬೆಳಗಾವಿ ಉತ್ತರ ಕ್ಷೇತ್ರದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.ಹಿಂದುಳಿದ ವರ್ಗಗಳ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮಒನ್, ಬೆಳಗಾವಿ ಒನ್ , ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಆನ್ಲೈನಲ್ಲಿ ಅರ್ಜಿಯನ್ನು ಅಂತಿಮ ಮಾ.4 ರ ವರೆಗೆ ನಿಗಧಿಪಡಿಸಲಾಗಿದ್ದು.ಪ್ರಸ್ತುತ ಅರ್ಜಿ ಸಲ್ಲಿಸಲು ಕೊನೆಯ ಮಾ.20 ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಜಿಲ್ಲಾ ವ್ಯವಸ್ಥಾಪಕರು ಸಂಪರ್ಕಿಸಬಹುದಾಗಿದೆ.

ಮಾ.11ರಂದು ಆರೋಗ್ಯತಪಾಸಣಾ ಶಿಬಿರ

ರಾಯಬಾಗ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ತಾಲೂಕಾ ಆರೋಗ್ಯಇಲಾಖೆಯ ಸಹಯೋಗದಲ್ಲಿ ಪಟ್ಟಣದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ಮಾ.11 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ೨ವರೆಗೆಉಚಿತಆರೋಗ್ಯತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿದೆ.ಶಿಬಿರದಲ್ಲಿ ಚಿಕ್ಕ ಮಕ್ಕಳ ಹೃದಯರೋಗ, ನವಜಾತ ಶಿಸುಗಳ ಆರೈಕೆ ಮತ್ತು ಸಲಹೆಗಳು, ಚುಚ್ಚುಮದ್ದುಗಳ ಸಲಹೆ, ಮಹಿಳೆಯರ ಮುಟ್ಟಿನತೊಂದರೆ ಬಗ್ಗೆ ಚಿಕಿತ್ಸೆ, ಗರ್ಭಿಣಿಯರಆರೈಕೆ ಮತ್ತು ಸಲಹೆಗಳು, ಕುಟುಂಬ ಯೋಜನೆ ಮತ್ತು ಬಂಜೆತನ ನಿವಾರಣೆ ಚಿಕಿತ್ಸೆಗಳ ಕುರಿತುಚಿಕ್ಕ ಮಕ್ಕಳ ತಜ್ಞ ವೈದ್ಯರಾದಡಾ.ಪ್ರಭಾಕರಧರ್ಮಟ್ಟಿ, ಸ್ತ್ರೀರೋಗ ಹಾಗೂ ಪ್ರಸೂತಿತಜ್ಞೆಡಾ. ಪ್ರೀತಾ ನಾಯಕರ ಆಗಮಿಸಿ ಆರೋಗ್ಯತಪಾಸಣೆ ಮಾಡಿ ಸಲಹೆ ನೀಡಲಿದ್ದಾರೆ. ಕಾರಣ ಸಾರ್ವಜನಿಕರುಉಚಿತಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ತಾಲೂಕಾ ವೈದ್ಯಾಧಿಕಾರಿ ಎಸ್.ಎಮ್.ಪಾಟೀಲ ಹಾಗೂ ವಲಯ ಮೇಲ್ವಿಚಾರಿಕೆ ಪರವೀನ ನದಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಮಕನಮರಡಿ: ಗ್ರಾಮದಲ್ಲಿ ಯುವಕರು ಹಾಗೂ ಪೊಲೀಸ್ ಸಿಬ್ಬಂದಿ ರಂಗಪಂಚಮಿ ಹಬ್ಬ ಆಚರಿಸಿದರು. ರಂಗಿನಾಟದಲ್ಲಿ ಸಿಪಿಐ ಜಾವೀದ ಮುಸಾಪುರಿ ಅವರು ಪಾಲ್ಗೊಂಡ ಪರಸ್ಪರ ಬಣ್ಣ ಎರಚುವಲ್ಲಿ ಯಶಸ್ವಿಯಾದರು. ಸ್ಥಳೀಯ ಯುವಕ ಮಿತ್ರರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

ಆತ್ಮರಕ್ಷಣಾ ಕೌಶಲ್ಯ ರೂಢಿಸಿಕೊಳ್ಳಿ: ಸಂತೋಷ

ಬೆಳಗಾವಿ: ವಿದ್ಯಾರ್ಥಿನಿಯರು ತಮ್ಮ ಆತ್ಮರಕ್ಷಣೆಗೆ ಸಂಬಂಧಿಸಿದ ವಿವಿಧ ಕೌಶಲ್ಯಗಳನ್ನು ಪಡೆದುಕೊಂಡಿರಬೇಕು. ಅವರು ಪಡೆದ ಈ ಜ್ಞಾನ ಅವರನ್ನು ಕವಚದಂತೆ ರಕ್ಷಿಸುತ್ತದೆ ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವ ಸಂತೋಷ ಕಾಮಗೌಡ ಅವರು ಅಭಿಪ್ರಾಯಪಟ್ಟರು.ಪಿ.ಎಂ. ಉಷಾ ಮೇರು ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಕೋಶ ಮತ್ತು ದೈಹಿಕ ಶಿಕ್ಷಣ ವಿಭಾಗ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಮತ್ತು ಯಕ್ಷಿತ್ ಯುವ ಫೌಂಡೇಶನ್ ನೇತೃತ್ವದಲ್ಲಿ ಸೋಮವಾರ ವಿದ್ಯಾರ್ಥಿನಿಯರಿಗೆ ಒಂದು ವಾರದ ಆತ್ಮರಕ್ಷಣಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣಾ ತರಬೇತಿಯ ಅಗತ್ಯತೆಯಿದೆ. ವಿವಿಧ ರಕ್ಷಣಾ ಮತ್ತು ಸುರಕ್ಷತಾ ತಂತ್ರಗಳನ್ನು ಕಲಿಯುವುದರಿಂದ ತುರ್ತು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.ಸಂಪನ್ಮೂಲ ವ್ಯಕ್ತಿಯಾಗಿ ಯಕ್ಷಿತ್ ಯುವ ಫೌಂಡೇಶನ್ನ ಅಂತಾರಾಷ್ಟ್ರೀಯ ಟೈಕೊಂಡೋ ತರಬೇತುದಾರ ಶ್ರೀಪಾದರಾವ್ ಮಾತನಾಡಿದರು. ಸಮಾಜದ ಸಮಸ್ಯೆಗಳನ್ನು ಎದುರಿಸಲು ಪ್ರತಿಯೊಬ್ಬರು ಸಿದ್ದರಾಗಬೇಕು. ತಮ್ಮ ಆತ್ಮ ರಕ್ಷಣೆ ತಾವೇ ಮಾಡಿಕೊಳ್ಳಬೇಕು. ಅಂಥ ಕೌಶಲ್ಯಗಳನ್ನು ನಾವು ಇಲ್ಲಿ ನೀಡಲಿದ್ದೇವೆ. ಜೊತೆಗೆ ಪ್ರಾಕೃತಿಕವಾಗಿ ತುರ್ತು ಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳುವುದರ ಜೊತೆಗೆ ಜೀವರಕ್ಷಕ ತಂತ್ರೋಪಾಯಗಳನ್ನು ಹೇಳಿಕೊಡುತ್ತಿದ್ದೇವೆ ಎಂದರು.



ಬೆಳಗಾವಿ: ಪಿ.ಎಂ. ಉಷಾ ಮೇರು ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಕೋಶ ಮತ್ತು ದೈಹಿಕ ಶಿಕ್ಷಣ ವಿಭಾಗ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಮತ್ತು ಯಕ್ಷಿತ್ ಯುವ ಫೌಂಡೇಶನ್ ನೇತೃತ್ವದಲ್ಲಿ, ಸೋಮವಾರ ವಿದ್ಯಾರ್ಥಿನಿಯರಿಗೆ ಒಂದು ವಾರದ ಆತ್ಮರಕ್ಷಣಾ ತರಬೇತಿ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು.

ಬೈಲಹೊಂಗಲ ಬಂದ್ ಯಶಸ್ವಿ

ಬೈಲಹೊಂಗಲ: ಪಟ್ಟಣದಲ್ಲಿರುವ ವೀರರಾಣಿ ಕಿತ್ತೂರು ರಾಣಿ ಚನ್ನಮ್ಮಾಜಿಗೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಆರೋಪಿಸಿ ವಿವಿಧ ಕನ್ನಡಪರ, ರೈತಪರ ಸಂಘಟನೆಗಳು ಹಾಗೂ ಹಲವಾರು ಸಂಘ ಸಂಸ್ಥೆಗಳು ಸೋಮವಾರ ಕರೆ ನೀಡಿದ್ದ ಬೈಲಹೊಂಗಲ ಬಂದ್ ಬಹುತೇಕ ಯಶಸ್ವಿಯಾಯಿತು.

ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ ಅವರ ನೇತೃತ್ವದಲ್ಲಿ ನಡೆದ ಬಂದ್‌ಗೆ ಹಲವು ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಬೆಂಬಲ ಸೂಚಿಸಿದರು.

ಬೆಳಿಗ್ಗೆ ಪಟ್ಟಣದ ಕೇಂದ್ರ ಬಸ್ ನಿಲ್ದಾಣದ ಸಮೀಪದ ಕರೆಮ್ಮದೇವಿ ದೇವಸ್ಥಾನದ ಬಳಿ ಸೇರಿದ್ದ ಪ್ರತಿಭಟನಾಕಾರರು ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಬೈಕ್ಗಳ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿಸುವ ಪ್ರಯತ್ನ ನಡೆಸಿದರು.

ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ನಂದಗಡದಲ್ಲಿ ನೂರಾರು ಕೋಟಿ ರೂ. ವೆಚ್ಚದಲ್ಲಿ ರಾಕ್ ಗಾರ್ಡನ್ ನಿರ್ಮಿಸಿ ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದಆದ್ದೂರಿಯಾಗಿಉದ್ಘಾಟನೆ ಮಾಡಲಾಗಿದೆ. ಆದರೆ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮಾಜಿಯ ಐಕ್ಯ ಸ್ಥಳದಲ್ಲಿರುವ ರಾಕ್ ಗಾರ್ಡನ್ ಅನ್ನು ಯಾರಿಗೂ ತಿಳಿಸದೆ ಉದ್ಘಾಟಿಸಿರುವುದು ಶಾಸಕರ ಮಲತಾಯಿ ಧೋರಣೆಯನ್ನು ತೋರಿಸುತ್ತದೆ ಎಂದು ಆರೋಪಿಸಿದರು.

ಚನ್ನಮ್ಮಾಜಿಯ ಐಕ್ಯ ಸ್ಥಳಕ್ಕೆ ಸಮರ್ಪಕ ಅಭಿವೃದ್ಧಿ



ಚನ್ನಮ್ಮಾಜಿ ಅಭಿವೃದ್ಧಿ ಕಾಮಗಾರಿಗಳ ನಿರ್ಲಕ್ಷ್ಯ ಆರೋಪ

ಮಾ.27ರ ಗಡುವು

ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಮತ್ತು ಶಾಸಕರಿಗೆ ಮಾರ್ಚ್ 27ರವರೆಗೆ ಅಂತಿಮ ಗಡುವು ನೀಡಿದ್ದು, ಅದರವರೆಗೆ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಮಾಡಬೇಕು ಹಾಗೂ ರಾಕ್ ಗಾರ್ಡನ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾನ್ನಿಧ್ಯದಲ್ಲಿ ಅದ್ದೂರಿಯಾಗಿ ಉದ್ಘಾಟನೆ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಈ ವೇಳೆ ಮಾಜಿ ಜಿಪಂ ಸದಸ್ಯ ಬಿ.ಎಂ. ಚಿಕ್ಕನಗೌಡ್ರ, ಸಮಾಜ ಸೇವಕ ರಫೀಕ ಬಡೇಘರ, ಕಿತ್ತೂರು ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ ಸೇರಿದಂತೆ ಅನೇಕರು ಮಾತನಾಡಿದರು.

ಬಳಿಕ ಪ್ರತಿಭಟನಾಕಾರರು ಮೆರವಣಿಗೆ ನಡೆಸಿ ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ಆಗಮಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚೆನ್ನಮ್ಮಾಜಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 200 ಕೋಟಿ ಅನುದಾನ ನೀಡಬೇಕು ಹಾಗೂ ರಾಕ್ ಗಾರ್ಡನ್ ಅನ್ನು ಅದ್ದೂರಿಯಾಗಿ ಉದ್ಘಾಟನೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಡಿವಾಳಪ್ಪ ಹೋಟಿ, ಮುರಗೇಶ ಗುಂಡ್ಲೂರ, ರಾಜು ಕುಡಸೋಮನ್ನವರ, ನಿಂಗಪ್ಪ ಚೌಡನ್ನವರ, ಸುಭಾಸ ಬಾಗೇವಾಡಿ, ವಕೀಲ ದುಂಡೇಶ ಗರಗದ, ಶ್ರೀಶೈಲ ಯಡಳ್ಳಿ, ಮಹಾಂತೇಶ ಗುಂಡ್ಲೂರ, ನಾಗಪ್ಪ ಗುಂಡ್ಲೂರ, ರಿತೇಶ್ ಪಾಟೀಲ, ಬಸವರಾಜ ಬೋಳಗೌಡರ, ಫಕ್ರುಸಾಬ ಕುಸಲಾಪುರ, ಬಸವರಾಜ ಭಜಂತ್ರಿ, ಶಾಂತಾ ಮಡ್ಡಿಕಾರ, ರತ್ನಾ ಗೋಧಿ ಸೇರಿದಂತೆ ವಿವಿಧ ಕನ್ನಡಪರ ಹಾಗೂ ರೈತಪರ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಅನೇಕ ಅಂಗಡಿ ಮುಗ್ಗಟ್ಟುಗಳು ಮುಚ್ಚಲ್ಪಟ್ಟಿದ್ದವು. ಕೆಲ ಸಮಯ ಬಸ್ ಸಂಚಾರವೂ ಅಸ್ತವ್ಯಸ್ತಗೊಂಡಿತು.

ವಿದ್ಯಾರ್ಜನೆಯೊಂದಿಗೆ ಸೇವಾ ಮನೋಭಾವನೆಯೂ ಅಗತ್ಯ

ಯರಗಟ್ಟಿ: ಭಾರತೀಯ ಸಾಮಾಜಿಕ ಮತ್ತು ಆಧ್ಯಾತ್ಮಿಕ ಪರಂಪರೆಯಲ್ಲಿ ಪರೋಪಕಾರಾರ್ಥಮ್ ಇದಂ ಶರೀರಂ ಎಂಬ ಮಾತು ಜನಜನಿತವಾಗಿದೆ. ಆದರಂತೆ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನೆಯೊಂದಿಗೆ ಸೇವಾ ಮನೋಭಾವನೆಯನ್ನು ರೂಡಿಸಿಕೊಳ್ಳುವುದು ಅಗತ್ಯ ಎಂದು ಯರಗಟ್ಟಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ತಮ್ಮಣ್ಣ ಕಾಮಣ್ಣವರ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಸಮೀಪದ ಯರಗಣವಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ವಿಶೇಷ ವಾರ್ಷಿಕ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಈ ಶಿಬಿರದ ಅವಧಿಯುದ್ದಕ್ಕೂ ಗ್ರಾಮದ ಸ್ವಚ್ಛತೆ ನೈರ್ಮಲ್ಯ ವಿವಿಧ ವಿಷಯಗಳ ಕುರಿತು ಗ್ರಾಮಸ್ಥರನ್ನು ಜಾಗೃತಿಗೊಳಿಸುವ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕು ಎಂದು ಪ್ರತಿಪಾದಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ಎಸ್. ಮರಿಗೌಡರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ಲಕ್ಕಪ್ಪ ಸನ್ನಿಂಗವನ್ನರ, ಅಶೋಕ ನಾಯ್ಕರ, ಬಾಬಾಸಾಹೇಬ ದೇಸಾಯಿ, ಯರಗಟ್ಟಿ ತಾಲೂಕಿನ ಶಿಕ್ಷಣ ಸಂಯೋಜಕರಾದ ಎಂ.ಬಿ. ಕಡಕೋಳ, ಶಿವಪುರ ಕ್ಲಸ್ಟರ್ ನ ಸಿ.ಆರ್.ಪಿ.ಎಮ್.ಎಮ್.ಮಲಕಣ್ಣವರ ಹಾಗೂ ಸ್ಥಳೀಯ ಶಾಲೆಯ ಮುಖ್ಯ ಗುರುಗಳಾದ ಎಸ್. ಬಿ. ನಂದಿಮಠ ಸೇರಿದಂತೆ ಶಿಕ್ಷಕ ವೃಂದದವರು ಹಾಗೂ ಶಿಬಿರಾರ್ಥಿ ವಿದ್ಯಾರ್ಥಿಗಳು ಸೇರಿದಂತೆ ಯರಗಣವಿ ಗ್ರಾಮದ ಪ್ರಮುಖರು ಹಾಜರಿದ್ದರು. ಸಿದ್ಲಿಂಗಪ್ಪ ಗಾಳಿ ನಿರೂಪಿಸಿದರು. ಚಿಕ್ಕ ಹನುಮಯ್ಯ ಪ್ರಸ್ತಾವಿಕವಾಗಿ ಮಾತನಾಡಿದರು. ಡಾ. ರಾಜಶೇಖರ ಬಿರಾದಾರ ಸ್ವಾಗತಿಸಿದರು. ಶಂಕರ ಲಗಳಿ ವಂದಿಸಿದರು.



ಇ ಆಸ್ತಿ ನವೀಕರಣ ಖಂಡಿಸಿ ಪ್ರತಿಭಟನೆ

ಬೆಳಗಾವಿ : ರಾಜ್ಯ ಸರ್ಕಾರ ಇ ಆಸ್ತಿ ನವೀಕರಣದಲ್ಲಿ ಕಾನೂನು ಮಾಡಿರುವುದು ಸ್ವಾಗತಾರ್ಹ ಆದರೆ, ಇ ಆಸ್ತಿ ನವೀಕರಣ ಮಾಡಿಕೊಳ್ಳುವುದಕ್ಕೆ ಜನತೆಗೆ ಸಾಕಷ್ಟು ತೊಂದರೆಯಾಗುತ್ತಿರುವುದನ್ನು ಖಂಡಿಸಿ ಕರವೇ ಹಾಗೂ ನ್ಯಾಯವಾದಿಗಳ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಎಂದರು ಪ್ರತಿಭಟನೆ ನಡೆಸಿದರು.

ಸೋಮವಾರ ಕರವೇ ಹಾಗೂ ನ್ಯಾಯವಾದಿಗಳು ಸೇರಿ, ಮಹಾನಗರ ಪಾಲಿಕೆಗೆ ತೆರಳಿ, ಇ ಆಸ್ತಿ ನವೀಕರಿಸುವ ವೇಳೆ ಯಾಗುತ್ತಿರುವ ತೊಂದರೆಗಳು, ಪ್ರತಿನಿತ್ಯ ಸಾರ್ಜನಿಕರು ಇ ಆಸ್ತಿ ಮಾಡಿಸಿವುದಕ್ಕಾಗಿಯೇ ಕೆಲಸಗಳನ್ನು ಬಿಟ್ಟು ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಎದುರಾಗಿದ್ದು, ಒಂದು ಕೆಲಸಕ್ಕೆ ಹಲವಾರು ಭಾರಿ ಓಡಾಡುವ ಪರಿಸ್ಥಿತಿ ಉಂಟಾಗಿದೆ. ಜನತೆಯು ತಮ್ಮ ಆಸ್ತಿಗಳನ್ನು, ನೋಂದಣಿ ಪ್ರಕ್ರಿಯೆಗೆ ತಡೆಯಲಾಗಿದ್ದು, ಇ-ಆಸ್ತಿ ವಿವರಗಳು ಕಾವೇರಿ ಸಾಫ್ಟ್ವೇರ್ನಲ್ಲಿ ಲಭ್ಯವಿಲ್ಲದಿದ್ದರೆ, ಕ್ರಮ ಪತ್ರ, ದಾನ ಪತ್ರ ಅಥವಾ ಯಾವುದೇ ವರ್ಗಾವಣೆ ಪತ್ರಗಳ ನೋಂದಣಿ ತಾಂತ್ರಿಕ ಕಾರಣಗಳಿಂದ ಸ್ಥಗಿತ ಗೊಳಿಸಲಾಗುತ್ತದೆ, ಎಂದು ಆರೋಪಿ ಪ್ರತಿಭಟನಾಕಾರರು ಪ್ರತಿಭಟಿಸಿದರು.


ಆಸ್ತಿಯ ಮಾಲೀಕತ್ವ ಬದಲಾವಣೆಯಾದಾಗ ಅಥವಾ ಪಿತ್ರಾರ್ಜಿತ ಆಸ್ತಿ ಹಂಚಿಕೆಯಾದಾಗ, ಕಾವೇರಿ ತಂತ್ರಾಂಶದಲ್ಲಿ ಮಾಹಿತಿ ಅಪ್ಡೇಟ್ ಇಲ್ಲದಿದ್ದರೆ 'ಮ್ಯುಟೇಷನ್' ಪ್ರಕ್ರಿಯೆಯು ತಿರಸ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಾಲ ಸೌಲಭ್ಯಕ್ಕೆ, ಅಡಚಣೆ ಯಾಗುತ್ತಿದ್ದು, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಆಸ್ತಿ ಸಾಲ ನೀಡುವುದಕ್ಕೆ ಮೀನಾಮೇಷ ಮಾಡುತ್ತಿದ್ದಾರೆಂದು ಅಸಮಾಧಾನ ಹೊರಹಾಕಿದರು.

ಈ ವೇಳೆ ವಿಠ್ಠಲ್ ಉಪರಿ, ಯುಸುನಾಥ್ ಗುತ್ತೇನ್ನರ್ವ, ಉಮೇಶ್ ಲಕ್ಕಣ್ಣವರ, ಬಾಳೇಶ್ ಪಾಟೀಲ ಮದನ್ ಮೇಹರ್ವಾಡೆ ಸೇರಿದಂತೆ ಕರ್ನಾಟಕ ರಕ್ಷಣಾ ವೇದಿಕೆಯ ಹಲವು ಕಾರ್ಯಕರ್ತರು ಹಲವರು ಇದ್ದರು.



ಬೆಳಗಾವಿ ಸ್ಮಾರ್ಟ್ ಸಿಟಿಗೆ ₹2,722 ಕೋಟಿ ಅನುದಾನ ಬಳಕೆ

ಮೂಡಲಗಿ : ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಬೆಳಗಾವಿ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯ ಅಡಿಯಲ್ಲಿ ಒಟ್ಟು 2,780 ಕೋಟಿ ಮೊತ್ತದ 217 ಯೋಜನೆಗಳನ್ನು ರೂಪಿಸಲಾಗಿತ್ತು. ಇದರಲ್ಲಿ 2,722 ಕೋಟಿ ಮೊತ್ತದ 212 ಯೋಜನೆಗಳ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಮುಕ್ತವಾಗಿವೆ. ಬಾಕಿ ಉಳಿದಿರುವ 58 ಕೋಟಿ ಮೊತ್ತದ 5 ಯೋಜನೆಗಳು ಮಾತ್ರ ಪ್ರಸ್ತುತ ಅನುಷ್ಠಾನದ ವಿವಿಧ ಹಂತಗಳಲ್ಲಿವೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ತಿಳಿಸಿದ್ದಾರೆ.



ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಸ್ಮಾರ್ಟ್ ಸಿಟಿ ಯೋಜನೆಗಳ ಪ್ರಗತಿಯ ಕುರಿತು ಸಂಸದರು ಕೇಳಿದ ಪ್ರಶ್ನೆಗೆ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ರಾಜ್ಯ ಸಚಿವ ತೊಖಾನ್ ಸಾಹು ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ ಎಂದರು.

ಸಚಿವಾಲಯದ ಮಾಹಿತಿಯಂತೆ, ನಗರದ ಸುರಕ್ಷತೆ ಮತ್ತು ತುರ್ತು ನಿರ್ವಹಣೆಯ ಕೇಂದ್ರ ಬಿಂದುವಾದ ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ ಕಾಮಗಾರಿ ಪೂರ್ಣಗೊಂಡಿದೆ. ಅಲ್ಲದೆ, ನಗರದ ಸೌಂದರ್ಯೀಕರಣದ ಭಾಗವಾದ ಹೆರಿಟೇಜ್ ಪಾರ್ಕ್‌ನ 1 ಮತ್ತು 3ನೇ ಹಂತಗಳು ಮುಕ್ತಾಯಗೊಂಡಿದ್ದು, 2ನೇ ಹಂತದ ಕೆಲಸ ಚಾಲ್ತಿಯಲ್ಲಿದೆ. ಸ್ಮಾರ್ಟ್ ಸಿಟಿ ಯೋಜನೆಗಳಿಂದ ಬೆಳಗಾವಿ ಜನರ ಜೀವನಮಟ್ಟದಲ್ಲಿ ಆಗಿರುವ ಸುಧಾರಣೆಯ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಲು 'ಕರ್ನಾಟಕ ಮಾನಿಟರಿಂಗ್ ಮತ್ತು ಮೌಲ್ಯಮಾಪನ ಪ್ರಾಧಿಕಾರ'ವನ್ನು ನೇಮಿಸಲಾಗಿದೆ. ಈ ಪ್ರಾಧಿಕಾರವು ಯೋಜನೆಗಳ ಗುಣಮಟ್ಟ ಮತ್ತು ಅವುಗಳಿಂದ ಸಾರ್ವಜನಿಕರಿಗೆ ದೊರೆತ ಪ್ರಯೋಜನಗಳ ಬಗ್ಗೆ ವರದಿ ನೀಡಲಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ಮಕ್ಕಳಲ್ಲಿ ರಕ್ಷಣೆ ಕುರಿತು ಅರಿವು ಅಗತ್ಯ: ನ್ಯಾ.ದುಂಡಿ

ಕಕಮರಿ: ಪೋಕ್ಸೋ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಮಕ್ಕಳಲ್ಲಿ ತಮ್ಮ ರಕ್ಷಣೆ ಕುರಿತು ಅರಿವು ಮೂಡಿಸಬೇಕಿದೆ ಎಂದು ನ್ಯಾಯವಾದಿ ಎಂ.ಸಿ.ದುಂಡಿ ಹೇಳಿದರು.

ಅವರು ಸ್ಥಳೀಯ ಶ್ರೀ ಅಮ್ಮಾಜೇಶ್ವರಿ ಪ್ರೌಢಶಾಲೆಯ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿವಿಧ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಮೇಲೆ ಯಾವುದೇ ರೀತಿಯ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ ಸಮಾಜದ ಸ್ವಾಸ್ಥವನ್ನು ಕೆಡಿಸುವ ಇಂತಹ ಪಿಡುಗುಗಳನ್ನು ನಿರ್ಮೂಲನೆ ಮಾಡಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ಅಥಣಿ ಸಿಡಿಪಿಒ ಕಾರ್ಯದರ್ಶಿ ಪಿ.ಜಿ.ಬಿರಾದಾರ ಮಾತನಾಡಿ, ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಕಾನೂನು ಅರಿವು ಮೂಡಿಸಿದರೆ ಅಪರಾಧಗಳಿಗೆ ಪ್ರಾಥಮಿಕ ಹಂತದಲ್ಲಿ ಕಡಿವಾಣ ಹಾಕಲು ಸಾಧ್ಯವಾಗುತ್ತದೆ ಎಂದರು.



ನ್ಯಾಯವಾದಿ ಎಂ.ಸಿ.ಸಿಂದೂರ, ನ್ಯಾಯವಾದಿ ಎಸ್.ವಿ.ಪಾಟೀಲ, ನ್ಯಾಯವಾದಿ ಮುಬಾರಕ ನದಾಫ್, ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಬ ಈರಗೌಡ, ಲಕ್ಷ್ಮಣ ಗುರ್ಕಿ, ಗಿರಮಲ್ಲ ಜನಗೌಡ, ಅಣ್ಣಾಸಾಬ ಬಿಜ್ಜರಗಿ, ಮುಖ್ಯೋಪಾಧ್ಯಾಯವಿ.ಎಸ್.ಕುಲಕರ್ಣಿ. ಎಸ್.ಆರ್.ಬಿರಾದಾರ, ಎಸ. ಎಚ್.ಜಡಿನವರ, ಎಸ್.ಆರ್.ಪೂಜಾರಿ, ಎಸ್.ಎಲ್.ಕಾತ್ರಾಳ, ಎ.ಎಸ್. ಗಡಾಲೋಟಿ, ಎಮ್.ಎನ್.ವಾಲಿ, ಎಸ್.ಎ.ಈರಗೌಡ ಇತರರಿದ್ದರು.ಎಸ್. ಆರ್.ಬಿರಾದಾರ ಸ್ವಾಗತಿಸಿ ನಿರೂಪಿಸಿದರು.

ಪ್ರಾಚಾರ್ಯರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ

ಚನ್ನಮ್ಮನ ಕಿತ್ತೂರು : ಚನ್ನಮ್ಮನ ಕಿತ್ತೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರ ಆಡಳಿತ ಧೋರಣೆ, ಕೆಲ ಉಪನ್ಯಾಸಕರ ವರ್ತನೆಗೆ ಬೇಸತ್ತ ವಿದ್ಯಾರ್ಥಿಗಳು ಈ ಕೂಡಲೇ ಪ್ರಾಚಾರ್ಯರು ರಾಜೀನಾಮೆ ನೀಡಬೇಕೆಂದು ಎಲ್ಲ ವಿದ್ಯಾರ್ಥಿಗಳು ಕಾಲೇಜಿನ ಮುಂಭಾಗದಲ್ಲಿ ವಿದ್ಯಾರ್ಥಿಗಳು ಸೋಮವಾರ ಧರಣಿ ನಡೆಸಿದರು.

ಈ ಹಿಂದೆ ಸಾಲು ಮರದ ತಿಮ್ಮಕ್ಕ ವಿಧಿವಶರಾದ ಸಂದರ್ಭದಲ್ಲಿ ಶ್ರದ್ಧಾಂಜಲಿ ಸಲ್ಲಿಸುವಂತೆ ಉಪನ್ಯಾಸಕರಿಗೆ ಹಾಗೂ ಪ್ರಾಚಾರ್ಯರಿಗೆ ತಿಳಿಸಿದರೂ ಸಹ ಅದನ್ನು ಗಣನೆಗೆ ತೆಗೆದುಕೊಳ್ಳದೆ. ಪ್ರಾಂಶುಪಾಲರ ತಂದೆ ವಿಧಿ ವಶರಾದಾಗ ಕಾಲೇಜಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಿ ಆ ದಿನ ಕಾಲೇಜಿಗೆ ಅರ್ಧದಿನ ರಜೆ ಘೋಷಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಚಾರ್ಯರು ತಾವು ಪಾಠ ಬೋಧನೆ ಮಾಡುವುದನ್ನು ಬಿಟ್ಟು ತಮ್ಮ ಬದಲಿಗೆ ಖಾಸಗಿಯಾಗಿ ಬೇರೆ ಉಪನ್ಯಾಸಕರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಪಾಠ ಮಾಡಿಸುವುದು, ಶಾಲಾ ವಿದ್ಯಾರ್ಥಿಗಳಿಗೆ ಯೂನಿಫಾರ್ಂ ಹೆಸರಿನಲ್ಲಿ ಕಳಪೆ ಗುಣ್ಣಮಟ್ಟದ ಸಮವಸ್ತ್ರ ಖರೀದಿಸುವಂತೆ,



ಹೆಚ್ಚಿನ ಶಾಲಾ ಶುಲ್ಕ, ಹಾಲ್ ಟಿಕೆಟ್ ನೀಡಲು ಎಲ್ಲ ವಿದ್ಯಾರ್ಥಿಗಳಿಂದ ಹಣ ಪಡೆಯುವುದು, ದೈಹಿಕಉಪನ್ಯಾಸಕರುಕಾಲೇಜಿಗೆಬರುವುದೇ ಅಪರೂಪ, ಗ್ರಂಥಪಾಲಕರು ವಿದ್ಯಾರ್ಥಿಗಳಿಗೆ ಓದಲು ಪುಸ್ತಕ ನೀಡುವುದಿಲ್ಲ, ಕುಡಿಯಲು ಶುದ್ಧ ನೀರಿಲ್ಲ, ಶೌಚಾಲಯ ಸ್ವಚ್ಛತೆಯಿಲ್ಲ, ವಿದ್ಯಾರ್ಥಿಗಳಿಂದ ಹಣ ವಸೂಲಿ, ಇವಿಎಸ್ ಪಾಠ ಭೋದನೆ ಇಲ್ಲದೆ ಪರಿಕ್ಷೆ ಬರೆಯಲು ಒತ್ತಡ ಹಾಕುತ್ತಾರೆ.

ಈ ಸಮಸ್ಯೆಗಳ ಕುರಿತು ಮೇಲಿನ ಅಧಿಕಾರಿಗಳಿಗೆ ಶಾಸಕರಿಗೆ, ಇಲ್ಲಿನ ಸಲಹಾ ಸಮಿತಿಗೆ ಅನೇಕ ಬಾರಿ ದೂರು ನೀಡಿದರು ಸಹ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ . ಹೀಗಾಗಿ ಪ್ರತಿಭಟನೆ ನಡೆಸುವ ಪ್ರತಿಸ್ಥಿತಿ ಬಂದೊದಗಿದೆ ಎಂದು ವಿದ್ಯಾರ್ಥಿಗಳು ದೂರಿದರು.

ಪ್ರತಿಭಟನಾ ಸ್ಥಳಕ್ಕೆ ತಹಶೀಲ್ದಾರ ಕಲ್ಲಗೌಡ ಪಾಟೀಲ, ಸಿಪಿಐ ಶಿವಾನಂದ ಗುಡಗನಟ್ಟಿ, ಪಿ.ಎಸ್.ಐ ಪ್ರವೀಣ ಗಂಗೋಳ ಬೇಟಿ ನೀಡಿ ವಿದ್ಯಾರ್ಥಿಗಳ ಮನ ಒಲಿಸಲು ಸಾಕಷ್ಟು ಪ್ರಯತ್ನಿಸಿದರೂ, ಸ್ಥಳಕ್ಕೆ ಶಾಸಕರು ಬಂದರೆ ಮಾತ್ರ ಪ್ರತಿಭಟನೆ ಕೈ ಬಿಡುವದಾಗಿ ಪಟ್ಟು ಹಿಡಿದರು ಬಿಸಿಲನ್ನು ಲೇಕ್ಕಿಸದೆ ವಿದ್ಯಾರ್ಥಿಗಳು ಸುಮಾರು 5 ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳ ಪ್ರತಿಭಟನೆಗೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಬೆಂಬಲ ವ್ಯಕ್ತಪಡಿಸಿದರು.

ಪ್ರತಿಭಟನೆಯ ಎಚ್ಚರಿಕೆ

ವಿದ್ಯಾರ್ಥಿಗಳ ಆಕ್ರೋಶದ ಕಟ್ಟೆಯೊಡೆದು ರೊಚ್ಚಿಗೆದ್ದ ಪರಿಣಾಮ ಅಧಿಕಾರಿಗಳು, ಶಾಸಕರು ಮನ ಒಲಿಸಲು ಹರಸಾಹಸ ಪಡುವ ಸ್ಥಿತಿ ನಿರ್ಮಾಣವಾಯಿತು. ಪ್ರಾಚಾರ್ಯ, ಉಪನ್ಯಾಸಕರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಮಾ.12ರಂದು ಮತ್ತೆ ಪ್ರತಿಭಟನೆ ನಡೆಸುವುದಾಗಿ ವಿದ್ಯಾರ್ಥಿಗಳು ಎಚ್ಚರಿಕೆ ನೀಡಿದರು.

ಪ್ರತಿಭಟನಾ ಸ್ಥಳಕ್ಕೆ ಶಾಸಕರ ಭೇಟಿ: ಸ್ಥಳಕ್ಕಾಗಮಿಸಿದ ಶಾಸಕ ಬಾಬಾಸಾಹೇಬ ಪಾಟೀಲ, ವಿದ್ಯಾರ್ಥಿಗಳು ಗಂಭೀರ ಸ್ವರೂಪದ ಆರೋಪಗಳನ್ನು ಮಾಡುತ್ತಿದ್ದು ಇವುಗಳ ಕುರಿತು ಸಿಡಿಸಿ ಸಭೆ ಮಂಗಳವಾರ ಕರೆದು ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗುವದು. ಪ್ರಾಂಶುಪಾಲರ, ಉಪನ್ಯಾಸಕರ ವಿರುದ್ಧ ಸೂಕ್ತ ಕ್ರಮ ಕೈಗೊಳುವ ಭರವಸೆ ನೀಡಿದರು. ನಂತರ ವಿದ್ಯಾರ್ಥಿಗಳು ತಮಗಾಗುತ್ತಿರುವ ತೊಂದರೆಗಳನ್ನು ಪಟ್ಟಿ ಮಾಡಿ ಮನವಿ ರೂಪದಲ್ಲಿ ಶಾಸಕ ಬಾಬಾಸಾಹೇಬ ಪಾಟೀಲ ಅವರಿಗೆ ಮನವಿ ನೀಡಿ ಪ್ರತಿಭಟನೆ ಹಿಂಪಡೆದರು.

ಪ್ರತಿಯೊಬ್ಬರಲ್ಲೂ ಅಡಗಿದೆ ಕಲೆ

ರಾಯಬಾಗ : ಎಲ್ಲರಲ್ಲೂ ಒಂದೊಂದು ಕಲೆಯಿದೆ. ಅದು ಸಮಯ, ಸಂದರ್ಭ ಹಾಗೂ ಅವಕಾಶ ದೊರಕಿದ ಮೇಲೆ ಕಲೆ ಹೊರಗೆ ಬರಲು ಸಾಧ್ಯವಾಗುತ್ತದೆ. ಕಲೆ ಎಂಬವುದು ನವರಸಗಳ ಯುಕ್ತವಾಗಿ ಇರುವುದೇ ಕಲೆ ಎಂದು ಓಂಕಾರ ಆಶ್ರಮ ಮಠದ ಬ್ರಮರಾಂಭಿಕಾದೇವಿ ಹೇಳಿದರು.

ತಾಲೂಕಿನ ಬಾವನಸೌಂದತ್ತಿ ಗ್ರಾಮದ ಸುಗಂಧಾದೇವಿ ಜಾತ್ರಾಮಹೋತ್ಸವದ ನಿಮಿತ್ತ ಶ್ರೀ ಸಂಗಮೇಶ್ವರ ನಾಟ್ಯ ಸಂಘ (ರಿ) ಆಶಾಪೂರ ಅವರು ಅರ್ಪಿಸುವ ಹುಬ್ಬ ಹಾರಿಸ್ಯಾಳ ಧೂಳ ಎಬ್ಬಿಸ್ಯಾಳ ಎಂಬ ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದರು.

ಬದುಕು ಸುಗಮವಾಗಿ ಸಾಗಬೇಕಾದರೆ ನೀತಿ ಪಾಠಗಳ ಅವಶ್ಯಕತೆ ಇದೆ. ನಾಟಕಗಳು ಜೀವನದಲ್ಲಿ ಮಹತ್ವದ್ದ ಪಾತ್ರ ವಹಿಸುತ್ತವೆ. ಹಾಗಾಗಿ ಇಂತಹ ಜಾತ್ರಾ ಮಹೋತ್ಸವದಲ್ಲಿ ನಾಟಕಗಳನ್ನು ಆಡಬೇಕು. ಪ್ರೇಮಾ ಗುಳೆದ ಗುಡ್ಡ ಅವರು ಸಂಘ ಕಟ್ಟಿ ಇಂದು ರಾಜ್ಯಮಟ್ಟದಲ್ಲಿ ನಾಟಕದಲ್ಲಿ ಹೆಸರು ಮಾಡಿದ್ದಾರೆ. ಮಹಿಳೆ ಯಾವುದಕ್ಕೂ ಕಡಿಮೆ ಇಲ್ಲ ಎಂದರು.

ಮುಖಂಡ ಧೂಳಗೌಡ ಪಾಟೀಲ ಮಾತನಾಡಿ, ನಮ್ಮ ಗ್ರಾಮೀಣ ಕಲಾವಿಧರನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಇದೆ. ಹಾಗಾಗಿ ಈ ನಾಟಕ ನೋಡಿ ಅವರಿಗೆ ಪ್ರೋತ್ಸಾಹಿಸಬೇಕಿದೆ ಎಂದು ಹೇಳಿದರು.

ಸಂಗಮೇಶ್ವರ ನಾಟ್ಯ ಸಂಘದ ಮಾಲೀಕರಾದ ಪ್ರೇಮಾ ಗುಳೇದಗುಡ್ಡ ಮಾತನಾಡಿ, ಸುಂದರ ಸಮಾಜಿಕ ನಾಟಕವನ್ನು ಬಾವನಸೌಂದತ್ತಿ ಗ್ರಾಮಕ್ಕೆ ತಂದಿದ್ದೇವೆ. ಎಲ್ಲ ಕಲಾಭಿಮಾನಿಗಳು ಈ ನಾಟಕವನ್ನು ನೋಡಿ ಹರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಗ್ರಾಮ ಪಂಚಾಯತಿ ಸದಸ್ಯ ಅನೀಲ ಹಂಜೆ, ಅಜೀತ ಖೆಮಲಾಪುರೆ, ಉದ್ಯಮಿ ಪ್ರಕಾಶ ಮಹಾಜನ, ಚೌಗೌಡಾ ಪಾಟೀಲ, ಮಹಾವೀರ ಮಹಾಜನ್, ಪೋಪಟ ಕೂಗೆ, ದನಪಾಲ ಮಂಗಸೂಳೆ, ದಿಲೀಪ್ ಹಂಜೆ, ತಮ್ಮಾಣಿ ಹಂಜೆ, ಅರುಣ ಶಿಂಧೆ ಹಾಗೂ ಕಲಾವಿದರು ಗ್ರಾಮದ ಮುಖಂಡರು ಕಲಾ ಪ್ರೇಮಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಉದ್ಘಾಟನಾ ಸಮಾರಂಭ ಇಂದು

• **ಜಮಖಂಡಿ:** ಐಐಎಫ್‌ಎಲ್ ಸಮಸ್ತಾ ಫೈನಾನ್ಸ್ ಲಿಮಿಟೆಡ್ ಬೆಂಗಳೂರು ಸಿಎಸ್‌ಆರ್ ಅನುದಾನದಡಿಯಲ್ಲಿ ಪ್ರಜ್ಞಾ ಫೌಂಡೇಶನ ಅನುಷ್ಠಾನ ಸಂಸ್ಥೆಯ ಸಹಕಾರದೊಂದಿಗೆ ಕರ್ನಾಟಕ ರಾಜ್ಯದ 14 ಸರ್ಕಾರಿ ಶಾಲೆಗಳಲ್ಲಿ 'ಡಿಜಿಟಲ್ ಸ್ಮಾರ್ಟ್ ಕ್ಲಾಸ್ ರೂಮ್ ಉದ್ಘಾಟನಾ ಸಮಾರಂಭ ಸರ್ಕಾರಿ ಕನ್ನಡ ಮಾದರಿ ಶಾಲೆ ನಂ 1 ಹಾಗೂ ಉರ್ದು ಮಾದರಿ ಹಿರಿಯ ಪ್ರಾಥಮಿಕ ಶಾಲೆ ನಂ 1 ಸಹಯೋಗದಲ್ಲಿ ಸ್ಥಳೀಯ ಓಲೇಮಠ ಆವರಣದಲ್ಲಿ ಮಾ.10ರಂದು ಬೆಳಗ್ಗೆ 10 ಗಂಟೆಗೆ ಜರುಗಲಿದೆ. ಗ್ರಾಮೀಣ ಶಾಲಾ ಮಕ್ಕಳಿಗೆ ಆಧುನಿಕ ಡಿಜಿಟಲ್ ಶಿಕ್ಷಣವನ್ನು ಒದಗಿಸಿ ಅವರ ಭವಿಷ್ಯದ ಸಾಧನೆ ಗಟ್ಟಿಗೊಳಿಸುವ ಗುರಿ ಹೊಂದಿದೆ. ಈ ಯೋಜನೆಯ ಮೂಲಕ ಪ್ರತಿ ಶಾಲೆಗೆ ರೂ2,11,559/ ಒಟ್ಟು 14 ಶಾಲೆಗಳಲ್ಲಿ ರೂ. 30,85,512 ಖರ್ಚು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಓಲೇಮಠದ ಆನಂದ ದೇವರು, ಶಾಸಕ ನಾಡೋಜ ಜಗದೀಶ ಗುಡಗುಂಟಿ, ಮಾಜಿ ಶಾಸಕ ಆನಂದ ನ್ಯಾಮಗೌಡ, ಐಐಎಫ್‌ಎಲ್. ಮುಖ್ಯಸ್ಥ ಬಾಲ ಮುರಳಿ, ರಿಜನಲ್ ಮ್ಯಾನೇಜರ್ ರಾಮನಗೌಡ, ಜಿಪಂ ಸಿಇಒ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಡಿ.ವೈಎಸ್‌ಪಿ ರೋಷನ್ ಎಸ್.ಜಮೀರ, ಡಿಡಿಪಿಐ ಎ.ಸಿ.ಮನ್ನಿಕೇರಿ, ಸಲಿಂ ಭಾಷಾ, ಸಿಪಿಐ ಮಲ್ಲಪ್ಪ ಮಡ್ಡಿ, ಬಿಇಒ ಎ.ಕೆ.ಬಸಣ್ಣವರ, ಬಿಆರ್‌ಸಿಒ ಕಾಡೇಶ ಕೋಲೂರ, ಪೊಲೀಸ್ ಠಾಣಾಧಿಕಾರಿಗಳಾದ ಅನೀಲ ಕುಂಬಾರ, ಗಂಗಪ್ಪ ಪೂಜಾರಿ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಈಕ್ತಿಯಾರ ಅವಟಿ, ಅಶ್ರಫಲಿ ಖಾದ್ರಿ ಶಾಲಾ ಮುಖ್ಯಗುರು ಎಂ.ಆರ್.ಅತ್ತಾರ ಹಾಗೂ ಎನ್.ಆರ್. ಕುಲಕರ್ಣಿ, ಸದಸ್ಯರು ಪಾಲ್ಗೊಳ್ಳುವರು ಎಂದು ಪ್ರಜ್ಞಾ ಫೌಂಡೇಶನ್ ಸಂಸ್ಥಾಪಕ ನಿರ್ದೇಶಕ ವಿಶ್ವನಾಥ ಎಂ.ಕೆ ತಿಳಿಸಿದ್ದಾರೆ.

ಉಪಾಧ್ಯಕ್ಷರಾಗಿ ರಾಠೋಡ ಆಯ್ಕೆ

• **ಬೀಳಗಿ:** ಕರ್ನಾಟಕ ರಾಜ್ಯ ಸರ್ಕಾರಿ ವಿಕಲಚೇತನ ನೌಕರರ ಒಕ್ಕೂಟ(ರಿ) ಬೆಂಗಳೂರು 2026-27ರಿಂದ ಮುಂದಿನ 5 ವರ್ಷಗಳ ಅವಧಿಗೆ ರಾಜ್ಯ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಶಿಕ್ಷಣ ಇಲಾಖೆಯ ಬಸವರಾಜ ರಾಠೋಡ ಅವರನ್ನು ಬಾಗಲಕೋಟೆ ಜಿಲ್ಲೆಯಿಂದ



ರಾಜ್ಯ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಜ್ಯ ಅಧ್ಯಕ್ಷರು ಹಾಗು ಪದಾಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ ಉದ್ಯೋಗ ಮೇಳ ನಾಳೆ



• **ಕಮತಗಿ:** ಪಟ್ಟಣದಲ್ಲಿನ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಹೊಳೆ ಹುಚ್ಚೇಶ್ವರ ಸ್ವಾಮೀಜಿ ಅವರ 46ನೇ ವರ್ಷದ ಜನ್ಮ ದಿನೋತ್ಸವ ಹಾಗೂ ಹುಚ್ಚೇಶ್ವರ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ನಿಮಿತ್ತ ಬೃಹತ್ ಉದ್ಯೋಗ ಮೇಳವನ್ನು ಮಾ.11ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಪ್ರಧಾನ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಹ ಕಾರ್ಯದರ್ಶಿ ವಿದ್ಯಾಧರ ಆರ್.ಮಳ್ಳಿ ಮಾತನಾಡಿ, ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಹುಚ್ಚೇಶ್ವರ ಸ್ವಾಮೀಜಿ ಅವರ 46ನೇ ಜನ್ಮದಿನೋತ್ಸವ ನಿಮಿತ್ತ ಬಾಗಲಕೋಟೆ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ, ವೈ.ಆರ್.ಪಾಟೀಲ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಹುಚ್ಚೇಶ್ವರ ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹುಚ್ಚೇಶ್ವರ ಸಂಯುಕ್ತ ಕಲಾ, ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯ, ಹುಚ್ಚೇಶ್ವರ ಕೈಗಾರಿಕಾ ತರಬೇತಿ ಕೇಂದ್ರದ ಸಹಯೋಗದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳಕ್ಕೆ ಆಗಮಿಸುವ ಉದ್ಯೋಗಾಂಕ್ಷಿಗಳಿಗೆ ವಾಹನ ವ್ಯವಸ್ಥೆ ಸೇರಿದಂತೆ ಎಲ್ಲ ಸೌಲಭ್ಯ ಕಲ್ಪಿಸಿಕೊಡಲಾಗುವುದು. ಮುನವಳ್ಳಿ ಅಮೀನಗಡ ಶ್ರೀ, ಗುಳೇದಗುಡ್ಡ ಶ್ರೀ, ಕಮತಗಿ ಹೊಳೆ ಹುಚ್ಚೇಶ್ವರ ಶ್ರೀ ಸಾನ್ನಿಧ್ಯ ವಹಿಸಲಿದ್ದು, ಉದ್ಯಮಿ ಲಿಂಗರಾಜ ವಾಲಿ ಉದ್ಘಾಟಕರಾಗಿ ಆಗಮಿಸಲಿದ್ದು, ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರು ಭಾಗವಹಿಸುವರು. ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಹುಚ್ಚೇಶ್ವರ ಸ್ವಾಮೀಜಿ, ಆಡಳಿತಾಧಿಕಾರಿ, ಅಂಗ ಸಂಸ್ಥೆಯ ಮುಖ್ಯಸ್ಥ ಎಸ್.ವಿ.ಬಾಗೇವಾಡಿ, ಪಿ.ಎಂ.ಗುರುವಿನಮಠ, ಎಚ್.ಎಸ್.ಪಾಟೀಲ ಇದ್ದರು.



ಝುಳಕಿ: ಚಡಚಣ ತಾಲೂಕಿನ ಪ್ರಾಥಮಿಕ ಶಾಲೆಯ ಶಿಕ್ಷಕರ ಸ.ಪ.ಸಂಘಕ್ಕೆ ನೂತನವಾಗಿ ಅವಿರೋಧ ನಿರ್ದೇಶಕರಾಗಿ ಆಯ್ಕೆಯಾದ ಪ್ರಯುಕ್ತ ಸ್ಥಳೀಯ ಜಿಎಚ್‌ಪಿಎಸ್ ಶಾಲೆಯ ಸಹ ಶಿಕ್ಷಕಿ ಎಸ್.ಎಂ.ಕುಲಕರ್ಣಿ ಅವರಿಗೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಸನ್ಮಾನಿಸಿದರು. ಮುಖ್ಯಗುರು ಎಸ್.ಕೆ.ಸೋನಕಳ್ಳಿ, ಸಿಆರ್‌ಪಿ ಬಾಲಗಾಂವ, ಪಿ.ಎನ್. ಝುಳಕಿಕರ, ಡಿ.ಜಿ.ಹೂಗಾರ, ಎಂ.ಎ.ಇಂಡಿಕಾರ, ಎಂ.ಎ.ಕಂಬಾರ, ಎಸ್.ಎಚ್.ಭಜಂತ್ರಿ, ಎಸ್.ಎಂ.ಪಾಟೀಲ, ಜಿ.ಎಸ್.ಬಗಲಿ, ಬಿ.ಎಸ್.ಮಾಭಾವಿ, ಎ.ಎಸ್.ಹೊನ್ನುಗರೆ, ನಿಂಬಣ್ಣ ವಾಲಿಕಾರ, ಮಲಕಾರಿ ಕಾಗರ, ಸಿದ್ದರಾಮ ಕಾಪಸೆ, ಸಿದ್ದಾರಾಮ ಪಾಟೀಲ, ಮಲ್ಲಿಕಾರ್ಜುನ ಬಸೋಡೆ, ಪ್ರಕಾಶ ಪಾಟೀಲ, ಚಂದ್ರಕಾಂತ ಪಾಟೀಲ ಉಪಸ್ಥಿತರಿದ್ದರು.

ಸೈನಿಕ ವೃತ್ತಿ ಪವಿತ್ರವಾದದ್ದು: ನಾಯ್ಕ

• **ಬೀಳಗಿ:** ಮನುಷ್ಯ ತನ್ನ ಜೀವನೋಪಾಯಕ್ಕಾಗಿ ಹಲವು ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಅವುಗಳಲ್ಲಿ ಸೈನಿಕ ವೃತ್ತಿ ಅತ್ಯಂತ ಪವಿತ್ರವಾದದ್ದು. ತನ್ನ ಕುಟುಂಬವನ್ನ ದೂರವಿಟ್ಟು ದೇಶ ರಕ್ಷಣೆಗಾಗಿ ತನ್ನ ಜೀವನವನ್ನೇ ಮುಡುಪಾಗಿಡುತ್ತಾನೆ ಎಂದು ಮಾಜಿ ಸೈನಿಕ ಶ್ರೀಕಾಂತ ನಾಯ್ಕ ಹೇಳಿದರು. ತಾಲೂಕಿನ ಅಮಲಝುರಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ವೃತ್ತಿ ಮಾರ್ಗದರ್ಶನ ಅಡಿಯಲ್ಲಿ ಹಮ್ಮಿಕೊಂಡ ರಕ್ಷಣಾ ಇಲಾಖೆ ಮತ್ತು ವೈದ್ಯಕೀಯ ಇಲಾಖೆ ಕುರಿತು ಉಪನ್ಯಾಸ ನೀಡಿ, ಕುಟುಂಬ ಮತ್ತು ದೇಶ ಎರಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದಾದರೆ ಅದು ದೇಶ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ನಮಗೆ ಮೊದಲು ದೇಶ ನಂತರ ಕುಟುಂಬ ಎಂದು ಹೇಳಿದರು. ಮನುಷ್ಯ ಜೀವನಕ್ಕಾಗಿ ವೃತ್ತಿಗಳನ್ನು ಬಯಸುವುದು ಸ್ವಾಭಾವಿಕ. ರಕ್ಷಣಾ ಇಲಾಖೆಯಲ್ಲಿ ಅನೇಕ ಹುದ್ದೆಗಳು ಪ್ರತಿವರ್ಷ ತುಂಬಲ್ಪಡುತ್ತವೆ. ಸದೃಢವಾದ ಶರೀರ ಹಾಗೂ ಉತ್ತಮ ವಿದ್ಯಾಭ್ಯಾಸ ಹೊಂದಿದವರು ಸುಲಭವಾಗಿ ಸೈನಿಕ ವೃತ್ತಿಗೆ ಸೇರಬಹುದು. ಪಿಯುಸಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಉತ್ತಮ ಹುದ್ದೆಗಳು ಲಭಿಸುತ್ತವೆ ಎಂದು ಹೇಳಿದ ಅವರು, ವಿದ್ಯಾರ್ಥಿಗಳಿಂದ ಬಂದಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದರು. ಮುಖ್ಯಗುರು ವಿ.ಎಸ್.ಪಡತಾರೆ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ವೃತ್ತಿ ಜೀವನಕ್ಕಾಗಿ ಬದುಕುವ ಕಲೆ ಕುರಿತು ಮಾತನಾಡಿದರು. ಮಾರ್ಗದರ್ಶಕರಾದ ಸಾಂವಕ್ಕಾ ಕುಂಬಾರ, ಎಸ್‌ಡಿಎಂಸಿ ಉಪಾಧ್ಯಕ್ಷ ಭೀಮಸಿ ತಳವಾರ, ಶಿಕ್ಷಕರಾದ ಬಿ.ಬಿ.ನಾಯ್ಕ, ಹನುಮಂತ ಮೇತ್ರಿ, ದೀಪಾ ಹೂಗಾರ, ಬಿ.ವೈ.ಹರದೊಳ್ಳಿ ಮತ್ತಿತರಿದ್ದರು.



ಬೀಳಗಿ: ತಾಲೂಕಿನ ಅಮಲಝುರಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ವೃತ್ತಿ ಮಾರ್ಗದರ್ಶನ ಅಡಿಯಲ್ಲಿ ಹಮ್ಮಿಕೊಂಡ ರಕ್ಷಣಾ ಇಲಾಖೆ ಮತ್ತು ವೈದ್ಯಕೀಯ ಇಲಾಖೆ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು. ಮಾಜಿ ಸೈನಿಕ ಶ್ರೀಕಾಂತ ನಾಯ್ಕ, ಮುಖ್ಯಗುರು ವಿ.ಎಸ್.ಪಡತಾರೆ, ಮಾರ್ಗದರ್ಶಕರಾದ ಸಾಂವಕ್ಕಾ ಕುಂಬಾರ, ಎಸ್‌ಡಿಎಂಸಿ ಉಪಾಧ್ಯಕ್ಷ ಭೀಮಸಿ ತಳವಾರ, ಬಿ.ಬಿ.ನಾಯ್ಕ, ಹನುಮಂತ ಮೇತ್ರಿ, ದೀಪಾ ಹೂಗಾರ, ಬಿ.ವೈ.ಹರದೊಳ್ಳಿ ಮತ್ತಿತರಿದ್ದರು.

ಮಾ.14ರಂದು ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಸಿಎಂ ಶಂಕುಸ್ಥಾಪನೆ

ಕಾರ್ಯಕ್ರಮಕ್ಕೆ ಸಿದ್ಧತೆ ಕೈಗೊಳ್ಳಿ: ತಿಮ್ಮಾಪುರ

• **ಬಾಗಲಕೋಟೆ:** ಜಿಲ್ಲೆಯಲ್ಲಿ ಮಾ.14ರಂದು ನಡೆಯಲಿರುವ ಸರಕಾರಿ ವೈದ್ಯಕೀಯ ಕಾಲೇಜು ಶಂಕುಸ್ಥಾಪನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ನೆರವೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಗಮಿಸುತ್ತಿದ್ದು, ಈ ಹಿನ್ನಲೆ ಕಾರ್ಯಕ್ರಮ ಯಶಸ್ಸಿಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಸೂಚಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮ ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಶಿಷ್ಟಾಚಾರ, ಆಹಾರ, ವೇದಿಕೆ, ವಸತಿ ಸೇರಿದಂತೆ ಇತರೆ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ ತಮಗೆ ವಹಿಸಿಕೊಟ್ಟ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.



ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವೇದಿಕೆ ವ್ಯವಸ್ಥೆ, ಕುಡಿಯುವ ನೀರು, ವಾಹನ ನಿಲುಗಡೆ, ಭದ್ರತಾ ವ್ಯವಸ್ಥೆ, ಸಂಚಾರಿ ನಿಯಂತ್ರಣ ಹಾಗೂ ವೈದ್ಯಕೀಯ ಸೌಲಭ್ಯ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವ ಕೆಲಸವಾಗಬೇಕು. ಬೃಹತ್ ವೇದಿಕೆ ನಿರ್ಮಾಣ ಮಾಡಲಾಗುತ್ತಿದ್ದು, ಎಲ್‌ಇಡಿ ಪರದೆಗಳನ್ನು ಸಹ ಹಾಕಲು ತಿಳಿಸಿದರು. ಸರಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಕರೆತರಲು ಬಸ್‌ಗಳ ವ್ಯವಸ್ಥೆ ಸಹ ಮಾಡಲು ತಿಳಿಸಿದರು.

ಕಾರ್ಯಕ್ರಮದ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ಎಲ್ಲ ವ್ಯವಸ್ಥೆಗಳನ್ನು ಮುಂಚಿತವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು.ವಿವಿಧ ಇಲಾಖೆಯ ಯೋಜನೆ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಸೌಭ್ಯಗಳನ್ನು ಸಹ ವಿತರಣೆ ಮಾಡಲಾಗುತ್ತಿದೆ. ಕಾರ್ಯಕ್ರಮವು ಮಹತ್ವದ್ದಾಗಿರುವದರಿಂದ ಪ್ರತಿಯೊಂದು ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಯುಕೆಪಿ ಮಹಾವ್ಯವಸ್ಥಾಪಕ ಗಜಾನನ ಬಾಲೆ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಅಗತ್ಯ

• **ಬೀಳಗಿ:** ಮೊಬೈಲ್ ಅತಿಯಾದ ಬಳಕೆಯಿಂದ ಮಕ್ಕಳ ಏಕಾಗ್ರತೆ ಕುಂದಿಸುತ್ತಿರುವುದರಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧಿಸಿರುವ ಸರ್ಕಾರದ ನಿರ್ಧಾರವು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಮಾನಸಿಕ ಸುರಕ್ಷತೆಯ ದೃಷ್ಟಿಯಿಂದ ಕ್ರಾಂತಿಕಾರಿ ಹೆಜ್ಜೆಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಹೇಳಿದರು.

ತಾಲೂಕಿನ ಮನ್ನಿಕೇರಿಯ ಗ್ಲೋಬಲ್ ಗೈಡ್ ಪಬ್ಲಿಕ್ ಪ್ರೀ-ಪ್ರೈಮರಿ ಮತ್ತು ಪ್ರೈಮರಿ ಇಂಗ್ಲಿಷ್ ಮೀಡಿಯಂ ಶಾಲೆಯ ದಶಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದಿನ ಧಾರಾವಾಹಿಗಳು ಮತ್ತು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಕೌಟುಂಬಿಕ ನೆಮ್ಮದಿಯ ಬದುಕು ಮತ್ತು ಸಂಸ್ಕೃತಿಯನ್ನು ಹಾಳು ಮಾಡುತ್ತಿದೆ. ಇವುಗಳಿಂದ ದೂರವಿರಿ. ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವ ಅಗತ್ಯವಿದೆ ಎಂದರು. ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯೆಯ ಜೊತೆಗೆ ಆಚಾರ-ವಿಚಾರ ಕಲಿಸುವ ಕೆಲಸವಾಗಬೇಕಿದೆ. ಇಂದು ತಂದೆ-ತಾಯಿಯರನ್ನು ಗೌರವದಿಂದ ನೋಡಿಕೊಳ್ಳುವ ಗುಣ ಕಡಿಮೆಯಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಆದಾಪೂರ ಮಾತನಾಡಿ, ಮಕ್ಕಳಲ್ಲಿ ಕೇವಲ ಬುದ್ಧಿವಂತಿಕೆ ಇದ್ದರೆ ಸಾಲದು. ಜೊತೆಗೆ ಕಾರ್ಯಗತಗೊಳಿಸುವ ಸಾಮರ್ಥ್ಯವೂ ಇರಬೇಕು. ಜೀವನದ ಯಶಸ್ಸಿಗೆ ಪ್ರಾಮಾಣಿಕತೆ ಮತ್ತು ನಂಬಿಕೆ ಅಡಿಪಾಯವಾಗಬೇಕು. ಮಕ್ಕಳಲ್ಲಿ ಕೇವಲ ಅಂಕಗಳಿಕೆಯ ಅನ್ವೇಷಣೆ ಇರಬಾರದು; ಬದಲಾಗಿ ಒಳ್ಳೆಯ ಆಚಾರ-ವಿಚಾರಗಳು ಹಾಗೂ ಸಂಸ್ಕಾರಗಳು ಮೈಗೂಡಬೇಕು ಎಂದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸುರೇಶ ಮನಗೂಳಿ ಮಾತನಾಡಿ, ಕಲಿಕೆಗೆ ಪೂರಕವಾಗಿ ಮನೆಯಲ್ಲೂ ಪಾಲಕರು ಬೆಂಬಲ ನೀಡಿದಾಗ ಮಾತ್ರ ಮಗುವಿನ ಸಮಗ್ರ ವಿಕಸನ ಸಾಧ್ಯ ಎಂದರು.

ವಿಶ್ರಾಂತ ಶಿಕ್ಷಕ ಸದಾನಂದ ಏಳಗಂಟಿ ಮಾತನಾಡಿದರು. ಕ್ಷೇತ್ರಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ಸಂಸ್ಥೆಯ ಗೌರವಾಧ್ಯಕ್ಷ ಸಿದ್ದಪ್ಪ ಮನಗೂಳಿ, ಡಾ.ಅರ್ಚನಾ ದಡ್ಡೇನ್ನವರ, ಡಾ.ವಿಕಾಸ ದಡ್ಡೇನ್ನವರ, ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಆಶಾ ಬೀಳಗಿ, ಪಿಡಿಒ ಪಿ.ಆರ್. ನದಾಫ, ಚಂದ್ರಕಾಂತ ಕೇಸನೂರ, ಸಿಆರ್‌ಪಿ ಎ.ಬಿ.ಪಾಟೀಲ, ಶಶಿಕಲಾ ಹಂಚನಾಳ, ವೀಣಾ ಮನಗೂಳಿ, ಸಾವಿತ್ರಿ ಖಜ್ಜಿಡೋಣಿ ಉಪಸ್ಥಿತರಿದ್ದರು.



ಸಂಗೀತ ಸಂಜೆ ಕಾರ್ಯಕ್ರಮ ಯಶಸ್ವಿ

• **ಜಮಖಂಡಿ:** ಸಮೀಪದ ಹುನ್ನೂರು ಗ್ರಾಮದ ರಾಘವೇಂದ್ರ ಕಾಲೋನಿಯ ರಾಘವೇಂದ್ರತೀರ್ಥ ಸ್ವಾಮಿಗಳ ಮಠದಲ್ಲಿ ಅಮೇರಿಕದ ನಾದ ಪರ್ಫಾರ್ಮಿಂಗ್ ಆರ್ಟ್ ಸಂಸ್ಥೆ, ಹುನ್ನೂರು ಬ್ರಾಹ್ಮಣ ಸಂಘದ ಸಹಯೋಗದಲ್ಲಿ ಹರಿದಾಸ ನಮನ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಗಣೇಶ ಮನೋಹರ ಬೆಟಗೇರಿ ಸಂಗೀತ ಸುಧೆ ನೀಡಿದರು.ವಿಲಾಸ ರಾಯರ ಹಾರ್ಮೋನಿಯಮ, ಪ್ರಸನ್ನ ದೇಸಾಯಿ ತಬಲಾ, ಅಶೋಕ ಹೂಗಾರ ಮೃದಂಗ, ಶ್ರೀನಿವಾಸ ದೇಶಪಾಂಡೆ ತಾಳ ಸಾಥ್ ನೀಡಿದರು.ಬೆಂಗಳೂರಿನ ಶ್ರೀಧರ ಪಾಟೀಲ ಮಾತನಾಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ ನಿರಂಜನ ಪರಮಶೆಟ್ಟಿ, ಡಾ.ಲಕ್ಷ್ಮೀ ಬನ್ನಿ, ಪ್ರವೀಣ ಕುಲಕರ್ಣಿ, ಗೋಪಾಲ ಪಾಟೀಲ, ರಾಘವೇಂದ್ರ ಉಮರ್ಜಿ ಅವರನ್ನು ಸನ್ಮಾನಿಸಲಾಯಿತು. ದಂತ ವೈದ್ಯ ಡಾ.ನಿರಂಜನ ಪರಮಶೆಟ್ಟ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮನೋಹರ ಬೆಟಗೇರಿ, ರಾಘವೇಂದ್ರ ಉಮರ್ಜಿ, ಅಶೋಕ ಕುಲಕರ್ಣಿ, ಗುರುರಾಜ ಕೌಜಲಗಿ, ವಾದಿರಾಜ ಗಲಗಲಿ, ಮನೋಹರ ಇನಾಮದಾರ, ಕೃಷ್ಣ ಕುಲಕರ್ಣಿ, ಎ.ಎಚ್. ಕುಲಕರ್ಣಿ, ಶುಭಾ ಬೆಟಗೇರಿ, ಇನ್ನಿತರರು ಇದ್ದರು.



ದುಷ್ಟ ಶಕ್ತಿಗಳಿಂದ ಧರ್ಮ, ದೇಶ ರಕ್ಷಿಸಿ

• **ಮಹಾಲಿಂಗಪುರ:** ಒಬ್ಬ ಸದ್ಗುಣಿ ಮಾತೆಯ ಪುಣ್ಯ ಗರ್ಭದಿಂದ ಅವತರಿಸಿದ ಸಂಜಾತರಿಂದ ಸ್ವಸ್ಥ ಸಮಾಜ ಮತ್ತು ಸದೃಢ ದೇಶ ನಿರ್ಮಾಣ ಸಾಧ್ಯ, ಹಾಗಾಗಿ ಒಂದು ಕುಟುಂಬ, ಸಮಾಜ, ದೇಶದ ಸದೃಢತೆ ಮಹಿಳೆಯನ್ನು ಅವಲಂಬಿಸಿರುತ್ತದೆ ಎಂದು ಪತ್ರಕರ್ತ ನಾರನಗೌಡ ಉತ್ತಂಗಿ ಹೇಳಿದರು.

ಸ್ಥಳೀಯ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ನಡೆದ ನಂದಾದೀಪ ಮಹಿಳಾ ಕ್ಷೇಮಾಭಿವೃದ್ಧಿ ಸಂಘದವತಿಯಿಂದ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಭಾರತ ಮತ್ತು ಹಿಂದೂ ಧರ್ಮ ಅತ್ಯಂತ ಅಪಾಯದ ಸ್ಥಿತಿಯಲ್ಲಿರುವ ಪ್ರಸ್ತುತ ಸನ್ನಿವೇಶದಲ್ಲಿ ಮಾತೆಯರು ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗಿದೆ. ಕಾಳಿ, ದುರ್ಗೆ,ಆದಿಶಕ್ತಿ ಸ್ವರೂಪರಾದ ಮಾತೆಯರು ಪಾಶ್ಚಾತ್ಯ ಸಂಸ್ಕೃತಿ ಮತ್ತು ಮೊಬೈಲ್, ಟಿವಿ ಗೀಳಿನಿಂದ ಹೊರಬಂದು ತಮ್ಮ ಕುಟುಂಬ ಮತ್ತು ತಮ್ಮ ಮಕ್ಕಳಿಗೆ ಸನಾತನ ಸಂಸ್ಕೃತಿ ಸಂಪ್ರದಾಯಗಳ ಮಹತ್ವದ ಅರಿವು ಮೂಡಿಸಬೇಕಾಗಿದೆ. ಮಕ್ಕಳಿಗೆ ಧರ್ಮದ ಶ್ರೇಷ್ಠತೆ ಮತ್ತು ಆಚರಣೆಯ ಮಹತ್ವದ ಮನವರಿಕೆ ಮಾಡಿ ಅಭಿಮಾನ ಮೂಡಿಸಬೇಕಾಗಿದೆ ಎಂದರು.

ಶಿಕ್ಷಕ ಐ.ಎಸ್.ಪಾಟೀಲ ಮಾತನಾಡಿ, ದೇಶದ ಹೆಸರಲ್ಲಿ, ನದಿಗಳ ಹೆಸರಲ್ಲಿ, ಭೂತಾಯಿ ಹೆಸರಲ್ಲಿ ಮಾತೆ ಕಂಡ ದೇಶ ಭಾರತ. ಮಹಿಳೆಯರು ಎಚ್ಚೆತ್ತಾಗ ಮಾತ್ರ ದೇಶ ಉಳಿಸಲು ಸಾಧ್ಯ. ಮಹಿಳೆ ಸೌಜನ್ಯ, ಸಂಸ್ಕಾರದ ಸಂಕೇತ, ಕುಟುಂಬದ ಆಧಾರ ಸ್ತಂಭ, ಸಹನಾ ಮೂರ್ತಿ, ಕ್ಷಮಯಾಧರಿತ್ರಿ ಎಂದರು.ಮಹಿಳಾಪರ ಚಿಂತಕರಾದ ಕಲ್ಪನಾ ಬರಗಿ, ಕವಿತಾ ಕೊಣ್ಣೂರ ಮಾತನಾಡಿದರು.



ವಿವೇಕಾನಂದ ಬಡಾವಣೆಯ ಮಹಿಳೆಯರನ್ನು ಯಾವುದೇ ಕೆಲಸಕ್ಕೂ ಹಚ್ಚದೆ ಬಡಾವಣೆಯ ಶಿಕ್ಷಕರು, ಪುರುಷರೇ ಅಡುಗೆ ತಯಾರಿಸಿ, ವೇದಿಕೆ ಸಿದ್ದಪಡಿಸಿ ಮಹಿಳಾ ದಿನಾಚರಣೆ ಆಚರಿಸಿದ್ದು ವಿಶೇಷವಾಗಿತ್ತು. ನಂದಾದೀಪ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಪ್ರೇಮಾ ಸಿಂಪಿಗೇರ ಅಧ್ಯಕ್ಷತೆ ವಹಿಸಿ, ಉಪಾಧ್ಯಕ್ಷೆ ಭಾರತಿ ಸುಲಾಖೆ, ಕಲಾವತಿ ಅಮಲಝುರಿ, ಅಡವೇಶ ಮಹಾರಾಜರು, ಶಾಂತ ಚಿನವಾಲ, ಮುಖ್ಯೋಪಾಧ್ಯಾಯ ಎಸ್.ಎಂ.ಮುಗುಳಖೋಡ, ಶಿಕ್ಷಕ ಎಲ್.ಎಸ್.ನಾಗಣ್ಣವರ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಬಲೂನ್ ಆಟದಲ್ಲಿ ಅಕ್ಕವ್ವ ಮಡ್ಡೆನ್ನವರ ಪ್ರಥಮ, ಅನಿತಾ ತೋಟಗೇರ ದ್ವಿತೀಯ, ಜಯಶ್ರೀ ಪಟ್ಟಣಶೆಟ್ಟಿ ತೃತೀಯ ಸ್ಥಾನ ಪಡೆದರು.

ರಸಾಯನಿಕ ಗೊಬ್ಬರ ಬಳಕೆಯಿಂದ ಭೂಮಿ ಫಲವತ್ತತೆ ನಾಶ

• **ಕಲಾದಗಿ:** ಮೂಲ ಕೃಷಿ ಪದ್ಧತಿ ಜೊತೆಗೆ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ನೈಸರ್ಗಿಕ ಕೃಷಿ ಮಾಡಿದಲ್ಲಿ ರೈತರು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯದ ಕೃಷಿ ಜೀವನ ನಡೆಸಬಹುದು ಎಂದು ಕಲಾದಗಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಪ್ರಸನ್ನ ಮಾನೆ ಹೇಳಿದರು.

ಉದಗಟ್ಟಿ ಗ್ರಾಮದ ಮಂಜುನಾಥ ಯರಡ್ಡಿಯವರ ತೋಟದಲ್ಲಿ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದಡಿ ರೈತರಿಗೆ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೈಸರ್ಗಿಕವಾಗಿಸಿಗುವನಿರುಪಯುಕ್ತಕಸಕಡ್ಡಿ,ಸಗಣಿ, ಗೋಮೂತ್ರ ಜಾನುವಾರು ಮೂತ್ರ ಬಳಸಿ ಗೊಬ್ಬರ ಕೀಟನಾಶಕ ಔಷಧಿಗಳನ್ನು ತಯಾರಿಸಿಕೊಂಡು ಸ್ವಯಂ ಕೃಷಿ ಭೂಮಿಗೆ ಬಳಸುವುದರಿಂದ ಭೂಮಿಗೆ ಪುನರ್ ಉತ್ತೇಜನ ಕೊಡಬಹುದಾಗಿದೆ. ಅತಿಯಾದ ರಾಸಾಯನಿಕ ಗೊಬ್ಬರ ಬಳಕೆ ಕೀಟನಾಶಕ ಸಿಂಪರಣೆಯಿಂದ ಭೂಮಿಯಲ್ಲಿನ ಸೂಕ್ಷ್ಮಾಣು ಜೀವಿಗಳು ಸಾಯುತ್ತಿವೆ. ರೈತರು ಕನಿಷ್ಠ ಒಂದು ಎಕರೆಯಾದರೂ ನೈಸರ್ಗಿಕ ಕೃಷಿ ಮಾಡಲು ಮುಂದಾಗಬೇಕು. ನೈಸರ್ಗಿಕ ಕೃಷಿ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸಿ ರೈತರಿಗೆ ವರ್ಷಕ್ಕೆ 2000 ಸಹಾಯಧನ ನೀಡುತ್ತಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ನೈಸರ್ಗಿಕ ಕೃಷಿ ಮಾಡಿದಲ್ಲಿ ಭೂಮಿಯ ಫಲವತ್ತತೆ ಹೆಚ್ಚಾಗಿ ಇಳುವರಿಯಲ್ಲಿ ಬದಲಾವಣೆ ಕಾಣಬಹುದು ಎಂದರು.



ಕೃಷಿಕ ಸಮಾಜದ ಸದಸ್ಯ ತಿಮ್ಮಣಗೌಡ ಪಾಟೀಲ ಮಾತನಾಡಿ, ಸಾವಯವ ಕೃಷಿ ಮಾಡಬೇಕು, ಗೊಬ್ಬರ ಕೊಳೆಯಬಾರದು ಕಳೆಯಬೇಕು ಕಳೆತ ಗೊಬ್ಬರವನ್ನು ಹೊಲಕ್ಕೆ ಹಾಕಬೇಕು, ಆದಷ್ಟು ರಾಸಾಯನಿಕ ಗೊಬ್ಬರ ಕಡಿಮೆ ಮಾಡಿ ನೈಸರ್ಗಿಕ ಕೃಷಿ ಮಾಡಬೇಕು ಎಂದರು.

ಬಸವರಾಜ ಪುಂಡಿಕಟಗಿ, ಚಂದ್ರಶೇಖರ ಶಿಲಿಯಪ್ಪನವರ, ನೈಸರ್ಗಿಕ ಕೃಷಿ ಮಾದರಿ ಯುವ ರೈತ ಮಂಜುನಾಥ ಯರಡ್ಡಿ ಮಾತನಾಡಿದರು. ರೈತ ಸಂಪರ್ಕ ಕೇಂದ್ರದ ತಾಂತ್ರಿಕ ಸಿಬ್ಬಂದಿ ಜಯಶ್ರೀ ಬಾವಿಕಟ್ಟಿ, ರೈತ ಪ್ರವೀಣ ಅರಕೇರಿ, ವಿಠ್ಠಲ ಬಸುನಾಯಕ, ಈರಪ್ಪ ಕೊಕ್ಕನ್ನವರ, ಗಿರೀಶ ಬಟಕುರ್ಕಿ, ಕಿರಣ ಅರಕೇರಿ, ಅಮಿತಗೌಡ ಗೌಡರ, ಪಾಂಡು ಪೆಟ್ಲೂರು, ಸಂಗಪ್ಪ ಜಕ್ಕನ್ನವರ, ಆನಂದ ಆಡೀನ್, ಆನಂದ ಕಾಮನ್ನವರ, ರಂಗನಾಥ ಗುಡ್ಲಾರ ಇನ್ನಿತರರು ಇದ್ದರು.

ಶಿವಾಜಿ, ಬಸವಣ್ಣನ ಪುತ್ಥಳಿಗೆ 80 ಲಕ್ಷ ರೂ. ಬಿಡುಗಡೆಗೆ ಸಿಎಂ ಸೂಚನೆ

• **ಬಾಗಲಕೋಟೆ:** ರಾಜ್ಯ ಸರ್ಕಾರದಿಂದ ಬಾಗಲಕೋಟೆಯ ನವನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮತ್ತು ವಿಶ್ವಗುರು ಬಸವಣ್ಣನವರ ಪುತ್ಥಳಿ ಸ್ಥಾಪನೆಗೆ ತಲಾ 40 ಲಕ್ಷದಂತೆ ಒಟ್ಟು 80 ಲಕ್ಷ ರೂ. ಅನುದಾನ ಬಿಡಗುಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್ಥಿಕ ಇಲಾಖೆಗೆ ಸೂಚನೆ ನೀಡಿದ್ದಾರೆ ಎಂದು ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಸಂಚಾಲಕ, ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ತಿಳಿಸಿದ್ದಾರೆ.

ಬಾಗಲಕೋಟೆ ನವನಗರದಲ್ಲಿ ಶಿವಾಜಿ ಮಹಾರಾಜರ ಮತ್ತು ಬಸವಣ್ಣನವರ ಪುತ್ಥಳಿ ಸ್ಥಾಪನೆಯ ಬೇಡಿಕೆ ಬಹುದಿನಗಳಿಂದ ಇದ್ದು, ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ವಿಶೇಷ ಅನುದಾನ ನೀಡುವ ಜತೆಗೆ ಸರ್ಕಾರದಿಂದ ಇಬ್ಬರು ಮಹಾನ್ ನಾಯಕರ ಪುತ್ಥಳಿ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿತ್ತು. ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿ, ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಹೇಳಿದ್ದಾರೆ.



ಜಿಲ್ಲಾ ಕೇಂದ್ರವಾದ ಹಾಗೂ ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರ ವ್ಯಾಪ್ತಿಯ ಬಾಗಲಕೋಟೆ ನವನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಮತ್ತು ಬಸವಣ್ಣನವರ ಪುತ್ಥಳಿ ಸ್ಥಾಪನೆಯ ಬೇಡಿಕೆ ಇದೆ. ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿ ನಿರ್ಮಾಣಕ್ಕೆ ತಲಾ 40 ಲಕ್ಷದಂತೆ ಒಟ್ಟು 80 ಲಕ್ಷ ಅನುದಾನ ಒದಗಿಸಲು ಮನವಿ ಮಾಡಲಾಗಿತ್ತು. ಇದಕ್ಕೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದಾರೆ. ಸಚಿವ ಆರ್.ಬಿ.ತಿಮ್ಮಾಪುರ ಅವರ ನೇತೃತ್ವದಲ್ಲಿ ಶೀಘ್ರವೇ ಈ ಕಾರ್ಯಕ್ಕೆ ಚಾಲನೆ ನೀಡಲಾಗುವುದು ಎಂದು ಹೊಳಬಸು ಶೆಟ್ಟರ ತಿಳಿಸಿದ್ದಾರೆ.

ಪರಿಶ್ರಮದಿಂದ ಹೆಚ್ಚು ಅಂಕ ಪಡೆಯಲು ಸಾಧ್ಯ

• **ಬಾದಾಮಿ:** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿನಿಯರು ಸತತ ಅಧ್ಯಯನ ಶೀಲರಾದರೆ ಮಾತ್ರ ಅವರ ಬದುಕು ಸುಂದರವಾಗಬಲ್ಲದು. ಶಿಕ್ಷಕರ ಹಾಗೂ ಪಾಲಕರ ಸಹಕಾರದೊಂದಿಗೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆಯಲು ಸಾಧ್ಯ ಎಂದು ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮಹಾಂತೇಶ ನಾರಗಲ್ ಹೇಳಿದರು.

ಇಲ್ಲಿನ ಎಸ್‌ಬಿಸಿ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆದ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳ ಮುಕ್ತಾಯ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರಿಗೆ ಶುಭಕೋರುವ ಸಮಾರಂಭದಲ್ಲಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಆರ್.ಎಸ್.ಮೂಲಿಮನಿ ಮಾತನಾಡಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಒಂದು ಪ್ರಮುಖ ಘಟ್ಟವಾಗಿದ್ದು, ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಬೇಕೆಂದು ಕರೆ ನೀಡಿದರು.

ಶಾಲೆಯ ವಿದ್ಯಾರ್ಥಿನಿಯರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದವರಿಗೆ 10 ಸಾವಿರ ರೂ., ತಾಲೂಕಿಗೆ ಪ್ರಥಮ ಸ್ಥಾನ ಪಡೆದರೆ 5 ಸಾವಿರ ರೂ. ಹಾಗೂ ಶಾಲೆಗೆ ಪ್ರಥಮ ಸ್ಥಾನ ಪಡೆದವರಿಗೆ ರೂ 2500 ರೂ.ನಗದು ಬಹುಮಾನ ನೀಡುವುದಾಗಿ ತಿಳಿಸಿದರು. ಶಾಲಾ ಸುಧಾರಣಾ ಸಮಿತಿ ಚೇರಮನ್ ಎಸ್.ಎಂ.ಹಿರೇಮಠ ಮಾತನಾಡಿ, ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಾಧನೆ ಮೂಲಕ ನಿಮ್ಮ ಪ್ರತಿಭೆಯನ್ನು ಸಮಾಜಕ್ಕೆ ತೋರಿಸಬೇಕೆಂದು ಕರೆ ನೀಡಿದರು. ವೀ.ಪು.ವಿ.ವ. ಸಂಸ್ಥೆಯ ಗೌರವ ಕಾರ್ಯದರ್ಶಿ ಎಸ್.ಡಿ ಫತ್ತೇಪೂರ ಅಧ್ಯಕ್ಷತೆ ವಹಿಸಿದ್ದರು. ವಿಶ್ವವಿದ್ಯಾನಿಲಯ ಕ್ರೀಡಾಪಟು ಗುರುಚರಣ ಹೂಲಿ, ಮಹಾಂತೇಶ ನಾರಗಲ್, ಆರ್.ಎಸ್.ಮೂಲಿಮನಿ ಇವರನ್ನು ಸನ್ಮಾನಿಸಲಾಯಿತು. ಶಾಲಾ ಸುಧಾರಣಾ ಸದಸ್ಯರಾದ ಕಸ್ತೂರೆವ್ವ ಮಮದಾಪೂರ ಹಾಗೂ ನಿರ್ಮಲಾ ಮಟ್ಟಿ ಉಪಸ್ಥಿತರಿದ್ದರು.



ಶಾಲಾ ವಿದ್ಯಾರ್ಥಿನಿಯರಿಂದ ಪ್ರಾರ್ಥನೆ ಜರುಗಿತು. ಮುಖ್ಯಾಧ್ಯಾಪಕಜೆ.ಎಮ್.ವಿಟ್ಟಲಕೋಡಸ್ವಾಗತಿಸಿದರು. ಎಸ್.ಬಿ.ಶಿವಶಿಂಪಿ ಪರಿಚಯಿಸಿದರು. ಎಸ್.ಬಿ.ಬಡಿಗೇರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಪಿ.ಎಸ್. ಚಿನಿವಾರ, ಕೆ.ಬಿ.ಭಗವಂತಗೌಡ್ರ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು.

ಉತ್ತಮ ವ್ಯಕ್ತಿತ್ವಕ್ಕೆ ಸಂಸ್ಕಾರ ಅಗತ್ಯ

• **ಗಲಗಲಿ:** ಕೇವಲ ಶಿಕ್ಷಣದಿಂದಲೇ ಮಾತ್ರ ಪರಿಪೂರ್ಣವಾಗಿ ಮಕ್ಕಳು ಬದಲಾಗುವುದಿಲ್ಲ. ಅದರ ಜೊತೆಗೆ ಸಂಸ್ಕಾರದ ಸ್ಪರ್ಶ ನೀಡಿದಾಗ ಉತ್ತಮ ಪ್ರಜೆಯಾಗುವುದರೊಂದಿಗೆ ಉತ್ತಮ ವ್ಯಕ್ತಿತ್ವ ಪಡೆಯಲು ಸಾಧ್ಯ ಎಂದು ಧಾರವಾಡ ಬಾಲ ವಿಕಾಸ ಅಕಾಡೆಮಿ ನಿರ್ದೇಶಕ ಎಚ್.ವೈ.ಜರಾಳಿ ಹೇಳಿದರು. ಸ್ಥಳೀಯ ಗಾಲವ ಶಿಕ್ಷಣ ಸಂಸ್ಥೆಯವರ ಮಹರ್ಷಿ ಗಾಲವ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಶಾಲಾವಾರ್ಷಿಕೋತ್ಸವದ ಗಾಲವ ಸಿರಿಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪೋಷಕರು ತಮ್ಮ ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಅಂಕಗಳ ಬದಲು ಸನ್ನಡತೆಗೆ ಪ್ರಧಾನ್ಯತೆ ಕೊಡಬೇಕು ಆಗಮಾತ್ರ ಮಕ್ಕಳ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯ ಎಂದರು. ಸಾಮಾಜಿಕ ಮುಖಂಡ ನಿಂಗಣ್ಣ ಗೋಳಿಪಲ್ಲೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆದಾಪೂರ ಮಾತನಾಡಿ, ಮಕ್ಕಳಸರ್ವತೋಮುಖ ಅಭಿವೃದ್ಧಿಗೆ ಉತ್ತಮ ಶಿಕ್ಷಣ ಅವಶ್ಯವಾಗಿದ್ದು ಇದರಲ್ಲಿ ಶಿಕ್ಷಕರ ಹಾಗೂ ಪಾಲಕರ ಪಾತ್ರ ಪ್ರಮುಖವಾಗಿದೆ ಎಂದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಡಿ.ದೇಸಾಯಿ ಪ್ರತಿಭಾ ಪುರಸ್ಕಾರ ನೆರವೇರಿದರು. ಸಂಸ್ಥೆಯ ಅಧ್ಯಕ್ಷ ಐ.ಜಿ.ಪುರಾಣಿಕ ಅಧ್ಯಕ್ಷತೆ ವಹಿಸಿದ್ದರು. ಗಲಗಲಿ ವಲಯ ಸಿಆರ್‌ಪಿಗಳಾದ ಡಿ.ಐ.ಚಾಂಬರ ಮಾತನಾಡಿದರು. ನಿರ್ದೇಶಕರಾದ ಪಿ.ಬಿ.ನ್ಯಾಮಗೌಡರ, ವಿ.ಜಿ.ಬಾಳಶೆಟ್ಟಿ, ಎಚ್.ಬಿ.ಸೊರಗಾಂವಿ, ಎಸ್.ಬಿ.ನ್ಯಾಮಗೌಡರ, ಮುಖ್ಯ ಶಿಕ್ಷಕ ಎಸ್.ಆರ್.ಕಡಪಟ್ಟಿ, ವಿಜಯಲಕ್ಷ್ಮೀ ನಾಟಿಕಾರ, ಸಿದ್ದು ಕಡಪಟ್ಟಿ, ಗಿರಿಜಾ ಪಟ್ಟಣಶೆಟ್ಟಿ, ಪದ್ಮಾ ಬಾರಕೇರ ಇದ್ದರು.



ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ: ಮನ್ನಿಕೇರಿ

• **ಗುಳೇದಗುಡ್ಡ:** ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಶಾಲಾ ಪರಿಸರ ನಿರ್ಮಿಸಲು ಸರ್ಕಾರಿ ಶಾಲೆಗಳಿಗೆ ಸಾಕಷ್ಟು ಅನುದಾನ ನೀಡುತ್ತಿದೆ. ಪ್ರೌಢಶಾಲೆಯ ವಿದ್ಯಾರ್ಥಿ ಹಂತದ ಶಿಕ್ಷಣ ಅತ್ಯಂತ ಮಹತ್ವದ ಘಟ್ಟವಾಗಿದ್ದು, ವಿದ್ಯಾರ್ಥಿಗಳು ಶಾಲೆಗೆ ಪೂರ್ಣ ಹಾಜರಾತಿಯ ಜೊತೆಗೆ ಉತ್ತಮ ರೀತಿಯಿಂದ ಅಭ್ಯಾಸ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಅಜಿತ್ ಮನ್ನಿಕೇರಿ ಹೇಳಿದರು.

ಸಮೀಪದ ಪರ್ವತಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಾಲೆಗೆ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆಯಲು ರಾತ್ರಿ ಶಾಲೆ,



ವಿದ್ಯಾರ್ಥಿಗಳ ಮನೆ ಮನೆಗೆ ಭೇಟಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಶ್ಲಾಘನೀಯ. ವಿದ್ಯಾರ್ಥಿಗಳು ಶ್ರದ್ದೆಯಿಂದ ಓದಿ ಉತ್ತಮ ಅಂಕಪಡೆಯಬೇಕು ಎಂದರು. ಹೆಚ್ಚು ಹಾಜರಾತಿ ಹೊಂದಿಗೆ ವಿದ್ಯಾರ್ಥಿಗಳಿಗೆ, ದಾನಿ ಗಳನ್ನು ಸನ್ಮಾನಿಸಲಾಯಿತು.

ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಎಚ್.ಕೆ.ಗುಡೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಿವೈಪಿಸಿ ಪ್ರಮೋದಿನಿ ಬಳೂಲಮಠ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಮುದಗಲ್ಲ, ಎಸ್‌ಡಿಎಮ್‌ಸಿ ಸರಸ್ವತಿ ಜಿಗೇರಿ, ಉಪಾಧ್ಯಕ್ಷ ಮಳಿಯಪ್ಪ ಹಾವಡಿ, ಸದಸ್ಯರಾದ ಲಿಂಗಪ್ಪ ಗಾಜಿ, ಹುಲಗಪ್ಪ ಮುರುಡಿ, ನಾಗಪ್ಪ ಪರಸಣ್ಣವರ, ಪುಂಡಲೀಕ ಭಜನ್ನವರ, ಶಿವಮ್ಮ ಮಾಲಗಿತ್ತಿ, ಮುರ್ತುಜಾ ಕಮತಗಿ ಹಾಗೂ ಶಿಕ್ಷಕರು ಹಾಗೂ ಪಾಲಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ಹಿಂದು ಸಮ್ಮೇಳನ

ಕೊಲ್ಹಾರ: ಪಟ್ಟಣದ ದ್ಯಾಮವ್ವದೇವಿ ದೇವಸ್ಥಾನ ಮುಂಭಾಗದಲ್ಲಿ ಮಾ.10ರಂದು ಮಂಗಳವಾರ ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯಿಂದ ಬೃಹತ್ ಹಿಂದು ಸಮ್ಮೇಳನ ಆಯೋಜಿಸಲಾಗಿದೆ. ಈ ಸಮ್ಮೇಳನಕ್ಕೆ ಮುಳವಾಡ ಕೊಣ್ಣೂರು ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಪಟ್ಟಣದ ದಿಗಂಬರೇಶ್ವರ ಸಂಸ್ಥಾನ ಮಠದ ಯೋಗಿ ಕಲ್ಲಿನಾಥ ದೇವರು, ವರ್ಚಗಲ್ ಶ್ರದ್ಧಾನಂದ ಆಶ್ರಮದ ಜಗದೀಶಾನಂದ ಶ್ರೀಗಳು ಹಾಗೂ ಶೀಲವಂತ ಹಿರೇಮಠದ ಡಾ.ಕೈಲಾಸನಾಥ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಸೈನಿಕರು, ಹಿಂದೂ ಸಮ್ಮೇಳನ ಸಂಚಲನ ಸಮಿತಿಯ ಐ.ಜಿ.ಬಿರಾದಾರ ಅಧ್ಯಕ್ಷತೆ ವಹಿಸಲಿದ್ದಾರೆ. ವಕ್ತಾರರಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರು ಹಾಗೂ ಬಳ್ಳಾರಿ ಕೇಂದ್ರ ಗ್ರಾಮ ವಿಕಾಸ ಪ್ರಾಂತ ಸದಸ್ಯರಾದ ದಾಮೋದರ ಜಿ.ಭಾಗವಹಿಸಲಿದ್ದಾರೆ. ಮಹಿಳಾ ಪ್ರತಿನಿಧಿಯಾಗಿ ಸಾಹಿತಿ ಗಾಯತ್ರಿ ಪತ್ತಾರ ಉಪಸ್ಥಿತರಿರುವರು ಎಂದು ಹಿಂದೂ ಸಮ್ಮೇಳನ ಸಂಚಲನ ಸಮಿತಿ ತಿಳಿಸಿದೆ. ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಬೃಹತ್ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿದೆ.

ಇಂದು ಉಳವಿವರೆಗೆ ಪಾದಯಾತ್ರೆ

ಬಸವನಬಾಗೇವಾಡಿ: ತಾಲೂಕಿನ ಇಂಗಳೇಶ್ವರದ ವಚನಶಿಲಾ ಮಂಟಪ ಲಿಂ.ಚನ್ನಬಸವ ಸ್ವಾಮೀಜಿ ಇಂಗಳೇಶ್ವರ ಚವರ ಕೃಪಾಶೀರ್ವಾದ ಹಾಗೂ ವಿರಕ್ತಮಠದ ಡಾ.ಸಿದ್ಧಲಿಂಗ ಸ್ವಾಮೀಜಿ ಹಾಗೂ ಬಸವನಬಾಗೇವಾಡಿ ವಿರಕ್ತಮಠ ಸಿದ್ಧಲಿಂಗ ಸ್ವಾಮೀಜಿ ಮಾರ್ಗದರ್ಶನದಲ್ಲಿ ಚನ್ನಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರದಿಂದ ಐಕ್ಯಸ್ಥಳವಾದ ಉಳವಿಯುವರೆಗೆ ಮಾ.10ರಂದು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಮಂಗಳವಾರ ನಸುಕಿನ ಜಾವ 5ಗಂಟೆಗೆ ಯಾತ್ರೆಗೆ ಇಂಗಳೇಶ್ವರದ ಬಸವೇಶ್ವರ ವಚನ ಶಿಲಾ ಮಂಟಪದಿಂದ ಚಾಲನೆ ದೊರೆಯಲಿದ್ದು, ಈ ಸಮಾರಂಭದಲ್ಲಿ ನಾಡಿನ ಹರಗುರು ಚರಮೂರ್ತಿಗಳು, ರಾಜಕೀಯ ಧುರೀಣರು ಕಲಾವಿದರು, ಸಾಹಿತಿಗಳು, ಮಹಿಳಾ ಸಂಘಗಳು, ಯುವಮಿತ್ರರು,ವಿವಿಧ ಕ್ಷೇತ್ರಗಳ ಸಾಧಕರು ಭಾಗಿಯಾಗಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಬೇಕು. ನಂತರ ಇಂಗಳೇಶ್ವರದಿಂದ ಸಾಗಿದ ಪಾದಯಾತ್ರೆಯು ಬೆಳಗ್ಗೆ 7ಗಂಟೆಗೆ ಬಸವನಬಾಗೇವಾಡಿಯ ಬಸವೇಶ್ವರ ದೇವಸ್ಥಾನದಲ್ಲಿ 7.30ಕ್ಕೆ ವಿರಕ್ತಮಠದಲ್ಲಿ ಶ್ರೀಗಳ ಹಾಗೂ ಶರಣ ಶರಣೆಯರ ಸಮ್ಮುಖದಲ್ಲಿ ಪೂಜೆ ಸಲ್ಲಿಸಿ ಯಾತ್ರೆಯು ಉಳವಿಯತ್ತ ಮುಂದೆ ಸಾಗಲಿದೆ ಎಂದು ಉಳವಿ ಚನ್ನಬಸವೇಶ್ವರ ಪಾದಯಾತ್ರಾ ಇಂಗಳೇಶ್ವರ ಕಮಿಟಿ ತಿಳಿಸಿದ್ದಾರೆ.

ವಾದಿರಾಜತೀರ್ಥರ ಆರಾಧನೋತ್ಸವ



ವಿಜಯಪುರ: ನಗರದ ಕೃಷ್ಣ ವಾದಿರಾಜ ಮಠದಲ್ಲಿ ವಾದಿರಾಜ ಗುರುಸಾರ್ವಭೌಮರ ಆರಾಧನೋತ್ಸವ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆ ನಿರ್ಮಾಲ್ಯ ವಿಸರ್ಜನೆ ನಂತರ ಪಂಚಾಮೃತ ಅಭಿಷೇಕ, ಶ್ರೀಕೃಷ್ಣ- ವಾದಿರಾಜರ ಪ್ರತಿಮೆಗಳಿಗೆ ರಜತ ಕವಚ ಪುಷ್ಪಾಲಂಕಾರವನ್ನು ಪಂಡಿತ ಸಮೀರಾಚಾರ, ಮುತ್ತಗಿ ಶ್ರೀಧರಾಚಾರ ಹಾಗೂ ಹರಿದಾಸರು ನೆರವೇರಿಸಿದರು. ಮಠದ ಗೌರವ ಅಧ್ಯಕ್ಷ ಗೋಪಾಲ ನಾಯಕ, ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ, ವ್ಯವಸ್ಥಾಪಕ ಪಂಡಿತ ವಾಸುದೇವಾಚಾರ ನೇತೃತ್ವದಲ್ಲಿ ರಥೋತ್ಸವ ನಡೆಯಿತು. ಆಡಳಿತ ಮಂಡಳಿ ಸದಸ್ಯರಾದ ವಿಕಾಸ ಪದಕಿ, ವಿ.ಸಿ.ಕುಲಕರ್ಣಿ, ವಿಜಯ ಜೋಶಿ, ಅಶೋಕರಾವ್ ಭಾಗವಹಿಸಿದ್ದರು. ವಿವಿಧ ಭಜನಾ ಮಂಡಳಿಗಳಿಂದ ಸಂಗೀತ ಸೇವೆ ನಡೆಯಿತು. ಗುರುರಾಜ ಸೊಂಡೂರ, ಬಿ.ಜೆ.ಜೋಶಿ, ಅನಿತಾ ಪದಕಿ ಮಂಡಳಿಗಳು ರಥೋತ್ಸವದಲ್ಲಿದ್ದರು. ಪಂಡಿತ ಗುರುಆಚಾರ್ಯ ಗುಡಿ ಅಥಣಿ ಅವರು ಉದ್ಬೋಧಕ ಪ್ರವಚನ ನೀಡಿ, ವಾದಿರಾಜ ಗುರುಸಾರ್ವಭೌಮರ ಸಾಧನೆ, ಮಹಿಮೆ ಕುರಿತು ಬಣ್ಣಿಸಿದರು.

ಅಭಿನವ ಸಂಗನಬಸವ ಶ್ರೀಗಳಿಗೆ ಮಾತೃ ವಿಯೋಗ

ಬಸವನಬಾಗೇವಾಡಿ: ತಾಲೂಕಿನ ನಂದಿಹಾಳ ಪಿಯು ಗ್ರಾಮದ ನಿವಾಸಿ ಮನಗೂಳಿ ಹಿರೇಮಠದ ಶ್ರೀಗಳ ಮಾತೋಶ್ರೀಯವರಾದ ಭಾಗೀರಥಿ ಮಾಮಲಪ್ಪ ಮನಗೂಳಿ(65) ಸೋಮವಾರ ನಿಧನರಾದರು.



ಮೃತರಿಗೆ ಮನಗೂಳಿ ಹಿರೇಮಠದ ಪೀಠಾಧಿಪತಿ ಅಭಿನವ ಸಂಗನಬಸವ ಶಿವಾಚಾರ್ಯ ಶ್ರೀಗಳ ಪೂರ್ವಾಶ್ರಮದ ಮಾತೋಶ್ರೀಯವರಾಗಿದ್ದಾರೆ. ಮೃತರಿಗೆ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಮುದ್ದೇಬಿಹಾಳ: ತಾಲೂಕಿನ ಸಿಬಿ ಅಸ್ಕಿ ಫೌಂಡೇಶನ್ ವತಿಯಿಂದ ಮಹಿಬೂಬ್ ನಗರ ಉರ್ದು ಶಾಲೆಯ ಪಕ್ಕದಲ್ಲಿರುವ ಮೆಕ್ಕಾ ಮಸೀದಿ ಆವರಣದಲ್ಲಿ ರಂಜಾನ್ ಸೌಹಾರ್ದ ಔತಣ ಕೂಟವನ್ನು ಸೋಮವಾರ ಏರ್ಪಡಿಸಲಾಗಿತ್ತು. ಸಿ.ಬಿ.ಅಸ್ಕಿ ಅವರನ್ನು ಮಸೀದಿ ಕಮಿಟಿಯ ಸದಸ್ಯರು ಗೌರವಿಸಿದರು. ಮಹಿಬೂಬ್ ಗೊಳಸಂಗಿ, ಜಬ್ಬಾರ್ ಗೋಲಂದಾಜ, ಸತೀಶ ಓಸ್ವಾಲ್ ಕಾಮರಾಜ ಬಿರಾದಾರ, ಮುತ್ತು ರಾಯಗೊಂಡ, ಅಲ್ಲಾಭಕ್ಷ ನಿಡಗುಂದಿ, ಸಂಗಣ್ಣ ಕಂಬಾಣಿ, ಬಸವರಾಜ ಮಡಿವಾಳರ, ಸದಾಶಿವ ಹಿರೇಮಠ, ಭಾಸ್ಕರ್ ಹುಸೇನ್ ಭಗವಾನ, ಅಶೋಕ ಚಟ್ಟರ ಇದ್ದರು.

ಮಕ್ಕಳಿಗೆ ಸಂಸ್ಕಾರ ನೀಡಿ: ಶಾಸಕ ರಾಜುಗೌಡ

ಬಸವನಬಾಗೇವಾಡಿ: ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುವುದರಿಂದ ಮಕ್ಕಳ ಬಾಳು ಉಜ್ವಲವಾಗುತ್ತದೆ ಎಂದು ದೇವರಹಿಪ್ಪರಗಿ ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ ಕುದರಿಸಾಲವಾಡಗಿ ಹೇಳಿದರು. ತಾಲೂಕಿನ ಹೂವಿನಹಿಪ್ಪರಗಿ ಗ್ರಾಮದ ಕುದರಿ ಸಾಲವಾಡಗಿ ರಸ್ತೆಯ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆ ಹತ್ತಿರದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ತಾಲೂಕಾಡಳಿತ, ತಾಪಂ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು. ತಾಪಂ ಇಒ ವೆಂಕಟೇಶ ವಂದಾಲ ಮಾತನಾಡಿ, ಯಾವುದೇ ದೇಶ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಅವಶ್ಯಕವಾಗಿದೆ. ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಕೂಡಾ ಶಿಕ್ಷಣದಿಂದ ವಂಚಿತರಾಗಬಾರದೆಂದು ಇಂತಹ ವಸತಿ ನಿಲಯ ಸ್ಥಾಪಿಸುವುದರ ಮೂಲಕ ಉಚಿತ ಶಿಕ್ಷಣ ನೀಡುತ್ತಿದೆ. ವಿದ್ಯಾರ್ಥಿನಿಯರು ಮೊಬೈಲ್ ಗಳಿಂದ ದೂರವಿದ್ದು, ಒಳ್ಳೆಯ ಶಿಕ್ಷಣ ಪಡೆದುಕೊಂಡು ಪಿಯುಸಿ, ಡಿಗ್ರಿಯಲ್ಲಿ ನೂರಕ್ಕೆ ನೂರರಷ್ಟು ಅಂಕಗಳನ್ನು ಪಡೆಯುವ ಸಾಮರ್ಥ್ಯ ಹೊಂದಬೇಕೆಂದು ಹೇಳಿದರು. ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾಧಿಕಾರಿ ಸಿ.ಜಿ.ಬಿರಾದಾರ ಮಾತನಾಡಿ, ಡಿ.ದೇವರಾಜ ಅರಸರು ಕಂಡ ಕನಸನ್ನು ನನಸಾಗಿಸುವಂತ ಕಾರ್ಯ ಮಾಡಬೇಕು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಮಹೇಶ ರಾಜರತ್ನ ಸ್ವಾಗತಿಸಿದರು. ಶಶಿಧರ ಕುಂಟೋಜಿ ನಿರೂಪಿಸಿದರು.



ಬಸವನಬಾಗೇವಾಡಿ: ತಾಲೂಕಿನ ಹೂವಿನಹಿಪ್ಪರಗಿ ಗ್ರಾಮದ ಕುದರಿ ಸಾಲವಾಡಗಿ ರಸ್ತೆಯ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆ ಹತ್ತಿರದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡ ಉದ್ಘಾಟಿಸಲಾಯಿತು. ಉಪತಹಶೀಲ್ದಾರ್ ಸೋಮಶೇಖರ ತಾವರಖೇಡ, ಶೇಖರಗೌಡ ಪಾಟೀಲ, ಸಂಗಮೇಶ ಹಳ್ಳೂರ, ಲೋಕೋಪಯೋಗಿ ಇಲಾಖೆ ಎಇ ದೊಡಮನಿ, ತಾಲೂಕು ಕಲ್ಯಾಣಾಧಿಕಾರಿ ಎಸ್.ವಿ.ನಿಂಬಾಳ ಗುತ್ತಗೆದಾರ ಸುಬ್ಬರೆಡ್ಡಿ, ವಿದ್ಯಾರ್ಥಿನಿ ಸುಜಾತಾ ರಾಠೋಡ ಇದ್ದರು.

ನಿರಂತರ ಕುಡಿಯುವ ನೀರಿನ ಯೋಜನೆ | ಸಾರ್ವಜನಿಕರ ಆಕ್ರೋಶ

ಪೈಪ್‌ಲೈನ್ ಕಾಮಗಾರಿ ಕಳಪೆ: ಆರೋಪ

ಮಹಾಂತೇಶ ಮೆನದಾಳಮಠ

ದಿಗಂತ ವಿಶೇಷ

ನಾಲತವಾಡ: ಪಟ್ಟಣದಲ್ಲಿ ಅಮೃತ 2.0 ಯೋಜನೆ ಅಡಿಯಲ್ಲಿ ನಡೆಯುತ್ತಿರುವ ನಿರಂತರ ಕುಡಿಯುವ ನೀರಿನ ಪೈಪಲೈನ್ ಕಾಮಗಾರಿ ಅತ್ಯಂತ ಕಳಪೆ ಮಟ್ಟದಲ್ಲಿ ನಡೆಯುತ್ತಿದೆ ಎಂಬ ಆರೋಪಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ. ಪಟ್ಟಣದ ಪೊಲೀಸ್ ಠಾಣೆ ಮುಂಭಾಗದಲ್ಲಿ ನಿಯಮಾನುಸಾರ ತೆಗ್ಗು ತಗೆಯದೆ ಪೈಪಲೈನ್ ಜೋಡಿಸಲಾಗುತ್ತಿದೆ ಎನ್ನಲಾಗಿದೆ.

ಈ ರಸ್ತೆ ಮೂಲಕ ಪ್ರತಿದಿನವೂ ಬೃಹತ್ ಗಾತ್ರದ ವಾಹನಗಳು, ಕಬ್ಬು ಸಾಗಿಸುವ ಟ್ರ್ಯಾಕ್ಟರ್‌ಗಳು ಸೇರಿದಂತೆ ಭಾರೀ ವಾಹನ ಸಂಚಾರ ನಡೆಯುತ್ತಿರುವುದರಿಂದ ಈ ರೀತಿ ಮೇಲ್ಮೈಯಲ್ಲಿ ಪೈಪ್ ಅಳವಡಿಸಿದರೆ ಮುಂದಿನ ದಿನಗಳಲ್ಲಿ ಪೈಪ್ ಒಡೆದು ಕುಡಿಯುವ ನೀರಿನ ಸರಬರಾಜಿನಲ್ಲಿ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ನಿಯಮಾನುಸಾರ ಕುಡಿಯುವ ನೀರಿನ ಪೈಪಲೈನ್ ಕನಿಷ್ಠ ಮೂರು ಅಡಿ ಆಳದಲ್ಲಿ ಅಳವಡಿಸಬೇಕು ಎಂದು ಸೂಚನೆ ಇದ್ದರೂ ಗುತ್ತಿಗೆ ಪಡೆದ ಕಂಪನಿಯವರು ಆ ನಿಯಮಗಳನ್ನು ಕಡೆಗಣಿಸಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಸಾರ್ವಜನಿಕರು ಹಲವಾರು ಬಾರಿ ಗಮನಕ್ಕೆ ತಂದರೂ ಕೂಡ ಗುತ್ತಿಗೆದಾರರು ಯಾವುದೇ ಪರಿಗಣನೆ ನೀಡದೆ ಮನಸ್ಸೋ ಇಚ್ಚೆ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಿರಂತರ ಕುಡಿಯುವ ನೀರಿನ ಕಾಮಗಾರಿ ಅತ್ಯಂತ ಕಳಪೆ ಮಟ್ಟದಲ್ಲಿ ನಡೆಯುತ್ತಿದೆ. ನಿಯಮದಂತೆ ನಡೆಯಬೇಕಾದ ಕಾಮಗಾರಿ ಡಬ್ಬಾಳಿಯಿಂದ ನಿಯಮ ಬಾಹಿರವಾಗಿ ಮಾಡಲಾಗುತ್ತಿದೆ. ಕಾಮಗಾರಿಯ ಮೇಲ್ವಿಚಾರಣೆ ಸ್ಥಳೀಯರೇ ಮಾಡುತ್ತಿದ್ದು, ಅವರು ಯಾರ ಮಾತಿಗೂ ಜಗ್ಗದೆ ತಮ್ಮ ಇಷ್ಟದಂತೆ ಕೆಲಸ ನಡೆಸುತ್ತಿದ್ದಾರೆ. ಕೂಡಲೇ ಮೇಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಬಿಜೆಪಿ ತಾಲೂಕು ಕಾಯದರ್ಶಿ ಸಂಗಮೇಶ ಮೇಟಿ, ಅಜಯ ಕೋಟಿಕನ್ ಆಗ್ರಹಿಸಿದರು.



> ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಪೈಪ್ ಗಳನ್ನು ಮೇಲ್ಭಾಗದಲ್ಲಿ ಜೋಡಿಸಿರುವುದು ಗಮನಕ್ಕೆ ಬಂದಿದೆ. ನಿಯಮದಂತೆ ಒಳಗೆ ಅಳವಡಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ.
> ■ ಈರಣ್ಣ ಕೊಣ್ಣೂರ, ಪಪಂ ಮುಖ್ಯಾಧಿಕಾರಿ

> ಕಾಮಗಾರಿಯ ಅವೈಜ್ಞಾನಿಕ ಕಾರ್ಯದ ಬಗ್ಗೆ ಮಾಹಿತಿ ಬಂದಿದ್ದು, ಥರ್ಡ್ ಪಾರ್ಟಿ ಅವರನ್ನು ಕರೆಸಿ ನಿಯಮಾನುಸಾರ ಅಗೆದು ಮರಳಿ ಪೈಪ್ ಗಳನ್ನು ಜೋಡಿಸಲಾಗುವುದು. ಪರಿಶೀಲಿಸಿ ರೆಕ್ಟಿಫೈಯರ್ ಮಾಡಿಕೊಡಲಾಗುವುದು.
> ■ ಆರ್.ಎಸ್.ಹಿರೇಗೌಡ, ಎಇಇ, ಬಸವರಾಜ ಕೋಟದ ಥರ್ಡ್ ಪಾರ್ಟಿ

ಆದ್ಯತೆ ಮೇರೆಗೆ ಯೋಜನೆ ಕಾಮಗಾರಿ ಪೂರ್ಣಗೊಳಿಸಿ

ವಿಜಯಪುರ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪ್ರಗತಿ ಹಂತದಲ್ಲಿರುವ ಎಲ್ಲ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೂಡಲೇ ಪೂರ್ಣಗೊಳಿಸಬೇಕು ಎಂದು ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಹೇಳಿದರು.



ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡ ಮಹಾತ್ಮ ಗಾಂಧಿ ನರೇಗಾ ಯೋಜನೆಯ ನಾನಾ ವಿಷಯಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಪಂಗಳಿಗೆ ಬಿಡುಗಡೆ ಮಾಡಿರುವ ಸಾಮಗ್ರಿ ವೆಚ್ಚದ ಅನುದಾನವನ್ನು ವಿಳಂಬ ಮಾಡದೇ ಮಾ. 16 ನೇ ತಾರೀಖಿನೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು ಎಂದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೋಂದಾಯಿಸಲ್ಪಟ್ಟ ಎಲ್ಲ ಕೂಲಿಕಾರರ ಇಕೆವೈಸಿ ಮಾಡುವುದು ಕಡ್ಡಾಯವಾಗಿದೆ. ಮುಖ್ಯವಾಗಿ ಸಕ್ರಿಯ ಕೂಲಿಕಾರರ ಇಕೆವೈಸಿಯನ್ನು ಕಡ್ಡಾಯವಾಗಿ ಮಾ. 17 ರೊಳಗೆ ಶೇ. 100 ರಷ್ಟು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚಿಸಿದರು.

ಪ್ರತಿ ಗ್ರಾಪಂಗಳಲ್ಲಿ ನರೇಗಾ ಯೋಜನೆಯಡಿ ಚಾಲ್ತಿಯಲ್ಲಿರುವ ಸಮುದಾಯ ಹಾಗೂ ವೈಯಕ್ತಿಕ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲ ಕೂಲಿಕಾರರ ಮುಖ ದೃಢೀಕರಣ ಮಾಡಿಸಬೇಕು ಎಂದರು. ಈಗಾಗಲೇ ಬೇಸಿಗೆ ಆರಂಭವಾಗಿರುವುದರಿಂದ ಗ್ರಾಮೀಣ ಜನರಿಗೆ ಉದ್ಯೋಗದ ಅವಶ್ಯಕತೆಯಿದೆ. ಅಂತಹವರಿಗೆ ಗ್ರಾಪಂ ವತಿಯಿಂದ ಕಡ್ಡಾಯವಾಗಿ ಉದ್ಯೋಗ ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಪ್ರಸ್ತುತ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ 29.00 ಲಕ್ಷ ಮಾನವ ದಿನಗಳ ಗುರಿ ನಿಗದಿಪಡಿಸಲಾಗಿದೆ. ಈಗಾಗಲೇ 23.90 ಲಕ್ಷ ಮಾನವ ದಿನಗಳ ಸೃಜನೆಯಾಗಿದೆ. ಪ್ರಸ್ತುತ ವರ್ಷ ಮುಕ್ತಾಯಗೊಳ್ಳಲು ಕೆಲವು ದಿನಗಳ ಮಾತ್ರ ಬಾಕಿ ಇರುತ್ತದೆ. ಆದ್ದರಿಂದ ಬಾಕಿ ಉಳಿದ ಮಾನವ ದಿನಗಳನ್ನು ಸೃಜನೆ ಮಾಡಿ ಶೇ.100 ರಷ್ಟು ಪ್ರಗತಿ ಸಾಧಿಸಬೇಕು ಎಂದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಕ್ಷೇತ್ರ ಮಟ್ಟದಲ್ಲಿ ಅತ್ಯಂತ ಕ್ರಿಯಾಶೀಲರಾಗಿ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂದು ಎಚ್ಚರಿಕೆ ನೀಡಿದರು. ಜಿಪಂನ ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ, ಅಧಿಕಾರಿಗಳು ಇದ್ದರು.

ಇಂದು ಹಿಂದು ಸಮ್ಮೇಳನ: ಬಿರಾದಾರ

ಚಡಚಣ: ವಿಶ್ವಕ್ಕೆ ಗುರುವಾಗಿರುವ ಹಿಂದೂ ಧರ್ಮವನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯ. ಈ ಕಾರ್ಯ ಸಂಘಟಿತ ಹಿಂದೂ ಸಮಾಜದಿಂದ ಮಾತ್ರ ಸಾಧ್ಯ. ಈ ದಿಶೆಯಲ್ಲಿ ಹಿಂದೂ ಸಮಾಜವನ್ನು ಸಂಘಟಿಸಿ ನಗರದಲ್ಲಿ ಮಾ.10ರಂದು ಮಂಗಳವಾರ ಬೃಹತ್ ಹಿಂದೂ ಸಮ್ಮೇಳನಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಿ ಸಮಾವೇಶ ಯಶಸ್ವಿಗೊಳಿಸಬೇಕು ಎಂದು ಮುಖಂಡ ಶಾಂತುಗೌಡ ಬಿರಾದಾರ ಹೇಳಿದರು.

ಸ್ಥಳೀಯ ಚೌಡೇಶ್ವರಿ ಮಂಗಲ ಕಾರ್ಯಾಲಯದಲ್ಲಿ ನಡೆದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಸಮಾವೇಶದ ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಮಾ.10 ರಂದು ಮದ್ಯಾಹ್ನ 3 ಗಂಟೆಗೆ ಬೃಹತ್ ಶೋಭಾಯಾತ್ರೆ ಪಟ್ಟಣದ ನವಗ್ರಹ ಹನುಮಾನ ಮಂದಿರದಿಂದ ಪ್ರಾರಂಭವಾಗಿ ಶಿವಾಜಿ ವೃತ್ತ, ಜೇಡರ ದಾಸಿಮಯ್ಯ ವೃತ್ತ, ಬಸವೇಶ್ವರ ವೃತ್ತ, ಎಸ್.ಬಿ.ಆಯ್. ಬ್ಯಾಂಕ ಮಾರ್ಗವಾಗಿ ಸಂಚರಿಸಿ ಅಗಸಿ ಹತ್ತಿರದ ಹನುಮಾನ ದೇವಸ್ಥಾನ ಹತ್ತಿರ ಮುಕ್ತಾಯವಾಗಿ, ಹನುಮಾನ ಮಂದಿರದ ಪಕ್ಕದಲ್ಲಿ ಇರುವ ಖಾಲಿ ಜಾಗೆಯಲ್ಲಿ ಬೃಹತ್ ಸಮಾವೇಶವಾಗಿ ಜರುಗಲಿದೆ. ಸಮಾವೇಶದಲ್ಲಿ ಹುಕ್ಕೇರಿಯ ತಾಲೂಕಿನ ಕ್ಯಾರಗುಡ್ಡದ ಅವಜೀಕರ ಆಶ್ರಮದ ಅಭಿನವ ಮಂಜುನಾಥ ಸ್ವಾಮಿಗಳು, ಸ್ಥಳೀಯ ವಿರಕ್ತ ಮಠದ ಷಡಕ್ಷರ ಶ್ರೀಗಳು, ಹಾವಿನಾಳ ಗ್ರಾಮದ ಚರಮೂರ್ತಿ ಮಠದ ವಿಜಯ ಮಹಾಂತೇಶ ಶಿವಾಚಾರ್ಯರು ಹಾಗೂ ಸ್ಥಳೀಯ ಓಂ ಶಾಂತಿ ಕೇಂದ್ರ ಶ್ರೀದೇವಿ ಅಕ್ಕನವರು ಸಮಾವೇಶದ ಸಾನಿಧ್ಯ ವಹಿಸಲಿದ್ದಾರೆ. ಶಾಂತುಗೌಡ ಬಿರಾದಾರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ನಾನಾ (ದಶರಥ) ಸಂಗಾ, ಅರವಿಂದ ಗಡ್ಡದೇವರಮಠ, ವೀರೇಶ ಕಲ್ಯಾಣಶೆಟ್ಟಿ, ತಾಪಂ ಮಾಜಿ ಸದಸ್ಯ ರಾಜು ಝಳಕಿ, ಬಾಲಾಜಿ ಗಾಡಿವಡ್ಡರ, ಸದಾಶಿವ ಬಿರಾದಾರ, ರಾಜು ತಂಗಾ, ಸುರೇಶ ಮೊಗಲಿ, ಸುರೇಶ ಭಂಡರಕವಟೆ, ಚೇತನ ನಿರಾಳೆ, ಚೇತನ ಮಠ, ಕೇದಾರಿ ಸಾಳುಂಕೆ, ವಿಲಾಸ ಡೊಳ್ಳಿ ಅವಿನಾಶ ನಾಯಕ, ಪಾಂಡು ಮೋರೆ, ಶಿವರಾಜ ಪಾಟೀಲ, ಭೀಮಾಶಂಕರ ಬಗಲಿ, ಸೋಮುಗೌಡ ಬಿರಾದಾರ, ನಾಗೇಂದ್ರ ಪಾಟೀಲ, ಆಕಾಶ ಅಂಜುಟಗಿ ಇದ್ದರು.



ಸ್ತ್ರೀಯರು ಆರೋಗ್ಯದತ್ತ ಗಮನಹರಿಸಲಿ

ಮುದ್ದೇಬಿಹಾಳ: ತಾಲೂಕು ಬಣಜಿಗ ಕ್ಷೇಮಾಭಿವೃದ್ಧಿ ಸಂಘ ಮತ್ತು ಮಹಿಳಾ ಘಟಕದ ಆಶ್ರಯದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸ್ತ್ರೀಯರ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ ವಾಕಥಾನ್‌ನಲ್ಲಿ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

ನಂತರ ಪ್ರಾರ್ಥನಾ ವಿದ್ಯಾಮಂದಿರದಲ್ಲಿ ಹಮ್ಮಿಕೊಂಡ ಸಭೆಯಲ್ಲಿ ಮಾತನಾಡಿದ ಶಿಕ್ಷಕಿ ನಂದಿನಿ ಕಂಠಿ, ಮೊದಲಿನ ಕಾಲದಲ್ಲಿ ಸ್ತ್ರೀಯರು ಹೊಲ ಮನೆಗಳಲ್ಲಿ ಕೆಲಸ ಮಾಡುತ್ತ ಆರೋಗ್ಯವಂತರಾಗಿದ್ದರು. ಪ್ರಸ್ತುತ ಕಾಲ ಬದಲಾದಂತೆ ಸ್ತ್ರೀಯರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಮಹಿಳೆಯರು ತಮ್ಮ ನಿತ್ಯದ ಕೆಲಸಗಳ ಮಧ್ಯೆ ಆರೋಗ್ಯದ ಕಡೆ ನಿರ್ಲಕ್ಷ್ಯ ತೋರದೇ ಆರೋಗ್ಯವಂತ ಜೀವನ ನಡೆಸಲು ಸದಾ ಜಾಗೃತೆ ವಹಿಸಬೇಕು ಎಂದರು.

ಕದಳಿ ವೇದಿಕೆಯ ಅಧ್ಯಕ್ಷೆ ಕಾಶೀಬಾಯಿ ರಾಂಪೂರ, ಹಿರಿಯ ವಕೀಲೆ ಜಯಾ ಸಾಲಿಮಠ ಮಾತನಾಡಿದರು. ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ನಾಗಠಾಣ, ಉಪಾಧ್ಯಕ್ಷೆ ಕವಿತಾ ದಡ್ಡಿ, ಕಾರ್ಯದರ್ಶಿ ರೇಖಾ ಗಡೇದ ಇದ್ದರು. ದಿನಾಚರಣೆಯ ಪ್ರಯುಕ್ತ ನೂರಾರು ಮಹಿಳೆಯರು 'ವಾಕ್‌ಥಾನ್' ನಡೆಸಿದರು. ವಿಜಯಲಕ್ಷ್ಮಿ ಗಡೇದ, ಗೌರಮ್ಮ ಚಟ್ಟೇರ, ಲಕ್ಷ್ಮೀ ಬಳ್ಳೊಳ್ಳಿ, ಸು?ಷ್ಮಾ ಜೋಳದ, ಶಿವಲೀಲಾ ಕಡಿ, ಪಾರ್ವತಿ ಪವಾಡಶೆಟ್ಟಿ, ಅಕ್ಷತಾ ಕಡಿ, ಸವಿತಾ ನಾಲತವಾಡ, ರೇಣುಕಾ ಕಡಿ, ಅಕ್ಕಮ್ಮ ಕಲಬುರ್ಗಿ, ಜ್ಯೋತಿ ನಾಗಠಾಣ, ಮಂಜುಳಾ ಗೂಳಿ, ನಿರ್ಮಲಾ ರಾಂಪೂರ, ವಿಜಯಲಕ್ಷ್ಮಿ ಚಿಲ್ಲಾಳಶೆಟ್ಟಿ, ಮಹಾದೇವಿ ಕಿಣಗಿ, ಸುಜಾತಾ ಹುರಕಡ್ಲಿ, ಅನಿತಾ ಕಲಬುರ್ಗಿ, ಬಸಮ್ಮ ಕೋಳೂರ, ಸಂಗೀತಾ, ರೋಹಿಣಿ, ಚಿನ್ಮಯಿ ಪಾಲ್ಗೊಂಡಿದ್ದರು.



ಹಿರೇಮನಿ, ದಫೇದಾರಗೆ ಸನ್ಮಾನ



ಬಸವನಬಾಗೇವಾಡಿ: ಜಿಲ್ಲಾಧಿಕಾರಿಗಳಿಂದ ಅತ್ಯುತ್ತಮ ಸೇವೆಗಾಗಿ ಪುರಸ್ಕೃತರಾದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಮಂಜುಳಾ ಹಿರೇಮನಿ, ಕಚೇರಿ ಅಧಿಕ್ಷಕರಿಗೆ ಮಕ್ಬೂಲಸಾಬ್ ದಫೇದಾರ ಅವರಿಗೆ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಗುರುರಾಜ ಗುಡಿಮನಿ ಸನ್ಮಾನಿಸಿ ಅಭಿನಂದಿಸಿದರು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಾಮಾಣಿಕ ಹಾಗೂ ಜನಪರ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಉಪನಿರ್ದೇಶಕ ಮಹೇಶ ಪೋತದಾರ ಹಾಗೂ ಜಿಲ್ಲಾಧಿಕಾರಿ ಡಾ.ಆನಂದ ಕೆ ಅವರು ಮಂಜುಳಾ ಹಿರೇಮನಿ ಅವರಿಗೆ ಅತ್ಯುತ್ತಮ ತಾಲುಕು ಚಾಂಪಿಯನ್ ಪ್ರಶಸ್ತಿ ಹಾಗೂ ಮಕ್ಬೂಲಸಾಬ್ ದಫೇದಾರ ಅವರಿಗೆ ಅತ್ಯುತ್ತಮ ಸೇವಾ ಪುರಸ್ಕಾರ ನೀಡಿ ಗೌರವಿಸಿದ್ದರು. ಈ ಹಿನ್ನೆಲೆಯಲ್ಲಿ ಡಿಎಸ್‌ಎಸ್ ವತಿಯಿಂದ ಸನ್ಮಾನಿಸಿ ಅವರ ಸೇವೆ ಪ್ರಶಂಸಿಸಲಾಯಿತು. ಬಸವನಬಾಗೇವಾಡಿ ಡಿಎಸ್‌ಎಸ್ ಮುಖಂಡರಾದ ಜಾಮುನಿ ದಳಪತಿ, ನಿಡಗುಂದಿ ಮುಖಂಡ ಲಕ್ಷ್ಮಣ ಚಲವಾದಿ, ಮಹಾದೇವಪ್ಪ ಚಲವಾದಿ ಉಪಸ್ಥಿತರಿದ್ದರು.

ಶ್ರೀಶೈಲ ಪಾದಯಾತ್ರಿಕರಿಗೆ ಅನ್ನ ದಾಸೋಹ

ವಿಜಯಪುರ: ನಗರದ ನೀಲಕಂಠೇಶ್ವರ ಶ್ರೀಶೈಲ ಪಾದಯಾತ್ರಾ ಕಮೀಟಿಯಿಂದ ಸುಮಾರು 400ಕ್ಕೂ ಹೆಚ್ಚು ಭಕ್ತರು ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ವಿಜಯಪುರದಿಂದ ಪಾದಯಾತ್ರೆ ಹಮ್ಮಿಕೊಂಡಿದ್ದರು. ಪಾದ ಯಾತ್ರಿಗಳ ಕಮೀಟಿಯು ಸುರಪುರ ತಾಲೂಕಿನ ಮಾರ್ಗವಾಗಿಸಂಚರಿಸುವಾಗ ದಾರಿ ಯುದ್ದಕ್ಕೂ ಮಣಿಕಂಠ ಫೌಂಡೇಶನ್ ವತಿಯಿಂದ ಭಕ್ತರಿಗೆ ನೀರಿನ ಬಾಟಲಿಗಳನ್ನು ಹಂಚಿದರು. ಸುಗೂರ ಗ್ರಾಮದ ಬಯಲು ಪ್ರದೇಶದಲ್ಲಿ ರಾತ್ರಿ ವಸ್ತಿಯನ್ನು ಮಾಡಿದ ಪ್ರಯುಕ್ತ ಪಾದಯಾತ್ರಿಕರಿಗೆ ಅನ್ನ ದಾಸೋಹವನ್ನು ಮಣಿಕಂಠ ಫೌಂಡೇಶನ್ ಸದಸ್ಯ ಮಡಿವಾಳಯ್ಯ ಹಿರೇಮಠ (ಮಡುಸ್ವಾಮಿ) ಆಯೋಜಿಸಿದ್ದರು. ಮಡುಸ್ವಾಮಿ ಶ್ರೀಶೈಲ ಮಲ್ಲಿಕಾರ್ಜುನನ ನಂದಿಕೋಲಕ್ಕೆ ವಿಶೇಷ ಅಭಿಷೇಕ, ಪೂಜೆ ನೆರವೇರಿಸಿದರು. ಮಣಿಕಂಠ ಫೌಂಡೇಶನ್ ಸದಸ್ಯರಾದ ಮಡಿವಾಳಯ್ಯ ಹಿರೇಮಠ (ಮಡುಸ್ವಾಮಿ), ರಾಜು ಗುನ್ನಾಪೂರ, ಅಮೋಘಸಿದ್ದ ಕರಾಂಡೆ, ಸತೀಶ ರಾಠೋಡ, ಸಚಿನ ಚವ್ಹಾಣ, ಸಂದೀಪ ಪವಾರ, ಸೋಮಶೇಖರ, ಪ್ರಶಾಂತ, ಅಭಿಷೇಕ, ನವೀನ, ಲಾಳೇಮಶಾಕ, ರಾವುತರಾಯ, ಕೃಷ್ಣಾ ಹಾಗೂ ಪಾಲ್ಗೊಂಡಿದ್ದರು.



ಹಲಸಂಗಿ ದರೋಡೆ ಪ್ರಕರಣ ಭೇದಿಸಿದ ಪೊಲೀಸರಿಗೆ ಸನ್ಮಾನ

ಚಡಚಣ: ಹಲಸಂಗಿ ಗ್ರಾಮದಲ್ಲಿ ಜ.26ರಂದು ಭೂಮಿಕಾ ಜ್ಯುವೆಲ್ಲರಿ ಅಂಗಡಿ ಮಾಲಿಕ ಮಹಾರುದ್ರ, ಕಂಚಗಾರ ಅವರ ಅಂಗಡಿಯಲ್ಲಿ ನಡೆದ ದರೋಡೆ ಪ್ರಕರಣವನ್ನು ಅತಿ ಕಡಿಮೆ ಅವಧಿಯಲ್ಲಿ ಭೇದಿಸಿ ಕಳುವಾದ ಬಂಗಾರವನ್ನು ವಶಪಡಿಸಿಕೊಂಡ ಚಡಚಣ ಹಾಗೂ ಇಂಡಿ ತಾಲೂಕಿನ ಪೊಲೀಸ್ ಇಲಾಖೆಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ಈ ಸಂಬಂಧ ಇಬ್ಬನಿ ಹೋಟೆಲ್ ಸಭಾಭವನದಲ್ಲಿ ಆಯೋಜಿಸಿದ ಶೌರ್ಯ ಮತ್ತು ಸಾಹಸ ಪುರಸ್ಕಾರ ಸಮಾರಂಭದಲ್ಲಿ ವಿಶ್ವಕರ್ಮ ಸಮಾಜದ ಚಡಚಣ ಹಾಗೂ ಇಂಡಿ ತಾಲೂಕಿನ ಪದಾಧಿಕಾರಿಗಳು ಮತ್ತು ಚಿನ್ನಾಭರಣ ವ್ಯಾಪಾರಸ್ಥರು ಪೊಲೀಸರನ್ನು ಸನ್ಮಾನಿಸಿ ಗೌರವಿಸಿದರು.

ವಿಶ್ವಕರ್ಮ ಚಡಚಣ ತಾಲೂಕು ಅಧ್ಯಕ್ಷ ಸೋಮಶೇಖರ ಬಡಿಗೇರ ಮಾತನಾಡಿ, ಕಡಿಮೆ ಸಮಯದಲ್ಲಿ ಆರೋಪಿಗಳನ್ನು ಬಂಧಿಸಿ ಕಳುವಾದ ಬಂಗಾರವನ್ನು ಪತ್ತೆಹಚ್ಚಿರುವುದು ಪೊಲೀಸರ ಕಾರ್ಯಕ್ಷಮತೆಯ ಉದಾಹರಣೆಯಾಗಿದೆ. ತಮ್ಮ ಜೀವಪಣಕ್ಕಿಟ್ಟು ಕಾರ್ಯನಿರ್ವಹಿಸಿದ ಪೊಲೀಸರ ಸೇವೆಯನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಇಂಡಿ ಉಪಾಧ್ಯಕ್ಷ ಸುಜಿತ್ ಲಾಳಸಂಗಿ ಮಾತನಾಡಿ, ಕಳ್ಳತನದಂತಹ ಘಟನೆಗಳನ್ನು ತಡೆಯಲು ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ತಮ್ಮ ಅಂಗಡಿ ಮತ್ತು ಮನೆಗಳಲ್ಲಿ ಉತ್ತಮ ಗುಣಮಟ್ಟದ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚಡಚಣ ಪಿಎಸ್‌ಐ ಸೋಮೇಶ ಗೆಜ್ಜಿ ಮಾತನಾಡಿ, ಪ್ರಕರಣದ ತನಿಖೆಗೆ ಸೋಲಾಪುರ ಸೇರಿದಂತೆ ವಿವಿಧ ಕಡೆ ತಂಡಗಳನ್ನು ರಚಿಸಿ ಸುಮಾರು 120 ಕಿ.ಮೀ ವ್ಯಾಪ್ತಿಯ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲಾಗಿದೆ.

ಚಡಚಣ ಸಿಪಿಐ ಪರಶುರಾಮ ಮನಗೂಳಿ ಮಾತನಾಡಿ, ಪ್ರಕರಣದ ತನಿಖೆಗೆ ಚಡಚಣ, ಝಳಕಿ ಹಾಗೂ ಹೊರ್ತಿ ಠಾಣೆಗಳ ಪಿಎಸ್‌ಐಗಳ ತಂಡಗಳನ್ನು ರಚಿಸಿ ಮಹಾರಾಷ್ಟ್ರದವರೆಗೆ ತನಿಖೆ ನಡೆಸಲಾಗಿದೆ. ವಿವಿಧ ಗ್ರಾಮಗಳ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸುವ ಮೂಲಕ ಆರೋಪಿಗಳನ್ನು ಪತ್ತೆಹಚ್ಚಲು ಸಾಧ್ಯವಾಯಿತು ಎಂದು ಹೇಳಿದರು. ವ್ಯಾಪಾರಸ್ಥರು ಉತ್ತಮ ಗುಣಮಟ್ಟದ ನೈಟ್‌ವಿಷನ್ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಇಂಡಿ ಡಿವೈಎಸ್ಪಿ ಸದಾಶಿವ ಕಟ್ಟಿಮನಿ ಮಾತನಾಡಿ, ಸಂಶಯಾಸ್ಪದ ವ್ಯಕ್ತಿಗಳು ಕಂಡುಬಂದರೆ ತಕ್ಷಣವೇ 112ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪೊಲೀಸ್ ಪೆಟ್ರೋಲಿಂಗ್ ಹೆಚ್ಚಿಸಲಾಗಿದೆ ಎಂದು ಹೇಳಿದರು.

ಷಡಕ್ಷರಿ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿದರು. ಹೊರ್ತಿ ಪಿಎಸ್‌ಐ ರಾಕೇಶ್ ಬಗಲಿ, ಝಳಕಿ ಪಿಎಸ್‌ಐ ಮಂಜುನಾಥ ತಿರಕನ್ನವರ, ಮಲ್ಲಿಕಾರ್ಜುನ ಬಿರಾದಾರ, ಗಂಗಾಧರ ಬಡಿಗೇರ, ಪ್ರಕಾಶ ಭಂಡರಕವಟೆ, ಸುರೇಶ ಭಂಡರಕವಟೆ, ರಮೇಶ್ ಪೋದ್ದಾರ, ಮಹಾರುದ್ರ ಕಂಚಗಾರ, ಬಸವರಾಜ ಪತ್ತಾರ ಸೇರಿದಂತೆ ಚಡಚಣ ಹಾಗೂ ಇಂಡಿ ತಾಲೂಕಿನ ಚಿನ್ನಾಭರಣ ವ್ಯಾಪಾರಸ್ಥರು ಮತ್ತು ವಿಶ್ವಕರ್ಮ ಸಮಾಜದ ಗಣ್ಯರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಸರ್ವಾಂಗೀಣ ಬೆಳವಣಿಗೆ ಹೊಂದಲಿ: ಪೋತದಾರ

ವಿಜಯಪುರ: ಕಲೆ ಎನ್ನುವುದು ದೊಡ್ಡ ಶಕ್ತಿ. ವಸತಿ ನಿಲಯದ ಮುದ್ದು ವಿದ್ಯಾರ್ಥಿಗಳು ಕೇವಲ ವಿದ್ಯಾಭ್ಯಾಸದಲ್ಲಿ ಮಾತ್ರವಲ್ಲ ಕಲೆ, ಸಂಸ್ಕೃತಿ, ಕ್ರೀಡೆ ಸೇರಿದಂತೆ ಸರ್ವಾಂಗೀಣವಾಗಿ ಬೆಳವಣಿಗೆಯಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಹೇಶ ಪೋತದಾರ ಹೇಳಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಡಾ.ಬಿ.ಆರ್.ಅಂಬೇಡ್ಕರ್ ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದಲ್ಲಿ ಹಮ್ಮಿಕೊಂಡಿರುವ ಕಲಾ ತರಬೇತಿ ಸಮಾರೋಪ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು.

ಸಮಾಜ ಕಲ್ಯಾಣ ಇಲಾಖೆಯ ಬಿ.ಜೆ ಇಂಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 6 ತಿಂಗಳವರೆಗೆ ಮಕ್ಕಳಿಗೆ ನೃತ್ಯ ತರಬೇತಿಗೆ ಅವಕಾಶ ನೀಡಿದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು.

ಕರ್ನಾಟಕ ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಸದಸ್ಯ ಆರ್.ಬಿ.ನಾಯ್ಕ ಮಾತನಾಡಿ, ನೃತ್ಯ ಕಲೆಗೆ ಜಗತ್ತಿನ ಎಲ್ಲ ಕಡೆಗೆ ಸ್ಥಾನಮಾನವಿದೆ ಎಂದು ಹೇಳಿದರು. ತಾವು ಸಹ ಲಂಬಾಣಿ ನೃತ್ಯದ ತರಬೇತಿ ನೀಡಿ ಬೆಂಗಳೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಲಂಬಾಣಿ ನೃತ್ಯದ ತರಬೇತಿ ನೀಡಿದ್ದು ಆ ತಂಡವು ಅಮೇರಿಕದಲ್ಲಿ ನಡೆದ 'ಅಕ್ಕಬಳಗ' ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಆಯ್ಕೆಯಾಗಿರುವ ವಿಷಯವನ್ನು ತಿಳಿಸಿದರು. ತಮ್ಮ ಕಲಾ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ತಮಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿರುವುದನ್ನು ಸ್ಮರಿಸಿದರು.

ಕರ್ನಾಟಕ ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಸದಸ್ಯ ಸುರೇಖಾ ಲಮಾಣಿ ಮಾತನಾಡಿ, ದೇವನೂರು ಮಹಾದೇವಪ್ಪ ಅವರು ಹೇಳಿದಂತೆ ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಯಾವತ್ತಿಗೂ ಫಲ ಕೊಡುತ್ತದೆ' ಎನ್ನುವಂತೆ ಅಕ್ಷರದ ಜೊತೆ ಜೊತೆಗೆ ಮಕ್ಕಳಿಗೆ ನೃತ್ಯದ ತರಬೇತಿಯನ್ನು ನೀಡಿದ್ದು, ಈ ತರಬೇತಿಯನ್ನು ಜೀವನದಲ್ಲಿ ಮುಂದುವರೆಸಿಕೊಂಡು ಉನ್ನತ ಮಟ್ಟದಲ್ಲಿ ಬೆಳೆಯುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸ್ವಾಗತಿಸಿದರು. ಮೋಹನ ಕಟ್ಟಿಮನಿ ನಿರೂಪಿಸಿದರು. ಶಿರೀನ್ ಕೌಸರ, ಮೀನಾಕ್ಷಿ ಮಠಪತಿ, ವಸತಿ ನಿಲಯದ ಮೇಲ್ವಿಚಾರಕರು, ವಿಜಯಪುರ, ನೃತ್ಯ ತರಬೇತಿದಾರರಾದ ರಂಗನಾಥ ಬತ್ತಾಸಿ ಹಾಗೂ ರೋಹಿಣಿ ತಳವಾರ, ಪೂರ್ವಿ ತಳವಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಿಬ್ಬಂದಿಗಳು ಹಾಗೂ ವಸತಿ ನಿಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮಾನ್ವಿ: ಪಟ್ಟಣದ ಶ್ರೀಕಲ್ಮಠದ ಗುರುಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಮಹಿಳಾ ಘಟಕದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಕಲ್ಮಠ ಶ್ರೀವಿರುಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಬಳಿಕ ಆಶೀರ್ವಚನ ನೀಡಿದ ಅವರು, ನಮ್ಮ ಹಿಂದೂ ಧರ್ಮದಲ್ಲಿ ಮಹಿಳೆಯರನ್ನು ಮಾತೃಸ್ವರೂಪದಲ್ಲಿ ಪೂಜಿಸಿ ಗೌರವಿಸುವ ಸಂಸ್ಕೃತಿ ನಮ್ಮದಾಗಿದೆ. ಇಂದು ಮಹಿಳೆಯರು ಎಲ್ಲ ರಂಗದಲ್ಲಿಯೂ ಕೂಡ ಉತ್ತಮ ಸಾಧನೆಯನ್ನು ತೋರುತ್ತಿದ್ದಾರೆ ಪ್ರತಿಯೊಬ್ಬರು ಕೂಡ ಮಹಿಳೆಯರಿಗೆ ಗೌರವ ನೀಡಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ.ಅಂಬಿಕಾ ಮಧುಸೂದನ್ ಮಾತನಾಡಿ, ಮಹಿಳೆಯರು ಹಾಗೂ ಹೆಣ್ಣು ಮಕ್ಕಳು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ವಯದ್ಯರಿಂದ ಅಗತ್ಯ ಸಲಹೆಗಳನ್ನು ಪಡೆದು ಉತ್ತಮ ಆರೋಗ್ಯ ತಮ್ಮದಾಗಿಸಿಕೊಳ್ಳಬೇಕು ಎಂದು ತಿಳಿಸಿದರು. ಶ್ರೀದೇವಿ ಬಳಿಗಾರ ವಕೀಲರು ಮಹಿಳೆಯರಿಗೆ ನಿತ್ಯ ಜೀವನದಲ್ಲಿ ಅಗತ್ಯವಿರುವ ಮಹಿಳಾಪರ ಕಾನೂನುಗಳ ಬಗ್ಗೆ ಮಾಹಿತಿ ನೀಡಿದರು, ಆಶಾ ಕಾರ್ಯಕರ್ತೆಯರನ್ನು ಹಾಗೂ ಪುರಸಭೆ ಮಹಿಳಾ ಸಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ಮಹಿಳೆಯರಿಗಾಗಿ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕ ಮಹಿಳಾ ಘಟಕದ ಅಧ್ಯಕ್ಷರಾದ ಅನುರಾಧ ಪಾಟೀಲ್, ಗಿರಿಜಾ ಚಂದಾ, ಪ್ರಧಾನ ಕಾರ್ಯದರ್ಶಿಗಳಾದ ಅಶ್ವಿನಿ ಸಂಗಮೇಶ್ ಮುಧೋಳ, ಸರ್ವಮಂಗಳ ಜಗದೀಶ್ ಓತೂರ್, ಪ್ರಭಾವತಿ, ಸರಸ್ವತಿ, ಗಿರಿಜಾ ದಕ್ಷಿಣಮೂರ್ತಿ, ಶ್ರೀದೇವಿ ಉಮಾಶಂಕರ್, ನಿರ್ಮಲ ಚನ್ನಬಸಪ್ಪ, ಶೃತಿ ಪಾಟೀಲ್, ಕವಿತಾಬಸವಂತ, ಮಂಜುಳಾರಾಜಕುಮಾರ, ವೀಣಾಹಂಪನಗೌಡ ಇತರರಿದ್ದರು.

ಥಿಯಾಸಫಿ ಜ್ಞಾನ ಉನ್ನತ ಜೀವನಕ್ಕೆ ಪೂರಕ



ಕೊಟ್ಟೂರು: ಒತ್ತಡಯುಕ್ತ ಪರಿಸರದಲ್ಲಿ ಥಿಯಾಸಫಿ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ನಾವು ಉನ್ನತ ಮಟ್ಟದ ಜೀವನವನ್ನು ನಡೆಸಲು ನೆರವಾಗುತ್ತದೆ ಎಂದು ಬಳ್ಳಾರಿಯ ಎಂಜಿನಿಯರ್ ಕೆ.ಬಿ.ಸಂಜೀವ ಪ್ರಸಾದ್ ಹೇಳಿದರು.

ಕೊಟ್ಟೂರಿನ ಥಿಯಾಸಾಫಿಕಲ್ ಲಾಡ್ಜ್ ನ 50ನೇ ವರ್ಷದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕೊಟ್ಟೂರು ಲಾಡ್ಜ್ ನ ಕಾರ್ಯದರ್ಶಿ ಜೆ.ಎಂ. ಧನಂಜಯ, ಕಡೆಹುಡಿ ಲಾಡ್ಜ್ ನ ಸದಸ್ಯರಾದ, ಪ್ರೌಢಶಾಲಾ ಮುಖ್ಯ ಗುರು ಕೊಟ್ಟೂರು ಲಾಡ್ಜ್ ನ ಖಜಾಂಚಿ ಸೋದರ ಹೊಂಬಾಳೆ ಮಂಜುನಾಥ, ಗುರುದೇವ ವಿದ್ಯಾ ಪ್ರಸಾರ ಪರಿಷತ್ ಕಾರ್ಯದರ್ಶಿ ಸೋದರ ಪಿ.ಎಸ್.ಶ್ರೀಧರ ಶೆಟ್ಟಿ ಮಾತನಾಡಿದರು. ಸರ್ವಧರ್ಮ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಿ ಶಾಂತಿಮಂತ್ರದೊಂದಿಗೆ ಮುಕ್ತಾಯವಾಯಿತು. ಬಳ್ಳಾರಿ ವೈದ್ಯ ಸೋದರಿ ರೋಜಾ ಸಂಜೀವ ಪ್ರಸಾದ್, ಕೊಟ್ಟೂರು ಲಾಡ್ಜ್ ಅಧ್ಯಕ್ಷ ಮೈದೂರು ಶಂಕ್ರಣ್ಣ, ಸೇವಾ ವಿಭಾಗದ ಅಧ್ಯಕ್ಷ ಬಿ. ಹನುಮಂತಪ್ಪ, ಮೈದೂರು ಸಿದ್ರಾಮಣ್ಣ, ಕಂಡಕ್ಟರ್ ಕೊಟ್ರೇಶಪ್ಪ, ಜೆ.ಎಂ. ಸುಧೀಂದ್ರ, ಜಿ. ಮಲ್ಲಿಕಾರ್ಜುನ, ಜಿ. ಷಡಕ್ಷರಿಗೌಡ, ಕಡ್ಡಿ ಕೊಟ್ರೇಶ, ಡಿ. ಕರಿಯಪ್ಪ, ಪಿನಾಕಪಾಣಿ, ಡಿ. ಕೊಟ್ರೇಶ, ಡಿ. ಮಲ್ಲಿಕಾರ್ಜುನ, ಶಿವಮೂರ್ತ್ಯಪ್ಪ, ಜಿ. ವೀರಣ್ಣ, ತುಪ್ಪದ ವೀರಣ್ಣ, ಸುಶೀಲಮ್ಮ, ನಾಗಲಕ್ಷ್ಮಿ, ಅನುರಾಧ, ಸುಜಾತ, ಕನ್ನಿಕಾ ಇತರರಿದ್ದರು.

ಕಾನಿಪ: ಸದಸ್ಯತ್ವ ನವೀಕರಣಕ್ಕೆ ಅರ್ಜಿ ಆಹ್ವಾನ

ಕಲಬುರಗಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2026–27ನೇ ಸಾಲಿನ ಸದಸ್ಯತ್ವ ನವೀಕರಣ ಮತ್ತು ಹೊಸ ಸದಸ್ಯತ್ವ ಪಡೆಯಲು ರಾಜ್ಯ ಸಮಿತಿಯ ನಿರ್ದೇಶನದ ಮೇರೆಗೆ ಜಿಲ್ಲಾ ಸಮಿತಿಯಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಾನಿಪದ ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ, ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಫಿರೋಜಾಬಾದ ಹಾಗೂ ರಾಜ್ಯ ಸಮಿತಿ ಸದಸ್ಯ ರಾಜಕುಮಾರ ಉದನೂರ ಜಂಟಿಯಾಗಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಮಾ.10 ರಿಂದ ಕಲಬುರಗಿ ನಗರದ ಪತ್ರಿಕಾ ಭವನದಲ್ಲಿ ಅರ್ಜಿಗಳನ್ನು ಪಡೆಯಬಹುದು ಎಂದು ರಾಜ್ಯ ಸಮಿತಿ ಸದಸ್ಯರಾದ ರಾಜಕುಮಾರ ತಿಳಿಸಿದ್ದಾರೆ.



ಮಾನ್ವಿ: ಪಟ್ಟಣದ ಶ್ರೀಕಲ್ಮಠದ ಗುರುಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಮಹಿಳಾ ಘಟಕದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಕಲ್ಮಠ ಶ್ರೀವಿರುಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಕನ್ನಡ ಉಳಿವಿಗೆ ಕನ್ನಡಿಗರ ಒಗ್ಗಟ್ಟು ಮುಖ್ಯ

ಕುಕನೂರು: ಕನ್ನಡ ಉಳಿವಿಗಾಗಿ ಕನ್ನಡಿಗರ ಒಗ್ಗಟ್ಟು ಮುಖ್ಯವಾಗಿದೆ ಎಂದು ನಿವೃತ್ತ ಶಿಕ್ಷಕ ಶರಣಪ್ಪ ಕೊಪ್ಪದ್ ಹೇಳಿದರು. ಪಟ್ಟಣದ ರಮಾಭಾಯಿ ಡಾ.ಅಂಬೇಡ್ಕರ್ ಬಾಲಕೀಯರ ಪ್ರೌಢ ಶಾಲೆಯಲ್ಲಿ ದಿ.ಶಾಂತಾಭಾಯಿ ರಂಗನಾಥರಾವ್ ನಿಡಗುಂದಿ ಇವರ ಸ್ಮರಣಾರ್ಥವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಕನ್ನಡ ಉಳಿವಿಗಾಗಿ ಕನ್ನಡಿಗರ ಒಗ್ಗಟ್ಟು ಮುಖ್ಯವಾಗಿದೆ. ಗಡಿ ಪ್ರದೇಶದಲ್ಲಿ ತಮ್ಮ ಹೋರಾಟದಲ್ಲಿ ವಿಜಯವನ್ನು ಸಾಧಿಸಿದರು ಅನ್ಯ ಭಾಷಿಗರು ಸೋಲನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದಾರೆ. ಅಂತಹ ವಿಜಯ ವಿಜಯ ಸಮರ್ಪಕವಾಗಿ ಸಿಗಬೇಕು ಎಂದರೆ ಕನ್ನಡಿಗರ ಒಗ್ಗಟ್ಟು ಮುಖ್ಯವಾಗಿದೆ. ಕನ್ನಡಕ್ಕಾಗಿ ಮುಂದಿನ ದಿನಮಾನಗಳಲ್ಲಿ ಕನ್ನಡಕ್ಕಾಗಿ ದುಡಿಯೋಣ ಕನ್ನಡದ ಉಳವಿಗಾಗಿ ಹೋರಾಟವನ್ನು ನಾವು ಮಾಡಬೇಕು. ಆದಕ್ಕೆ ಇಂದಿನ ಯುವಪೀಳಿಗೆ ಕನ್ನಡ ಹೆಚ್ಚು ಬೆಳೆಸಲು ಮುಂದಾಗಬೇಕು ಇಂದಿನ ಆಧುನಿಕ ಜಗತ್ತಿನಲ್ಲಿ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಕಳಕಪ್ಪ ಕುಂಬಾರ ತಾಲೂಕಾಧ್ಯಕ್ಷ, ಆಶಯ ನುಡಿ ಶರಣಪ್ಪ ಕೊಪ್ಪದ ವಿಶ್ರಾಂತ ಸಶಿಕ್ಷಕರು, ಉಪನ್ಯಾಸವನ್ನು ಆರ್.ಪಿ.ರಾಜೂರ ಹಿರಿಯ ಸಾಹಿತಿಗಳು, ನಡೆಸಿಕೊಟ್ಟರು. ರುದ್ರಪ್ಪ ಭಂಡಾರಿ ಜಿಲ್ಲಾ ಜಸಾಪ ಅಧ್ಯಕ್ಷರು, ಪೀರಸಾಬ ದಫೇದಾರ, ಅಶೋಕ ಮಾದಿನೂರ, ದೈಹಿಕ ಶಿಕ್ಷಕ ಎಫ್.ಜಿ.ಅಂಗಡಿ ನಿರೂಪಿಸಿದರು. ಮೇಘರಾಜ ಬೆಡಗಿ ಪ್ರಾರ್ಥಿಸಿ, ಕಸಾಪ ಪ್ರತಿನಿಧಿ ಬಸವರಾಜ ಕೊಡ್ಲಿ ಸ್ವಾಗತಿಸಿ, ಕುಕನೂರ ವಂದಿಸಿದರು.



ಕುಕನೂರು: ಪಟ್ಟಣದ ರಮಾಭಾಯಿ ಡಾ.ಅಂಬೇಡ್ಕರ್ ಬಾಲಕೀಯರ ಪ್ರೌಢ ಶಾಲೆಯಲ್ಲಿ ದಿ.ಶಾಂತಾಭಾಯಿ ರಂಗನಾಥರಾವ್ ನಿಡಗುಂದಿ ಇವರ ಸ್ಮರಣಾರ್ಥವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಶರಣಪ್ಪ ಕೊಪ್ಪದ್ ಮಾತನಾಡಿದರು.

ಪೋಷಕರಿಗೆ ಹಿರಿಯ ನ್ಯಾಯವಾದಿ ಸಿ.ಎಚ್.ಪಾಟೀಲ ಸಲಹೆ

ಕನ್ನಡ ಶಾಲೆಯಲ್ಲೇ ಓದಿಸಿ

ಯಲಬುರ್ಗಾ: ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಮಾತೃ ಭಾಷೆಯಲ್ಲಿಯೆ ಕಲಿಸಬೇಕು. ಆ ಕಾರಣಕ್ಕಾಗಿ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಯಲ್ಲಿಯೇ ಓದಿಸ ಬೇಕೆಂದು ಜಿಪಂ ಮಾಜಿ ಸದಸ್ಯ ಹಾಗೂ ಹಿರಿಯ ನ್ಯಾಯವಾದಿ ಸಿ.ಎಚ್.ಪಾಟೀಲ ಸಲಹೆ ನೀಡಿದರು.

ತಾಲೂಕಿನ ಕರಮುಡಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ ವಾರ್ಷಿಕೋತ್ಸವ ಹಾಗೂ ಸರಸ್ವತಿ ಪೂಜಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಯಿ ಭಾಷೆಯ ಬಗ್ಗೆ ಅಭಿಮಾನವನ್ನು ಹೊಂದಬೇಕು ಸಾಂಸ್ಕೃತಿಕ ಚಟುವಟಿಕೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿವೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರಲ್ಲಿರುವ ಸೂಪ್ತ ಪ್ರತಿಭೆಯನ್ನು ಹೊರಹಾಕಲು ಕಲೆಯು ಮಹತ್ತರ ಸ್ಥಾನವನ್ನು ಹೊಂದಿದೆ . ಮಕ್ಕಳ ಆಸಕ್ತಿಯನ್ನು ಗುರುತಿಸಿ ಶಿಕ್ಷಣವನ್ನು ಕೊಡುವ ಜವಬ್ದಾರಿ ಶಿಕ್ಷಕರ ಮೇಲೆ ಇದೆ ಆ ದಿಶೆಯಲ್ಲಿ ಕಾರ್ಯನ್ಮೋಖರಾಗುವದರಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಹಾಗೇಯೆ ಇಡೀ ಜೀವನದುದ್ದಕ್ಕೂ ಆ ವಿದ್ಯಾರ್ಥಿ ನಿಮ್ಮನ್ನು ಮರೆಯಲು ಸಾಧ್ಯವೆ ಇಲ್ಲ, ಮಕ್ಕಳು ಕೆಲವೊಂದು ಸಲ ಹೆತ್ತವರ ಮಾತು ಕೇಳದೆ ಇರಬಹುದು. ಆದರೆ ಗುರುಗಳ ಮಾತನ್ನು ಮೀರುವುದಿಲ್ಲ ವಿಶೇಷವಾಗಿ ಪ್ರಾಥಮಿಕ ಶಾಲೆಯ ಮಕ್ಕಳು ಹದಭರಿತ ಜೇಡಿ ಮಣ್ಣಿನಂತೆ ಇರುತ್ತಾರೆ. ಆ ಮಣ್ಣಿನಿಂದ ನಾವು ಯಾವುದೆ ರೀತಿಯ ಕಲಾಕೃತಿಗಳನ್ನು ಮಾಡಬಹುದಾಗಿದೆ. ಮಕ್ಕಳ ಮನಸು ಅತ್ಯಂತ ಮಧುರ ಹಾಗೂ ಸೂಕ್ಷ್ಮ ಆಗಿರುವದರಿಂದ ಅವರ ಆರೈಕೆಯನ್ನು ಹೂವಿನ ತರಹ ಮಾಡಬೇಕಾಗಿದೆ ಎಂದರು. ಗ್ರಾಪಂ ಮಾಜಿ ಅಧ್ಯಕ್ಷ ಡಾ.ಮಂಜುನಾಥ ಕುಕನೂರ, ಗಂಗಪ್ಪ ಹವಳಿ, ಕುಮಾರಿ ಫೈಜಾ ಅಮೀನ್ ಅತ್ತರ ಇತರರು ಮಾತನಾಡಿ, ಶೈಕ್ಷಣಿಕ ಕ್ರಾಂತಿ ಮುಂಬರುವ ಬಾಳಿನಲ್ಲಿ ಶಾಂತಿ ತರಲಿದೆ ಎಂದರು.



> ಓದಿನೊಂದಿಗೆ ಕ್ರೀಡೇ, ಸಾಹಿತ್ಯ, ಸಂಗೀತ, ಕಲೆಯ ಆಸಕ್ತಿಯನ್ನು ಮಕ್ಕಳು ಬೆಳೆಸಿಕೊಂಡರೆ ಮನಸ್ಸು ಪ್ರಫುಲ್ಲವಾಗಿ ಸಂಪತ್ಭರಿತ ಆಸ್ತಿಯಾಗಿ ಸಮಾಜಕ್ಕೆ ಭಾರವಾಗದ ರೀತಿಯಲ್ಲಿ ರೂಪಗೊಳ್ಳುತ್ತಾರೆ. ಆ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರದ ಕೊಡುಗೆ ಅಪಾರವಾಗಿದೆ.
>
> ■ ಇಮಾಮಸಾಬ ಗುಳೇದಗುಡ್ಡ, ಎಸ್‌ಡಿಎಂಸಿ ಅಧ್ಯಕ್ಷ

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಸರ್ವರನ್ನು ಅಭಿನಂದಿಸಿದರು.

ಜಿಪ ಮಾಜಿ ಸದಸ್ಯೆ ಶಕುಂತಲಾ ಪಾಟೀಲ, ಜಿಪಂ ಜಂಟಿ ನಿರ್ದೇಶಕ ಅಮೀನ್ ಅತ್ತರ್, ಮಂಡಲ ಪಂಚಾಯತಿ ಮಾಜಿ ಉಪ ಪ್ರಧಾನ ಕಳಕಪ್ಪ ಕುರಿ, ಗ್ರಾಪಂ ಮಾಜಿ ಸದಸ್ಯ ಶಿವಪುತ್ರಪ್ಪ ಮಲಿಗೋಡದ, ತಾಲೂಕು ನ್ಯಾಯವಾದಿ ಸಂಘದ ಮಾಜಿ ಅಧ್ಯಕ್ಷ ರಾಜಶೇಖರ ನಿಂಗೋಜಿ, ತಾಲೂಕು ಎಸ್‌ಡಿಎಂಸಿ ಒಕ್ಕೂಟದ ಅಧ್ಯಕ್ಷ ಡಾ.ಗೌಡಪ್ಪ ಬಲಕುಂದಿ, ಗ್ರಾಪಂ ಮಾಜಿ ಅಧ್ಯಕ್ಷ ಲಿಂಗರಾಜ ಉಳ್ಳಾಗಡ್ಡಿ, ಶರಣಪ್ಪ ಕುರಿ, ನಿ.ಶಿಕ್ಷಕ ಹಾಗೂ ಹಿರಿಯ ಸಾಹಿತಿಗಳಾದ ವೀರಣ್ಣ ವಾಲಿ, ಪರಸಪ್ಪ ಲಮಾಣಿ, ಕಳಕಮ್ಮ ನಿಂಗೋಜಿ, ವೀರಣ್ಣ ಆರಳಿ, ಅಮೀನ್ ಅತ್ತಾರ, ರಾಮಣ್ಣ ಮಾನಶೆಟ್ಟಿ, ಜಗದೀಶ ಅಂಗಡಿ, ಎಸ್‌ಡಿಎಂಸಿ ಸರ್ವ ಸದಸ್ಯರು, ಗ್ರಾಮದ ಹಲವಾರು ಹಿರಿಯರು ಸರ್ವ ಶಿಕ್ಷಕ ಬಳಗದವರು ಉಪಸ್ಥಿತರಿದ್ದರು.

ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಮುಖ್ಯೋಪಾಧ್ಯಾಯ ಯಮನೂರಪ್ಪ ಹಾದಿಮನಿ ಸ್ವಾಗತಿಸಿದರು. ಮುಜಾವರ ಗುರುಗಳು ನಿರೂಪಿಸಿದರು.

ಪೊಲೀಸ್ ಇಲಾಖೆ ಸಿಬ್ಬಂದಿಗೆ ಸನ್ಮಾನ



ರಾಯಚೂರು: ಕುಟುಂಬ ನಿರ್ವಹಣೆಯೊಂದಿಗೆ ಸಾಮಾಜಿಕ ಭದ್ರತೆ ಹಾಗೂ ಶಾಂತಿ ಕಾಪಾಡುವಲ್ಲಿ ಉತ್ತಮ ಕಾರ್ಯ ನಿರ್ವಹಣೆ ಮಾಡುವ ಮಹಿಳಾ ಸಿಬ್ಬಂದಿ ಗುರುತಿಸಿ ಅವರನ್ನು ಸನ್ಮಾನಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ ಎಂದು ಎಸ್ಪಿ ಅರುಣಾಂಗ್ಷು ಗಿರಿ ಹೇಳಿದರು.

ಭಾನುವಾರ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಇಲಾಖೆಯಲ್ಲಿ ಎಲ್ಲ ವಿಭಾಗಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಮಹಿಳಾ ಸಿಬ್ಬಂದಿಗೆ ಸನ್ಮಾನ ಹಾಗೂ ಪ್ರಮಾಣಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಲಾಖೆಯಲ್ಲಿನ ಮಹಿಳಾ ಸಿಬ್ಬಂದಿ ಮಹಿಳೆಯರ ಮೇಲೆ ಆದ ದೌರ್ಜನ್ಯ ಪ್ರಕರಣಗಳಲ್ಲಿ, ಬಾಲ್ಯ ವಿವಾಹ ಪ್ರಕರಣದಲ್ಲಿ ಬಹಳ ಸೂಕ್ಷ್ಮವಾಗಿ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ. ಮಹಿಳಾ ಅಪರಾಧಿಗಳನ್ನು ಕೌನ್ಸೆಲಿಂಗ್ ಮಾಡುವ ಸಂದರ್ಭದಲ್ಲಿ ಕ್ರೌಡ್ ಮ್ಯಾನೇಜ್ ಮಂಟ್‌ನಂತಹ ಸಂದರ್ಭಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಲಕ್ಷ್ಮೀ ಎನ್ನುವ ಮಹಿಳಾ ಸಿಬ್ಬಂದಿ ಮಾತನಾಡಿ, ನಾನು ಪೊಲೀಸ್ ಇಲಾಖೆಗೆ ಸೇರಿ 33 ವರ್ಷಗಳಾಗಿವೆ. ಇಲ್ಲಿಯವರೆಗೆ ಇಲಾಖೆಯಲ್ಲಿನ ಮಹಿಳಾ ಸಿಬ್ಬಂದಿ ಕಾರ್ಯ ಕ್ಷಮತೆಯನ್ನು ಗುರಿತಿಸಿ ವಿಶ್ವ ಮಹಿಳಾ ದಿನಾಚರಣೆಯಂದು ಸನ್ಮಾನಿಸಿ ಗೌರವಿಸುತ್ತಿರುವುದು ರಾಯಚೂರು ಜಿಲ್ಲೆಯಲ್ಲಿ ಪ್ರಪ್ರಥಮವಾಗಿದೆ. ಹೀಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾಡುತ್ತಿರುವುದಕ್ಕೆ ಬಹಳ ಖುಷಿಯಾಗುತ್ತಿದೆ ಎಂದರು. ರೇವಮ್ಮ ಪಿಎಸ್, ರಮ್ಯಾ ಹಾಗೂ ಚಂದನ ಎನ್ನುವವರು ಮಾತನಾಡಿ, ಪೊಲೀಸ್ ಇಲಾಖೆಗೆ ಹೆಚ್ಚೆಚ್ಚು ಮಹಿಳೆಯರು ಸೇರುವುದಕ್ಕೆ ಮುಂದೆ ಬರಬೇಕು. ಪ್ರಸ್ತುತ ಕ್ರೈಂವಿಭಾಗದಲ್ಲಿಯೂ ಮಹಿಳಾ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಮಹಿಳೆಯರು ಪೊಲೀಸ್ ಇಲಾಖೆ ಸೇರುವುದಕ್ಕೆ ಯಾವುದೇ ಹಿಂಜರಿಕೆ ಬೇಡ. ಪೊಲೀಸ್ ಇಲಾಖೆಯಲ್ಲಿ ಎಲ್ಲ ಮೇಲಧಿಕಾರಿಗಳಿಂದ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ ಎಂದು ಹೇಳಿದರು. ಎಸ್ಪಿ ಕುಮಾರಸ್ವಾಮಿ, ಡಿವೈಎಸ್ಪಿ ಶಾಂತವೀರ ಹಾಗೂ ಇತರರಿದ್ದರು.

ಪರೇಡ್ ಆಯೋಜನೆ

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಮಹಿಳಾ ಸಿಬ್ಬಂದಿ ಸನ್ಮಾನ ಸಮಾರಂಭದಲ್ಲಿ ಮಹಿಳಾ ಸಿಬ್ಬಂದಿ ವಿಶೇಷ ಪರೇಡ್ ಆಯೋಜನೆ ಮಾಡಲಾಗಿತ್ತು. ಎಸ್ಪಿ ಅರುಣಾಂಗ್ಷು ಅವರು ಆಯೋಜಿಸಿದ್ದ ಈ ಕಾರ್ಯಕ್ರಮ ಜಿಲ್ಲಾ ಮಹಿಳಾ ಪೊಲೀಸ್ ಸಿಬ್ಬಂದಿಗಳಲ್ಲಿ ಹೆಚ್ಚಿನ ಉತ್ಸಾಹ ಕಂಡುಬಂದಿತು. ಸತಃ ಎಸ್ಪಿ ಅವರೇ ಮಹಿಳಾ ಸಿಬ್ಬಂದಿಗೆ ಉಪಹಾರ ಬಡಿಸಿದರು.

ಒಳಮೀಸಲಾತಿ ಜಾರಿಗೆ ಪ್ರತಿಭಟನೆ

ಕುಷ್ಟಗಿ: ಪಟ್ಟಣದಲ್ಲಿ ಮಾದಿಗ ಮಹಾಸಭಾ ವತಿಯಿಂದ ಒಳಮೀಸಲಾತಿ ಇಲ್ಲದೇ, ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ನಿರ್ಧಾರ ಖಂಡಿಸಿ ರಾಷ್ಟ್ರೀಯ ಹೆದ್ದಾರಿ–50ನ್ನು ತಡೆದು ಸಂಪೂರ್ಣ ಒಳಮೀಸಲಾತಿ ಜಾರಿಗಾಗಿ ಬೃಹತ್ ಪ್ರತಿಭಟನೆ (ರಸ್ತೆ ರೋಖೋ) ನಡೆಯಿತು.

ಪಟ್ಟಣದ ಮೂಲಕ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳಿಗ್ಗೆಯಿಂದ ರಸ್ತೆ ತಡೆದು ಮಧ್ಯಾಹ್ನ ಒಂದುವರೆ ಗಂಟೆಯ ವರೆಗೆ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ದಲಿತಪರ ಮುಖಂಡರು ಹಾಗೂ ಪದಾಧಿಕಾರಿಗಳು, ಯುವಕರು ಸೇರಿದಂತೆ ನೂರಾರು ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ರಸ್ತೆಮೇಲೆ ಕುಳಿತು ಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಸಂತಪ್ಪ ಮೇಲಿನಮನಿ, ಶುಖರಾಜ ತಾಳಕೇರಿ, ನಾಗರಾಜ ಮೇಲಿನಮನಿ, ಕೃಷ್ಣಮೂರ್ತಿ ಟೆಂಗುಂಟಿ ವಕೀಲ ಶಿವಕುಮಾರ್ ಶಂಕರ ಕಲ್ಲಭಾವಿ, ನಾಗರಾಜ ನಂದಾಪುರ, ಹುಸೇನಪ್ಪ ಮುದೇನೂರು, ಶಿವಪುತ್ರಪ್ಪ ಗುಮಗೇರಾ, ವಕೀಲ ಪಿ.ರಮೇಶ ಕಾಶಿಮಪ್ಪ ಬಿಜಕಲ್ ಮಂಜುನಾಥ ಗುಳೇದಗುಡ್ಡ ಸೇರಿದಂತೆ ದಲಿತಪರ ಮುಖಂಡರು ಹಾಗೂ ಪದಾಧಿಕಾರಿಗಳು, ಯುವಕರು ಸೇರಿದಂತೆ ನೂರಾರು ಜನರು ಮತ್ತು ವಿವಿಧ ಗ್ರಾಮಸ್ಥರು ಪಾಲ್ಗೊಂಡಿದ್ದರು.

ನಂತರ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಮಂತ್ರಿಯವರಿಗೆ ಮನವಿ ಸಲ್ಲಿಸಿದರು.



ಸಿಯುಕೆಯಲ್ಲಿ ವಿಶೇಷ ಉಪನ್ಯಾಸ

ಕಲಬುರಗಿ: ಸಂಶೋಧನಾ ವಿಷಯವು ಸಾಮಾಜಿಕವಾಗಿ ಪ್ರಸ್ತುತ ಮತ್ತು ಸಂದರ್ಭೋಚಿತವಾಗಿರಬೇಕು. ಸಂಶೋಧನಾ ವಿಷಯವನ್ನು ಆಯ್ಕೆ ಮಾಡುವಾಗ ಸಂಶೋಧಕರು ಅದರ ಪ್ರಸ್ತುತತೆ ಮತ್ತು ಸಮಾಜದಲ್ಲಿರುವ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಟಿ.ಆರ್.ಸುಬ್ರಹ್ಮಣ್ಯ ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ವಿದ್ಯಾರ್ಥಿಗಳ ಕಲ್ಯಾಣಾಧಿಕಾರಿ ಕಚೇರಿ ಆಯೋಜಿಸಿದ್ದ ವಿದ್ವತ್ಪೂರ್ಣ ಬರವಣಿಗೆಯಲ್ಲಿ ಸಂಶೋಧನೆಯ ಪ್ರಸ್ತುತತೆ ಕುರಿತು ವಿಶೇಷ ಉಪನ್ಯಾಸವನ್ನು ಉದ್ಘಾಟಿಸಿ ಮಾತನಾಡಿದ ಅವರು, ಐತಿಹಾಸಿಕವಾಗಿ ಸಂಶೋಧನೆಯು ಪ್ರಪಂಚಾದ್ಯಂತ ಸಾಮಾಜಿಕ ಸುಧಾರಣೆಗಳು ಮತ್ತು ಕಾನೂನು ಬೆಳವಣಿಗೆಗಳನ್ನು ರೂಪಿಸುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದೆ. 16ನೇ ಶತಮಾನದ ವಿದ್ವಾಂಸರ ಸಂಶೋಧನಾ ಕಾರ್ಯಗಳು ಜಗತ್ತಿನ ಪ್ರಮುಖ ಕಾನೂನು ಸುಧಾರಣೆಗಳಿಗೆ ಕೊಡುಗೆ ನೀಡಿವೆ ಎಂದರು.

ಸಂಶೋಧನೆಯು ನಿಜವಾದ ಸಾಮಾಜಿಕ ಸವಾಲುಗಳನ್ನು ಪರಿಹರಿಸಬೇಕು ಮತ್ತು ಅರ್ಥಪೂರ್ಣ ನೀತಿ ಮತ್ತು ಕಾನೂನು ಬದಲಾವಣೆಗೆ ಕೊಡುಗೆ ನೀಡಬೇಕು. ಸಂಪನ್ಮೂಲಗಳ ಕೊರತೆಯ ಹೊರತಾಗಿಯೂ, ನಮ್ಮ ಹಿಂದಿನ ಸಂಶೋಧಕರು ಪ್ರಾಮಾಣಿಕತೆ ಮತ್ತು ಬದ್ಧತೆಯೊಂದಿಗೆ ಪರಿಣಾಮಕಾರಿ ಕೃತಿಗಳನ್ನು ರಚಿಸಿದ್ದಾರೆ ಎಂದರು.



ಸಿಯುಕೆ ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ್, ಸಂಶೋಧನೆಯ ಗುಣಮಟ್ಟ ಬಹಳ ಮುಖ್ಯ.ಸಂಶೋಧನೆಯಲ್ಲಿ ಗುಣಮಟ್ಟ, ಸ್ವಂತಿಕೆ ಮತ್ತು ಪ್ರಭಾವಶಾಲಿ ಪಾಂಡಿತ್ಯದ ಮೇಲೆ ಕೇಂದ್ರೀಕರಿಸುವುದು ಇಂದಿನ ಅಗತ್ಯವಾಗಿದೆ ಎಂದರು.

ಸಿಯುಕೆಯ ಕಾನೂನು ಅಧ್ಯಯನ ನಿಕಾಯದ ಡೀನ್ ಪ್ರೊ.ಬಸವರಾಜ್ ಎಂ.ಕುಬಕಡ್ಡಿ ಮಾತನಾಡಿದರು. ವಿದ್ಯಾರ್ಥಿ ಕಲ್ಯಾಣ ಇಲಾಖೆಯ ಸಹಾಯಕ ಡೀನ್ ಡಾ.ಮಲ್ಲಿಕಾರ್ಜುನ್ ಎಸ್. ಹೂಗರ್ ಸ್ವಾಗತಿಸಿದರು, ಡಾ.ಕೆ.ಎಂ.ಕೃಷ್ಣ ಶೇಖರ್ ಶರ್ಮಾ ನಿರೂಪಿಸಿದರು. ಡಾ.ಜಗದೀಶ್ ಚಂದ್ರ ಟಿ.ಜಿ. ಸಂಪನ್ಮೂಲ ವ್ಯಕ್ತಿಯನ್ನು ಪರಿಚಯಿಸಿದರು. ಮುಖ್ಯ ವಾರ್ಡನ್ ಡಾ.ಬಸವರಾಜ್ ಎಂ.ಎಸ್.ವಂದಿಸಿದರು. ಶಿಕ್ಷಕರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಇದ್ದರು.

ಬಲ್ಡೋಟ ಹಟಾವೋ ಧರಣಿಗೆ ಮಾನವ ಬಂಧುತ್ವ ವೇದಿಕೆ ಬೆಂಬಲ

ಕೊಪ್ಪಳ: ನಗರಸಭೆ ಮುಂದಿನ ಬಲ್ಡೋಟ ಕಾರ್ಖಾನೆ ವಿರೋಧಿ 130ನೇ ದಿನದ ಧರಣಿಗೆ ಮಾನವ ಬಂಧುತ್ವ ವೇದಿಕೆ ಸ್ಥಾಪಕ ಸಂಚಾಲಕ ರವಿ ನಾಯ್ಕರ್ ಬೆಂಬಲು ಸೂಚಿಸಿದರು. ಬಳಿಕ ಮಾತನಾಡಿದ ಅವರು, ಈ ಹೋರಾಟ ಜೀವಪರವಾಗಿದ್ದು, ಇಲ್ಲಿನ ಧುರೀಣರು ಗಂಭೀರವಾಗಿ ತೆಗೆದುಕೊಂಡು ಸರ್ಕಾರಕ್ಕೆ ಮನವರಿಕೆ ಮಾಡಿ ಮಾಲಿನ್ಯ ಮಾಡುವ ಯಾವುದೇ ಕಾರ್ಖಾನೆಗಳಿದ್ದರೆ ಮುಚ್ಚಿಸಲಿ. ಜೀವಕ್ಕಿಂತ ದೊಡ್ಡದು ಯಾವುದೂ ಇಲ್ಲ. ಮಾನವ ಬಂಧುತ್ವ ವೇದಿಕೆ ಹೋರಾಟಕ್ಕೆ ಬೆಂಬಲಿಸುತ್ತದೆ. ಜನ, ಜಾನುವಾರಗಳಿಗೆ ಕೆರೆ ಮುಕ್ತಗೊಳಿಸಬೇಕು. ಹೋರಾಟಕ್ಕೆ ಜಯ ಸಿಗಬೇಕು ಎಂದರು. ಕಾಂಗ್ರೆಸ್ ಮುಖಂಡರಾದ ಟಿ. ರತ್ನಾಕರ, ಕಾಂಗ್ರೆಸ್ ಪಕ್ಷದ ವಕ್ತಾರರಾದ ಶೈಲಜಾ ಹಿರೇಮಠ ಮಾತನಾಡಿದರು.

ಧರಣಿ ನೇತೃತ್ವವಹಿಸಿದ್ದ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಬೆಂಗಳೂರು ಚಲೋ ನಡೆಸಲು ಸಿದ್ಧರಾಗಿ ಎಂದು ಕರೆ ನೀಡಿದರು. ಜಂಟಿ ಕ್ರಿಯಾ ವೇದಿಕೆ ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ. ಗೊಂಡಬಾಳ, ಮುಖಂಡ ಭೀಮಪ್ಪ ಹವಳಿ, ಸೋನಾಕ್ಷಿ ಹುಲಿಯಾಪುರ, ಹನುಮವ್ವ ಇಂದರಗಿ, ಈರಮ್ಮ ದೊಡ್ಡಮನಿ, ಗೌರಮ್ಮ ನವಲಹಳ್ಳಿ ಇದ್ದರು.



ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಮುಂಚೂಣಿ: ಹಸನಸಾಬ

ಕುಷ್ಟಗಿ: ಪಟ್ಟಣದ ಕೆಇಬಿ ಕಚೇರಿಯ ಸಭಾಂಗಣದಲ್ಲಿ ಜಿಪಂ ಹಾಗೂತಾಪಂಸಹಯೋಗದೊಂದಿಗೆ ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯ ಪ್ರಯುಕ್ತ ಪಂಚ ಗ್ಯಾರಂಟಿ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ ಸೋಮವಾರ ನಡೆಯಿತು.

ತುಂಗಭದ್ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆಯ (ಕಾಡಾ) ಅಧ್ಯಕ್ಷ ಹಸನಸಾಬ ದೋಟಿಹಾಳ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ಐದು ಗ್ಯಾರಂಟಿ ಯೋಜನೆಗಳ ಸಭೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ ಮಾಡುವ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ಮಾಡಲಾಗುತ್ತದೆ. ಸಿಎಂ ಸಿದ್ದರಾಮಯ್ಯನವರು ರಾಜ್ಯಕ್ಕೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಪ್ರಮುಖವಾಗಿವೆ.



ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಮುಂದುವರಿಯುತ್ತಿದ್ದಾರೆ. ಈ ಸುಧಾರಣೆ ಆಗಲು ಕಾರಣ ತಾಯಿಯಂದಿರ ಸಂಕಲ್ಪದಿಂದ ಈ ಸಾಧನೆಯಾಗಿದೆ. ಮಕ್ಕಳ ಹಾರೈಕೆ ಮಾಡುವಲ್ಲಿ ತಾಯಿಯಂದಿರ ಪಾತ್ರ ಪ್ರಮುಖವಾಗಿದೆ. ಕಾಲ ಬದಲಾಗಿದೆ ಮಹಿಳೆಯರು ಹಿಂದುಳಿದಿಲ್ಲ, ಮಹಿಳೆಯರು ಯಾವುದೇ ವಿಷಯದಲ್ಲಿ ಪುರುಷಗಿಂತ ಕಮ್ಮಿಯಿಲ್ಲ, ಜನಪ್ರಿಯವಾಗಿ ಮಹಿಳಾ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಈ ದೇಶದ ಶಕ್ತಿ ಮಹಿಳೆಯರು ಎಂದರು.

ಶಿಕ್ಷಕ ಡಾ.ಜೀವನಸಾಬ ಬಿನ್ನಾಳ ಉಪನ್ಯಾಸ ನೀಡಿ, ಮಹಿಳೆಯರ ಬದುಕಿಗಾಗಿ, ಅವರ ಧ್ವನಿಯಾಗಲು ಮಹಿಳೆಯರ ಸಬಲೀಕರಣ, ಹಕ್ಕುಗಳ, ಹೋರಾಟ , ಪಂಚ ಗ್ಯಾರಂಟಿ ಯೋಜನೆಯಿಂದ ಮಹಿಳೆಯರ ಬದುಕು ಬದಲಾಗಿದೆ. ಈ ಯೋಜನೆಗಳು ಸಾಮಾಜಿಕ, ಆರ್ಥಿಕವಾಗಿ ಬಲಗೊಳಿಸಿವೆ. ಅಸಿವು ಮುಕ್ತರನ್ನಾಗಿ ಮಾಡಿದೆ. ಆರ್ಥಿಕ ಸಾಮಾಜಿಕ ಸಮಾನತೆ ಇದರಿಂದ ಬಂದಿದೆ. ಈ ಯೋಜನೆಯಿಂದ ಮಹಿಳೆಯರು ಘನತೆಯ ಬದುಕನ್ನು ಸಾಗಿಸುತ್ತಿದ್ದಾರೆ. ಸಮ ಸಮಾನತೆ ಕಟ್ಟಬೇಕು. ಮಹಿಳೆರಿಗೆ ಶಿಕ್ಷಣ ನೀಡಬೇಕು ಎಂದರು.

ಗ್ಯಾರಂಟಿ ಯೋಜನೆಯ ಸಮಿತಿಯ ಶಾರದಾ ಕಟ್ಟಿಮನಿ ಮಾತನಾಡಿ, ಐದು ಗ್ಯಾರಂಟಿ ಯೋಜನೆಯಿಂದ ಬಡವರಿಗೆ, ಮಧ್ಯಮ ವರ್ಗದವರಿಗೆ ಅನುಕೂಲವಾಗಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಫಾರೂಕ್ ಡಲಾಯತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಅಮರೇಶ ಗಾಂಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಆಯುಷಾ ಬೇಗಂ, ಶೋಭಾ ಪುರ್ತಗೇರಿ, ಮಂಜುನಾಥ ತೆವರಣ್ಣವರ್, ನರಸಪ್ಪ ಬಿಂಗಿ, ಹುಸೇನಸಾಬ ಕಾಯಿಗಡ್ಡಿ, ಬಾಳಪ್ಪ, ನಾಗರಾಜ ಸೇರಿದಂತೆ ಸಿಡಿಪಿಓ ಯಲ್ಲಮ್ಮ ಹಂಡಿ,ಶಕುಂತಲಾ, ಶೋಭಾ, ನಾಗಮ್ಮ ಗುಂಡೂರು, ಸಂಗಪ್ಪ ರೇಣುಕಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಕೆಇಬಿ ಸಿಬ್ಬಂದಿ ಇದ್ದರು.

ಅನ್ನಪೂರ್ಣ ಪಾಟೀಲ ನಿರ್ವಹಿಸಿದರು.

ಶರಣಬಸವೇಶ್ವರ ರಥೋತ್ಸವ ಅದ್ದೂರಿ

ಯಲಬುರ್ಗಾ: ತಾಲೂಕಿನ ಮಾಟಲದಿನ್ನಿ ಗ್ರಾಮದಲ್ಲಿ ಭಾನುವಾರ ಸಂಜೆ ಶರಣಬಸವೇಶ್ವರರ ಮಹಾರಥೋತ್ಸವ ವಿಜೃಂಭಣೆಯಿಂದ ಸಾಗಿತು. ತ್ರಿವಿಧ ದಾಸೋಹ ಮೂರ್ತಿ ಶರಣಬಸವೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಸತತ 21 ದಿನಗಳ ಕಾಲ ಅಮರೇಶ್ವರ ಸ್ವಾಮಿ ಕಂಬಾಳಿ ಮಠ ಹೂಡಾ ಅವರಿಂದ ಪುರಾಣ ಪ್ರವಚನ ಸಾಗಿ ಬಂದು ಇಂದು ಮಹಾ ಮಂಗಲಗೊಂಡಿತು.

ಬುಧವಾರರಿಂದ ಭಾನುವಾರದ ವರೆಗೆ ಸತತ ಐದು ದಿನಗಳಕಾಲ ಬ್ರಾಹ್ಮೀ ಮುಹೂರ್ತದಲ್ಲಿ ಈಶ್ವರ ಮೂರ್ತಿ ಹಾಗೂ ಶರಣ ಬಸವೇಶ್ವರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಶಿವಕುಮಾರ ಹಿರೇಮಠ ರವರಿಂದ ಜರುಗೀತು ಶನಿವಾರ ಬೆಳಗ್ಗೆ ಕುಂಭಾಭಿಷೇಕ ಸಾಯಂಕಾಲ 5 ಗಂಟೆಗೆ ಲಘು ರಥೋತ್ಸವ ಜರುಗೀತು ರವಿವಾರ ಬೆಳಗ್ಗೆ ವಟುಗಳಿಗೆ ಮಹೇಶ್ವರ ದೀಕ್ಷೆ ಮಹಾ ಗಣರಾಧನೆ ಐದೂ ಜೋಡಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿದವು ಸಾಯಂಕಾಲ ಬುಡಕುಂಟಿ ಗ್ರಾಮದವರಿಂದ ತೇರಿನ ಅಗ್ಗ ತರಲಾಯಿತು ಗ್ರಾಮದ ಅನೇಕ ಭಕ್ತರು ರಥೋತ್ಸವಕ್ಕೆ ಹೂವಿನ ಹಾರ ಸಮರ್ಪಣೆ ಮಾಡಿದರು ತದನಂತರ.



ಗ್ರಾಮದ ನಿವೃತ್ತ ಸೈನಿಕ ಭೀಮನಗೌಡ ಜಾಲಿಹಾಳ ರವರಿಂದ ಮಹಾರಥೋತ್ಸವಕ್ಕೆ ಚಾಲನೆ ನೀಡಲಾಯಿತು ಅಭಿನವಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಭಾಗವಹಿಸಿ ಆಶೀರ್ವಚನ ನೀಡಿದರು ನಂತರ ಭಕ್ತರು ಹರ್ಷೋದ್ಗಾರ ದಿಂದ ಮಹಾ ರಥೋತ್ಸವ ವಿಜೃಂಭಣೆಯಿಂದ ಸಾಗಿಬಂದಿತು ,ಸಂಜೆ 8 ಗಂಟೆಗೆ ಧರ್ಮಸಭೆ ಜರುಗೀತು ನಂತರ ರಾತ್ರಿ 9–30 ಕ್ಕೆ ಮದ್ದು ಸುಡುವ ಕಾರ್ಯಕ್ರಮ ಜರುಗಿದವು ಜಾತ್ರೆಯಲ್ಲಿ ಭಾಗವಹಿಸಿದ್ದ ಭಕ್ತರಿಗೆ ವಿವಿಧ ಬಗೆಯ ಸಿಹಿ ಅಡುಗೆ ತಯಾರಿಸಲಾಗಿತ್ತು ಗ್ರಾಮದ ಇಸ್ಲಾಂ ಧರ್ಮದ ಸಮಾಜದವರು ಜಾತಿ ಭೇದ ಭಾವ ತೋರಿದೆ ಶರಣ ಬಸವೇಶ್ವರ ದಾಸೋಹಕ್ಕೆ ಸಿಹಿ ತಿಂಡಿ ತಿನಿಸುಗಳನ್ನ ಹಾಗೂ ಜಾತ್ರೆಯಲ್ಲಿ 5 ಸಾವೀರ ಲೀಟರ್ ನೀರಿನ ಬಾಟಲಿಗಳನ್ನು ವಿತರಣೆ ಮಾಡಿ ಸೇವೆ ಸಲ್ಲಿಸಿದ್ದಾರೆ. ರಥೋತ್ಸವಕ್ಕೆ ಸಹಸ್ರಾರು ಸಂಖ್ಯೆಯ ಭಕ್ತರು ಸಾಕ್ಷಿಯಾಗಿದ್ದರು. ಉಪ್ಪಲದಿನ್ನಿ, ಯಾಪಲದಿನ್ನಿ, ಹಿರೇವಂಕಲಕುಂಟಾ, ತರಲಕಟ್ಟಿ, ಚಿಕ್ಕವಂಕಲಕುಂಟಾ, ಗುನ್ನಾಳ, ಹುಣಶಿಹಾಳ, ಬೋಮ್ಮನಾಳ, ಮುಸಲಾಪೂರ, ಮರಕಟ್ಟ, ನರಸಾಪೂರ, ಮಾಟಲದಿನ್ನಿ, ಬೀರಲದಿನ್ನಿ ಯಡ್ಡೋಣಿ ಪುಟಗಮರಿ, ಕಲ್ಲಭಾವಿ .ಚೌಡಾಪೂರ ಹಲವು ಗ್ರಾಮಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಕಿರುಸುದ್ದಿ

ಬಜೆಟ್‌ನಲ್ಲಿ ಏನೂ ಇಲ್ಲ: ಮೀನಳ್ಳಿ ತಾಯಣ್ಣ

◆ **ಬಳ್ಳಾರಿ:** ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಏನೂ ಇಲ್ಲ, ಇದರಲ್ಲಿ ಏನೂ ಇಲ್ಲ, ಬರಿ ಖಾಲಿ ಚಂಬು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಹೇಳಿದ್ದಾರೆ. ಈ ಕುರಿತು ಹೇಳಿಕೆ ನೀಡಿದ ಅವರು, ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ, ಪಂಚ ಗ್ಯಾರಂಟಿ ಯೋಜನೆಗಳಿಗೆ ಹಣ ಹಿಂಡಿಸಲಾಗದೆ ಹೆಣಗಾಡುತ್ತಿದೆ. ಇದನ್ನು ಸರಿಪಡಿಸಲು ನೋಂದಣಿ ಕಚೇರಿಯಲ್ಲಿ ಶುಲ್ಕ ಹೆಚ್ಚಳ, ವಿದ್ಯುತ್ ದರ ಏರಿಕೆ, ಹಾಲು ಹಾಗೂ ಅದರ ಉತ್ಪನ್ನಗಳ ದರ ಏರಿಕೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ, ಬಡ ಜನರ ನೆಮ್ಮದಿ ಹಾಳು ಮಾಡುತ್ತಿದೆ. ಸರ್ಕಾರದ ಖಜಾನೆ ಖಾಲಿಯಾಗಿದ್ದು, ಸಿದ್ದರಾಮಯ್ಯ 4.5 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದ್ದಾರೆ ಎಂದರು. ರೈತರಿಗೆ, ಮಹಿಳೆಯರಿಗೆ, ವೃದ್ಧರಿಗೆ, ಯುವಕ ಯುವತಿಯರಿಗೆ ಯಾವುದೇ ಕೊಡುಗೆಗಳನ್ನು ನೀಡಿಲ್ಲ, ಅರ್ಹ ವಿದ್ಯಾವಂತರು ಸರ್ಕಾರಿ ಉದ್ಯೋಗಕ್ಕಾಗಿ ಅರ್ಜಿ ಹಾಕಿ ಹಾಕಿ, ಹೈರಾಣರಾಗಿದ್ದು, ನೇಮಕ ಪ್ರಕ್ರಿಯೆಗೆ ಸರ್ಕಾರ ಇಲ್ಲಿವರೆಗೆ ಮುಂದಾಗಿಲ್ಲ ಎಂದರು. ರೈತರ ಜೀವನಾಡಿ ತುಂಗಭದ್ರಾ ಜಲಾಶಯದ 33 ಗೇಟ್‌ಗಳನ್ನು ಮುಂಗಾರು ಮುನ್ನವೇ ಬದಲಾಯಿಸುವ ನಿರ್ಧಾರ ಸ್ವಾಗತಿಸುವೆ. ಮಕ್ಕಳ ಶಿಕ್ಷಣ, ಆರೋಗ್ಯ, ವಿದ್ಯಾವಂತರಿಗೆ ನೌಕರಿ ಭಾಗ್ಯ, ಬಡವರಿಗೆ ಅನುಕೂಲವಾಗುವ ಯೋಜನೆಗಳು ಸೇರಿದಂತೆ ಕನಿಷ್ಠ ಮೂಲ ಸೌಕರ್ಯಕ್ಕಾಗಿ ಯಾವುದೇ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಿಲ್ಲ ಎಂದರು.

ಶ್ರೀದೇವಿಗೆ ಸೇವಕಿ ಪ್ರಶಸ್ತಿ

◆ **ಸುರಪುರ:** ಪ್ರತಿವರ್ಷದಂತೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಣಗಾರ ಫೌಂಡೇಷನ್ ವತಿಯಿಂದ ನೀಡಲಾಗುವ ತಾಲೂಕ ಉತ್ತಮ ಸೇವಾ ಪ್ರಶಸ್ತಿಯನ್ನು ಸುರಪುರ ನಗರಸಭೆಯ ಡೇ-ನಲ್ಮ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಶ್ರೀದೇವಿ ಹಿರೇಮಠಗೆ ನೀಡಲಾಗಿದೆ ಎಂದು ತಾಲೂಕ ಬಣಗಾರ ಫೌಂಡೇಷನ್ ಅಧ್ಯಕ್ಷ ವಸಂತಕುಮಾರ ಬಣಗಾರ ತಿಳಿಸಿದ್ದಾರೆ.



ನಗರದ ಹಳೆ ಆರೋಗ್ಯ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಸುಮಾರು 4 ವರ್ಷಗಳಿಂದ ನಗರಸಭೆ ವ್ಯಾಪ್ತಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ರಚನೆ, ಮಹಿಳೆಯರಿಗೆ ಸಾಲ ಸೌಲಭ್ಯ, ನಗರದ ಬೀದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಕಲ್ಪಿಸುವಲ್ಲಿ ಅವಿರತವಾಗಿ ಶ್ರಮಿಸುತ್ತಿರುವುದನ್ನು ಗುರುತಿಸಿ ಸದರಿಯವರಿಗೆ ಈ ಪ್ರಶಸ್ತಿ ನೀಡಲಾಗಿದೆ ಎಂದರು. ಸುರಪುರ ನಗರಸಭೆಯ ಕಚೇರಿ ವ್ಯವಸ್ಥಾಪಕ ಯಲ್ಲಪ್ಪ ನಾಯಕ, ಸಮುದಾಯ ಸಂಘಟಕ ದುರುಗಪ್ಪ ನಾಯಕ, ಸಮುದಾಯ ಸಂಪನ್ಮೂಲ ವ್ಯಕ್ತಿ ಕುಮಾರಿಗೀತಾ, ಕಕ್ಕೇರಾ ಪುರಸಭೆಯ ಸಮುದಾಯ ಸಂಘಟಕ ತಿಪ್ಪಮ್ಮ ಬಿರಾದಾರ ಹಾಗೂ ಕಮ್ಯೂನಿಟಿ ಮೊಬಿಲೈಜರ್ ವರ್ಷ ಯಾದವ ಸೇರಿದಂತೆ ಇತರರು ಅಭಿನಂದನೆ ತಿಳಿಸಿದರು.

ಲಿಂಗದಳ್ಳಿ ಪಕೀರಪ್ಪ ತಾತನವರ ಉರುಸು ಸಂಪನ್ನ

◆ **ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ ಬಳ್ಳಾಪುರ ರಸ್ತೆಯ ಪವಾಡ ಪುರುಷ ಲಿಂಗದಳ್ಳಿ ಪಕೀರಪ್ಪ ತಾತನವರ 40ನೇ ಉರುಸು ಭಾನುವಾರ ಜರುಗಿತು. ಈ ವೇಳೆ ತಾತನವರ ವಂಶಕರಾದ ಬಸವರಾಜ್ ಆಚಾರಿ ಮಾತನಾಡಿ, ಜಾತಿ ಮತ ಪಂಥ ಧರ್ಮಗಳನ್ನು ಮೀರಿ ಫಕೀರ ಅವರು ಸರ್ವರಿಗೂ ಬೇಕಾದಂತಹ ಶರಣಾಗಿದ್ದು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದರು. ಕನಕಪ್ಪ ಸುಣುಗಾರ ಮಾತನಾಡಿ, ಪ್ರತಿಯೊಬ್ಬರು ಗುರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವುದರ ಜೊತೆಗೆ ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಮಕ್ಕಳಿಗೆ ಸಂಸ್ಕಾರವನ್ನು ಸಲ್ಲಿಸಬೇಕು ಎಂದರು. ಶನಿವಾರ ಗಂಧ, ಭಾನುವಾರ ಉರುಸು, ಸೋಮವಾರ ಜಿಯಾರಾತ್ ಸೇರಿದಂತೆ ವಿವಿಧ ಕಾರ್ಯಕ್ರಮ ಜರುಗಿದವು. ಗ್ರಾಮದ ಹುಚ್ಚರಂಗಪ್ಪ ತಾತ, ಶ್ರೀ ಅಂಜಿನೇಯ್ಯ ಸ್ವಾಮಿ ಮಂಡಳಿಯಿಂದ ಭಜನೆ, ಮಹಿಳೆಯರಿಂದ ಕಳಸ ಕನ್ನಡಿ ಸೇವೆಮಾಡಲಾಗಿದ್ದು, ಎಚ್. ವೀರಾಪುರ ಜ್ಞಾನಜ್ಯೋತಿ ಶಿವಲಿಂಗ ಮಂದಿರದ ಜಡೇಶ ತಾತನವರು, ಕನಕಪ್ಪ ಸುಣುಗಾರ, ಪರುಶುರಾಮ, ಲಕ್ಷ್ಮಿಕಾಂತ, ಜಡೇಶ, ಈ ಬೇಳೆ ಶಾಂತಿನಗರ, ಗುತ್ತಿಗನೂರು, ಓರ್ವಾಯಿ, ಎಚ್. ವೀರಾಪುರ, ನೆಲ್ಲುಡಿ, ಮಹೆಬೂಬನಗರ, ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.

ಕೊಟ್ರಬಸಮ್ಮ ನಿಧನ

ಹೂವಿನಹಡಗಲಿ: ಬಾವಿಹಳ್ಳಿ ಗ್ರಾಮದ ವೀರಶೈವ ಜಂಗಮ ಸಮಾಜದ ಕೊಟ್ರಬಸಮ್ಮ ಪಂಚಾಕ್ಷರಯ್ಯ ಹಿರೇಮಠ (81) ಭಾನುವಾರ ನಿಧನರಾಗಿದ್ದಾರೆ. ಐದು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.





ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಬಳ್ಳಾಪುರ ರಸ್ತೆಯ ಪವಾಡ ಪುರುಷ ಲಿಂಗದಳ್ಳಿ ಪಕೀರಪ್ಪ ತಾತನವರ 40ನೇ ಉರುಸು ಭಾನುವಾರ ಜರುಗಿತು.

ಹಿಂದೂ ಸಮ್ಮೇಳನ ಕಾರ್ಯಕ್ರಮ ಯಶಸ್ವಿ

◆ **ಗಾದಿಗನೂರು:** ಭಾನುವಾರ ಸಂಜೆ ಗಾದಿಗನೂರು ಗ್ರಾಮದ ಶ್ರೀ ರೇವಣಸಿದ್ದೇಶ್ವರ ಬಯಲು ಜಾಗದಲ್ಲಿ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಸಮಾಜದಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಜೈ ಕಿಸಾನ್ ಜೈ ಜವಾನ್ ಎನ್ನುವ ಮಾತಿನಂತೆ ಕೊಟಗಿನಹಾಳ ಗ್ರಾಮದ ಶಂಭುಲಿಂಗಪ್ಪ ದಂಪತಿಗಳು ಮಗನನ್ನ ಭಾರತೀಯ ಗಡಿ ಭದ್ರತಾ ಪಡೆ ಸೇವೆಗೆ ಕಳಿಸಿದ ದಂಪತಿಗಳಿಗೆ ಸನ್ಮಾನ ಮಾಡಲಾಯಿತು. ಗಾದಿಗನೂರು ಗ್ರಾಮದಲ್ಲಿ ಸುಮಾರು ಹದಿನೈದು ವರ್ಷಗಳಿಂದ ಉಚಿತ ಕಲಿಕೆ ಕೇಂದ್ರ ತೆರೆದು ಉಚಿತ ಶಿಕ್ಷಣವನ್ನು ನೀಡುವ ಮೂಲಕ ಸೇವೆ ಮಾಡಿದ ದಾಸರ ವೆಂಕಟೇಶ್, ಗಾದಿಲಿಂಗಪ್ಪ ಪೂಜಾರಿ ಅವರಿಗೆ ಸನ್ಮಾನ ನಡೆಯಿತು. ಸುಮಾರು ವರ್ಷಗಳಿಂದ ಜಾನುವಾರುಗಳಿಗೆ ಕಾಯಿಲೆ ಬಂದರೆ ಹಳ್ಳಿಗಳಲ್ಲಿ ನಾಟಿ ಔಷಧ ನೀಡುತ್ತೀರುವ ಹರಿಜನ ಗಾಳೆಪ್ಪ ಅವರನ್ನು ಸನ್ಮಾನಿಸಲಾಯಿತು. ನಿರುದ್ಯೋಗ ಯುವಕರಿಗೆ ಉದ್ಯೋಗ ನೀಡಿ ಯುವಕರಿಗೆ ಆಶಾಕಿರಣ ಮೂಡಿಸಿದ ಧರ್ಮಸಾಗರ ಹೂಗಾರ ಪಂಪಾಪತಿ ಯುವಕರಿಗೆ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸನ್ಮಾನ ಮಾಡಿದ ವ್ಯಕ್ತಿಗಳಿಗೆ ಹಿಂದೂ ಸಮ್ಮೇಳನ ಗೌರವ ಅಧ್ಯಕ್ಷ ಎಂ. ಗಾಳೆಪ್ಪ ಅವರಿಂದ ಭಗವದ್ಗೀತೆ ಪುಸ್ತಕ ಕೊಟ್ಟ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ನಾಯಕರ ಹನುಮಂತಮ್ಮ ಹುಲಿಗೆಮ್ಮ ದೇವಿ ಸಂಸ್ಥಾಪಕರು ಹಾಗೂ ಗೋಪಿ ರಾಷ್ಟ್ರೀಯ ಸ್ವಯಂಸೇವ ಸಂಘ ಪ್ರಾಂತ ಕಾರ್ಯಕಾರಿಣಿ ಸದಸ್ಯರು ಸಮಿತಿ ಸದಸ್ಯರು ಉಪಸ್ಥಿತರಿದ್ದರು.



ಗಾದಿಗನೂರು: ಭಾನುವಾರ ಸಂಜೆ ಗಾದಿಗನೂರು ಗ್ರಾಮದ ಶ್ರೀ ರೇವಣಸಿದ್ದೇಶ್ವರ ಬಯಲು ಜಾಗದಲ್ಲಿ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಸಮಾಜದಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಸಿವಿಲ್ ನ್ಯಾಯಾಧೀಶ ಅಶೋಕ ಆರ್.ಎಚ್ ಅಭಿಮತ

ಮಹಿಳೆಯರ ಕನಸುಗಳಿಗೆ ಕೈಜೋಡಿಸಿ

◆ **ಸಿರಗುಪ್ಪ:** ಮಹಿಳೆಯರ ಸಬಲೀಕರಣವೇ ನವ ಭಾರತ ನಿರ್ಮಾಣಕ್ಕೆ ಬಲವಾದ ಅಡಿಪಾಯ. ಪ್ರತಿಯೊಬ್ಬ ಮಹಿಳೆಗೆ ಗೌರವ ಮತ್ತು ಕೃತಜ್ಞತೆ ಸಲ್ಲಿಸುವ ಮೂಲಕ ಮಹಿಳೆಯರ ಕನಸುಗಳಿಗೆ ಬೆಂಬಲ ನೀಡಿ ಅವರ ಸಾಧನೆಗೆ ಕೈಜೋಡಿಸಬೇಕು ಎಂದು ಸಿವಿಲ್ ನ್ಯಾಯಾಧೀಶ ಅಶೋಕ ಆರ್.ಹೆಚ್ ಹೇಳಿದರು.

ನಗರದ ತಾಲೂಕು ಪಂಚಾಯತಿ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕು ಆಡಳಿತ, ತಾಲೂಕು ಪಂಚಾಯತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಸೋಮವಾರ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಿಳೆಯರಿಗೆ ಶಿಕ್ಷಣ ನೀಡುವ ಮೂಲಕ ಅವರಲ್ಲಿ ಸ್ವಾವಲಂಬನೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ತುಂಬಬೇಕು. ಆಗ ಮಾತ್ರ ದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ.

ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿನ ಮಹಿಳೆಯರ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಸಾಧನೆಗಳನ್ನು ಗುರುತಿಸಿ ಗೌರವಿಸಲು, ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಪ್ರೋತ್ಸಾಹಿಸಲು ಹಾಗೂ ಮಹಿಳೆಯರ ಕಠಿಣ ಪರಿಶ್ರಮ, ಪ್ರೀತಿ ಮತ್ತು ಕೊಡುಗೆಗಳನ್ನು ಗೌರವಿಸಲು ಆಚರಿಸಲಾಗುತ್ತದೆ. ಶೋಷಣೆಗೆ ಒಳಗಾದ ಮಹಿಳೆಯರು ಕಾನೂನು ಸೇವಾ ಸಮಿತಿಯ ಮೂಲಕ ಪರಿಹಾರ ಪಡೆದುಕೊಳ್ಳಬೇಕು ಎಂದರು.



> ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆ, ಸಮಾನ ಹಕ್ಕುಗಳು ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ಸುಧಾರಿಸುವ ಮೂಲಕ ಮಹಿಳೆಯರ ಉನ್ನತಿಗೆ ಅವಕಾಶ ಮಾಡಿಕೊಡಬೇಕು.
> ■ ಗೌಸೀಯಾ ಬೇಗಂ, ತಹಶೀಲ್ದಾರ್

ತಹಶೀಲ್ದಾರ್ ಗೌಸೀಯಾ ಬೇಗಂ ಮಾತನಾಡಿ, ಶಕ್ತಿ, ಸಹನೆ ಮತ್ತು ಸಾಧನೆಯ ಪ್ರತೀಕವಾದ ಮಹಿಳೆಯರಿಗೆ ಸಮರ್ಪಿತ ದಿನ. ಮಹಿಳೆಯರು ಕುಟುಂಬದ ಆಧಾರಸ್ತಂಭ ಮಾತ್ರವಲ್ಲ, ಸಮಾಜದ ಅಭಿವೃದ್ಧಿಯ ಪ್ರಮುಖ ಶಕ್ತಿ. ತಮ್ಮ ತ್ಯಾಗ, ಪ್ರೀತಿ ಮತ್ತು ಪರಿಶ್ರಮದಿಂದ ಸಮಾಜವನ್ನು ಉತ್ತಮ ದಾರಿಗೆ ನಡೆಸುತ್ತಿರುವವರು. ಪ್ರತಿ ಕ್ಷೇತ್ರದಲ್ಲೂ ತಮ್ಮ ಸಾಮರ್ಥ್ಯವನ್ನು ತೋರಿಸಿ ಹೊಸ ಇತಿಹಾಸ ನಿರ್ಮಿಸುತ್ತಿದ್ದಾರೆ. ಸಮಾನತೆ, ಗೌರವ ಮತ್ತು ಅವಕಾಶಗಳೊಂದಿಗೆ ಮಹಿಳೆಯರು ಮುಂದುವರಿದಾಗ ಸಮಾಜವೂ ಶಕ್ತಿಶಾಲಿಯಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ವಕೀಲರ ಸಂಘದ ಅಧ್ಯಕ್ಷ ಯು.ವೆಂಕೋಬ, ಉಪಾಧ್ಯಕ್ಷ ಶರೀಫ್ ಸಾಬ್, ಸಹಾಯಕ ಸರ್ಕಾರಿ ಅಭಿಯೋಜಕ ಶಿವರಾಜ, ತಾಲೂಕು ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಮಂಜುಳ, ವಕೀಲೆ ಹೇಮಲತ, ತಾ.ಪಂ ಇಓ ಪವನ್ ಕುಮಾರ್ ದಂಡಪ್ಪನವರ್, ಸಿಡಿಪಿಒ ಪ್ರದೀಪ್ ಕುಮಾರ್ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿ ಹತ್ಯೆ ಖಂಡಿಸಿ ಎಬಿವಿಪಿ ಪ್ರತಿಭಟನೆ

◆ **ಬಳ್ಳಾರಿ:** ನಗರದ ಗುರುಕುಲ ಶಾಲೆಯ ವಿದ್ಯಾರ್ಥಿ ಹತ್ಯೆ ಖಂಡಿಸಿ ಇಲ್ಲಿನ ಎಬಿವಿಪಿ ಕಾರ್ಯಕರ್ತರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸರಳಾದೇವಿ ಕಾಲೇಜಿನಿಂದ ಪ್ರಾರಂಭವಾಗಿ ನಾನಾ ರಸ್ತೆಗಳಿಂದ ನಗರದ ಹೃದಯ ಭಾಗ ರಾಯಲ್ ವೃತ್ತದ ಬಳಿ ಜಮಾಯಿಸಿದ ನೂರಾರು ಕಾರ್ಯಕರ್ತರು, ವಿದ್ಯಾರ್ಥಿಗಳು ಬಾಲಕನ ಸಾವಿಗೆ ನ್ಯಾಯ ಸಿಗಬೇಕು. ನಗರ ಸೇರಿದಂತೆ ಜಿಲ್ಲೆಯಲ್ಲಿ ಡ್ರಗ್ಸ್, ಗಾಂಜಾ ಹಾವಳಿಯನ್ನು ಕೂಡಲೇ ಸಂಪೂರ್ಣವಾಗಿ ತಡೆಗಟ್ಟಬೇಕು ಎಂದು ಒತ್ತಾಯಿಸಿ ಘೋಷಣೆ ಕೂಗಿದರು.

ನಂತರ ಡಿಸಿ ಕಚೇರಿಗೆ ತೆರಳಿದ ಕಾರ್ಯಕರ್ತರು ವಿವಿಧ ಬೇಡಿಕೆಗಳ ಮನವಿ ಸಲ್ಲಿಸಿದರು.

ಈ ವೇಳೆ ಎಬಿವಿಪಿ ಬಳ್ಳಾರಿ ವಿಭಾಗ ಸಂಘಟನಾ ಕಾರ್ಯದರ್ಶಿ ನಾಗರಾಜ್ ಬೆಟಗೇರಿ ಮಾತನಾಡಿ, ಬಳ್ಳಾರಿಯ ಗುರುಕುಲ ಶಾಲೆಯಲ್ಲಿ ವಿದ್ಯಾರ್ಥಿಗಳ ಮಧ್ಯೆ ನಡೆದ ಗಲಾಟೆಯಲ್ಲಿ 15 ವರ್ಷದ ವಿದ್ಯಾರ್ಥಿಯೊಬ್ಬ ಮೃತಪಟ್ಟಿದ್ದು, ಇದು ಅತ್ಯಂತ ಖಂಡನೀಯ. ಈ ಘಟನೆಯಲ್ಲಿ ಸುಮಾರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಈ ವಿದ್ಯಾರ್ಥಿ ಸಾವಿಗೆ ನ್ಯಾಯ ಸಿಗಬೇಕು. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಶಾಲೆಯ ವಿದ್ಯಾರ್ಥಿಯೊಬ್ಬನೇ ಈ ರೀತಿ ಮಾರಣಾಂತಿಕ ಹಲ್ಲೆ ನಡೆಸಿರುವುದು ನಾನಾ ಅನುಮಾನ ಮೂಡಿಸಿದೆ. ಅದು ಒಬ್ಬರಿಗಲ್ಲ, ಶಾಲೆಯ 6ಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಕಬ್ಬಿಣದ ರಾಡ್, ಚಾಕು ಬಳಸಿ ಮಾರಣಾಂತಿಕ ಹಲ್ಲೆ ನಡೆಸಿರುವುದು ಅತ್ಯಂತ ಖಂಡನೀಯ. ಇದು ನಾನಾ ಅನುಮಾನ ಮೂಡಿಸಿದೆ ಎಂದರು.

ಈ ಹಿನ್ನೆಲೆಯಲ್ಲಿ ಕೂಡಲೇ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಡ್ರಗ್ಸ್ ಹಾವಳಿ, ಮಾರಾಟ ದಂಧೆ ತೊಲಗಬೇಕು, ಅಪ್ರಾಪ್ತ ಬಾಲಕನ ಸಾವಿಗೆ ನ್ಯಾಯ ಸಿಗಬೇಕು. ಹತ್ಯೆ ಮಾಡಿದ ವಿದ್ಯಾರ್ಥಿಯನ್ನು ಪತ್ತೆ ಹಚ್ಚಬೇಕು. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ನಿರ್ಲಕ್ಷ್ಯ ವಹಿಸಿದರೆ ಪ್ರತಿಭಟನೆಯ ಸ್ವರೂಪ ಬದಲಾಗಲಿದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಎಬಿವಿಪಿ ಕಾರ್ಯಕರ್ತರು, ವಿದ್ಯಾರ್ಥಿಗಳು ಇತರರಿದ್ದರು.



ಶಿಕ್ಷಣ ಸಂಸ್ಥೆಗಳ ಕೊಡುಗೆ ಅಪಾರ

◆ **ಹುಣಸಗಿ:** ಮಕ್ಕಳ ಪ್ರತಿಭೆಯನ್ನು ಗುರುತಿಸಿ ಮುಖ್ಯವಾಹಿನಿಗೆ ತರುವುದೇ ನಿಜವಾದ ಶಿಕ್ಷಣ, ಶಿಕ್ಷಣ ಸಂಸ್ಥೆಗಳಿಂದ ಈ ಕಾರ್ಯ ನಡೆಯಲಿ ಎಂದು ಶ್ರೀರಾಮಲಿಂಗೇಶ್ವರ ಆನಂದಾಶ್ರಮ ಗುಳಬಾಳದ ಮರಿ ಹುಚ್ಚೇಶ್ವರ ಶ್ರೀಗಳು ಹೇಳಿದರು.

ಪಟ್ಟಣದ ಯುಕೆಪಿ ಕ್ಯಾಂಪ್‌ನ ಸ್ಪಂದನ ಪಬ್ಲಿಕ್ ಸ್ಕೂಲಿನ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಹಾಗೂ ಸ್ಪಂದನ ಚಿಣ್ಣರ ಚೈತನ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇವಾಪುರದ ಜಡಿಶಾಂತಲಿಂಗೇಶ್ವರ ಸಂಸ್ಥಾನ ಹಿರೇಮಠದ ಶಿವಮೂರ್ತಿ ಶಿವಾಚಾರ್ಯರು ಮಾತನಾಡಿ, ಶಿಕ್ಷಣವು ಮಕ್ಕಳ ಭವಿಷ್ಯ ನಿರ್ಮಾಣದ ಪ್ರಮುಖ ಸಾಧನವಾಗಿದೆ. ಶಾಲೆಗಳು ವಿದ್ಯಾರ್ಥಿಗಳಲ್ಲಿ ಜ್ಞಾನಸಂಸ್ಕಾರ ಮತ್ತು ಸೃಜನಶೀಲತೆಯನ್ನು ಬೆಳೆಸುವ ಕೇಂದ್ರಗಳಾಗಿವೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ರೂಢಿಸಿಕೊಂಡರೆ ಸಮಾಜಕ್ಕೆ ಉತ್ತಮ ನಾಗರಿಕರಾಗುತ್ತಾರೆ ಎಂದರು. ರೇಖಾ ಮಂಜುನಾಥ್ ವಿಶೇಷ ಉಪನ್ಯಾಸ ನೀಡಿದರು.

ಅಂತರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಪಟ್ಟಣ ಪಂಚಾಯತ ಮಹಿಳಾ ಸದಸ್ಯರಿಗೆ ಹಾಗೂ ಸಂಗೀತ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಶಿವಾನಿ ಶಿವದಾಸ ಸ್ವಾಮಿ, ಕಲಾಕ್ಷೇತ್ರದಲ್ಲಿ ಸಾಧನೆಗೈದ ದಿವ್ಯಾಂಜಲಿ ಭಾಲ್ಕಿ, ಮಾಧ್ಯಮ ಕ್ಷೇತ್ರದಲ ಶುಭಾ ಹತ್ತಳ್ಳಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಳೆದ ವರ್ಷ ನವೋದಯ ಸೇರಿದಂತೆ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಶಾಲೆಯ ಚಿಣ್ಣರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಸಂಸ್ಥೆಯ ಅಧ್ಯಕ್ಷ ಮುರಿಗೆಣ್ಣ ದೇಸಾಯಿ, ಬಸವರಾಜ ಸ್ವಾಮಿ ಸ್ಥಾವರಮಠ, ಸಿಪಿಐ ರವಿಕುಮಾರ್ ಎಸ್.ಎನ್., ಚಂದ್ರಶೇಖರ್ ದಂಡಿನ್, ಸಂಗಣ್ಣ ವೈಲಿ, ಶರಣು ದಂಡಿನ್, ಆರ್.ಎಂ. ರೇವಡಿ, ಮೇಲಪ್ಪ ಗುಳಗಿ, ರವಿ ಪುರಾಣಿಕಮಠ, ಬಸಯ್ಯ ಗುತ್ತೇದಾರ, ಸೂರ್ಯನಾರಾಯಣ, ಬಸವರಾಜ್ ಸಜ್ಜನ್, ಬಸವರಾಜ ಮೇಲಿನಮನಿ, ನಂದಪ್ಪ ಪಿರಾಪುರ, ಗುಂಡೂರಾವ್ ರಾಠೋಡ್, ವಂದಲಯ್ಯಗೌಡ ಬಿರಾದಾರ್, ಭೀಮಶೇನ ರಾವ್ ಕುಲಕರ್ಣಿ, ಅಂಬ್ರೇಶ ಮಾಲಗತ್ತಿ, ತಿಪ್ಪಣ್ಣ ನಾಯ್ಕ, ಗುರು ಹುಲಕಲ್, ರಾಜು ಮಲಗಲದಿನ್ನಿ ಸೇರಿದಂತೆ ಪಪಂ ಮಹಿಳಾ ಸದಸ್ಯರು, ಕಲಾವಿದರು ಇದ್ದರು. ಶಿಕ್ಷಕಿ ಭಾಗ್ಯಶ್ರೀ ಸ್ವಾಗತಿಸಿ, ಕೌಸರ್ ಬೇಗಮ್ ವಂದಿಸಿ, ಜಯಶ್ರೀ ಮಡಿವಾಳರ ನಿರೂಪಿಸಿದರು.



ಮಕ್ಕಳ ನಡಿಗೆ ಪರಿಸರದ ಕಡೆಗೆ ಕಾರ್ಯಕ್ರಮ

◆ **ಕೊಟ್ಟೂರು:** ಕೊಟ್ಟೂರು ಸಮೀಪದ ರಾಂಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಂಪುರ ಇಲ್ಲಿ ಶಿಕ್ಷಣ ಇಲಾಖೆ ಆದೇಶದಂತೆ ಇಕೋ ಕ್ಲಬ್‌ನ ಅಡಿಯಲ್ಲಿ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವ ಸಲುವಾಗಿ ಮಕ್ಕಳಿಗೆ ಪರಿಸರ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶಾಲೆಯ ಎಲ್ಲಾ ಮಕ್ಕಳನ್ನು ಸಮೀಪದ ಚಿರಬಿ ಕಾದಿಟ್ಟ ಅರಣ್ಯ ಪ್ರದೇಶದ ನರ್ಸರಿಗೆ ವನ ಭೇಟಿ ಮಾಡಲಾಯಿತು. ಈ ವೇಳೆ ಪರಿಸರ ಸಂರಕ್ಷಣೆಯ ಅರಿವನ್ನು ಮಕ್ಕಳಲ್ಲಿ ಮೂಡಿಸಲಾಯಿತು. ಜೊತೆಗೆ ಕಾಡುಗಳಲ್ಲಿ ಸಿಗುವ ನೈಸರ್ಗಿಕ ಹಣ್ಣುಗಳ ಪರಿಚಯ ಮಾಡಿಕೊಡಲಾಯಿತು. ವೈದ್ಯಕೀಯ ಚಿಕಿತ್ಸೆಗೆ ಬಳಸುವ ನೈಸರ್ಗಿಕ ಗಿಡಮೂಲಿಕೆಗಳ ಪರಿಚಯವನ್ನೂ ಮಾಡಿಕೊಡಲಾಯಿತು.

ಸಸ್ಯೋದ್ಯಾನವನ್ನು ಪ್ರವೇಶಿಸುತ್ತಿದ್ದಂತೆ ಮಕ್ಕಳ ಖುಷಿ ದ್ವಿಗುಣಗೊಂಡಿತು. ಅಲ್ಲಿಯ ಪರಿಸರ ಹಾಗೂ ಹಲವು ಜಾತಿಯ ಸಸ್ಯಗಳು ಮಕ್ಕಳಲ್ಲಿ ಕುತೂಹಲವನ್ನು ಹೆಚ್ಚಿಸಿತು. ಹಲವಾರು ಬಗೆಯ ಸಸ್ಯಗಳನ್ನು ಕಂಡು ಮಕ್ಕಳು ಅದರ ಬಗ್ಗೆ ಸ್ವತಃ ತಾವೇ ಸಸ್ಯ ಪಾಲಕರನ್ನು ಹಲವಾರು ಪ್ರಶ್ನೆಗಳನ್ನು ಕೇಳುವ ಮೂಲಕ ಉತ್ತರವನ್ನು ಕಂಡುಕೊಂಡರು. ಸಸ್ಯ ಪಾಲನೆ ಮಾಡುವ ವಿಧಾನ ತಿಳಿದುಕೊಂಡು ತಾವು ಸಹ ಶಾಲೆ, ಮನೆಗಳಲ್ಲಿ ಸಸ್ಯಗಳನ್ನ ಚೆನ್ನಾಗಿ ಬೆಳೆಸುತ್ತೆವೆಂದು ಭರವಸೆ ನೀಡಿದರು.



ಹಲವು ಸಸಿಗಳನ್ನು ಶಾಲೆಯಲ್ಲಿ ನೆಡಲು ಪಡೆದು, ಪುನಃ ಶಾಲೆಯ ಕಡೆ ಹೆಜ್ಜೆ ಹಾಕಲಾಯಿತು. ಈ ವೇಳೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ, ಸದಸ್ಯ ಗುರುಬಸಪ್ಪ, ಶಾಲೆಯ ಮುಖ್ಯ ಗುರು ವಿ. ಆರ್. ಕಲಾಲ್, ಶಿಕ್ಷಕರಾದ ಮಂಜುಳಾ, ಗುರುಶಾಂತಮ್ಮ, ಸಾವಿತ್ರಿ, ರಂಜಿತ, ಗುರು ಚಿಗಟೇರಿ, ಎಪಿಎಫ್‌ನ ಸಚಿನ್ ಇದ್ದರು.

ಶಾಂತಿ ಸೌಹಾರ್ದತೆಯ ಸಂಕೇತವೇ ಉರುಸು: ಕೃಷ್ಣನಾಯಕ

◆ **ಹೂವಿನಹಡಗಲಿ:** ಹಿಂದೂ-ಮುಸ್ಲಿಮರ ಭಾವೈಕ್ಯತೆಯ ಸಂಕೇತ ಸಾರುವ ಯಮನೂರು ಸ್ವಾಮಿ-ರಾಜಬಾಗ್ ಸವಾರ್ ಉರುಸು ಶನಿವಾರ ರಾತ್ರಿ ಗಂಧ ಮಹೋತ್ಸವಕ್ಕೆ ಶಾಸಕ ಕೃಷ್ಣನಾಯ್ಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಾವಿರಾರು ವರ್ಷಗಳ ಹಿಂದೆ ಹಜರತ್ ಸಯ್ಯದ್ ತಾಜುದ್ದೀನ್ ಬಾಬಾ (ಯಮನೂರು ಸ್ವಾಮಿ) ಕೈಗೊಂಡಿದ್ದ ಸೌಹಾರ್ದ ಯಾತ್ರೆಯ ಸಂದರ್ಭದಲ್ಲಿ ಪಟ್ಟಣದ ದರ್ಗಾ ಬಳಿ ಉಳಿದುಕೊಂಡಿದ್ದ ಪುಣ್ಯಭೂಮಿಯಾಗಿದೆ. ಎಲ್ಲರೂ ಸೌಹಾರ್ದಯುತವಾಗಿ ನಡೆದುಕೊಂಡಾಗ ಮಾತ್ರ ಉರುಸುಗೆ ಅರ್ಥ ಬರುತ್ತದೆ ಎಂದರು.

ಗಂಧ ಮಹೋತ್ಸವ ಮೆರವಣಿಗೆ ಮೂಲಕ ಕುಂಬಾರ ಮನೆಗೆ ಹೋಗಿ ಹೊಸ ಮಡಿಕೆ ತೆಗೆದುಕೊಂಡು, ಮುಖ್ಯ ರಸ್ತೆ ಮೂಲಕ ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮಾಡಿ, ಪಟ್ಟಣದ ಹೊರ ವಲಯದ ಹಳ್ಳದ ನೀರನ್ನು ಮಡಿಕೆಯಲ್ಲಿ ಭಕ್ತಿಯಿಂದ ತುಂಬಿಕೊಂಡರು. ಬಳಿಕ ಪಟ್ಟಣದ ದರ್ಗಾ ಬಳಿ ಇರುವ ಪವಾಡ ಪೀಠದ ಮುಂದೆ ಮಡಿಕೆಯಲ್ಲಿದ್ದ ನೀರಿನಿಂದ ಮುಜಾವರರು ದೀಪ ಉರಿಸಿದರು. ದೇವರ ಕುದುರೆಗಳೆಂದು ಕರೆಯುವ ಕುದುರೆಗಳಿಗೆ, ಅಡ್ಡಲಾಗಿ ಮಲಗಿರುವ ಭಕ್ತರನ್ನು ದಾಟಿ ಯಮನೂರು ಸ್ವಾಮಿ ಪವಾಡ ಪೀಠಕ್ಕೆ ಬಂದವು.



ಉರೂಸ್‌ಗೆ ಬಂದಿರುವ ಭಕ್ತರು, ದೀಡ್ ನಮಸ್ಕಾರ, ಸಕ್ಕರೆ ಓದಿಸುವುದು, ಬೆಳ್ಳಿ ಕುದುರೆಗಳನ್ನು ದಾನ ನೀಡುವ ಹರಕೆ ತೀರಿಸಿ ಸ್ವಾಮಿ ಕೃಪೆಗೆ ಪಾತ್ರರಾದರು. ಗವಿಸಿದ್ದೇಶ್ವರ ಮಠದ ಡಾ.ಹಿರಿಶಾಂತವೀರ ಸ್ವಾಮೀಜಿ, ಬಸವ ಕಲ್ಯಾಣದ ಖಾಜ ಜಿಯಾಉಲ್ ಹಸ್ಸನ್ ಜಾಗಿರ್ದಾರ್, ಡಾ.ರಾಕೇಶಯ್ಯ ರಾಮಸ್ವಾಮಿ, ಕೊಂಬಳಿ ಚೌಕಿ ಮಠದ ಸದ್ಗುರು ಗಾಡಿತಾತ ಇತರರಿದ್ದರು.

ಧೈರ್ಯ, ಶಾಂತ ಮನಸ್ಸಿನಿಂದ ಪರೀಕ್ಷೆ ಬರೆಯಿರಿ: ಶಾಸಕ

◆ **ಬಳ್ಳಾರಿ:** ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿಯವರು ಪರೀಕ್ಷೆಗೆ ಸಜ್ಜಾಗಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪತ್ರ ಬರೆದಿದ್ದಾರೆ. ನಗರ ಕ್ಷೇತ್ರದ 45ಕ್ಕೂ ಹೆಚ್ಚು ಶಾಲೆಗಳ ಸುಮಾರು 3 ಸಾವಿರ ವಿದ್ಯಾರ್ಥಿಗಳಿಗೆ ಪತ್ರ ಬರೆದಿರುವ ಅವರು ಧಯರ್ಯ ಮತ್ತು ಶಾಂತ ಮನಸ್ಸಿನಿಂದ ಪರೀಕ್ಷೆ ಬರೆಯಿರಿ ಎಂದು ಸಲಹೆ ನೀಡಿದ್ದಾರೆ. ಪ್ರೀತಿಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೇ ಮತ್ತು ಗೌರವಾನ್ವಿತ ಪೋಷಕರೇ, ಬಳ್ಳಾರಿ ಜಿಲ್ಲೆಯ ಭವಿಷ್ಯವಾಗಿರುವ ನನ್ನ ಪ್ರೀತಿಯ ವಿದ್ಯಾರ್ಥಿಗಳೇ, ನಿಮ್ಮ ಶಿಕ್ಷಣ ಯಾತ್ರೆಯ ಮಹತ್ವದ ಘಟ್ಟವೊಂದು ನಿಮ್ಮ ಮುಂದೆ ಬಂದುನಿಂತಿದೆ. ಇದುವರೆಗಿನ ಕಲಿಕೆಯ ಶ್ರಮವು ಸಾರ್ಥಕವಾಗುವುದು ಪರೀಕ್ಷೆಯ ಫಲಿತಾಂಶದಲ್ಲಿ. ಮಾ.18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭವಾಗುತ್ತಿರುವ ಈ ಸಂದರ್ಭದಲ್ಲಿ, ನಿಮ್ಮೆಲ್ಲರಿಗೂ ನನ್ನ ಹೃದಯಪೂರ್ವಕ ಶುಭಾಶಯಗಳು.



ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಣವು ವ್ಯಕ್ತಿತ್ವ ನಿರ್ಮಾಣಕ್ಕೆ, ಜೀವನವನ್ನು ರೂಪಿಸಲು ಹಾಗೂ ದೇಶದ ಭವಿಷ್ಯವನ್ನು ಕಟ್ಟಲು ಸಹಾಯಕವಾಗಬೇಕು. ಈ ಮಾತನ್ನು ಮನದಲ್ಲಿ ಇಟ್ಟುಕೊಂಡು, ಭಯವಿಲ್ಲದೆ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕೆಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ ಎಂದರು.

ಈ ಸಮಯದಲ್ಲಿ ನಿಮ್ಮ ಪಾತ್ರ ಅತ್ಯಂತ ಮಹತ್ವದ್ದು. ಮಕ್ಕಳಿಗೆ ಒತ್ತಡವಲ್ಲ, ವಿಶ್ವಾಸ ಮತ್ತು ಪ್ರೋತ್ಸಾಹ ಕೊಟ್ಟರೆ ಅವರು ಇತಿಹಾಸವಾಗಿ ಉಳಿಯುತ್ತಾರೆ. ಮಕ್ಕಳನ್ನು ಅಂಕಗಳಿಗಾಗಿ ಅಲ್ಲ, ಅವರ ಪ್ರಯತ್ನಕ್ಕಾಗಿ ಪ್ರಶಂಸಿಸಿ. ನಿಮ್ಮ ಪ್ರೀತಿ ಮತ್ತು ಬೆಂಬಲವೇ ಅವರ ದೊಡ್ಡ ಶಕ್ತಿ ಎಂದರು.

ನಿಮ್ಮ ಸಾಧನೆಯ ಮೂಲಕ ಜಿಲ್ಲೆಯ ಗೌರವವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬೇಕೆಂಬುದು ನನ್ನೆದೆಯ ಆಶಯ. 'ಒಂದು ಪೀಳಿಗೆಗೆ ಶಿಕ್ಷಣ ಕೊಟ್ಟರೆ, ಅನೇಕ ಪೀಳಿಗೆಗಳು ಬೆಳಗುತ್ತವೆ.' ನಿಮ್ಮ ಸಾಧನೆ ನಿಮ್ಮ ಕುಟುಂಬಕ್ಕೆ ಮಾತ್ರವಲ್ಲ, ಸಮಾಜಕ್ಕೂ ದಾರಿ ತೋರಲಿ. ಪರೀಕ್ಷೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸಿ, ಯಶಸ್ಸು ನಿಮ್ಮದಾಗಲೆಂದು ಹಾರೈಸುವೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬ್ರಾಹ್ಮಣ ಸಮುದಾಯ ನಿರ್ಲಕ್ಷಿಸಿದ ರಾಜ್ಯ ಸರ್ಕಾರ: ಮೋರಖಂಡಿಕರ್

◆ **ಬೀದರ್:** ಸಮಾನತೆ, ಸರ್ವ ಜನಾಂಗದ ಶಾಂತಿಯ ತೋಟ ಎಂಬುವುದೇ ನಮ್ಮ ಸರ್ಕಾರದ ಧ್ಯೇಯ ಹಾಗೂ ಸಿದ್ಧಾಂತ ಎಂದು ಹೇಳುವ ಸಿಎಂ ಸಿದ್ದರಾಮಯ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಒಂದು ನಯಾ ಪೈಸೆ ಅನುದಾನ ಕೊಡದೇ ತಾರತಮ್ಯ ನೀತಿ ತೋರಿಸುತ್ತಿರುವುದು ಅವರ ನುಡಿ, ನಡೆಯಲ್ಲಿ ದ್ವಂದ್ವ ನಿಲುವು ಇರುವ ಬಹಿರಂಗವಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ರಾಜಕೀಯ ವೇದಿಕೆ ಮತ್ತು ರಾಜ್ಯ ಸಂಘಟನಾ ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ಬೀದರ್ ಜಿಲ್ಲಾ ಅಧ್ಯಕ್ಷರಾದ ವೆಂಕಟೇಶ್ ಮೋರೆ ಖಂಡಿಕರ್ ಹೇಳಿದರು. ಪತ್ರಿಕಾ ಹೇಳಿಕೆ ನೀಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರದಲ್ಲಿ ರಚನೆಗೊಂಡ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಬ್ರಾಹ್ಮಣರ ಅಭಿವೃದ್ಧಿಗಾಗಿ 25 ಕೋಟಿ ರೂ.ಗಳು ಮಂಡಳಿಯ ಯೋಜನೆಗಳಿಗಾಗಿ ನೀಡಿರುತ್ತಾರೆ. ತದನಂತರ ಕಾಲದಲ್ಲಿ ಬಂದಿರುವ ಯಾವುದೇ ಸರ್ಕಾರ ಇಲ್ಲಿಯ ತನಕ ಅಭಿವೃದ್ಧಿಯ ಮಂಡಳಿಗೆ ಬಜೆಟ್‌ನಲ್ಲಿ ಅನುದಾನ ನೀಡದೆ ಇರುವುದು ಬ್ರಾಹ್ಮಣ ಸಮುದಾಯವನ್ನು ಬೇಕಂತಲೇ ನಿರ್ಲಕ್ಷಿಸಿದ್ದಾರೆ. ಹಿಂದಿನ ಸಾಲಿನ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ ಅವರು 10 ಕೋಟಿ ರೂ.ಗಳ ಅನುದಾನವನ್ನು ಪ್ರತಿವರ್ಷ ಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು. ವಿಪರ್ಯಾಸವೆಂದರೆ ಆ 10 ಕೋಟಿ ರೂಗಳು ಸಿಬ್ಬಂದಿಯ ವೇತನ ಜಾಗದ ಬಾಡಿಗೆ ಕೊಡುವುದಕ್ಕೆ ಸರಿಯಾಗುತ್ತದೆ ಇದರಿಂದ ಈ ಜನಾಂಗದ ಅಭಿವೃದ್ಧಿ ಹೇಗೆ ಸಾಧ್ಯ? ಎಂದರು. ಈ ಕೂಡಲೇ ಕರ್ನಾಟಕ ಸರ್ಕಾರ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳಿಗೆ ಕನಿಷ್ಠ 120 ಕೋಟಿ ರೂ.ಗಳನ್ನು ಅನುದಾನವಾಗಿ ನೀಡಬೇಕಾಗಿ ಕರ್ನಾಟಕದ ಎಲ್ಲಾ ಬ್ರಾಹ್ಮಣ ಸಮುದಾಯದ ಪರವಾಗಿ ಸರ್ಕಾರಕ್ಕೆ ಪತ್ರಿಕಾ ಹೇಳಿಕೆ ಮೂಲಕ ಆಗ್ರಹಿಸಿದ್ದಾರೆ.



ಮುಂಜಾಗ್ರತೆ ಕ್ರಮ ವಹಿಸಿ: ಡಾ.ರಾಕೇಶಯ್ಯ

◆ **ಹೂವಿನಹಡಗಲಿ:** ಗ್ರಾಮೀಣ ಭಾಗದಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಆರೋಗ್ಯ ಶಿಬಿರ ಸಹಕಾರಿಯಾಗಲಿವೆ ಎಂದು ಶ್ರೀರಾಮ ದೇವಸ್ಥಾನದ ಧರ್ಮ ಕರ್ತ ಡಾ. ರಾಕೇಶಯ್ಯ ರಾಮಸ್ವಾಮಿ ಹೇಳಿದರು.

ತಾಲೂಕಿನ ನಾಗತಿ ಬಸಾಪುರ ಗ್ರಾಮದಲ್ಲಿ ದಾವಣಗೆರೆಯ ಸ್ವಸ್ತಿಕ ಸೇವಾ ಸಂಸ್ಥೆ, ಸಾಯಿ ಸೇವಕರು, ಹೊಂಬೆಳಕು ದಿನ ಪತ್ರಿಕೆ, ವಿಜಯದ ಕ್ರಾಂತಿ ಪತ್ರಿಕೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಚೌಕಿ ಮಠದ ಸದ್ಗುರು ಗಾಡಿ ತಾತನವರು, ಹಾಲಸ್ವಾಮಿ ಮಠದ ಗಿರಿರಾಜ ಹಾಲಸ್ವಾಮಿಗಳು ಆರೋಗ್ಯ ಶಿಬಿರ ಯಶಸ್ವಿಯಾಗಿ ಜರುಗಲಿ ಎಂದು ಆಶೀರ್ವಚನ ನೀಡಿದರು.

ಗ್ರಾಮದ ಮುಖಂಡರಾದ ದೇವೇಂದ್ರಪ್ಪ, ದಾವಣಗೆರೆ ಸ್ವಸ್ತಿಕ ಸೇವಾ ಸಂಸ್ಥೆಯ ಪದಾಧಿಕಾರಿಗಳಾದ ವಿನಾಯಕ ಎ. ಜಾದವ್, ಮಂಜುನಾಥ ಜಿ., ವಿರೂಪಾಕ್ಷ ಬೆಳಗುತ್ತಿ, ವಾಗೀಶ್ ಬಿ.ಎಂ., ಹೂವಿನಹಡಗಲಿಯ ಹಿರಿಯ ಪತ್ರಕರ್ತ ಎಂ. ನಿಂಗಪ್ಪ, ಹೊಂಬೆಳಕು ಪತ್ರಿಕೆ ವಿಜಯದ ಕ್ರಾಂತಿ ಪತ್ರಿಕೆಯ ಎಚ್. ಹನುಮಂತಪ್ಪ, ಶಿಕ್ಷಣ ಪ್ರೇಮಿ ಗಿರೀಶ್, ಕನಕ ಪತ್ತಿನ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ಹಿರಣ್ಣನವರ ಹನುಮಂತಪ್ಪ, ಗುಜನೂರು ಪಾಲ್ಗೊಂಡಿದ್ದರು.



ಕೇರ್ ಪ್ಲೇಸ್ ಫಾರ್ಮಸಿ ಆರೋಗ್ಯ ಶಿಬಿರದಲ್ಲಿ ಗ್ರಾಮದ ನೂರಾರು ಜನರಿಗೆ ಆರೋಗ್ಯ ತಪಾಸಣೆ ನಡೆಸಿ ಅಗತ್ಯ ಸಲಹೆ ಮಾರ್ಗದರ್ಶನ ನೀಡಲಾಯಿತು.